೮ ಮುಕ್ತಕಗಳು
೯ ಕನ್ನಡ ಸಾಹಿತ್ಯ ಚರಿತ್ರೆಯ ಲಕ್ಷಣ ಗ್ರಂಥಗಳು
೧೦ ಕನ್ನಡ ಸಾಹಿತ್ಯ ಚರಿತ್ರೆಯ ಶಾಸ್ತ್ರಗಳು
೧೧ ಕನ್ನಡ ಸಾಹಿತ್ಯದ ಕ್ಷೇತ್ರಗಳು

ಕನ್ನಡ ಸಾಹಿತ್ಯವಾಹಿನಿ

ಬರೆದವರು :
ಎಸ್. ಕೆ. ಕುಲಕರ್ಣಿ
ಎಂ. ಎ., ಬಿ. ಟಿ.

ಕಥಾಕುಂಜ ಗ್ರಂಥ ಭಾಂಡಾರ, ಬೆಳಗಾವಿ

ನವಂಬರ ೧೯೫೯

[೪ನೇ ಆವೃತ್ತಿ]

ಬೆಲೆ : ೨-೮-೦

ಮುನ್ನುಡಿ

ನನ್ನ 'ಕನ್ನಡ ಸಾಹಿತ್ಯವಾಹಿನಿ'ಯ ಎರಡನೆಯ ಮುದ್ರಣವಿದು. ಬಿ. ಎ., ಎಂ. ಎ. ಪರೀಕ್ಷೆಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿಯೆಂದೇ ಇದನ್ನು ಬರೆಯಲಾಗಿದೆಯೆಂದು ಈ ಮೊದಲೇ ಹೇಳಲಾಗಿದೆ. ಹೆಚ್ಚು ಸಂಶೋಧಕ, ವಿಮರ್ಶಕ ದೃಷ್ಟಿಯಿಂದ ಆಳವಾಗಿ ಒಳಹೊಕ್ಕು ನಮ್ಮ ಪ್ರಾಚೀನ ಸಾಹಿತ್ಯದ ವಿವಿಧಮುಖವಾದ, ಇತಿಹಾಸ-ಶಾಸನ ಇತರ ಆಧಾರ ವಸ್ತುಗಳನ್ನೆಲ್ಲಾ ಬಳಸಿಕೊಂಡು ಸವಿಸ್ತಾರವಾದ, ಸಾಹಿತ್ಯ ಚರಿತ್ರೆಯನ್ನು ಬರೆಯಬೇಕಾದ ಕೊರತೆ ಇನ್ನೂ ಇದ್ದೇ ಇದೆ. ಅಂತಹ ಮಹಾಗ್ರಂಥಕ್ಕೆ ಇದೊಂದು ದಿಡ್ಡಿಯಬಾಗಿಲು ಮಾತ್ರ.

ಹೊಸ ಆವೃತ್ತಿಯಲ್ಲಿ 'ಕನ್ನಡದ ಪ್ರಾಚೀನತೆ' ಎಂಬ ಮೊದಲನೆಯ ಪ್ರಕರಣವನ್ನು ವಿಸ್ತರಿಸಿ ಬರೆಯಲಾಗಿದೆ. ಮೊದಲನೆಯ ಮುದ್ರಣದಲ್ಲಿ ಲೇಖಕನ ತಿಳಿವಳಿಕೆ ಬಾರದೆ ಕೆಲವು ಲೋಪದೋಷಗಳು ಉಂಟಾಗಿದ್ದುವು. ಅವುಗಳನ್ನಿಲ್ಲಿ ಇಲ್ಲದಂತೆ ಮಾಡಲು ಹವಣಿಸಲಾಗಿದೆ. ಸಾಧ್ಯವಾದಷ್ಟು ಸೋಸಿತೆಗೆದು ಮೊದಲಿನಲ್ಲಿ ನುಸುಳಿಕೊಂಡಿದ್ದ ನ್ಯೂನತೆಗಳನ್ನೆಲ್ಲ ಸರಿಪಡಿಸಲು ಯತ್ನಿಸಲಾಗಿದೆ.

೧—೫—೧೯೫೭
ಮುಂಬಯಿ

ಎನ್. ಕೆ. ಕುಲಕರ್ಣಿ

ಪ್ರಕಾಶಕರ ಅರಿಕೆ

ಇದು 'ಕನ್ನಡ ಸಾಹಿತ್ಯವಾಹಿನಿ'ಯ ನಾಲ್ಕನೇ ಮುದ್ರಣವು. ಇದನ್ನು ಮುಂಬೈ ಸರಕಾರದವರೂ, ಮೈಸೂರು ಸರಕಾರವು ಬೀದರ, ರಾಯಚೂರು, ಗುಲಬುರ್ಗಾ, ಹಾಗೂ ಮರಾಠಾವಾಡಾಗಳ 'ಮಲ್ಟಿಪರಪಜ ಹೈಸ್ಕೂಲುಗಳ ೧೧ನೇ ಇಯತ್ತೆಗೆ ಪಠ್ಯಪುಸ್ತಕ'ವನ್ನಾಗಿ ಮಂಜೂರು ಮಾಡಿದ್ದಾರೆ. ಆದಕಾರಣ ಅವರಿಗೆ ನಾವು ಕೃತಜ್ಞರಾಗಿದ್ದೇವೆ.

—ಪ್ರಕಾಶಕರು

ಕನ್ನಡ ಸಾಹಿತ್ಯವಾಹಿನಿ

೧ ಕನ್ನಡವು ವೇದಕಾಲದ್ದೆ ?

ಕನ್ನಡಿಗರು ಮೂಲ ದ್ರಾವಿಡ ಜನಾಂಗದಿಂದ ಒಂದು ಶಾಖೆಯಾಗಿ ಒಡೆದು ಬಂದವರು–ಎಂಬ ಮಾತನ್ನೀಗ ಸರ್ವಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಾರೆ. ಅದರಂತೆಯೆ ದ್ರಾವಿಡರು ಆರ್ಯ ಪೂರ್ವ ಜನಾಂಗವೆಂಬ ಮಾತೂ 'ಸರ್ವಸಮ್ಮತವಾದ ಸಿದ್ಧಾಂತ'ವಾಗಿದೆ.† ಆರ್ಯರು ದಕ್ಷಿಣಕ್ಕೆ ಬರುವ ಪೂರ್ವದಲ್ಲಿಯೆ ದ್ರಾವಿಡರು ಒಂದು ಸುಸಂಸ್ಕೃತ ಜನಾಂಗವೆನಿಸಿಕೊಂಡು ಒಳ್ಳೇ ಸಮಾಜವನ್ನು ಕಟ್ಟಿಕೊಂಡು ಜನಜೀವನದ ಸೌಖ್ಯಕ್ಕೆ ಬೇಕಾಗುವ ಎಲ್ಲ ಅನುಕೂಲತೆಗಳನ್ನೂ ನಿರ್ಮಿಸಿಕೊಂಡು ಬದುಕು ಮಾಡುತ್ತಿದ್ದಿರಬೇಕು.* ಕನ್ನಡ ಜನಾಂಗವೆಂಬ ಪ್ರತ್ಯೇಕವಾದ ಹೆಸರು ದೊರೆಯದಿದ್ದರೂ ಕನ್ನಡಿಗರು ಇನ್ನು ಬೇರೆ ಹೆಸರಿನಿಂದಾದರೂ ಋಗ್ವೇದ ಕಾಲಕ್ಕೆ ಮೊದಲಿನಿಂದಲೂ ಹಿಂದೂ ದೇಶದಲ್ಲಿಯೆ ನೆಲಸಿದ್ದವರಿವರು; ಹೂಣರಂತೆಯೊ ಗುರ್ಜರರಂತೆಯೊ ಆರ್ಯರ ತರುವಾಯ ಅಡಿಯಿಟ್ಟ ಜನಾಂಗವಲ್ಲ. ಕನ್ನಡಿಗರು ವೇದ ಕಾಲ ದಿಂದಲೂ ಪ್ರಸಿದ್ಧರಾಗಿದ್ದರೆಂದು ಶ್ರೀ. ಶಂ. ಬಾ. ಜೋಶಿಯವರು ಭಾಷಾ ಶಾಸ್ತ್ರದ ಬಲದಿಂದ ಗೊತ್ತು ಹಚ್ಚಲು ಹೊರಟಿದ್ದಾರೆ. ಇದರಲ್ಲಿ ಕಂಡುಬಂದ ಊಹೆಗಳನ್ನು ವಂಶ ವಿಜ್ಞಾನದ (ethnology) ಆಧಾರ ಹುಡುಕಿ ಸಮರ್ಥಿ ಸಲೂ ಯತ್ನಿಸಿದ್ದಾರೆ. ಅವರ ಸಂದೇಹಗಳೆಲ್ಲ ಸಿದ್ಧಾಂತಗಳೆಂದು ನಿರ್ಣಯ

---

† ಕರ್ನಾಟಕ ವೀರ ಕ್ಷತ್ರಿಯರು.

* ಗ್ರಾಮಸಂಸ್ಥೆಯ ಉತ್ಪಾದಕರೇ ದ್ರಾವಿಡರೆಂದೂ ನೌಕಾವಿದ್ಯೆಯನ್ನು ಇವ ರಿಂದಲೇ ಆರ್ಯರು ಕಲಿತುಕೊಂಡರೆಂದೂ ಶ್ರೀ. ಎಂ. ಎಸ್. ಹೆಗಡೆ ಅವರು ತೋರಿಸಿದ್ದಾರೆ. (ಜ. ಕ. IV-iv-೨೮೯) ನಿಯಮವಿಲ್ಲದ ಶರೀರ ಸಂಬಂಧ, ನಾಗ ಪೂಜೆ, ತಾಯಿಯ ಮೇಲೆಯೆ ಮನೆತನದ ಹಿರಿಯತನ, ಎಲ್ಲರೂ ಒಟ್ಟಾಗಿಯೆ ಊಟ ಮಾಡುವುದು, ನಿಯತ ಕಾಲಿಕ ನೃತ್ಯ ವ್ಯಾಸಂಗ, ಸಕಲ ಕಲಾಕೌಶಲ್ಯ— ಇವೆ ಕೆಲವು ದ್ರಾವಿಡರ ಧಾರ್ಮಿಕ–ಸಾಮಾಜಿಕ ಸಂಸ್ಕೃತಿಯ ವೈಲಕ್ಷಣ್ಯಗಳೆಂದು ಹೇಳಿದ್ದಾರೆ.

ವಾದರೆ ಕನ್ನಡಿಗರ ಇತಿಹಾಸ ಸಂಪುಟದಲ್ಲಿ ನಿಜವಾಗಿಯೂ ಒಂದು ಹೊಸ ಪ್ರಕರಣವನ್ನೆ ತೆರೆದಂತಾಗುತ್ತದೆ.

ಋಗ್ವೇದದಲ್ಲಿ ಪ್ರಸಿದ್ಧರಾದ ಯದು-ತುರ್ವಸುಗಳು ಕನ್ನಡ ಮೂಲ ಜನಾಂಗವೆಂದೂ ಅವರ ವಂಶಗಳೇ ಗಂಗ-ರಾಷ್ಟ್ರಕೂಟರೆಂದೂ ಶ್ರೀ. ಶಂ. ಬಾ. ಜೋಶಿಯವರ ಮತ. ರಾಜ್ಯವನ್ನು ಕಟ್ಟಿಕೊಂಡು ನೆಲೆಯೂರಿ ನಿಲ್ಲುವ ಮೊದಲು 'ಹಟ್ಟಿಕಾರ' (nomads) ರಾಗಿ ಅಲೆಯುತ್ತಿದ್ದರೆಂದೂ ಅವರೇ ಮುಂದೆ 'ಆರೇರೂ' (ಆರ್ಯರು), ತಲುಗರೂ ಆದರೆಂದು ತೋರಿಸಲು ಯತ್ನಿಸಿದ್ದಾರೆ.

ಸ್ಮೃತಿಕಾಲದಲ್ಲಿ ಮನುವೇ ಮೊದಲಾದ ಸ್ಮೃತಿಕಾರರು 'ನಟಶ್ಚ ಕರಣಶ್ಚೈವ' ಎಂದು ಹೇಳುವ ಜನಾಂಗವೇ ಕನ್ನಡವೆಂದೂ ಮತ್ಸ್ಯ ಪುರಾಣವು ಕರ್ಣ (ಕಣ್ಣ್) ನಟರು ಯದು-ತುರ್ವಸುಗಳ ಪೀಳಿಗೆಯವರೆಂದು ಸಾರುತ್ತದಾಗಿಯೂ 'ಕನ್ನಡದ ನೆಲೆ' ಯಲ್ಲಿ ತೋರಿಸಿದ್ದಾರೆ. (ಪು ೯೩, ೯೮.)

ಛಾಂದೋಗ್ಯೋಪನಿಷತ್ತಿನಲ್ಲಿ ದೊರೆಯುವ 'ಮಟಚಿ' ಎಂಬ ಶಬ್ದವು ಕನ್ನಡದ 'ಮಿಡಿಚೆ' ಶಬ್ದವಿರಬೇಕೆಂಬ ಬಗ್ಗೆ ಡಾ. ಜಾಕೋಬಿ, ಡಾ. ಘಾಟಕ, ಡಾ. ದೇವತ್ತ ಮೊದಲಾದವರ ಮಾತಿನ ಆಧಾರವನ್ನು ಕೊಟ್ಟು (ಕನ್ನಡದ ನೆಲೆ ಪು. ೫೬) * 'ಋಗ್ವೇದ ಕಾಲದಿಂದ ಛಾಂದೋಗ್ಯೋಪನಿಷತ್ ಕಾಲದ ಒಳಗಾಗಿ ಆಂಧ್ರ-ಕರ್ನಾಟಕ ನುಡಿಯ ತಾಯಿಯಾದ 'ಮೊದಲ ಹಳಗನ್ನಡ' ಭಾಷೆಯು ಒಂದು ಸ್ವರೂಪಕ್ಕೆ ಬಂದಿತ್ತೆಂದು ಊಹಿಸಬಹುದಾಗಿದೆ'— ಎಂದು ವಿವರಿಸುತ್ತ –'ಈ ಬಗೆಯಾಗಿ ಕನ್ನಡ ಉಗಮವು ಋಗ್ವೇದ ಕಾಲದಲ್ಲಿ ಆದುದು ಗೋಚರವಾಗುತ್ತಿದೆ.' (ಕ. ವೀ. ಕ್ಷತ್ರಿಯರು ಪು. ೬೭) ಎಂದು ಸೂಚಿಸಿದ ವಿಧಾನವು ವಿಚಾರಣೀಯವಾಗಿದೆ.

---

* ಇದೇ ಪ್ರಸಕ್ತಿಯನ್ನೆ ಜಯಕರ್ನಾಟಕದಲ್ಲಿ (ಸಂ. ೪-ಸಂಚಿಕೆ ೪ ಪು. ೨೮೯) ಶ್ರೀ. ಮಹಾಬಲ ಶಂಕರ ಹೆಗಡೆ ಅವರು ಕ್ರಿ. ಶ. ೧೯೨೪ರಲ್ಲಿ ಜರುಗಿದ ಪ್ರೊ. ಭಾಂಡಾರಕರ ಅವರ ಉಪನ್ಯಾಸ ಮಾಲಿಕೆಯಲ್ಲಿ ಬಂದ ಅದೇ ವಿಷಯದ ಆಧಾರವನ್ನು ಕೊಟ್ಟು ವಿವರಿಸಿದ್ದಾರೆ.

ಮೊಹೆಂಜೊದಾರೊದಲ್ಲಿ ದೊರೆತ ಪ್ರಾಚ್ಯ ಅವಶೇಷಗಳನ್ನೆಲ್ಲಾ ಸಂಶೋಧನ ದೃಷ್ಟಿಯಿಂದ ಕೂಲಂಕಷವಾಗಿ ಅಭ್ಯಾಸಮಾಡಿ ರೆ. ಫಾದರ ಹೆರಾಸ್ ಅವರು– 'Karnatak Historical Quarterly' ಎಂಬ ಪತ್ರಿಕೆಯಲ್ಲಿ– 'Karnatak and Mohenjodaro' ಎಂಬ ತಮ್ಮ ಲೇಖನದಲ್ಲಿ ಕಾಣಿಸಿದ ಕೆಲವು ಊಹೆಗಳು– ಅವುಗಳ ಸತ್ಯಾಂಶ ಇನ್ನೂ ನಿರ್ಣಯವಾಗಬೇಕಾಗಿದ್ದರೂ– ಮೇಲಿನ ಶಂ. ಬಾ. ಜೋಶಿಯವರ ಊಹೆಗಳಿಗೆ ಸಹಕಾರಿಯಾಗಿವೆ. ಮೊಹೆಂಜೊದಾರೊದಲ್ಲಿ ದೊರೆತ ಕೆಲವು ಮುದ್ರಿಕೆಗಳ ಮೇಲಿನ (ಚಿತ್ರ) ಲಿಪಿಯನ್ನು ಅಭ್ಯಾಸ ಮಾಡಲಾಗಿ ಅಲ್ಲಿ ಕಾಣಿಸಿದ ಕಣ್ಣಿನ ಗುರುತು 'ಕಣ್' ಎಂಬ ಜನಾಂಗವನ್ನು ಸೂಚಿಸುತ್ತದೆ.– ಎಂದಿದ್ದಾರೆ. ಈ 'ಕಣ್–ನೀರ್' ರೇ ಕನ್ನಡಿಗರಾಗಿರಬೇಕೆಂದು ಅವರ ಮತ.

'Therefore in the Proto Dravidian language of Mohenjodaro it will be read 'Kan' 'eye' or to 'see'... therefore it will be read 'Kannan' 'one who sees'... thus the complete sign will read Kanna nir– 'people who have eyes' this evidently refers to a tribe, to a number of people called so. The ancient word Kannadigas by which the people of modern Karnataka are mentioned seems to be a Sanskrit modification of Kananir.'

ಮೊಹೆಂಜೊದಾರೊದಲ್ಲಿ ದೊರೆತ ಅವಶೇಷಗಳಿಂದಲೂ ಶಾಸನಗಳಿಂದಲೂ ಅವರ ಕಾಲವು ಕ್ರಿ. ಶ. ಪೂ. ೨೩೦೦ ರ ವರೆಗೂ ಒಯ್ಯಲ್ಪಟ್ಟಿದೆ. ಎಂದ ಮೇಲೆ ಕನ್ನಡ ಜನಾಂಗವು ವೇದಕಾಲದ್ದೆಂದು ಹೇಳಲಿಕ್ಕೆ ಎಂತಹ ಅದ್ಭುತ ಆಧಾರ ದೊರೆತಂತಾಯಿತು! ಆದರೆ ಎಲ್ಲವೂ ಇನ್ನೂ ಪ್ರಮಾಣಿಸಿ ನೋಡಬೇಕಾದ ವಿಷಯ.

ಪುರಾಣಗಳು

ಮಹಾಭಾರತದ ಸಭಾಪರ್ವ ಭೀಷ್ಮಪರ್ವಗಳಲ್ಲಿ ಕರ್ನಾಟಕದ ಹೆಸರಿದೆ. ಭಾಗವತ ೫ನೆಯ ಸ್ಕಂದ ೬ನೆಯ ಅಧ್ಯಾಯ ೮ನೆಯ ಗದ್ಯದಲ್ಲಿ

ವೃಷಭನು ದಕ್ಷಿಣ ಕರ್ನಾಟಕದಲ್ಲಿ ಸಂಚಾರ ಮಾಡುವಾಗ ಕಾಡಾಗ್ನಿಗೆ ತುತ್ತಾದನೆಂದು ವರ್ಣಿತವಾಗಿದೆ. (ಏಕದಾತುಕಾಂಕಟ ಕರ್ಣಾಟಕಾದ್ದಕ್ಷಿಣ ಕರ್ಣಾಟಕಾನ್ ದೇಶಾನ್ ಯದೃಚ್ಛಯೋಪಗತಃ ಕುಟಚಾಚಲೋಪವನೇ ಆಸ್ಯಕೃತಾತ್ಮಕವಲ ಉನ್ಮಾದ ಇವ ಮುಕ್ತಮೂರ್ಧಜೋಽ ಸವೀತ ಏವ ವಿಚಚಾರ ॥ ೮ ॥)

ವಾಮನ ಪುರಾಣದಲ್ಲಿ ಪರಮಾತ್ಮನು ವಾಮನಾವತಾರ ತಾಳಿ ಬಲಿಚಕ್ರವರ್ತಿಯನ್ನು ಪಾತಾಳಕ್ಕಟ್ಟಿದನೆಂದು ಹೇಳುವಲ್ಲಿ ಕರ್ನಾಟಕದ ಒಂದು ಭಾಗವಾದ ನಾಗರಖಂಡವೇ ಪಾತಾಳಲೋಕವಾಗಿರಬೇಕು. ಮದ್ರಾಸದ ತೆಂಕಲಲ್ಲಿ ಮಹಾಬಲಿಪುರವೆಂಬ ಪುರಾತನ ಪಟ್ಟಣದ ಕುರುಹುಗಳಿಂದಲೂ ಬಲಿಚಕ್ರವರ್ತಿಯು ಮತ್ತು ಅವನ ಮಗ ಬಾಣನ ವಂಶದವರು ಕರ್ನಾಟಕದ ಕೆಲವು ಭಾಗಗಳನ್ನು ಆಳಿದರೆಂದು ಶಾಸನಗಳು ತಿಳಿಸುವುದರಿಂದಲೆ ಈ ದಕ್ಷಿಣ ದೇಶವು ವಾಮನ ಪುರಾಣದ ಪಾತಾಳಲೋಕವಾಗಿತ್ತೆಂದು ಇತಿಹಾಸಕಾರರು ಊಹಿಸಿದ್ದಾರೆ. ವಾಮನಾವತಾರವು ಕ್ರಿ. ಪೂ. ೨೯೦೦ ವರ್ಷಗಳ ಹಿಂದೆ ಆರಂಭವಾಯಿತೆಂದು ಗಣಿತ ಹಾಕಿ, 'ಸು. ೫೦೦೦ ವರ್ಷಗಳಿಂದ ನಮ್ಮ ತಾಯ್ನಾಡಿನ ಅಸ್ತಿತ್ವವು ಗೊತ್ತಾಗುತ್ತದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ' ವೆಂದು ಅವರ ಅಭಿಪ್ರಾಯ. ಇದೇ ಪ್ರಕಾರ ರಾಮಾವತಾರವು ಕ್ರಿ. ಪೂ. ೧೯೦೦ ರಲ್ಲಿಯೆಂದೂ ಪರಶುರಾಮಾವತಾರವು ಕ್ರಿ. ಪೂ. ೨೪೦೦ ರಲ್ಲಿಯೆಂದೂ ಎಣಿಕೆ ಹಾಕಿದ್ದಾರೆ.†

ಇದೇ ರೀತಿಯಿಂದ ಕರ್ನಾಟಕದ ಮುಖ್ಯ ಭಾಗವಾಗಿದ್ದ ಹಂಪೆಯು ಸುಗ್ರೀವನ (ಮೊದಲು ವಾಲಿಯು ?) ರಾಜಧಾನಿಯಾದ ಕಿಷ್ಕಿಂಧೆ, ಗೋಕರ್ಣದಲ್ಲಿಯ ಮಹಾಬಳೇಶ್ವರನೂ, ಪಂಚ ಲಿಂಗಗಳೂ ರಾಮಾವತಾರದಲ್ಲಿಯೇ ಸ್ಥಾಪಿತವಾದವು, ಇಂದಿನ ನಾಶಿಕವೇ ಜನಸ್ಥಾನ, ವಾಲಿಯ ಕೈಕೆಳಗೆ ಹನುಮಂತನು ಹೊನ್ನಾವರ (ಹನುಮ + ಆವರ) ವನ್ನು ಆಳುತ್ತಿದ್ದನು, ವೈಜಯಂತಿಯಲ್ಲಿ ದಶರಥನು ಶಂಬಕಾಸುರನೊಡನೆ ಹೋರಾಡಿದನು,

---

† ಕರ್ನಾಟಕ ಸಾಮ್ರಾಜ್ಯ ಪು. ೩

ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಜಟಿಂಗ ರಾಮೇಶ್ವರವು ಜಟಾಯು ವಧಸ್ಥಳ;- ಇಂತಿವಲ್ಲದೆ ಹಂಪೆಯ ಪಂಪಾಸರೋವರ, ವಾಲೀದಿಬ್ಬ, ಸೀತೆಯ ಸೆರಗು, ಹಾನಗಲ್ಲಿನ ಕುಂತೀದಿಬ್ಬ, ಹಾನಗಲ್ ಹತ್ತಿರವೇ ಇರುವ ದಶರಥಪುರ ಇವೆಲ್ಲವೂ ರಾಮಾಯಣ ಕಾಲ ದಿಂದಲೆ ಪ್ರಸಿದ್ಧವಾದ ಕರ್ನಾಟಕ ಪ್ರದೇಶಗಳಾಗಿವೆಯೆಂದು ಹಲವು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ.

ಭಾರತ ಯುದ್ಧವು ಕ್ರಿ. ಪೂ. ೧೪೦೦ ರಲ್ಲಿ ಆಯಿತೆಂದು ಪಾಶ್ಚಾತ್ಯ ಪಂಡಿತರ ಮತ. ವನಸಂಚಾರ ಮಾಡುವ ಪಾಂಡವರು ಚಿತ್ರದುರ್ಗದ ಬಳಿಯಲ್ಲಿರುವಾಗ ಭೀಮನು ಹಿಡಿಂಬ ರಾಕ್ಷಸನನ್ನು ಕೊಂದು ಹಿಡಿಂಬೆ ಯನ್ನು ಮದುವೆಯಾದನೆಂದೂ, ಶಿವಮೊಗ್ಗೆಯ ಜಿಲ್ಲೆಯಲ್ಲಿ ತಾಳಗುಂದದ ಸಮೀಪದಲ್ಲಿರುವ **ಏಕಚಕ್ರಪುರ**ದಲ್ಲಿ ಒಬ್ಬ ಕುಂಬಾರನ ಮನೆಯಲ್ಲಿ ಭಿಕ್ಷಾಟನ ಮಾಡಿಕೊಂಡಿದ್ದರೆಂದೂ ಊಹಿಸುವುದಲ್ಲದೆ ಅರ್ಜುನನು ತೀರ್ಥಯಾತ್ರೆಗಾಗಿ ಹೊರಟು ಶ್ರೀಶೈಲವನ್ನು ಕಂಡು ಮಣಿಪುರದಲ್ಲಿ ಚಿತ್ರಾಂಗದೆಯನ್ನು ಮದುವೆಯಾದನೆಂದೂ ಕೆಲವು ಸಂಶೋಧಕರು ಅಭಿಪ್ರಾಯಪಡುತ್ತಾರೆ. ಸಿಕಾರಪುರ ತಾಲೂಕಿನಲ್ಲಿರುವ ಬಳ್ಳಿಗಾವಿ ಯೆಂಬ ಗ್ರಾಮದಲ್ಲಿ ಪಾಂಡವರು ಪಂಚಲಿಂಗಗಳನ್ನು ಸ್ಥಾಪಿಸಿದರೆಂದು ಶಾಸನಗಳಿಂದ ತಿಳಿದುಬರುತ್ತದೆ. (Mysore and Coorg from Inscriptions P. 2) ಹಾನಗಲ್ಲು ಮತ್ಸ್ಯಪುರ (ವಿರಾಟನಗರ) ವಾಗಿ ತ್ತೆಂದು ತಿಳಿಯುತ್ತದೆ. ೧೨ನೆಯ ಶತಮಾನದಲ್ಲಿ ಹಾನಗಲ್ಲಿಗೆ 'ವಿರಾಟ ಕೋಟೆ' ಯೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಗದಗ ತಾಲೂಕಿನ ಹತ್ತಿರ ಇರುವ ಮುಳಗುಂದದೊಳಗಿನ 'ಭೀಮನ ಜಾರಗುಂಡಿ', ಗೋಕಾಕದ ಹತ್ತಿರ ಕೊಣ್ಣೂರಿನಲ್ಲಿರುವ 'ಪಾಂಡವರ ಮನೆ' ಗಳು ಮಹಾಭಾರತದ ಸಂಬಂಧವನ್ನು ಸಾರುವಂತಿವೆ. 'ಕರವೀರಪುರ' – ಕೊಲ್ಲಾಪುರ –ದಲ್ಲಿ ಶೃಗಾಲವಾಸುದೇವನು ಆಳುತ್ತಿದ್ದನೆಂದು ಮಹಾಭಾರತದಲ್ಲಿ ಹೇಳಿದೆ. ಬಲರಾಮನು ಪಂಪಾ, ಭೀಮರತಿ, ಕಾವೇರಿಗಳಲ್ಲಿ ಸ್ನಾನ ಮಾಡಿದ ನೆಂದೂ ಶ್ರೀಶೈಲ ಗೋಕರ್ಣಗಳನ್ನು ಸಂದರ್ಶಿಸಿದನೆಂದೂ ಭಾಗವತದಿಂದ ತಿಳಿಯುತ್ತಿದೆ.

ಪ್ರಾಚೀನ ಅವಶೇಷಗಳು

ಬಳ್ಳಾರಿ ಜಿಲ್ಲೆಯ ಕುಪ್ಪಗಲ್, ಧಾರವಾಡ ಜಿಲ್ಲೆಯ ಶಿರಟ್ಟಿ ತಾಲೂಕಿನೊಳಗಿನ ಇಟಗಿ, ತುಂಗಭದ್ರೆಯ ದಂಡೆ ಈ ಮೊದಲಾದ ಪ್ರದೇಶಗಳಲ್ಲಿ ಶಿಲಾಯುಧದ ಅವಶೇಷಗಳನ್ನು ದಿ. ಕೆ. ಎನ್. ದೀಕ್ಷಿತ ಅವರು ಕಂಡುಹಿಡಿದಿದ್ದಾರೆ. ಇದರ ತರುವಾಯ ಬಳ್ಳಾರಿ ಜಿಲ್ಲೆಯ **ಕುಡಿತಿನಿ** ಎಂಬಲ್ಲಿ ದೊರೆತ ಕಬ್ಬಿಣದ ಕಿಟ್ಟಗಳು ಹಿಂದುಸ್ಥಾನದ ಕಬ್ಬಿಣ ಯುಗದ ಅತ್ಯಂತ ಪ್ರಾಚೀನ ಕುರುಹುಗಳಾಗಿವೆ. ಉತ್ತರ ಹಿಂದುಸ್ಥಾನ ದಲ್ಲಿ ಶಿಲಾಯುಧದ ಅವಶೇಷಗಳ ನಂತರ ಕಬ್ಬಿಣ ಯುಗದ ಅವಶೇಷ ಗಳು ದೊರೆಯದೆ ತಾಮ್ರಯುಗದ ಅವಶೇಷಗಳೆ ದೊರೆಯುತ್ತವೆ. ಮೊಹೆಂಜೊದಾರೊದಲ್ಲಿ ತಾಮ್ರಯುಗದ ಕುರುಹಗಳು ಉಪಲಬ್ಧವಾಗಿವೆ. ಬೆಳಗಾವಿ ಸ್ಟೇಶನ್‌ದಿಂದ ಎರಡು ಮೈಲು ದೂರದಲ್ಲಿರುವ **ವಡಗಾಂವ** ಎಂಬಲ್ಲಿಯೂ (ಇಲ್ಲಿ ಒಂದು ಬ್ರಾಹ್ಮೀಲಿಪಿಯೂ ಸಿಕ್ಕಿದೆ.) ಬಾಗಿಲಕೋಟೆ ತಾಲೂಕಿನ **ಹೆರಕಲ್**‌ದಲ್ಲಿಯೂ ಶಿರಹಟ್ಟಿ ತಾಲೂಕಿನ **ಇಟಗಿ**ಯಲ್ಲಿಯೂ ಕಂಡುಹಿಡಿಯಲ್ಪಟ್ಟ ಅನೇಕ ಮಹತ್ವದ ಅವಶೇಷಗಳು ಪ್ರಾಚೀನತೆಯ ದೃಷ್ಟಿಯಿಂದ ಕಬ್ಬಿಣದ ಯುಗದವರೆಗೂ ಒಯ್ಯಲ್ಪಟ್ಟವೆ. 'ಉತ್ತರ ಹಿಂದುಸ್ಥಾನದಲ್ಲಿ ಸೈಂಧವ ಸಂಸ್ಕೃತಿಯಿಂದ ನಿರ್ಣಯಿಸಲ್ಪಡುವ ಕ್ರಿ. ಪೂ. ೩೦೦೦ ವರ್ಷಗಳ ಹಿಂದಿನ ಇತಿಹಾಸದ ನಂತರ ಮೌರ್ಯರ ಕಾಲದ ವರೆಗೆ (ಕ್ರಿ. ಪೂ. ೩ ಶ.) ಮಧ್ಯಯುಗದ ಚರಿತ್ರೆಯನ್ನು ತಿಳಿದು ಕೊಳ್ಳಲು ಸಾಕಷ್ಟು ಪ್ರಮಾಣಗಳು ಉಪಲಬ್ಧವಾಗಿಲ್ಲ. ಆದರೆ ಶ್ರೀ. ಪಂಚಮುಖಿಯವರು ಬಾಗಿಲಕೋಟೆ, ಬೆಳಗಾಂವಿ, ಶಿರಟ್ಟಿ ಮುಂತಾದ ಸ್ಥಳಗಳಲ್ಲಿ ಮಾಡಿದ ಶೋಧದಿಂದ ಹಿಂದಿನ ಕಬ್ಬಿಣ ಯುಗದ ವರೆಗೆ ಇತಿಹಾಸವನ್ನು ಒಯ್ಯಲು ಸಾಧ್ಯವಾಗುವಂತಿದೆ'– ಎಂದು ರಾ. ಬಾ. ದೀಕ್ಷಿತ ಅವರು ತಮ್ಮ ಉಪನ್ಯಾಸದಲ್ಲಿ ಹೇಳಿದ್ದಾರೆ. (ಸಂಯುಕ್ತಕರ್ನಾಟಕ, ಮೇ ೧೯೪೩)

ಪ್ರಾಚೀನ ಕಾಲಕ್ಕೆ ಗ್ರೀಕರೊಡನೆ ಕರ್ನಾಟಕರ ವ್ಯಾಪಾರ ನಡೆಯು ತ್ತಿತ್ತು. ಚಿತ್ರದುರ್ಗದಲ್ಲಿ ಕ್ರಿ. ಪೂ. ೨ನೆಯ ಶತಮಾನದಲ್ಲಿ ಆಳಿದ ಚೀನ ದೇಶದ **ಹನ್‌ವುತಿ** ಎಂಬ ಚಕ್ರವರ್ತಿಯ ಹಿತ್ತಾಳಿಯ ನಾಣ್ಯ ಮತ್ತು

ಕ್ರಿ. ಶ. ೧೪ ರಲ್ಲಿ ಆಳಿದ ಆಗಸ್ಟಸ್ ಎಂಬ ರೋಮ ಚಕ್ರವರ್ತಿಯ 'ಡಿನೇರಿಯಸ್' ಎಂಬ ಬೆಳ್ಳಿಯ ನಾಣ್ಯಗಳು ಕನ್ನಡ ನಾಡಿನ ವಾಣಿಜ್ಯ ವ್ಯಾಪ್ತಿಗೆ ಬಲ ಕೊಡುತ್ತವೆ. (Mysore Gazetteer vol. II chap. IV P. 74-76)

ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿಯ ಅಗಿತದಲ್ಲಿ ದಿ. ಆರ್. ನರಸಿಂಹಾಚಾರ್ಯರು ಅನೇಕ ಪ್ರಾಚೀನ ಅವಶೇಷಗಳನ್ನು ಕಂಡು ಹಿಡಿದಿರುವರಲ್ಲದೆ ಗ್ರೀಕ ಮತ್ತು ರೋಮನ್ ನಾಣ್ಯಗಳನ್ನೂ ಶೋಧಿಸಿದ್ದಾರೆ. ಇವುಗಳ ಜೊತೆಗೆ ಆಂಧ್ರರ ಸೀಸದ ನಾಣ್ಯಗಳೂ ಇಲ್ಲಿ ದೊರೆತಿವೆ. ಕರ್ನೂಲ್ ಜಿಲ್ಲೆಯ ನಂದ್ಯಾಳದಲ್ಲಿ ದೊರೆತ ರೋಮನ್ ಬಂಗಾರದ ನಾಣ್ಯಗಳ ಚಿತ್ರಪಟ (photographic plate) ವೊಂದು ಧಾರವಾಡದ ಕನ್ನಡ ಸಂಶೋಧನ ಕಚೇರಿಯಲ್ಲಿದೆ. ಉಡುಪಿಯ ಮಲ್ಪೆಯ ಬಂದರದ ದಂಡೆಯ ಮೇಲೆಯೂ ಪರದೇಶದ ನಾಣ್ಯಗಳು ದೊರೆತಿವೆಯೆಂದು ತಿಳಿದು ಬಂದಿದೆ.

ಐತಿಹಾಸಿಕ ಕರ್ನಾಟಕ

ಕರ್ನಾಟಕದ ಕೆಲವು ಭಾಗವು ಮೌರ್ಯರ ಆಧಿಪತ್ಯಕ್ಕೆ ಒಳಪಟ್ಟಿತ್ತು ಎಂಬುದು ಸ್ಪಷ್ಟ. ಬೌದ್ಧ ಸಾರ್ವಭೌಮನಾದ ಅಶೋಕ ಮಹಾರಾಜನ ಶಾಸನಗಳು— ಹೈದರಾಬಾದ ಪ್ರಾಂತಕ್ಕೆ ಸೇರಿದ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನಲ್ಲಿರುವ ಮಸ್ಕಿ ಎಂಬ ಗ್ರಾಮದಲ್ಲಿಯೂ, ಅನಂತಪುರ ಜಿಲ್ಲೆಯ ಗುತ್ತಿಯ ಸಮೀಪದಲ್ಲಿರುವ ಎರ್ರಗುಡಿಯಲ್ಲಿಯೂ, ಚಿತ್ರದುರ್ಗ ಜಿಲ್ಲೆಯಲ್ಲಿರುವ ಮೊಳಕಾಲ್ಮೂರು ತಾಲೂಕಿನ ಪೈಕಿ ಸಿದ್ದಾಪುರದ ಸುತ್ತುಮುತ್ತಲು ಸಮೀಪದಲ್ಲಿರುವ ಜಟಿಂಗ ರಾಮೇಶ್ವರ, ಬ್ರಹ್ಮಗಿರಿ, ಎಮ್ಮೆತಮ್ಮನ ಗೂಡು ಎಂಬಲ್ಲಿಯೂ ಸಿಗುತ್ತವೆ. ಈ ಲಿಪಿಗಳಿಂದ ಸಿದ್ದಾಪುರವು ಅಶೋಕನ ರಾಜ್ಯದ ದಕ್ಷಿಣ ಪ್ರಾಂತವಾದ ಸುವರ್ಣಗಿರಿಗೆ ಸಂಬಂಧಿಸಿತ್ತೆಂದು ತಿಳಿದುಬರುತ್ತದೆ. ಹಂಪೆಯ ಉತ್ತರಕ್ಕಿರುವ **ಕನಕಗಿರಿಯೆ** ಈ ಸುವರ್ಣಗಿರಿಯೆಂದು ಡಾ. ಹುಲ್ಟ್ಜರ ಅಭಿಪ್ರಾಯ. (ಅಚ್ಚಿನಲ್ಲಿರುವ ಶ್ರೀ. ಪಂಚಮುಖಿ ಅವರ ' ಕರ್ನಾಟಕ ಅರಸು ಮನೆತನಗಳು ' ಪು. ೨) ' ಮಹಾವಂಶ ' ಎಂಬ ಬೌದ್ಧಗ್ರಂಥದಲ್ಲಿ ಅಶೋಕನು ಬನವಾಸಿಗೂ ಮಹಿಷಮಂಡಲಕ್ಕೂ ರಕ್ಷಿತ-ಮಹಾದೇವ ಎಂಬ ಧರ್ಮೋಪ

ದೇಶಕರನ್ನು ಕಳಿಸಿದನೆಂದು ತಿಳಿಯುತ್ತದೆ. ಮಹಿಷಮಂಡಲವೆಂದರೆ ಈಗಿನ 'ಮೈಸೂರು' ಎಂದು ಶ್ರೀ. ಆರ್. ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ. (ಕರ್ನಾಟಕ ಕವಿಚರಿತೆ II P. 3) ಆದರೆ ಡಾ. ಫ್ಲೀಟರು ಮಹಿಷಮಂಡಲವೆಂದರೆ ವಿಂಧ್ಯದ ದಕ್ಷಿಣಕ್ಕೆ ನರ್ಮದೆಯ ಸಮೀಪದಲ್ಲಿರುವ 'ಮಾಂಧಾತ' ಪ್ರಾಂತವೆಂದೂ ಅಭಿಪ್ರಾಯಪಡುತ್ತಾರೆ. ಮೌರ್ಯ ರಾಜ್ಯ ಸ್ಥಾಪಕನಾದ ಚಂದ್ರಗುಪ್ತನು ಭದ್ರಬಾಹು ಮುನಿಯೊಡನೆ ಶ್ರವಣಬೆಳ್ಗೊಳಕ್ಕೆ ಬಂದು ಗುರು ಶುಶ್ರೂಷೆಯನ್ನು ಮಾಡುತ್ತ ನಿಂತು ಕೆಲ ಕಾಲಾನಂತರ ಗತಿಸಿದನೆಂದು ಜೈನ ಗ್ರಂಥಗಳಿಂದ ತಿಳಿಯುತ್ತದೆ. ಶ್ರವಣಬೆಳ್ಗೊಳದ ಶಾಸನಗಳಿಂದ ಭದ್ರಬಾಹುವೂ ಚಂದ್ರಗುಪ್ತನೂ ಶ್ರವಣಬೆಳ್ಗೊಳದಲ್ಲಿದ್ದರೆಂದು ತಿಳಿದುಬರುವಂತಿದೆ. ೭ ನೆಯ ಶತಮಾನದ ಶ್ರವಣಬೆಳ್ಗೊಳದ ೧೭ ನೆಯ ಶಾಸನದಲ್ಲಿ "ಭದ್ರಬಾಹು ಚಂದ್ರಗುಪ್ತ ಮುನೀಂದ್ರ ಯುಗ್ಮದಿನೊಪ್ಪೆ" ಎಂದಿದೆ. ೯ ನೆಯ ಶತಮಾನದ ಶ್ರೀರಂಗ ಪಟ್ಟಣದ ೧೪೭-೧೪೮ ನೆಯ ಶಾಸನಗಳಲ್ಲಿ "ಭದ್ರಬಾಹು ಚಂದ್ರಗುಪ್ತ ಮುನಿಪತಿಚರಣ ಮುದ್ರಾಂಕಿತ........" ಎಂದಿದೆ. ಆದರೆ ಡಾ. ಫ್ಲೀಟರು ಮೇಲಿನ ಅಭಿಪ್ರಾಯವನ್ನು ಒಪ್ಪುವುದಿಲ್ಲ. (Ep. Ind. vol. 22; J. R. A. S. 1909 P. 23 and Ibid 1911 P. 816.) ಟಾಲೆಮಿಯು (ಕ್ರಿ. ಪೂ. ೨ ಶ.) ಬನವಾಸಿಯನ್ನು ಮತ್ತು 'ಆರ್ಯಕ' ದೊಳಗಿನ ೫ ಊರುಗಳನ್ನು ಸೂಚಿಸಿದ್ದಾನೆ.

ಮೌರ್ಯರ ತರುವಾಯ ಶಾತವಾಹನರು ಕರ್ನಾಟಕದ ಅಧಿಪತಿಗಳಾಗಿದ್ದರೆಂದು ಗೊತ್ತಾಗುತ್ತದೆ. ಶಾತವಾಹನರ ರಾಜ್ಯಕ್ಕೆ ಬಳ್ಳಾರಿ ಜಿಲ್ಲೆಯ ಬಹುಭಾಗವು ಸೇರಿತ್ತೆಂದೂ ಆದಕ್ಕೆ 'ಸಾತವಹನಿಹಾರ' ಅಥವಾ 'ಸಾತಾಹನಿರಠ' (ಸಾತವಾಹನ ರಾಷ್ಟ್ರ) ಎಂದು ಕರೆಯುತ್ತಿದ್ದರೆಂದೂ ಬಳ್ಳಾರಿ ಜಿಲ್ಲೆಯ ಹಿರೇಹಡಗಲಿಯಲ್ಲಿ ದೊರೆತ ತಾಮ್ರಪಟಗಳಿಂದ ವಿದಿತವಾಗುತ್ತದೆ. (Ep. Ind. vol. I P. 2) ಇದೇ ಜಿಲ್ಲೆಯ ಆದವಾನಿ ತಾಲೂಕಿಗೆ ಸೇರಿದ ವ್ಯಾಕದೋನಿ ಎಂಬ ಗ್ರಾಮದಲ್ಲಿ ಸಾತವಾಹನ ರಾಜನಾದ 'ಸಿರಿಪುಳುಮಾವಿ' ಯ ಎಂಟನೆಯ ವರುಷದ ಒಂದು ಶಾಸನವಿದೆ. ಮತ್ತು ಈ ಪುಳುಮಾವಿಯೆ ಕ್ರಿ. ಶ. ೧೩೫ ರಿಂದ ಸು. ೨೮ ವರ್ಷ

ರಾಜ್ಯಭಾರ ಮಾಡಿದ ೨೯ನೇಯ 'ವಾಸಿಠೀಪುತ ಪುಳುಮಾವಿ' ಎಂದು ತಿಳಿಯುತ್ತದೆ. (Ep. Ind. vol. XIV PP. 152 ff)

ಶಿಕಾರಿಪುರ ತಾಲೂಕಿನ ಮಳ್ಳಿವಳ್ಳಿ ಗ್ರಾಮದಲ್ಲಿ ದೊರೆತ ಒಂದು ಪ್ರಾಕೃತ ಶಾಸನದಲ್ಲಿ ಆ ಗ್ರಾಮದ ಈಶ್ವರ ದೇವರಿಗೆ 'ಹಾರೀತಿಪುತ್ರ ಶಾತಕರ್ಣಿ' ಎಂಬ ಆಂಧ್ರರಾಜನು ಭೂಮಿಯನ್ನು ಬಿಟ್ಟಂತೆ ಹೇಳಿದೆ. (ಕವಿಚರಿತೆ II P. 3) ಇವೇ ತಾಲೂಕಿನ ತಾಳಗುಂದದ ಪ್ರಾಣವೇಶ್ವರ ದೇವಾಲಯದ ಕದಂಬ ಕಾಕುಸ್ಥ ವರ್ಮನ ಶಿಲಾಲಿಪಿಯಲ್ಲಿ ಈ ದೇವಾಲಯದ ಈಶ್ವರನನ್ನು ಹಿಂದಕ್ಕೆ ಶಾತಕರ್ಣಿ ಮೊದಲಾದ ಅರಸರು ಪೂಜಿಸಿದಂತೆ ಹೇಳಿದೆ.

ಕ್ರಿ. ಶ. ೩ ನೆಯ ಶತಮಾನದಲ್ಲಿ ಸಾತವಾಹನರ ಸಾಮಂತರಾದ ಚುಟುಕುಲದ ಸಾತಕರ್ಣಿಗಳು ಬನವಾಸಿ ಪ್ರಾಂತದಲ್ಲಿ ಆಳುತ್ತಿದ್ದರೆಂದು ಕಂಡುಕೊಳ್ಳಬಹುದಾಗಿದೆ. ('ಕರ್ನಾಟಕದ ಅರಸುಮನೆತನಗಳು' ಪು. ೩) ಬನವಾಸಿಯಲ್ಲಿ ದೊರೆತ ವಿಣ್ಹುಕಡ್ಡ ಚುಟುಕುಲಾನಂದ ಸಾತಕಣ್ಣಿ ಎಂಬ ರಾಜನ (ಇವನು ವೈಜಯಂತಿಯನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. Luders: List of Brahmi Inscriptions, No. 1195) "ಮಗಳು 'ಸಾತಸಿವಖದ ನಾಗಸಿರಿ' (ಸಿವಸ್ಕಂದ ನಾಗಶ್ರೀ) ಎಂಬ ತನ್ನ ಮಗನೊಂದಿಗೆ ನಾಗವನ್ನೂ ಕೆರೆಯನ್ನೂ ದಾನಮಾಡಿದಳೆಂದು ಬರೆದಿದೆ." ('ಕರ್ನಾಟಕದ ಅರಸುಮನೆತನಗಳು' ಪು. ೩)

ಚಿತ್ರದುರ್ಗದ ಸಮೀಪದಲ್ಲಿರುವ ಚಂದ್ರವಳ್ಳಿಯಲ್ಲಿ ದೊರೆತ ನಾಣ್ಯಗಳಿಂದ ಸಹ ಆ ಪ್ರಾಂತವು ಸಾತವಾಹನರ ಅಧೀನದಲ್ಲಿತ್ತೆಂದು ಊಹಿಸಬಹುದು. ಇಲ್ಲಿ ದೊರೆತ ನಾಣ್ಯಗಳು ಸೀಸದವಿದ್ದು ಅವುಗಳೊಳಗೆ ರಾಜರ ನಾಣ್ಯಗಳಲ್ಲಿ ಚೈತ್ಯವೂ ಬೋಧಿವೃಕ್ಷವೂ ಅಂಕಿತವಾಗಿರುವುದಲ್ಲದೆ 'ಮುಡಾನಂದ' 'ಚುಟುಕಡಾನಂದ' ಎಂಬ ರಾಜನಾಮಗಳೂ ದೊರೆಯುತ್ತವೆ. ಕೊಲ್ಹಾಪುರದ ಪಂಚಗಂಗಾನದೀ ತೀರದ ಮೇಲೆ (ಬ್ರಹ್ಮಪುರಿ) ದೊರೆತ ಎರಡು ಆಂಧ್ರನಾಣ್ಯಗಳನ್ನು ಪ್ರೊ. ಕೆ. ಜಿ. ಕುಂದಣಗಾರರು ಪರಿಶೀಲಿಸಿ ಒಂದು ಟಿಪ್ಪಣೆಯನ್ನು ಬರೆದಿದ್ದಾರೆ. (Annual Report of the Kannada Research Institute P. 101.)

ಸಾತವಾಹನರು ಕನ್ನಡಿಗರೆಂಬ ಬಗ್ಗೆ ಕೆಲವೊಂದು ಸಂಗತಿಗಳು ಮಾತ್ರ ಪೋಷಕವಾಗುವಂತಿದ್ದರೂ ಯಾವುದನ್ನೂ ನಿರ್ಧಾರವಾಗಿ ಹೇಳಲು ಬರುವಂತಿಲ್ಲ. ಡಾ. ಎಂ. ಎಚ್. ಕೃಷ್ಣ ಅವರು "ಶಾತವಾಹನರ ಹೆಸರುಗಳಲ್ಲೂ ಬಿರುದಾವಳಿಗಳಲ್ಲೂ ಇರುವ 'ಪುಲಿಮಾಯಿ' 'ವಿಳಿವಾಯಕುರು' ಮೊದಲಾದ ಪದಗಳು ದ್ರಾವಿಡದವೆಂದೇ ನಿರ್ಧರಿಸಲ್ಪಟ್ಟರೂ ಕನ್ನಡ ಪದಗಳೆಂದು ಖಂಡಿತವಾಗಿ ಹೇಳಲು ಬರುವಂತಿಲ್ಲ" ಎಂದಿದ್ದಾರೆ. (ಪ್ರಬುದ್ಧ ಕರ್ನಾಟಕ XX-iii-೩೧.) ಸಾತವಾಹನರಲ್ಲಿ 'ಹಾಲ' 'ಪುಲಿಮಾಯಿ' ಎಂಬ ಹೆಸರುಗಳಲ್ಲಿ ಕನ್ನಡದ ಅಂದವು ಕಾಣುತ್ತಿರಬಹುದು." ಎಂದು ಶ್ರೀ. ಶಂ. ಬಾ. ಜೋಶಿಯವರು ತೋರಿಸಿದ್ದಾರೆ. ('ಕನ್ನಡದ ನೆಲೆ' ಪು. ೯) 'ಹಾಲ' ನೆಂಬ ಸಾತವಾಹನ ರಾಜನು ಬರೆದ 'ಗಾಥಾಸಪ್ತಶತಿ' ಯಲ್ಲಿ 'ತುಪ್ಪ,' 'ಪೊಡೆ,' 'ತೀರ್'— ಎಂಬ ಕನ್ನಡ ಮಾತುಗಳು ದೊರೆಯುತ್ತವೆ. ಕ್ರಿ. ಶ. ೨ನೆಯ ಶತಮಾನದಲ್ಲಿ ಆಳುತ್ತಿದ್ದ ಸಾತವಾಹನರು ಕನ್ನಡಿಗರು ಎಂದು 'ಮರಾಠಿ ಭಾಷಾ ಉದ್ಗಮ ವಿಕಾಸ' ದಲ್ಲಿ (ಪು. ೧೪೯) ಹೀಗೆ ಹೇಳಿದೆ— 'ಆಂಧ್ರಭೃತ್ಯ ಕಾಯ ಕಿಂವಾ ತ್ಯಾಂಚ್ಯಾ ನಂತರಚೆ ಆಂಧ್ರಭೃತ್ಯ ಶಾತವಾಹನ ಕಾಯ ಹೆ ದೋಘೇಹಿ ಕಾನಡೀಚೆ ಕಟ್ಟೆ ಕೈವಾರಿ ಹೋತೆ.' (ಈ ವಿಷಯವನ್ನು ಶಂ. ಬಾ. ಜೋಶಿಯವರು ತಮ್ಮ 'ಕನ್ನಡದ ನೆಲೆ' ಪುಟ ೯ರಲ್ಲಿ ಪ್ರಸ್ತಾಪಿಸಿದ್ದಾರೆ.) ಜಯಕರ್ನಾಟಕದ ೧ನೆಯ ಸಂಪುಟ ೨೯೫ನೆಯ ಪುಟದ ಮೇಲೆ ಶ್ರೀ. ತಿರುಮಲೆ ತಾತಾಚಾರ್ಯರು ಸಾತವಾಹನರು ಕನ್ನಡಿಗರೆಂದೇ ನಿರ್ಧರಿಸಿದ್ದಾರೆ.

ಚಂದ್ರಗುಪ್ತ (ಕ್ರಿ. ಪೂ. ೩೦೦) ನ ಕಾಲಕ್ಕೇ ಆಂಧ್ರರು ಕೃಷ್ಣಾ ಗೋದಾವರಿ ನಡುವಿನ ಭೂಮಿಯನ್ನು ಆಕ್ರಮಿಸಿದ್ದರು. ಅವರ ರಾಜಧಾನಿ ಕೃಷ್ಣೆಯ ದಂಡೆಯ ಮೇಲಿರುವ 'ಶ್ರೀ ಕಾಕುಲಂ' ಆಗಿತ್ತು. ಮೌರ್ಯರ ರಾಜ್ಯ ಸಮಾಪ್ತಿಯಾದ ಮೇಲೆ (೨೪೦ ಕ್ರಿ. ಪೂ.) ಆಂಧ್ರರು ತಮ್ಮ ರಾಜ್ಯವನ್ನು ಶೀಘ್ರವಾಗಿ ಹಬ್ಬಿಸಿದರು. ಆಂಧ್ರರಾಜನಾದ ಕೃಷ್ಣನ ಕಾಲಕ್ಕೆ ಗೋದಾವರಿಯ ಮೇಲಿರುವ ನಾಶಿಕವು ಅವರ ಆಧಿಪತ್ಯಕ್ಕೊಳಪಟ್ಟಿತ್ತು.

ಎರಡನೆಯ ಶತಮಾನದಲ್ಲಿ ರಚಿತವಾಗಿರಬಹುದಾದ 'ಮೃಚ್ಛಕಟಿಕ' ನಾಟಕದಲ್ಲಿ 'ಕರ್ನಾಟಕ ಕಲಹ'ವು ಉಕ್ತವಾಗಿದೆ. ಆದರೆ ಮೃಚ್ಛಕಟಿಕದ ಕಾಲದ ಬಗ್ಗೆಯೆ ಇನ್ನೂ ನಿರ್ಧಾರವಾದ ಸಂಗತಿ ತಿಳಿದಿಲ್ಲ.

'ಶಿಲಪ್ಪದಿಗಾರಂ' ಎಂಬ ತಮಿಳು ಗ್ರಂಥದಿಂದ ಕ್ರಿ. ಶ. ೨ನೆಯ ಶತಮಾನದಲ್ಲಿ 'ಶೆಂಗುವಟ್ಟನ್' ಎಂಬ ಚೇರ ರಾಜನು ಉತ್ತರಕ್ಕೆ ಹೋಗುವಾಗ ನೀಲಗಿರಿಯಲ್ಲಿ ತಂಗಿ 'ಕನ್ನಡರು' ಆಡಿದ ಕುಣಿತವನ್ನು ನೋಡಿ ಹಿಗ್ಗಿದನೆಂದು ಹೇಳಿದೆ.

ಕದಂಬರೂ ಕರ್ನಾಟಕವೂ

ಕರ್ನಾಟಕದಲ್ಲಿ ಸ್ವತಂತ್ರವಾದ ಸಾಮ್ರಾಜ್ಯವನ್ನು ಸ್ಥಾಪಿಸಿ ಆಳಿದವರೆಂದರೆ ಕದಂಬರೇ. ಈ ರಾಜ್ಯವನ್ನು ಸ್ಥಾಪಿಸಿದ ಮಯೂರ ಶರ್ಮನು ಪಲ್ಲವರಿಂದ ಕರ್ನಾಟಕದ ಕೆಲವು ಭಾಗವನ್ನು ಸೆಳೆದುಕೊಂಡನು. (Ep. Carn. VII ಶಿವಮೊಗ್ಗೆ, ಶಿಕಾರಪುರ ೧೭೬) ಚಂದ್ರವಳ್ಳಿಯಲ್ಲಿ ಮಯೂರಶರ್ಮನ ಶಾಸನವನ್ನು ಶೋಧಿಸಿದ ಡಾ. ಎಂ. ಎಚ್. ಕೃಷ್ಣರು ಅದರ ಕಾಲವನ್ನು ಕ್ರಿ. ಶ. ೨೫೮ಕ್ಕೆ ಒಯ್ದಿದ್ದಾರೆ. (Mysore Archaeological Report 1929, PP. 56–58). ಆದರೆ ಮಯೂರ ಶರ್ಮನು ಕದಂಬ ರಾಜ್ಯವನ್ನು ಸ್ಥಾಪಿಸಿದ ಸಂಪೂರ್ಣ ಸಂಗತಿಯು ತಿಳಿಯುವುದು ತಾಳಗುಂದದ ಶಿಲಾಶಾಸನದಿಂದಲೆ. (Ep. carn. VII. ಶಿಕಾರಪುರ ೧೭೬; Ep. Ind. VIII PP. 24 ff) ತಾಳಗುಂದದ ಶಾಸನದ ಕಾಲವನ್ನು ಕ್ರಿ. ಶ. ೩೫೦ ಎಂದು ನಿರ್ಧರಿಸಲಾಗಿದೆ. (Historical Inscriptions of Southern India by Robert Sewell P. 18)

ಕದಂಬರ ಒಂದು ಪ್ರಾಚೀನ ಶಾಸನದಲ್ಲಿ 'ಸಮಸ್ತ ಕರ್ನಾಟಕ ಭೂವರ್ಗ ಭರ್ತಾರ'ನೆಂದು ಅರಸನ ವರ್ಣನೆಯಿದ್ದರೂ ಅದು ಕೃತ್ರಿಮ (spurious) ವಾಗಿದೆಯೆಂದು ತಿಳಿಯುತ್ತದೆ. ಹೀಗಿದ್ದರೂ ಅದು ಕ್ರಿ. ಶ. ೭-೮ ಕ್ಕಿಂತ ಈಚಿನದೇನೂ ಅಲ್ಲ. ಆದುದರಿಂದ ಆ ಕಾಲಕ್ಕಾದರೂ 'ಸಮಸ್ತ ಕರ್ನಾಟಕದ ಭೂವರ್ಗ ಭರ್ತಾರರು'— ಕದಂಬರಾಗಿದ್ದರೆಂಬ ಸಂಗತಿ ತಿಳಿದು ಬರುವುದೇನು ಕಡಿಮೆ ಮಹತ್ವದ್ದಲ್ಲ. ('ಕನ್ನಡದ ಸೆಲೆ' ಪು. ೧೩)

ಕನ್ನಡ ನುಡಿ-ಕನ್ನಡ ಸಾಹಿತ್ಯ

ಛಾಂದೋಗ್ಯೋಪನಿಷತ್ತಿನಲ್ಲಿ ಬರುವ ' ಮಟಚಿ ' ಕನ್ನಡದ 'ಮಿಡಿಚೆ' ಯಾಗಿರಬೇಕೆಂದೂ ಋಗ್ವೇದದಲ್ಲಿ ಕಂಡುಬರುವ ' ಚಂದ್ರ ' ಶಬ್ದವು ದ್ರಾವಿಡದ ' ಶ್ಚಂದ್ರ ' ವಾಗಿರಬೇಕೆಂದೂ ಶ್ರೀ. ಶಂ. ಬಾ. ಜೋಶಿಯವರು ಪ್ರೊ. ರಾಜವಾಡೆ, ಡಾ. ದೇವತ್ತ, ಡಾ. ಭಾಂಡಾರಕರ ಮೊದಲಾದವರ ಅಭಿಪ್ರಾಯಗಳೊಂದಿಗೆ ಮಂಡಿಸಿದ್ದಾರೆ. (' ಮಟಚಿ ' ವಿಷಯದ ಬಗ್ಗೆ ಈ ಮೊದಲೆ ಹೇಳಿದೆ.) ' ಚಂದ್ರ ' ಶಬ್ದವು ಮೂಲ ದ್ರಾವಿಡದಲ್ಲಿ ' ಶ್ಚಂದ್ರ '— ಎಂದಿತ್ತೆಂದೂ ಇಂದಿಗೂ ತಮಿಳು ಭಾಷೆಯಲ್ಲಿ 'ಶ್ಚಂದ್ರ' ಎಂಬ ಶಬ್ದವೇ ಆರಂಭದ ಶ-ಚ ಕಾರಗಳ ನಡುವಿನ ಒಂದು ಉಚ್ಚಾರದಿಂದ ಧ್ವನಿಸಲ್ಪಡುತ್ತದೆಂದೂ ವಿವೇಚಿಸಿದ್ದಾರೆ. (ಕರ್ನಾಟಕ ವೀರ ಕ್ಷತ್ರಿಯರು, ಪು. ೬೬-೬೭) ' ಚಂದ್ರ ' ಶಬ್ದವು ಋಗ್ವೇದದಲ್ಲಿ ಪುರು, ಹರಿ, ಅಶ್ವ, ವಿಶ್ವ ಮೊದಲಾದವುಗಳ ಜೊತೆಗೆ ಬಂದು ಸಮಸ್ತ ಪದವಾದಾಗ ಪುರುಶ್ಚಂದ್ರ, ಹರಿಶ್ಚಂದ್ರ, ವಿಶ್ವಶ್ಚಂದ್ರಗಳಾಗುವ ಕಾರಣ ಇದೇ ಇರಬೇಕೆಂದೂ ಊಹಿಸುತ್ತಾರೆ. ತಮಿಳರು ಆರ್ಯ ಸಂಪರ್ಕದಿಂದ ದೂರವಿದ್ದುದರಿಂದ ಅವರ ಮೇಲೆ ಆರ್ಯಪ್ರಭಾವ ಬೀಳಲಿಲ್ಲ. ಅಂತೆಯೆ ಮೂಲ ದ್ರಾವಿಡ ಸಂಸ್ಕಾರವು ಅವರಲ್ಲಿ ಇನ್ನೂ ಅಚ್ಚಳಿಯದೆ ಉಳಿದಿದೆ. ಆದರೆ ಉತ್ತರಕ್ಕೆ ಬಂದ ಹಾಗೆಲ್ಲ ಆರ್ಯರ ಪ್ರಭಾವವನ್ನು ದೂರಿರಿಸುವುದು ಅಸಾಧ್ಯವಾಯಿತು.

ಕ್ರಿ. ಶ. ೨ನೆಯ ಶ. ದ ಗ್ರೀಕ ನಾಟಕದಲ್ಲಿ ಕನ್ನಡ ಮಾತು

ಪ್ರಬುದ್ಧ ಕರ್ನಾಟಕದ ಸಂಪುಟ ೯, ಸಂಚಿಕೆ ೧ರಲ್ಲಿ ಇದರ ಬಗ್ಗೆ ಪೂರ್ಣ ಪರಿಚಯವನ್ನೂ ಇದಕ್ಕೆ ಸಂಬಂಧಿಸಿದ ೧೯೦೪ ನೆಯ ಇಸ್ವಿಯ ಮೈಸೂರು ಪ್ರಾಚ್ಯವಸ್ತು ಸಂಶೋಧನ ಶಾಖೆಯ ವರದಿಯನ್ನೂ ಕೊಟ್ಟಿದ್ದಾರೆ. ಆ ಬಗ್ಗೆ ಆಸಕ್ತಿ, ಕುತೂಹಲವುಳ್ಳವರಿಗೆ ಆ ಲೇಖನವು ಒಳ್ಳೇ ಉಪಯುಕ್ತವಾಗಬಹುದು.

ಈಜಿಪ್ತದ ' ಆಂಗ್ಜಿರಿಂಕಸ್ ' ಎಂಬ ಸ್ಥಳದಲ್ಲಿ ' ಪೆಪೈರಸ್ ' ಎಂಬ ಹಸ್ತಲಿಪಿಯ ಹೊತ್ತಿಗೆಯೊಂದು ದೊರೆಯಿತು. ಅದರಲ್ಲಿ ಈ ಗ್ರೀಕ

ನಾಟಕವೂ ಅಡಕವಾಗಿದೆ. ಈ ಪ್ರಹಸನದಲ್ಲಿ ದೊರೆಯುವ 'ಮಲ್ಪೆ ನಾಯಕ' (Malpi naik) ಎಂಬ ಶಬ್ದದಿಂದ ಈ ನಾಟಕದ ದೃಶ್ಯವು ದಕ್ಷಿಣ ಕಾನಡಾ ಜಿಲ್ಲೆಯ ಉಡುಪಿಯ ಬಂದರವಾದ 'ಮಲ್ಪೆ'ಯೆಂದು ಕಂಡು ಹಿಡಿದಿದ್ದಾರೆ. ಗ್ರೀಕ್ ಕನ್ಯೆಯೊಬ್ಬಳು ಈ ಸ್ಥಳದ ನಾಯಕನ ಕೈಯಲ್ಲಿ ಸೆರೆಸಿಕ್ಕಾಗ ಗ್ರೀಸ್ ದೇಶದಿಂದ ಒಂದು ಜನರ ಗುಂಪು ಬಂದು ಮಲ್ಪೆಯ ರಾಜನನ್ನೂ ಅವನ ಪರಿವಾರವನ್ನೂ ಸುರಾಪಾನದಿಂದ ಮೋಹಿಸಿ ಗ್ರೀಕ ಕುಮಾರಿಯನ್ನು ಪಾರುಮಾಡಿದ ಸಂಗತಿಯೆ ಈ ಪ್ರಹಸನದ ಕಥಾವಸ್ತು. ಇಲ್ಲಿ ಬರುವ ಭಾರತೀಯ ಪಾತ್ರಗಳು ಇಲ್ಲಿಯ ಭಾಷೆಯೊಂದನ್ನು ಆಡುತ್ತಾರೆ. ಅದು ಕನ್ನಡ ಭಾಷೆಯಾಗಿರಬೇಕೆಂದು ಡಾ. ಹುಲ್ಷರು ಮಾಡಿದ ಊಹೆಯನ್ನೆ ಡಾ. ಶಾಮಾಶಾಸ್ತ್ರಿಗಳೂ ಸಮರ್ಥಿಸಿದ್ದಾರೆ. ತೆರಿಗೆ ಕೊಡುವ ವಿಷಯ, **ಪಗಡೆ**ಯಾಟ (pa k tei) **ಪಾನ** (pana) ಈ ಮೂರು ವಿಷಯಗಳು ಈ ನಾಟಕದಲ್ಲಿ ಸಮಾವೇಶವಾಗುತ್ತವೆ. ಇದರೊಡನೆ 'ಮೀನ' (minei) ['ಸ್ನಾನ' ಎಂಬರ್ಥದಲ್ಲಿ]– 'ಲಲ್ಲೆ' (lalle) 'ಕೊಡುಗೂಸಿನ ಬಯ್ಸಸರ' (Kot a kos a nab io Sara)— ಇಂತೀ ಪ್ರಕಾರದ ಶಬ್ದಗಳು ಅದ್ಭುತವೆನಿಸುವಷ್ಟು ಕನ್ನಡ ಸಾಮೀಪ್ಯವನ್ನು ಹೊಂದಿವೆ. ಗ್ರೀಕ್ ಕುಮಾರಿಗೆ ಇಲ್ಲಿ 'ಕೊಡುಗೂಸು' ಎಂದಿದೆ. 'ಕರೆವನೊ?' (kraunou) ಎಂದು ಪ್ರಶ್ನೆ ಮಾಡುವ ರೀತಿ, ಅದಕ್ಕೆ ಮತ್ತೊಬ್ಬಳು 'ಲಲ್ಲೆಗರೆ' ವನೆಂದು ಉತ್ತರ ಕೊಡುವ ನಯ, ಇನ್ನೊಬ್ಬಳು 'ಲಿ ಎನ್ನುತಲೆ ಎನ್ನು ಲಲ್ಲೆ' ಎಂಬ ತರ್ಕ, ಮಗದೊಬ್ಬಳು ಇದಾವುದೂ ಅಲ್ಲ 'ಕೊಡಗೂಸಿನ ಬಯ್ಸಸರ' ಎಂದು ಪಳಗಿದ ಹದವಾದ ಕನ್ನಡ ಮಾತಿನಲ್ಲಿ ಉತ್ತರ ಕೊಡುವ ಚಾತುರ್ಯವು ಸಂಶೋಧಕನನ್ನು ಹುಚ್ಚು ಹಿಡಿಸಬಹುದು. ಇವುಗಳ ಜೊತೆಗೆ— 'ಅಬ್ಬಬ್ಬ!' ,ಹೋ, ಬಿತ್ತು!'— ಎಂಬಂತಹ ಉದ್ಗಾರಗಳೂ 'ಟಣ್' ಎಂಬ ವಾದ್ಯ ಧ್ವನಿಯ ಅನುಕರಣಗಳೆಲ್ಲ ಇನ್ನಷ್ಟು ಕನ್ನಡದ ಸಾಮೀಪ್ಯಕ್ಕೆ ಪುಟ ಕೊಡುತ್ತವೆ. ಇದೂ ಅಲ್ಲದೆ 'ಹಬ್ಬದ ಎಡೆ' (ಎಡೆ=ನೈವೇದ್ಯಾರ್ಥದಲ್ಲಿ) ಎಂಬ ಪದ ಪ್ರಯೋಗವು ಆಗಿನ ಹಬ್ಬದೂಟದ ಕಲ್ಪನೆಯನ್ನು ತಂದುಕೊಡುತ್ತದೆ. 'ಬೇರೆ ಕೊಂಚ ಮಧು ಪಾತ್ರಕ್ಕೆ ಹಾಕಿ'; 'ಪಾನಂ ಬೇರೆ ಎತ್ತಿಕ್ಕಿದೆ

ಮಾನವಂ ಬೇರೆ ಎತ್ತೊ ಅಪ್ಪೆನೀ' (Pan oum bre tikate man ouam bre thou oue ni)— ಇವೇ ಮೊದಲಾದ ಸರಿಯಾದ ಬಳಕೆಯ ಮಾತಿನ ರೀತಿ ಚಮತ್ಕಾರಿಕವಾಗಿದೆ.

ಆದರೆ ಈ ಪ್ರಹಸನದ ಕಾಲ ಕ್ರಿ, ಶ. ೨ನೆಯ ಶತಮಾನ. ಆ ಕಾಲದ ಕನ್ನಡದ ಸ್ವರೂಪ ಹೇಗಿತ್ತೊ-ಕನ್ನಡವಾದರೂ ಜೀವಂತ ವಾಗಿತ್ತೊ—ಯಾರೂ ಅರಿಯರು. ಯಾವ ಕನ್ನಡ ಶಿಲಾಲಿಪಿಯೂ ೫ನೆಯ ಶತಮಾನಕ್ಕಿಂತ ಪ್ರಾಚೀನತರವಾಗಿಲ್ಲ. ಹೀಗಿರುವಾಗ ಈ ನಾಟಕದ ವಿಷಯವು ದಕ್ಷಿಣ ಹಿಂದುಸ್ತಾನದ ಪಶ್ಚಿಮ ತೀರದಲ್ಲಿ ನಡೆದ ಸಂಗತಿಯಾಗಿದ್ದರೆ ಅದು ಆಗಿನ ಕಾಲದ ಇನ್ನಾವುದೊ ವ್ಯವಹಾರಿಕ ಭಾಷೆಯಾಕಾಗಿರಬಾರದು ? ಇದಾವದೂ ಸಂಪೂರ್ಣ ನಿಷ್ಕರ್ಷೆಯಾಗದೆ ಸಂಶೋಧಕರು ಕ್ರಿ. ಶ. ೨ನೆಯ ಶತಮಾನದ ಗ್ರೀಕ ನಾಟಕದಲ್ಲಿ ಕನ್ನಡ ಭಾಷೆಯೆಂದು ಒಮ್ಮೆಲೆ ತಮ್ಮ ನಿರ್ಣಯಕ್ಕೆ ಜಿಗಿದು ಕನ್ನಡ ಬಾವುಟವನ್ನು ಗತಕಾಲದ ಗಗನಕ್ಕೇರಿಸುವುದು ಸಶಾಸ್ತ್ರವೂ ಎನಿಸಲಿಕ್ಕಿಲ್ಲ, ಸಮರ್ಪಕವೂ ಎನಿಸಲಿಕ್ಕಿಲ್ಲ, ಸಯುಕ್ತಿಕವೂ ಎನಿಸಲಿಕ್ಕಿಲ್ಲ. ಇದೊಂದು ಗ್ರೀಕ ನಾಟಕದಲ್ಲಿ ಇಂತಹದೊಂದು ಚಮತ್ಕಾರವಿದೆಯೆಂಬ ಕೌತುಕವು ಕನ್ನಡ ಭಾಷಾಭ್ಯಾಸಿಗೊಂದು ಹೊಸ ಆಹಾರ ಎಂಬಲ್ಲಿ ಮಾತ್ರ ಸಂಶಯವಿಲ್ಲ.

ಜೈನ ಕವಿಗಳು ತಮ್ಮ ತಮ್ಮ ಕಾವ್ಯಗಳ ಆರಂಭದಲ್ಲಿ 'ಸಮಂತಭದ್ರ', 'ಕವಿ ಪರಮೇಷ್ಠಿ', 'ಪೂಜ್ಯಪಾದ' ಈ ಮೂವರನ್ನು ವಿಶೇಷವಾಗಿ ಸ್ತುತಿಸಿದ್ದಾರೆ. ಸಮಂತಭದ್ರನ ಕಾಲವು ಕ್ರಿ. ಶ. ೧೩೮ ಎಂದು ಹೇಳುತ್ತಾರೆ. ಈತನು ಕನ್ನಡನಾಡಿನ ಸ್ಥಳವಾದ **ಮಣುವಕಹಳ್ಳಿ**ಯಲ್ಲಿ ವಾಸವಾಗಿದ್ದನೆಂದು ದೇವಚಂದ್ರನ 'ರಾಜಾವಳಿ'ಯಿಂದ ತಿಳಿದು ಬರುತ್ತದೆ. ಈತನು ಸಂಸ್ಕೃತ ಪ್ರಾಕೃತದಲ್ಲಿ ಬರೆದ ಗ್ರಂಥಗಳು ದೊರೆಯುತ್ತವಲ್ಲದೆ ಅವುಗಳಿಗೆ ಹಳಗನ್ನಡದಲ್ಲಿ ವ್ಯಾಖ್ಯೆಗಳೂ ಇವೆ. ಆದರೆ ಸಮಂತಭದ್ರನು ಕನ್ನಡದಲ್ಲಿ ಮಾತ್ರ ಗ್ರಂಥಗಳನ್ನು ರಚಿಸಿದಂತೆ ತೋರುವುದಿಲ್ಲ.

ಕೆಲವು ಪಂಡಿತರು ಊಹಿಸುವಂತೆ 'ಕವಿರಾಜಮಾರ್ಗ'ದಲ್ಲಿ (ಕ್ರಿ. ಶ. ೯ ಶ.) [I-33] ಹೆಸರಿಸಿದ ಪದ್ಯ ಗ್ರಂಥಕರ್ತೃಗಳಲ್ಲಿ ಒಬ್ಬನಾದ

ಕವೀಶ್ವರನೇ ಕವಿಪರಮೇಷ್ಠಿಯಾಗಿದ್ದರೆ ಇವನು ಕನ್ನಡದಲ್ಲಿ ಕಾವ್ಯ ಗಳನ್ನು ಬರೆದನೆಂದು ಹೇಳಬಹುದು. ಆದರೆ ಕವೀಶ್ವರನೇ ಕವಿಪರಮೇಷ್ಠಿ ಯೆಂಬುದಕ್ಕೆ ಯಾವ ಆಧಾರವೂ ಇಲ್ಲ. ಗಂಗರಾಜನಾಗಿದ್ದ ದುರ್ವಿನೀತನ (ಕ್ರಿ. ಶ. ೪೭೮–೫೨೩) ಗುರುವಾಗಿದ್ದ ಸಮಂತಭದ್ರನು (ಶಬ್ದಾನುಶಾಸನ ಉಪೋದ್ಘಾತ ಪು. ೧೮) ಕವಿಪರಮೇಷ್ಠಿಗಿಂತ ಅರ್ವಾಚೀನನಾಗಿದ್ದು ಅವ ನಾದರೂ ಕನ್ನಡದಲ್ಲಿ ಕೃತಿರಚನೆಯನ್ನು ಮಾಡಿದನೆಂಬ ಬಗ್ಗೆ ಯಾವ ಆಧಾರವೂ ಕೂಡ ಇಲ್ಲ.

ಎಂದಮೇಲೆ ನಾವು ಕನ್ನಡ ನುಡಿಯ ಕನ್ನಡ ಸಾಹಿತ್ಯದ ಪ್ರಾಚೀ ನತೆಯನ್ನು ಗೊತ್ತು ಹಚ್ಚಲಿಕ್ಕೆ ಶಾಸನಗಳ ಕಡೆಗೇ ಹೊರಳಬೇಕು. ಬಾದಾಮಿಯ ಚಾಲುಕ್ಯರಾಜನಾದ ಕೀರ್ತಿವರ್ಮ ಮತ್ತು ಮಂಗಳೇಶ ಇವರ ಕಾಲದ ಶಾಸನ (ಕ್ರಿ. ಶ. ೫೭೦, ೫೮೦) ಗಳಿಗಿಂತ ಪ್ರಾಚೀನ ವಾದ ಶಾಸನಗಳನ್ನು ಡಾ. ಎಂ. ಎಚ್. ಕೃಷ್ಣರು ಶೋಧಿಸಿದ್ದಾರೆ. ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಹಾದಿಯಲ್ಲಿರುವ 'ಹಲ್ಮಿಡಿ' ಎಂಬ ಸ್ಥಳದಲ್ಲಿ ಕದಂಬರ ಕನ್ನಡ ಶಾಸನವೊಂದು ದೊರೆತಿದೆ. ಅದರ ಕಾಲವು ಸು. ೪೫೦ ಎಂದು ನಿಶ್ಚಯಿಸಲಾಗಿದೆ. (ಪ್ರಬುದ್ಧ ಕರ್ನಾಟಕ XX–iii–೩೧). ಇಲ್ಲಿಯವರೆಗೆ ದೊರೆತ ಶಿಲಾಶಾಸನಗಳಲ್ಲಿ ಇದೇ ಪ್ರಾಚೀನತಮವಾದ ಕನ್ನಡ ಶಾಸನವೆಂದು ಹೇಳಬಹುದು. ಇದರಲ್ಲಿಯ ಭಾಷೆ ಪೂರ್ವದ ಹಳಗನ್ನಡವನ್ನು ಹೋಲುತ್ತದೆ. ಆ ಶಾಸನವನ್ನು ಸಂಪಾದಿಸಿ ಪ್ರಕಟಿಸಿದ ಡಾ. ಎಂ. ಎಚ್. ಕೃಷ್ಣರವರೇ ತೋರಿಸಿರುವಂತೆ ಈ ಶಾಸನದ ಭಾಷೆಯಿಂದ ಕೆಳಗಿನ ವಿಷಯಗಳು ತಿಳಿದುಬರುತ್ತವೆ.

(೧) ೫ನೆಯ ಶತಮಾನದ ಸುಮಾರಿಗೆ ಕನ್ನಡ–ಸಂಸ್ಕೃತ ಮಿಶ್ರವಾದ ಪದಪ್ರೌಢಿಮೆಯು ಬಳಕೆಯಲ್ಲಿದ್ದಿತು.

(೨) ವ್ಯಾವಹಾರಿಕ ಭಾಷೆಯಲ್ಲಿ ಶುದ್ಧ ಕನ್ನಡವೇ ಬಳಸಲ್ಪಟ್ಟು ಪಂಡಿತರ ಬರವಣಿಗೆಯಲ್ಲಿ ಸಂಸ್ಕೃತ ಪದಪ್ರಯೋಗ ಕಂಡುಬರುತ್ತಿತ್ತು.

(೩) ಪ್ರಾಚೀನ ಕನ್ನಡ ಪದರೂಪಗಳು ಸುಪ್ರಸಿದ್ಧನಾದ ವ್ಯಾಕರಣ

ನಿಯಮುಗಳಿಗೆ ಕಟ್ಟುಬಿದ್ದಿದ್ದವು. ಕನ್ನಡವು ಚೆನ್ನಾಗಿ ಬೆಳೆದುಬಂದು ಲಾಲಿತ್ಯ ಪೂರ್ಣವಾಗಿತ್ತು.

(೪) ಇದಕ್ಕೆ ಈ ಭಾಷೆಯೂ ಇದರ ವಾಙ್ಮಯವೂ ಕೆಲವು ಶತಮಾನ ಗಳ ಹಿಂದೆಯೆ ಬೆಳೆದು, ಬದುಕಿ, ಬಾಳಿರಬೇಕು.

ಧಾರವಾಡದ ಕನ್ನಡ ಸಂಶೋಧನ ಕಚೇರಿಯ ವತಿಯಿಂದ ಜರುಗಿದ ಸಂಶೋಧನಾತ್ಮಕ ಉಪನ್ಯಾಸ ಮಾಲೆಯಲ್ಲಿ ಏರ್ಪಟ್ಟ ಹಾಗು ಪ್ರಕಟಿಸಲ್ಪಟ್ಟ ತಮ್ಮ 'ಮೂರು ಉಪನ್ಯಾಸ' ಗಳಲ್ಲಿ ಶ್ರೀ. ಗೋವಿಂದ ಪೈಯವರು ಕೊನೆಯ ಉಪನ್ಯಾಸದಲ್ಲಿ 'ಕನ್ನಡ ಸಾಹಿತ್ಯದ ಪ್ರಾಚೀನತೆ' ಯನ್ನು ಸಾದ್ಯಂತ ವಾಗಿಯೂ ಕೂಲಂಕಶವಾಗಿಯೂ ಚರ್ಚಿಸಿದ್ದಾರೆ.

'ಕವಿರಾಜಮಾರ್ಗ' ದಲ್ಲಿ ದೊರೆಯುವ ಅನೇಕ ಆಧಾರಗಳನ್ನು ಕೊಡುತ್ತ ಅವಿಷ್ಟರಿಂಪಲೇ ಕನ್ನಡ ಸಾಹಿತ್ಯವು ನೃಪತುಂಗ (ಕ್ರಿ. ಶ. ೮೧೪–೮೭೭) ನಿಗಿಂತ ಎರಡು ನೂರು ವರ್ಷ ಪೂರ್ವದಲ್ಲಿಯಾದರೂ ಕನ್ನಡದಲ್ಲಿ ಶ್ರೇಷ್ಠವಾದ ಸಾಹಿತ್ಯ ಹುಟ್ಟಿರಬೇಕೆಂದು ವಿಧಾನಿಸುತ್ತಾರೆ.

ಕವಿರಾಜಮಾರ್ಗದಲ್ಲಿ ಕವಿ ತನ್ನ ಪೂರ್ವದ ಗದ್ಯ–ಪದ್ಯಕಾರರ ನಾಮ ನಿರ್ದೇಶವನ್ನು ಮಾಡುತ್ತಾನೆ:

ವಿಮಳೋದಯ ನಾಗಾರ್ಜುನ । ಸಮೇತ ಜಯಬಂಧು ದುರ್ವಿನೀತಾದಿಗಳೀ ।
ಕ್ರಮದೊಳ್ ನೆಗಳ್ದ ಗದ್ಯಾ । ಶ್ರಮಪದ ಗುರುತಾಪ್ರತೀತಿಯಂ ಕೆಯ್ಕೊಂಡರ್ ॥

(I–೨೯)

ಪರಮ ಶ್ರೀ ವಿಜಯ ಕವೀ । ಶ್ವರ ಪಂಡಿತ ಚಂದ್ರಲೋಕಪಾಲಾದಿಗಳಾ ।
ನಿರತಿಶಯ ವಸ್ತುವಿಸ್ತರ । ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ ॥

(I–೩೩)

ಇದರಿಂದ ನೃಪತುಂಗನಿಗಿಂತ ಮುಂಚೆಯೆ ಕನ್ನಡದಲ್ಲಿ ಗದ್ಯ – ಪದ್ಯ ಕರ್ತೃಗಳು ಆಗಿಹೋದರೆಂದು ತಿಳಿಯುತ್ತದೆ. ಗದ್ಯಕಾರರಲ್ಲಿ ದುರ್ವಿನೀ ತನ ಹೆಸರು ಹೇಳಿದೆಯಷ್ಟೆ: ಈ ದುರ್ವಿನೀತನು ಕ್ರಿ. ಶ. ೪೭೮ ರಿಂದ ೫೧೩ ವರೆಗೆ ಆಳಿದ ಗಂಗರಾಜನು. ಇವರಂತೆಯೇ ಉಳಿದೆಲ್ಲ ಕವಿಗಳ ಕಾಲವು ನಿರ್ಣಯಿಸಲ್ಪಟ್ಟರೆ ಕನ್ನಡ ಸಾಹಿತ್ಯದ ಪ್ರಾಚೀನತೆಯ ಬಗ್ಗೆ ಸ್ಪಷ್ಟವಾಗಿ ತಿಳಿದುಬರಬಹುದು. 'ಕವಿರಾಜಮಾರ್ಗದ' ದ ೨ನೆಯ

ಪರಿಚ್ಛೇದದಲ್ಲಿ ಕವಿಯು ೩೮, ೪೦, ೪೨, ೮೯, ೯೧, ೯೬ ಇ. ಪದ್ಯಗಳಲ್ಲಿ ಹಳೆಯದೊಂದು ಕನ್ನಡ ರಾಮಾಯಣದಿಂದ ಕೆಲವು ಪದ್ಯಗಳನ್ನು ಉದಾಹರಿಸಿದ್ದಾನೆ.

ಕವಿರಾಜ ಮಾರ್ಗಕ್ಕಿಂತ ಪೂರ್ವದಲ್ಲಿ ಬರಿ ಗದ್ಯ–ಪದ್ಯಯುಕ್ತವಾದ ಸಾಹಿತ್ಯವಷ್ಟೆ ಅಲ್ಲ— ಅಲಂಕಾರ, ವ್ಯಾಕರಣ ಗ್ರಂಥಗಳೂ ಇದ್ದಿರಬೇಕೆಂದು ಪೈಯವರು ಊಹಿಸುತ್ತಾರೆ. (ಮೂರು ಉಪನ್ಯಾಸಗಳು : ಪು. ೧೦೨–೧೦೩). ‘ ರನ್ನಂ ವೈಯ್ಯಾಕರಣಂ। ಜನ್ನಂ ವೇಣ್ ಕವಿಗಳೊಳಗೆ ವೈಯಾಕರಣಂ ’ (ಅನಂತನಾಥಪುರಾಣ XIV–೭೭) ಎಂಬುದರಿಂದ ಕವಿಗಳು ವೈಯಾಕರಣಿಗಳೂ ಆಗಿರುತ್ತಿದ್ದರೆಂಬುದಕ್ಕೆ ಆಧಾರ ದೊರೆಯ ಬಹುದು.

೧ನೆಯ ಪ್ರಕರಣ, ೩೮–೩೫ನೆಯ ಪದ್ಯಗಳಲ್ಲಿ ಕವಿರಾಜಮಾರ್ಗಕರ್ತನು ‘ ಚೆತ್ತಾಣ–ಬೆದಂಡೆ ’ ಎಂಬ ಕಾವ್ಯ ಪ್ರಕಾರಗಳನ್ನು ಉದಾಹರಿಸಿದ್ದಾನೆ. ‘ ಈಗಡಿನ ನೆಗಟ್ತೆಯ ಕಬ್ಬದೊಳೊಡಂಬಡಂ ಮಾಡಿದರ್ **ಪುರಾತನ** ಕಪಿಗಳ್ ’ ಎಂಬುದರಿಂದ ಬೇರೆ ಬೇರೆ ಪದ್ಯಜಾತಿಯ ಲಕ್ಷಣಗಳನ್ನೇ ಇವು ಸೂಚಿಸುತ್ತವೆಂದು ಕಂಡುಬರುತ್ತದೆ. “ ಹೀಗೆ ನೃಪತುಂಗನ ಹಿಂದಣಿಂದಲೆ ಅಲಂಕಾರ ಗ್ರಂಥಗಳೂ, ವ್ಯಾಕರಣ ಗ್ರಂಥಗಳೂ, ಬೆದಂಡೆ–ಚೆತ್ತಾಣಗಳೆಂಬ ಕಾವ್ಯ ವಿಧಾನಗಳೂ, ಗದ್ಯ–ಪದ್ಯ ಸಮ್ಮಿಶ್ರಿತವಾದ ಗದ್ಯ ಕಥೆಗಳೂ, ಆತನು ಅಲ್ಲಲ್ಲಿ ಉದಾಹರಿಸುವ ರಾಮಾಯಣದಂತಹ ಕಾವ್ಯ ಗ್ರಂಥಗಳೂ ಇದ್ದವೆಂದು ವ್ಯಕ್ತವಾಗುವುದರಿಂದ ಆತನಿಂದ ಕಡಿಮೆ ಅಂದರೆ ೨೦೦ ವರ್ಷಗಳಾದರೂ ಮುಂಚಿನಿಂದ ಕನ್ನಡದಲ್ಲಿ ಉತ್ಕೃಷ್ಟವಾದ ಬಹುಮುಖವಾದ ಸಾಹಿತ್ಯವಿದ್ದಿರಬೇಕು. ” ಎಂಬುದು ಶ್ರೀ. ಗೋವಿಂದ ಪೈಯವರ ಅಭಿಪ್ರಾಯಗಳ ಒಟ್ಟು ಮಥಿತಾರ್ಥ. (‘ ಮೂರು ಉಪನ್ಯಾಸಗಳು ’ ಪು. ೧೦೮)

ಇತ್ತೀಚಿಗೆ ‘ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ’ ಧಾರಾವಾಹಿಯಾಗಿ ಪ್ರಕಟವಾದ ‘ ವಡ್ಡಾರಾಧನೆ ’ ಎಂಬ ಹಳಗನ್ನಡ ಗದ್ಯ ಗ್ರಂಥದಿಂದ ಕನ್ನಡ ಸಾಹಿತ್ಯದ ಪ್ರಾಚೀನತೆಯನ್ನು ಸೂಚಿಸುವುದಕ್ಕೆ ಒಂದು ಹೊಸ ಪ್ರಮಾಣ ದೊರೆತಂತಾಗಿದೆ. ‘ ವಡ್ಡ ’ ಎಂಬುದು ಸಂಸ್ಕೃತದ ‘ ಬೃಹತ್ ’

ಎಂಬ ಶಬ್ದದ ತದ್ಭವರೂಪವಾಗಿದೆ. ‘ವಡ್ಡಾರಾಧನೆ’ ಎಂಬ ಹೆಸರಿನಿಂದಲೆ ಅದೊಂದು ಯಾವುದೋ ಪ್ರಾಕೃತ ಗ್ರಂಥದ ಅನುವಾದವಿದ್ದಿರಬೇಕೆಂದು ತೋರುವುದು. ಇದರಲ್ಲಿ ಜೈನರ ಚರಿತ್ರೆಗಳನ್ನೂ ಜೈನ ಧರ್ಮದ ತತ್ವಗಳನ್ನೂ ಪ್ರತಿಪಾದಿಸುವಂತಹ ಬೇರೆ ಬೇರೆ ಕಥೆಗಳಿರುತ್ತವೆ. ಇದರಲ್ಲಿ ಬರುವ ‘ದೀನಾರ’ ‘ದಮ್ಮ’ ಎಂಬ ರೋಮನ ಮತ್ತು ಗ್ರೀಕ ನಾಣ್ಯಗಳ ಪ್ರಸಕ್ತಿ ಬಂದರೂ ಈ ಹೆಸರಿನ ವಿದೇಶದ ನಾಣ್ಯಗಳು ಉತ್ತರಾಪಥದಲ್ಲಿ ಮಾತ್ರ ಬಳಿಕೆಯಲ್ಲಿದ್ದುದರಿಂದ ಈ ಗ್ರಂಥವು ಉತ್ತರಾಪಥದಲ್ಲಿಯೆ ಪ್ರಾಕೃತದಲ್ಲಿ ರಚಿತವಾಗಿದ್ದ ಯಾವುದೊ ಒಂದು ಗ್ರಂಥದ ಅನುವಾದವಿದ್ದಿರಬೇಕೆಂದು ಶ್ರೀ. ಗೋವಿಂದ ಪೈಯವರು ಅಭಿಪ್ರಾಯ ಪಡುತ್ತಾರೆ. (ಮೂರು ಉಪನ್ಯಾಸಗಳು ಪು. ೧೧೧) ಕನ್ನಡ ‘ವಡ್ಡಾರಾಧನೆ’ಯ ಕಾಲವನ್ನು ಅವರು ಸು. ೬ ನೆಯ ಶತಮಾನವೆಂದು ನಿರ್ಣಯಿಸಿದ್ದಾರೆ. ಇದಿನ್ನೂ ಸ್ಪಷ್ಟವಾಗಿ ನಿರ್ಣಯಿಸಲ್ಪಡಬೇಕಾದ ವಿಷಯ. ‘ವಡ್ಡಾರಾಧನೆ’ಯ ಗ್ರಂಥಕರ್ತೃವು ರೇವಾಕೋಟ್ಯಾಚಾರ್ಯರಲ್ಲ— ಶಿವಕೋಟ್ಯಾಚಾರ್ಯರೆಂದು ತಿಳಿಯುತ್ತದೆ. ಕವಿಚರಿತೆಯಲ್ಲಿ ‘ಶಿವಕೋಟ್ಯಾಚಾರ್ಯ’ ಎಂಬ ಕವಿಯ ಹೆಸರು ಎಲ್ಲಿಯೂ ಬಂದಿಲ್ಲ. ಯಾವ ಜೈನ ಕವಿಗಳೂ ಈ ಕವಿಯ ಹೆಸರನ್ನೆತ್ತಿದಂತೆ ತೋರುವುದಿಲ್ಲ. ಪೂಜ್ಯಪಾದರಿಗಿಂತ ಮಾತ್ರ ಅರ್ವಾಚೀನರಾಗಿರಬೇಕೆಂದು ಊಹಿಸಬಹುದಾಗಿದೆ.

‘ವಡ್ಡಾರಾಧನೆ’ಯ ಭಾಷಾಶೈಲಿಯು ಪೂರ್ವದ ಹಳಗನ್ನಡದ ಭಾಷಾ ಅವಸ್ಥೆಯನ್ನೇ ಹೋಲುತ್ತದೆ. ಈ ಗ್ರಂಥದೊಳಗಿನ ವಿವಿಧ ಪ್ರಯೋಗಗಳನ್ನು ಶ್ರೀ. ಗೋವಿಂದ ಪೈಯವರು ‘ಮೂರು ಉಪನ್ಯಾಸ’ಗಳಲ್ಲಿ ೧೧೫ ನೆಯ ಪುಟದಿಂದ ೧೨೬ ನೆಯ ಪುಟದ ವರೆಗೂ ಸವಿಸ್ತಾರವಾಗಿ ಉದಾಹರಿಸಿ ಚರ್ಚಿಸಿದ್ದಾರೆ. ಆಗಿನ ಕನ್ನಡ ಭಾಷಾ ಸ್ವರೂಪವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ‘ವಡ್ಡಾರಾಧನೆ’ಯು ವಿಶೇಷ ಸಹಾಯಕಾರಿಯಾಗಿದೆ. ಕನ್ನಡ ಸಾಹಿತ್ಯದಲ್ಲಿ ಈಗ (ಗೋವಿಂದ ಪೈಯವರ ಕಾಲ ನಿರ್ಣಯವನ್ನು ಒಪ್ಪಿದರೆ) ‘ವಡ್ಡಾರಾಧನೆ’ಯೆ ಮೊದಲ ಗ್ರಂಥವೆಂದು ಹೇಳಬೇಕಾಗುತ್ತದೆ. ಇದೊಂದು ಗದ್ಯ ಗ್ರಂಥವಾಗಿದೆಯೆಂಬ ಮಾತಿನಿಂದ

ಗದ್ಯದಿಂದಲೆ ಕನ್ನಡ ಸಾಹಿತ್ಯದ ಆರಂಭವೆಂದೂ ಹೇಳಬೇಕಾಗುತ್ತದೆ. ಕನ್ನಡ ಗದ್ಯ ಸಾಹಿತ್ಯವು ಬಹಳ ವಿರಳವಾಗಿದ್ದು 'ಚಾವುಂಡರಾಯ ಪುರಾಣ'ವೇ (ಕ್ರಿ. ಶ. ೯೭೮) ಮೊದಲನೆಯ ಗದ್ಯ ಗ್ರಂಥವೆಂದು ಹೇಳಲಾಗಿತ್ತು; ಆದರೆ ಈಗ 'ವಡ್ಡಾರಾಧನೆ' ಯಿಂದ ಗದ್ಯ ಸಾಹಿತ್ಯಕ್ಕೆ ಮತ್ತೊಂದು ಬಲ ಬಂದಂತಾಗಿದೆ.

ದ್ರಾವಿಡ ಭಾಷೆಗಳಲ್ಲಿ ತಮಿಳಿನ ತರುವಾಯ ಕನ್ನಡವೇ ಪ್ರಾಚೀನವಾದ ಭಾಷೆ ಹೇಗೋ ಹಾಗೆ ಸಾಹಿತ್ಯದಲ್ಲಿಯೂ ತಮಿಳನ ತರುವಾಯ ಕನ್ನಡವೇ ಪ್ರಾಚೀನವಾದದ್ದು. ಕ್ರಿ. ಶ. ೫ನೆಯ ಶತಮಾನದ ಸಿತ್ತಲೈ ಸಾತ್ತನಾರ್ ಎಂಬ ಕವಿಯ 'ಮಣಿಮೇಖಲೈ' ಎಂಬ ಗ್ರಂಥವೇ ಮೊದಲನೆಯದೆಂದು ಶ್ರೀ. ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ. (The History of Kannada Literature) ಕನ್ನಡ ಸಾಹಿತ್ಯದಲ್ಲಿ ಸಂಶೋಧನವು ಅವಿಶ್ರಾಂತ ಪರಿಶ್ರಮದಿಂದ ಸಾಗಿದರೆ ಇನ್ನೂ ಎಷ್ಟೊ ಅಪೂರ್ವ ಅಮೌಲ್ಯ ಸಂಗತಿಗಳು ಬೆಳಕಿಗೆ ಬರಬಹುದು; ಕನ್ನಡ ಸಾಹಿತ್ಯದ ಪ್ರೌಢಿಮೆ, ಪೆಂಪು, ಪ್ರಾಚೀನತೆಗಳಿಗೆ ಇನ್ನೂ ಹೆಚ್ಚು ಹೆಚ್ಚು ಕಳೆ ಬರಬಹುದು.

ತೆಲಗು ಸಾಹಿತ್ಯದಲ್ಲಿ ೧೧ನೆಯ ಶ. ದ ನನ್ನಯ ಭಟ್ಟನ ಮಹಾಭಾರತವೇ ಮೊದಲನೆಯ ಗ್ರಂಥವೆಂದು ತಿಳಿಯುತ್ತದೆ. ಇವನು ಪೂರ್ವದ ಚಾಲುಕ್ಯರ ರಾಜನಾದ **ರಾಜರಾಜನ** (೧೦೨೩–೧೦೬೩) ಆಸ್ಥಾನ ಕವಿಯಾಗಿದ್ದನು. ನನ್ನಯ ಭಟ್ಟನು ವೈಯಾಕರಣಿಯೂ ಆಗಿದ್ದನೆಂದು ಕಂಡು ಬರುವುದರಿಂದ ಅವನಿಗೂ ಪೂರ್ವದಲ್ಲಿ ಸಾಹಿತ್ಯದ ಬೆಳವಣಿಗೆ ಉಂಟಾಗಿರಬೇಕೆಂದು ಊಹಿಸಬಹುದಾಗಿದೆ.

ಈಗ ಮಲಯಾಳಂ ಭಾಷೆಯೇ ಪ್ರಚುರವಾಗಿರುವ ಕೇರಳ ದೇಶದಲ್ಲಿ ೧೦ನೆಯ ಶತಮಾನದವರೆಗೂ ಸೆಂದಮಿಳೇ ಇತ್ತೆಂದು ಕಾಣುತ್ತದೆ. ೧೩ನೆಯ ಶತಮಾನದಲ್ಲಿ ಆಳಿದ ಶ್ರೀರಾಮನೆಂಬ ತ್ರಾವಣಕೋರದ ರಾಜನ 'ರಾಮಚರಿತ'ವೇ ಮಲಯಾಳದ ಮೊದಲನೆಯ ಗ್ರಂಥ.

ಕನ್ನಡ ಸಾಹಿತ್ಯದಲ್ಲಿ 'ವಡ್ಡಾರಾಧನೆ' ಯ ನಂತರ 'ಚೂಡಾಮಣಿ' ಎಂಬ ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನ ಗ್ರಂಥವೆಂದೇ ಎಣಿಸ

ಬೇಕಾಗುತ್ತದೆ; ಅದೂ ಉಪಲಬ್ಧವಿಲ್ಲದ ಗ್ರಂಥ. ಇದರ ಗ್ರಂಥಕರ್ತನು ಶ್ರೀವರ್ಧದೇವನೆಂದು ತಿಳಿದರೆ ಕವಿಚರಿತೆಕಾರರ ಪ್ರಕಾರ ಸುಮಾರು ೬೫೦ (ಕವಿಚರಿತೆ I — ಪುಟ ೭) ಎಂದು ತಿಳಿಯುತ್ತದೆ. ದೇವಚಂದ್ರ ಕವಿಯ ಪ್ರಕಾರ (ಕವಿಚರಿತೆ I — ಪುಟ ೭) ತುಂಬಲೂರಾಚಾರ್ಯರು 'ಚೂಡಾಮಣಿ'ಯ ಕರ್ತರೆಂದು ತಿಳಿದರೂ ತುಂಬಲೂರಾಚಾರ್ಯರೂ ಶ್ರೀವರ್ಧದೇವನೂ ಒಬ್ಬರೇ ಎಂಬುದು (Ibid P. 9) ಸ್ವೀಕೃತವಾದರೆ ಚೂಡಾಮಣಿ ಗ್ರಂಥದ ಕಾಲವನ್ನು ಸು. ೬೫೦ ಎಂದೇ ಎಣಿಸಬೇಕು. ತುಂಬಲೂರಾಚಾರ್ಯರು ಭಿನ್ನ ವ್ಯಕ್ತಿಯಾದರೆ ಮಾತ್ರ ಮತ್ತೆ ಕಾಲ ನಿರ್ಣಯವಾಗಬೇಕಾಗುವುದು. ಭಟ್ಟಾಕಳಂಕನು (೧೬೦೪) ಮಾತ್ರ ಶ್ರೀವರ್ಧದೇವನೇ ಚೂಡಾಮಣಿಯ ಕರ್ತನೆಂದು ಹೇಳಿ ಕನ್ನಡ ಭಾಷೆಯು 'ಶಾಸ್ತ್ರಾನುಪಯೋಗಿನೀ' ಯಾಗಿಲ್ಲವೆಂದು ತೋರಿಸುವದರಲ್ಲಿ ಆ ಗ್ರಂಥದ ಮಹತ್ವವನ್ನು ಕಾಣಿಸಿದ್ದಾನೆ. ("ನ ಚೈಷಾ (ಕರ್ನಾಟಭಾಷಾ) ಶಾಸ್ತ್ರಾ-ನುಪಯೋಗಿನೀ ತತ್ವಾರ್ಥ ಮಹಾಶಾಸ್ತ್ರವ್ಯಾಖ್ಯಾನಸ್ಯ ಷಣ್ಣವತಿ ಸಹಸ್ರ ಪ್ರಮಿತ ಗ್ರಂಥಸಂದರ್ಭರೂಪಸ್ಯ ಚೂಡಾಮಣ್ಯಭಿಧಾನಸ್ಯ ಮಹಾಶಾಸ್ತ್ರಸ್ಯ.... ಉಪಲಭ್ಯಮಾನತ್ವಾತ್—") ಕವಿಚರಿತೆ I, ೮. ಅಡಿಟಿಪ್ಪಣಿ.

ಇದೇ ಕಾಲಕ್ಕೆಯೆ ಶ್ಯಾಮಕುಂದಾಚಾರ್ಯರು 'ಪ್ರಾಭೃತ' ವನ್ನು ಕನ್ನಡದಲ್ಲಿ ಬರೆದನೆಂದು ಕವಿಚರಿತೆಕಾರರು ಹೇಳಿದ್ದಾರೆ. (ಕವಿಚರಿತೆ I–೧೦).

'ಗುಣಗಾಂಕಿಯಂ' ಎಂಬುದೊಂದು ಛಂದೋಗ್ರಂಥವು ೯ನೆಯ ಶತಮಾನದಲ್ಲಿ ಕನ್ನಡದಲ್ಲಿ ಬರೆಯಲ್ಪಟ್ಟಿತೆಂದೂ ಅದನ್ನು ಅಮೃತಸಾರ ನೆಂಬ ತಮಿಳು ಕವಿ ಅನುಕರಣ ಮಾಡಿರುವನೆಂದೂ ಅದೇ ಕವಿಯ 'ಯಾಪ್ಪರುಂಗ ಲಕ್ಕಾರಿ ಹೈ' ಎಂಬ ಗ್ರಂಥದಿಂದ ತಿಳಿದುಬರುತ್ತದೆ. (ಕವಿ ಚರಿತೆ I, ಪುಟ ೧೨) ಅಂತೂ ಇವೆಲ್ಲ ಗ್ರಂಥಗಳು ಉಪಲಬ್ಧವಾಗದೆ ಊಹಾ ಪೋಹದಿಂದಲೆ ನಿರ್ಣಯಿಸಲ್ಪಡಬೇಕಾಗಿವೆ. ಈ 'ವಡ್ಡಾರಾಧನ' ವೇ ಕನ್ನಡದ ಮೊದಲನೆಯ ಉಪಲಬ್ಧ ಗ್ರಂಥ. ಅದಕ್ಕೂ ಮೊದಲು ಕನ್ನಡ ಸಾಹಿತ್ಯವು ಸಾಕಷ್ಟು ಹಬ್ಬಿತ್ತೆಂದು ಇಲ್ಲಿಯವರೆಗೆ ಅವಲೋಕನ ಮಾಡಿದುದಾಯಿತು.

ಕೊನೆಯ ಭಟ್ಟಾಕಳಂಕದೇವನ ಕೆಳಗಿನ ವಾಕ್ಯದಿಂದ ಇಂತಿವೆಲ್ಲ ಗ್ರಂಥಗಳೂ ಕನ್ನಡದಲ್ಲಿದ್ದವೆಂದು ಬಗೆಯಬಹುದಾಗಿದೆಯೆಂದು ಸೂಚಿಸಬೇಕಾದ ವಿಷಯ.

"ಶಬ್ದಾಗಮ ದಶಮಾಗಮ ವಿಷಯಾಣಾಂ ತಥಾ ಕಾವ್ಯ ನಾಟಕಾ-ಲಂಕಾರ ಕಲಾಶಾಸ್ತ್ರ ವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್"

ಅಂತೂ ನಾಮಾಂತರದಿಂದ ಕರೆಯಲ್ಪಟ್ಟೊ ದ್ರಾವಿಡ ಜನಾಂಗದಲ್ಲಿಯೆ ಸಮಾವೇಶವಾಗಿಯೊ ಇದ್ದ ಕನ್ನಡ ಕುಲವು ಆರ್ಯಪೂರ್ವವೆಂದೂ ಕನ್ನಡ ನುಡಿಯು ವೇದೋಪನಿಷತ್ತಿನ ಕಾಲದಿಂದಲೆ ಪ್ರಸಿದ್ಧವೆಂದು ತೋರಿಸಲು ಸಾಧ್ಯವಿದೆಯೆಂದೂ ಕನ್ನಡ ನಾಡು ರಾಮಾಯಣ–ಮಹಾಭಾರತ ಕಾಲದಿಂದ ಸುಪ್ರಸಿದ್ಧವಾಗಿತ್ತೆಂದೂ ಕನ್ನಡ ಸಾಹಿತ್ಯವು ಕ್ರಿ. ಶ. ೫ ಶತಮಾನದಿಂದಲೆ ಪರಿಪುಷ್ಟವಾಗಿ ಬೆಳೆಯುತ್ತ ಬಂದಿತ್ತೆಂದೂ ನೋಡಿದೆವು.

೨. ಕನ್ನಡ ಸಾಹಿತ್ಯದ ಸ್ವರೂಪ

ಕನ್ನಡ ಸಾಹಿತ್ಯವಾಹಿನಿಯು ೧೫೦೦ ವರ್ಷಗಳಿಂದ ಶಾಖೋಪಶಾಖೆಗಳಿಂದ ತುಂಬಿಕೊಂಡು ಧೀರ ಗಂಭೀರವಾಗಿ ಪ್ರವಹಿಸಿ ಪಂಡಿತರನ್ನೂ ಪಾಮರರನ್ನೂ ಇಂದಿಗೂ ಮುಗ್ಧಗೊಳಿಸುತ್ತಿದೆ.

ಸಾವಿರಾರು ಕವಿಗಳಿಂದಲೂ ಕವಯಿತ್ರಿಯರಿಂದಲೂ ತತ್ವಜ್ಞಾನಿಗಳಿಂದಲೂ ಶಾಸ್ತ್ರಪಂಡಿತರಿಂದಲೂ ಅನುಭಾವಿಗಳಿಂದಲೂ ಭಗವದ್ಭಕ್ತರಿಂದಲೂ ಶಿವಶರಣರಿಂದಲೂ ಹರಿದಾಸರಿಂದಲೂ ರಾಜರಿಂದಲೂ ರಂಕರಿಂದಲೂ ಒಕ್ಕಲರಿಂದಲೂ ನಾವಿಕರಿಂದಲೂ ಬಹಳವೇಕೆ ದನಗಾಹಿಗಳಿಂದಲೂ ಕೂಡ ಪೋಷಿಸಲ್ಪಟ್ಟು ವಿವಿಧ ರೂಪಗಳಿಂದ ವಿಶ್ವತೋಮುಖವಾಗಿ ಹರಿಯುತ್ತಲಿದೆ.

ಶಾಸ್ತ್ರೀಯ ದೃಷ್ಟಿ, ಧ್ಯೇಯ, ಗಂಭೀರತೆ, ಲಾಲಿತ್ಯ, ಪ್ರೌಢಿಮೆಗಳ ದೃಷ್ಟಿಯಿಂದ ಭಾರತೀಯ ಪ್ರೌಢಸಾಹಿತ್ಯಗಳ ಸಾಲಿನಲ್ಲಿಯೇ ಕನ್ನಡಕ್ಕೂ ಸ್ಥಾನವಿದೆ.

ನಮ್ಮ ಸಾಹಿತ್ಯದ ದೃಷ್ಟಿ

ಕನ್ನಡ ಸಾಹಿತ್ಯದ ಧ್ಯೇಯವು ಆಧ್ಯಾತ್ಮ ಪ್ರೇರಿತ. ಜನಾಂಗಕ್ಕೆ ಜೀವನದ ಸಂಕಷ್ಟಗಳಿಂದ ಮೋಕ್ಷಪಿತ್ತು - ಸುಖಶಾಂತಿಗಳನ್ನೀಯುವದೇ, ಉದಾತ್ತ ಹಾಗು ಗಂಭೀರವಾದ ಮಾನವನ ಪ್ರಗತಿಯೇ ನಮ್ಮ ಸಾಹಿತ್ಯದ ಧ್ಯೇಯ. ಕವಿರಾಜಮಾರ್ಗದ ಕರ್ತೃವಾದ ನೃಪತುಂಗನು ಸಾಹಿತ್ಯದ ಧ್ಯೇಯವನ್ನು ಈ ಬಗೆಯಾಗಿ ಬಣ್ಣಿಸಿದ್ದಾನೆ:—

“ಅಧಿಕೃತ ಸತ್‌ಪುರುಷಾರ್ಥ- |
ಪ್ರಧಾನ ಧರ್ಮಾರ್ಥ ಕಾಮಮೋಕ್ಷಂಗಳವಾ ||
ಬುಧಜನ ವಿವಕ್ತ ಕಾವ್ಯ- |
ಪ್ರಧಾರಿತಾರ್ಥಂಗಳಖಿಳ ಭುವನ ಹಿತಂಗಳ್ ||”

—ಕವಿರಾಜಮಾರ್ಗ ೯–೨೦.

ಶೃಂಗಾರ ರಸಪ್ರಧಾನವಾದ ಕಾವ್ಯವನ್ನು ಬರೆಯಲು ಹೊರಟ ರತ್ನಾಕರವರ್ಣಿಯು ಕೂಡ ಭರತೇಶ ವೈಭವದಲ್ಲಿ ಅಧ್ಯಾತ್ಮವೇ ನಿಜಿತ ಪ್ರಯೋಜನವೆನಗೆ ಎಂದು ಮುಕ್ತ ಕಂಠದಿಂದ ಹೇಳಿರುವನು.

ಮಾನವನ ಚರಿತ್ರೆಯನ್ನೇ ಬರೆಯಲು ಹೊರಟ ಚೌಂಡರಸನು

ಸಕಲಾಂತರ್ಯಾಮಿ ಜೀವಪ್ರಕರ ವಿವಿಧ ಚೈತನ್ಯರೂಪಂ ಜಗದ್ವ್ಯಾ-
ಪಕಭಾವಂ ವಿಷ್ಣುವೆಂದಾಗಮುತತಿ ಸತತಂ ಸಾರ್ವಸಂಬಂಧದಿಂ ಕೌ- ।
ತುಕದಿಂದಾವುದಂ ಬಣ್ಣಿಸಿಪೊಡದು ಹರಿಸ್ತೋತ್ರಮೆಂದೀಗಳೀ ಚಿ- ।
ತ್ರಕಥಾವಿಸ್ತಾರಮಂ ಬಣ್ಣಿಸಲೊಡಂಬಡಿಸಿದೆಂ ಸತ್ಕವಿಶ್ರೇಣಿ ನೆಚ್ಚಲ್ ॥

—ಅ. ದ ಕು. ಚ. ೧.೧೬.

ತಾನು ಬಣ್ಣಿಸುವುದೆಲ್ಲ, ಹಾಡುವುದೆಲ್ಲ ಶ್ರೀ ಹರಿಯ ಸ್ತೋತ್ರವೇ ಎಂದು ಅನುಸಂಧಾನ ಮಾಡಿದ್ದಾನೆ.

ಕನ್ನಡ ಸಾಹಿತ್ಯದ ವಿರಾಟರೂಪ

ಸುಪ್ರಸಿದ್ಧ ಕನ್ನಡ ವ್ಯಾಕರಣಕಾರನಾದ ಭಟ್ಟಾಕಳಂಕನು ಕನ್ನಡ ಸಾಹಿತ್ಯವನ್ನು ಕಂಡು ಬೆರಗಾಗಿದ್ದಾನೆ.

"ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ ಕಲಾಶಾಸ್ತ್ರ ವಿಷಯಾಣಾಂ ಚ ಬಹೂನಾಂ ಗ್ರಂಥಾನಾಮಪಿ ಭಾಷಾಕೃತಾನಾಮುಪಲಭ್ಯಮಾನತ್ವಾತ್ ।"

—ಶಬ್ದಾನುಶಾಸನ

ವ್ಯಾಕರಣ, ತರ್ಕ, ವೇದಾಂತ ಇವಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳೂ, ಕಾವ್ಯ, ನಾಟಕ, ಅಲಂಕಾರ, ಕಲೆ, ಶಾಸ್ತ್ರಗಳಿಗೆ ಸಂಬಂಧಿಸಿದ ಅಸಂಖ್ಯಾತ ಗ್ರಂಥಗಳೂ ಹುಟ್ಟಿವೆ ಎಂದು ಕನ್ನಡ ಸಾಹಿತ್ಯದ ವಿಪುಲತೆಯನ್ನೂ ಮೇಲ್ಮೆಯನ್ನೂ ಹೊಗಳಿದ್ದಾನೆ.

ಕನ್ನಡ ಸಾಹಿತ್ಯವನ್ನು ನಿರೀಕ್ಷಿಸಿದರೆ, ಸಕಲ ವರ್ಗದ ಸಾವಿರಾರು ಕವಿಗಳಿಂದ ಬರೆಯಲ್ಪಟ್ಟ ಪಂಪಭಾರತ, ಪಂಪರಾಮಾಯಣ, ಗದಾಯುದ್ಧ, ಕು. ವ್ಯಾ. ಭಾರತ, ಭಾಗವತ, ರಾಮಾಯಣ, ಪ್ರಭುಲಿಂಗಲೀಲೆ ಮೊದಲಾದ ಅನೇಕ ಪ್ರೌಢ ಕಾವ್ಯಗಳೂ ಮತ ಪ್ರಚಾರಕ ಚರಿತ್ರೆಗಳೂ ಪುರಾಣಗಳೂ **ಕಾವ್ಯಪ್ರಪಂಚದಲ್ಲಿ** ಕಾಣುತ್ತವೆ.

ಕರ್ಣಪಾರ್ಯನು ಬರೆದ ಮಾಳವೀ ಮಾಧವ ನಾಟಕ, ಕೇಶಿರಾಜನ ಸುಭದ್ರಾಹರಣ, ಪ್ರಬೋಧಚಂದ್ರ ನಾಟಕಗಳೂ, ಸಿಂಗರಾರ್ಯನ **ರತ್ನಾವಳಿ** ನಾಟಕ ಇವೇ ಮೊದಲಾದ **ನಾಟಕ ಗ್ರಂಥ**ಗಳು ಕನ್ನಡದಲ್ಲಿ ಪ್ರಸಿದ್ಧ ವಾಗಿವೆ.

ಅಲಂಕಾರ ಗ್ರಂಥಗಳಲ್ಲಿ ನೃಪತುಂಗನ ಕವಿರಾಜ ಮಾರ್ಗವೇ ಪ್ರಾಚೀನ. ನಾಗವರ್ಮನ ಕಾವ್ಯಾವಲೋಕನದಲ್ಲಿ ಶಬ್ದಾರ್ಥಾಲಂಕಾರವೂ ಕವಿ ಸಮಯವೂ, ಕವಿ ಕಾಮನ ಶೃಂಗಾರ ರತ್ನಾಕರ, ಸಾಳ್ವನ ರಸ ರತ್ನಾಕರ, ತಿಮ್ಮನ ನವರಸಾಲಂಕಾರ ಇವುಗಳಲ್ಲಿ ರಸಪ್ರಕ್ರಿಯೆಯೂ ಶಾರದಾವಿಲಾಸದಲ್ಲಿ ಧ್ವನಿ ಪ್ರಕ್ರಿಯೆಯೂ ಉಕ್ತವಾಗಿವೆ. ಇವಲ್ಲದೆ ಮಾಧವಾಲಂಕಾರ, ಅಪ್ರ-ತಿಮ ವೀರಚರಿತ, ನರಪತಿ ವಿಜಯ ಎಂಬ ಲಕ್ಷಣ ಗ್ರಂಥಗಳೂ ಕರ್ನಾಟಕ ಕುವಲಯಾನಂದವೂ ಇನ್ನೂ ಬೇರೆ ಕೆಲವು ಗ್ರಂಥಗಳು ಇವೆ.

ಛಂದಶ್ಶಾಸ್ತ್ರದಲ್ಲಿ ಗುಣಗಾಂಕಿಯೇ ಬಹು ಪ್ರಾಚೀನ. ನಾಗವರ್ಮನ ಛಂದೋಂಬುಧಿಯಲ್ಲಿ ಛಂದಶ್ಶಾಸ್ತ್ರದ ಎಲ್ಲ ವಿಭಾಗಗಳೂ ಸಂಪೂರ್ಣ-ವಾಗಿ ವಿವರಿಸಲ್ಪಟ್ಟಿವೆ. ಇದೇ ವಿಷಯವಾಗಿ ಕವಿಜಿಹ್ವಾ ಬಂಧನ, ಛಂದಸ್ಸಾರ ಎಂಬ ಗ್ರಂಥಗಳು ಪ್ರಸಿದ್ಧವಿರುವವಲ್ಲದೆ ಇನ್ನೂ ಕೆಲವು ಗ್ರಂಥಗಳಿವೆ.

ವ್ಯಾಕರಣ ಗ್ರಂಥಗಳಲ್ಲಿ ನಯಸೇನನದೇ ಹಳೆಯದು. ಶಬ್ದಸ್ಮೃತಿ, ಶಬ್ದಮಣಿದರ್ಪಣ ಇವೆರಡು ಕನ್ನಡ ಭಾಷೆಯಲ್ಲಿಯೂ, ಭಾಷಾ ಭೂಷಣ, ಶಬ್ದಾನುಶಾಸನಗಳು ಸಂಸ್ಕೃತದಲ್ಲಿಯೂ ಇವೆ.

ನಿಘಂಟುಗಳಲ್ಲಿ ರನ್ನ ಕಂದವೇ ಬಹು ಹಿಂದಿನದು. ಶಬ್ದಸಾರ, ಕರ್ನಾಟಕ ನಿಘಂಟು, ಚತುರಾಸ್ಯ ನಿಘಂಟು, ಕರ್ನಾಟಕ ಶಬ್ದಮಂಜರಿ, ಕಬ್ಬಿಗರ ಕೈಪಿಡಿ, ಕವಿಕಂಠಹಾರ, ಕರ್ನಾಟಕ ಸಂಜೀವನ ಮೊದಲಾದುವು ಹಳಗನ್ನಡ ಪದಗಳನ್ನು ವಿವರಿಸುತ್ತವೆ. ವಸ್ತುಕೋಶ, ಮಂಗಾಭಿಧಾನ, ನಾನಾರ್ಥರತ್ನಾಕರ ಮೊದಲಾದುವು ಸಂಸ್ಕೃತ ಶಬ್ದಗಳಿಗೆ ಕನ್ನಡದ ಪ್ರತಿಪದಗಳನ್ನು ಕೊಡುತ್ತವೆ. ಇವಲ್ಲದೆ ಅಮರಹಲಾಯುಧ

ಮೊದಲಾದ ಸಂಸ್ಕೃತ ಕೋಶಗಳಿಗೆ ಟೀಕೆಗಳೂ ವೈದ್ಯ ನಿಘಂಟುಗಳಿಗೆ ಟೀಕೆಗಳೂ ದೊರೆಯುತ್ತವೆ.

ವೈದ್ಯಶಾಸ್ತ್ರದಲ್ಲಿ ಜಗದ್ದಳ ಸೋಮನಾಥ ಕೃತವಾದ ಕರ್ನಾಟಕ ಕಲ್ಯಾಣಕಾರಕವೇ ಪ್ರಾಚೀನವಾದುದು. ಖಗೇಂದ್ರಮಣಿದರ್ಪಣದಲ್ಲಿ ವಿಷವೈದ್ಯವು ವಿಸ್ತೃತ ವರ್ಣಿಸಲ್ಪಟ್ಟಿದೆ. ಅಲ್ಲದೆ ಶ್ರೀಧರದೇವ, ಸಾಳ್ವ, ಚಿಕುಪಾಧ್ಯಾಯ, ವೀರರಾಜ, ನಂಜರಾಜ, ನೃಸಿಂಹಭಟ್ಟ, ಬ್ರಹ್ಮ ಮೊದಲಾದವರು ಹಲವು ವೈದ್ಯಕ ಗ್ರಂಥಗಳನ್ನು ಬರೆದಿದ್ದಾರೆ. ವೃಣವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಇವುಗಳ ವಿಷಯವಾಗಿಯೂ ಗ್ರಂಥಗಳು ಹುಟ್ಟಿವೆ. ಚಂದ್ರರಾಜ, ಅಭಿನವಚಂದ್ರ,; ರಾಮಚಂದ್ರ, ಪದ್ಮಣಪಂಡಿತ, ಮೊದಲಾದವರು ಅಶ್ವವೈದ್ಯವನ್ನೂ ಚಾಲುಕ್ಯರಾಜನಾದ ಕೀರ್ತಿವರ್ಮನು ಗೋವೈದ್ಯವನ್ನೂ ವೀರಭದ್ರರಾಜನು ಪಾಲಕಾಪ್ಯಕೃತ ಹಸ್ತಿಆಯುರ್ವೇದಕ್ಕೆ ಟೀಕೆಯನ್ನೂ ಬರೆದಿದ್ದಾರೆ.

ಪಾಕಶಾಸ್ತ್ರದಲ್ಲಿ ಜಯಬಂಧುನಂದನನ ಗ್ರಂಥವೇ ಹಳೆಯದು. ಮಂಗರಸ ಮುಂತಾದವರು ರಚಿಸಿದ ಗ್ರಂಥಗಳೂ ಇವೆ.

ಜೋತಿಶ್ಶಾಸ್ತ್ರದಲ್ಲಿ ಶ್ರೀಧರಾಚಾರ್ಯ ಕೃತ ಜಾತಕತಿಲಕವೇ ಪ್ರಾಚೀನ. ಲೋಕೋಪಕಾರ, ರಟ್ಟಮತ, ರಟ್ಟನ ಜಾತಕ, ನರಪಿಂಗಲಿ, ಮಾರ್ಕಂಡೇಯ ಪುರಾಣ, ಶಕುನಪ್ರಪಂಚ, ಮೊದಲಾದ ಜ್ಯೋತಿಷ ಗ್ರಂಥಗಳೂ ಸೂರ್ಯಸಿದ್ಧಾಂತವೇ ಮೊದಲಾದ ಕೆಲವು ಸಂಸ್ಕೃತ ಗ್ರಂಥಗಳ ಟೀಕೆಗಳೂ ದೊರೆಯುತ್ತವೆ.

ಗಣಿತಶಾಸ್ತ್ರದಲ್ಲಿ ವ್ಯವಹಾರಗಣಿತ, ಕ್ಷೇತ್ರಗಣಿತ, ಬೀಜಗಣಿತ ಮೊದಲಾದ ಗ್ರಂಥಗಳೂ ಕೆಲವು ಸಂಸ್ಕೃತ ಗ್ರಂಥಗಳ ಟೀಕೆಗಳೂ ಇವೆ.

ಕಾಮಶಾಸ್ತ್ರದಲ್ಲಿ ಮದನತಿಲಕವೇ ಪ್ರಾಚೀನ. ಇದಲ್ಲದೆ ಸ್ಮರತಂತ್ರ, ಮನ್ಮಥವಿಜಯ, ಜನವಶ್ಯ ಮೊದಲಾದ ಗ್ರಂಥಗಳೂ ವಾತ್ಸ್ಯಾಯನ, ಕೊಕ್ಕೋಕ ಮೊದಲಾದ ಗ್ರಂಥಗಳ ಟೀಕೆಗಳೂ ಇವೆ.

ಸ್ವರಶಾಸ್ತ್ರ, ರತ್ನಶಾಸ್ತ್ರ ಸಾಮುದ್ರಿಕಶಾಸ್ತ್ರ, ಬಾಣಗಾರಿಕೆ ಮೊದಲಾದವುಗಳ ವಿಷಯವಾಗಿಯೂ ಗ್ರಂಥಗಳು ಹುಟ್ಟಿವೆ.

ರಾಜನೃಪವಿಜಯ, ಕಂಠೀರವನರಸರಾಜವಿಜಯ, ಚಿಕ್ಕದೇವರಾಜ ವಿಜಯ ಮುಂತಾದ ಜೀವನಚರಿತೆಗಳೂ, ಮೈಸೂರರಸುಗಳ ಪೂರ್ವಾಭ್ಯುದಯ, ಕೆಳದಿ ನೃಪವಿಜಯ, ಬಿಳಗಿಯರಸರ ವಂಶಾವಳಿ ಮೊದಲಾದ ಇತಿಹಾಸ ಗ್ರಂಥಗಳೂ ಇವೆ.

ಅಲ್ಲದೆ ಸುಂದರವಾದ ಪ್ರೌಢವಾದ ಕಾವ್ಯಸರಣಿಯಲ್ಲಿ ಉದ್ದಾಮ ಕವಿಗಳಿಂದ ರಚಿಸಲ್ಪಟ್ಟ ಅನೇಕ ಕನ್ನಡ ಶಾಸನಗಳು ದೊರೆಯುತ್ತವೆ. ಇವು ೬ ನೆಯ ಶತಮಾನದಿಂದ ೧೭ನೆಯ ಶತಮಾನದ ವರೆಗೆ, ಬೇರೆ ಬೇರೆ ಕಾಲದಲ್ಲಿ ಹುಟ್ಟಿವೆ. ಇವುಗಳಲ್ಲಿ ಹಲವು ಉತ್ತಮ ಕಾವ್ಯಗಳೆಂದು ಪರಿಗಣಿಸುವಷ್ಟು ಪ್ರೌಢವಾಗಿವೆ.

ಇವೆಲ್ಲ ಸಂಗತಿಗಳು ಕನ್ನಡ ಸಾಹಿತ್ಯದ ವಿವಿಧತೆಯನ್ನೂ ವಿರಾಟ ರೂಪವನ್ನೂ ವ್ಯಕ್ತಪಡಿಸುತ್ತವೆ.

ಕನ್ನಡ ಭಾಷೆಯ ಅವಸ್ಥಾಭೇದಗಳು

ಪ್ರವಾಹದ ನೀರಿನಂತೆ, ನಿರಂತರವೂ ವ್ಯತ್ಯಾಸವನ್ನು ಹೊಂದುವುದೇ ವ್ಯಾವಹಾರಿಕ ಅಥವಾ ಜೀವಂತ ಭಾಷೆಯ ನೈಸರ್ಗಿಕ ಲಕ್ಷಣವು. ಈ ವ್ಯತ್ಯಾಸಗಳು ಉದ್ದೇಶಪೂರ್ವಕವಾದವುಗಳಲ್ಲ. ಒಮ್ಮೆಲೆ ಇವು ಕಾಣಿಸಿಕೊಳ್ಳುವುದೂ ಇಲ್ಲ. ಆದರೆ ಅವ್ಯಕ್ತವಾಗಿ ಪರಿಸ್ಥಿತಿಯ ಮೂಲಕ ಸಂಭವಿಸುವ ವ್ಯತ್ಯಾಸಗಳು ಬೆಳೆದು ವ್ಯಕ್ತವಾಗಿ ರೂಪುಗೊಂಡು ಕಾಣಿಸಿಕೊಳ್ಳುತ್ತವೆ. ಆಗ ಭಾಷೆಯು ಒಂದು ಮಟ್ಟಕ್ಕೆ ಬಂದಿತೆಂದು ಹೇಳಬಹುದು. ಹೀಗೆ ಕ್ರಮಕ್ರಮವಾಗಿ ಭಾಷೆಯು ಬೆಳೆದು ಅನೇಕ ಸ್ಥಿತ್ಯಂತರಗಳನ್ನು ಹೊಂದುತ್ತಿರುತ್ತದೆ. ಭಾಷೆಯ ಈ ಅವಸ್ಥಾಭೇದಗಳನ್ನು ತಿಳಿಸಿಕೊಡುವುದೇ **ಭಾಷಾಚರಿತೆಯ ಉದ್ದೇಶ.** ಕನ್ನಡ ಭಾಷೆಯೂ ಕಾಲಕ್ರಮದಲ್ಲಿ ಹೀಗೆಯೇ ಮಾರ್ಪಟ್ಟಿದೆ. ಭಾಷೆಯು ಕಾಲಕ್ರಮದಲ್ಲಿ ಇಷ್ಟು ವ್ಯತ್ಯಾಸವನ್ನು ಹೊಂದುತ್ತ ಬಂದಿದೆ.

ಕವಿಚರಿತೆಕಾರರಾದ ಶ್ರೀ. ಆರ್. ನರಸಿಂಹಾಚಾರ್ಯರೂ, ರೈಸ್ ಮತ್ತು ಕಿಟಲ್ ಸಾಹೇಬರೂ, ಶ್ರೀ. ಟಿ. ಟಿ. ಶರ್ಮ ಮೊದಲಾದವರು ಬೇರೆ ಬೇರೆ ಕಾಲಗಳಲ್ಲಿ ಕಂಡುಬರುವ ಭಾಷೆಯ ವೈಲಕ್ಷಣ್ಯಗಳನ್ನು

ಆಧಾರವಾಗಿಟ್ಟುಕೊಂಡು ಕನ್ನಡ ಭಾಷೆಗೆ ಎಷ್ಟು ಅವಸ್ಥೆಗಳಿವೆ ಎಂಬುದನ್ನು ನಿರ್ಣಯಿಸಲು ಯತ್ನಿಸಿದ್ದಾರೆ.

ಕವಿಚರಿತಕಾರರು— ಅಂತಃಶಕ್ತಿಯೇ ಸಾಹಿತ್ಯದ ಜೀವನ. ನಮ್ಮ ಸಾಹಿತ್ಯವೆಲ್ಲವೂ ಒಂದಿಲ್ಲೊಂದು ರೀತಿಯಿಂದ ಮತಗಳ ಸ್ಫೂರ್ತಿಯನ್ನೇ ವ್ಯಕ್ತಗೊಳಿಸುವುದರಿಂದ, ಮತದೃಷ್ಟಿಯಿಂದ ಅವನ್ನು ವಿಭಾಗಿಸುವುದು ಅಯುಕ್ತವೆನಿಸಲಾರದು. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ಸ್ಥೂಲವಾಗಿ ಜೈನಯುಗ, ವೀರಶೈವಯುಗ, ವೈಷ್ಣವಯುಗ ಎಂಬ ಮೂರು ಭಾಗಗಳನ್ನು ಕವಿಚರಿತೆಕಾರರು ಕಲ್ಪಿಸಿದ್ದಾರೆ.

ಜೈನಯುಗ (೫ನೆಯದರಿಂದ ೧೨ನೆಯ ಶತಮಾನದ ಮಧ್ಯದ ವರೆಗೆ) -— ಈ ಕಾಲದಲ್ಲಿ ಹೆಚ್ಚಾಗಿ ಜೈನರಿಂದಲೇ ಕಾವ್ಯಗಳು ಬರೆಯಲ್ಪಟ್ಟವೆ. ಚಂಪೂಕಾವ್ಯವೇ ಈ ಯುಗದ ಲಕ್ಷಣ. ಪಂಪ, ಪೊನ್ನ, ರನ್ನ ಮೊದಲಾದವರೇ ಶ್ರೇಷ್ಠ ಕವಿಗಳು.

ವೀರಶೈವಯುಗ (೧೨-೧೫ನೆಯ ಶತಮಾನದ ವರೆಗೆ):— ವಚನ, ತ್ರಿಪದಿ, ರಗಳೆ, ಷಟ್ಪದಿಗಳೇ ಈ ಯುಗದ ಮುಖ್ಯ ಲಕ್ಷಣಗಳು. ಬಸವ, ಚೆನ್ನಬಸವ, ಸಿದ್ಧರಾಮ ಮೊದಲಾದವರೇ ಶ್ರೇಷ್ಠ ವಚನಕಾರರು; ರಗಳೆಯ ಹರಿಹರ, ಷಟ್ಪದಿಯ ರಾಘವಾಂಕ – ಇವರು ಇಬ್ಬರು ಪ್ರತಿನಿಧಿಗಳು.

ವೈಷ್ಣವ (ಬ್ರಾಹ್ಮಣ) ಯುಗ (೧೫-೧೯ನೆಯ ಶತಮಾನದ ವರೆಗೆ):— ಷಟ್ಪದಿ, ಪದ ಸುಳಾದಿಗಳೇ ಈ ಯುಗದ ಲಕ್ಷಣ. ಪುರಂದರದಾಸ ಕನಕದಾಸರೇ ಮೊದಲಾದವರು ಶ್ರೇಷ್ಠ ಕೀರ್ತನಕಾರರು. ಕುಮಾರವ್ಯಾಸ ಮೊದಲಾದವರೇ ಕವಿಗಳು.

ಆದರೆ **ಇ. ಪಿ. ರೈಸ**ರು ಈ ದೃಷ್ಟಿಯನ್ನು ಅಲ್ಲಗಳೆದಿದ್ದಾರೆ. ನಾವು ಜಾತಿ ಮತಗಳ ಕಡೆಗೆ ದೃಷ್ಟಿ ಕೊಡದೆ, ಸಾಹಿತ್ಯೈಕದೃಷ್ಟಿಯಿಂದ ಎಲ್ಲ ಸಾಹಿತ್ಯವನ್ನು ನೋಡಬೇಕೆಂದೇ ಅವರ ಅಭಿಪ್ರಾಯ.

ಈ ದೃಷ್ಟಿಯಲ್ಲಿ ಅನೇಕ ದೋಷಗಳಿವೆ. ಅವುಗಳನ್ನು ಹೀಗೆ ಹೇಳಬಹುದು.

(೧) ಜೈನಯುಗಕ್ಕಿಂತ ಮುಂಚಿತವಾಗಿಯೂ ಜೈನ ಕವಿಗಳಿದ್ದರು. (೨) ಜೈನ, ವೀರಶೈವ, ಬ್ರಾಹ್ಮಣ ಯುಗಗಳಲ್ಲಿ ಆಯಾ ಮತಕ್ಕೆ ಸಂಬಂಧಪಡದ ಗ್ರಂಥಗಳೂ ಹುಟ್ಟಿವೆ. (೩) ಜೈನ ಯುಗದಲ್ಲಿ ಬ್ರಾಹ್ಮಣ ಕವಿಗಳೂ ವೀರಶೈವ ಯುಗದಲ್ಲಿ ಹೆಚ್ಚಾಗಿ ಜೈನ ಕವಿಗಳೂ ಬ್ರಾಹ್ಮಣ ಯುಗದಲ್ಲಿ ಜೈನ ಕವಿಗಳೂ ಇರುವರು. (೪) ಜೈನ ಯುಗದಲ್ಲಿದ್ದ ಚಂಪೂ ಗ್ರಂಥಗಳು ಜೈನ ಯುಗಕ್ಕೆ ನಿಲ್ಲಲಿಲ್ಲ. ಅಲ್ಲದೆ ಜೈನರು ಬೇರೆ ಬೇರೆ ಯುಗ ಗಳಲ್ಲಿ ಬರೆದಾಗ ಆಯಾ ಕಾಲಕ್ಕೆ ತಕ್ಕಂತೆ, ಷಟ್ಪದಿ ಸಾಂಗತ್ಯಗಳ ಲ್ಲಿಯೂ ಬರೆದರು. ಆದ್ದರಿಂದ ಆ ಯುಗಧರ್ಮವೇ ಮತಧರ್ಮಕ್ಕಿಂತ ಹೆಚ್ಚಿನದು. (೫) ಮತದ ಪುಸ್ತಕಗಳಲ್ಲದೆ ಸರ್ವಸಮ್ಮತವಾದ ಕಾವ್ಯ ರಾಶಿಯೇ ಹೆಚ್ಚು.

ಆಚಾರ್ಯರ ಈ ವಿಭಜನೆಯಲ್ಲಿ ರೈಸಸಾಹೇಬರು ಒಂದು ಬೆಲೆ ಯುಳ್ಳ ಮಾತನ್ನು ಹೇಳಿದ್ದಾರೆ. 'ನಮ್ಮ ಸಾಹಿತ್ಯವು ವಿಶಾಲ ಪ್ರವಾಹ ವಿದ್ದಂತೆ. ಅದು ಮುಂದೆ ಮುಂದೆ ಹರಿದಂತೆ, ಅನೇಕ ಶಾಖೋಪಶಾಖೆ ಗಳು ಅದಕ್ಕೆ ಕೂಡುತ್ತವೆ. ಶುದ್ಧ ಜೈನ ಸಾಹಿತ್ಯ ಪ್ರವಾಹಕ್ಕೆ ವೀರಶೈವ ಪ್ರವಾಹದ ಜೋಡು ಉಂಟಾಗಿ ಎರಡೂ ಬದಿ ಬದಿಗೆ ಹರಿಯುವಾಗ ವೈಷ್ಣವ ಪ್ರವಾಹವೂ ಅದರಲ್ಲಿ ಕೂಡಿ **ತ್ರಿವೇಣಿಸಂಗಮವಾಗಿ** ವಿಸ್ತೃತವಾಯಿತು, ಎಂದಿದ್ದಾರೆ.

ಶ್ರೀ. ಟಿ. ಟಿ. ಶರ್ಮರ (ಕನ್ನಡವಕ್ಕಿ) ಅಭಿಪ್ರಾಯ:— ನಮ್ಮ ಸಾಹಿತ್ಯವನ್ನು ಮೃತ ದೃಷ್ಟಿಯಿಂದ ವಿಭಜಿಸುವುದೆ, ಶುದ್ಧ ಸಾಹಿತ್ಯ ದೃಷ್ಟಿಯಿಂದ ಸಮಂಜಸವಾದುದಲ್ಲ. ಕಾಲ ದೇಶಗಳನ್ನು ಲೆಕ್ಕಿಸಿ ಕವಿಯ ಕರ್ಮಕ್ಕೆ ಮೂಲ ಕಾರಣವಾದ ಸ್ಫೂರ್ತಿ ವಿಶೇಷವನ್ನು ಗಮನಿಸಿ ಕಾವ್ಯಕ್ಕೆ ರಸವೇ ಆತ್ಮವೆಂದರಿತು ಕನ್ನಡ ಸಾಹಿತ್ಯವನ್ನು **ಕ್ಷಾತ್ರಯುಗ, ಮತ ಪ್ರಚಾರಕ ಯುಗ, ಸಾರ್ವಜನಿಕ ಯುಗ, ಮತ್ತು ಆಧುನಿಕ ಯುಗ** ಎಂದು ವಿಭಾಗಿಸಬೇಕೆಂದು ಅವರ ಮತ.

ಕ್ಷಾತ್ರಯುಗ (೬ ರಿಂದ ೧೦ ನೆಯ ಶತಮಾನ) :— ಈ ಯುಗದಲ್ಲಿ ಗಂಗ ಮತ್ತು ರಾಷ್ಟ್ರಕೂಟ, ಪಲ್ಲವ ಹಾಗು ಚೋಳರಲ್ಲಿ ಸಾಮ್ರಾಜ್ಯಾಧಿ ಪತ್ಯಕ್ಕಾಗಿ ಪರಸ್ಪರ ಸ್ಪರ್ಧೆ ಕಂಡುಬರುತ್ತದೆ. ಅಂತೇ ಈ ಯುಗವು

ವೀರರಸ ಪ್ರಧಾನವಾದದ್ದು. ಕಾಲದ ಕನ್ನಡಿಯಂತಿದ್ದ **ಪಂಪ ರನ್ನರ** ಕಾವ್ಯಗಳೇ ಇದಕ್ಕೆ ಸಾಕ್ಷಿ.

ಮತ ಪ್ರಚಾರಕ ಯುಗ (೧೨-೧೬ ನೆಯ ಶತಮಾನ):— ನಾಸ್ತಿಕ ಮತವಾದ ಜೈನ ಮತಕ್ಕೆ ಆಸ್ತಿಕ ವೈದಿಕ ಮತವು ವಿರೋಧಿಸಿತು. ಮುಂದೆ ರಾಮಾನುಜ, ಬಸವ, ಮಧ್ವರಿಂದ ಧರ್ಮ ಕ್ರಾಂತಿಗಳಾದವು. ಆದರ ಪರಿಣಾಮವು ಅನ್ಯೋನ್ಯ ಮತಾವಹೇಳನದಲ್ಲಿ ಕೊನೆಗೊಂಡಿತು. ವಚನಗಳು, ಕೀರ್ತನೆಗಳು ಈ ಯುಗದ ಮುಖ್ಯ ಲಕ್ಷಣ.

ಸಾರ್ವಜನಿಕ ಯುಗ (೧೬-೧೯ ನೆಯ ಶತಮಾನದ ವರೆಗೆ):— ವಿಜಯನಗರದ ಮೇಲೆ ಮುಸಲ್ಮಾನರು ದಾಳಿಯಿಟ್ಟು ಹಾವಳಿಯನ್ನು ಮಾಡಿದರು. ಅರಾಜಕತೆಯು ನೆಲೆಗೊಂಡಿತು. ಅನೈತಿಕ ವ್ಯಾಧಿಯೂ ಹಬ್ಬಿ ಸಾಮಾಜಿಕ ಜೀವನವು ನಿರ್ಬಲವಾಯಿತು. ಧಾರ್ಮಿಕ ಕ್ಷೇತ್ರದಲ್ಲಿ ತಿರುಳನ್ನರಿಯದ ಡಾಂಭಿಕರ ಗೊಂದಲ, ಹೀಗೆ ಸಮಾಜವು ಅಧಃಪತನವನ್ನೈದಿತು. ಇದೊಂದು **ಹಾಡುಗಬ್ಬಗಳ** ಕಾಲ. ಸಾಂಗತ್ಯ, ರಗಳೆ, ತ್ರಿಪದಿ, ಯಕ್ಷಗಾನಗಳು ಬೆಳಕಿಗೆ ಬಂದುವು. ಸುಲಭತೆಯೇ (ಸುಲಭ ಜೀವನ) ಈ ಯುಗದ ಲಕ್ಷಣ.

ಶ್ರೀಮಾನ್ **ಟಿ. ಟಿ. ಶರ್ಮರ** ಮೊದಲನೆಯ ವಿಭಾಗವು ಕೆಲ ಮಟ್ಟಿಗೆ ಯೋಗ್ಯವೆನಿಸಿದರೂ, ಅದೇ ಕಾಲಕ್ಕೆ ಆಯಾ ಜೈನ ಕವಿಗಳಿಂದ ಪುರಾಣ ಗ್ರಂಥಗಳೂ ಮತ ಪ್ರಕ್ರಿಯೆಗಳೂ ಬರೆಯಲ್ಪಟ್ಟವೆಯೆಂಬುದನ್ನು ಮರೆಯಲಾಗುವುದಿಲ್ಲ. ಇನ್ನು ಎರಡನೆಯ ಮಾತು, ಅವರ ತತ್ವಕ್ಕೇ ವಿರೋಧವಾಗುತ್ತದೆ. ಸಾಹಿತ್ಯದ ಸ್ಫೂರ್ತಿ ವಿಶೇಷದ ಮೇಲೆ ವಿಭಾಗಿಸಬೇಕೆಂಬ ರಸದೃಷ್ಟಿಯು ಒಮ್ಮೆಲೆ, ಮತದ ಕಡೆಗೆ ಹೊರಳಿಬಿಟ್ಟದೆ. ಸಾಮಾಜಿಕ ಯುಗದಲ್ಲಿ **ದಾಸರ ಸಾಹಿತ್ಯವು** ಜನತೆಯಲ್ಲೆಲ್ಲ ಹರಡಿತ್ತೆಂಬ ವಿಷಯವು ಮಾತ್ರ ನಿಜ.

ಹೀಗೆ ರಸ, ಸ್ಫೂರ್ತಿಗಳಿಂದ ನಮ್ಮ ಭಾಷೆಯ ಅವಸ್ಥಾ ಭೇದಗಳನ್ನು ತಿಳಿಯಲು ಆತಂಕಗಳಿದ್ದುದರಿಂದ ಹಲವರು ಸಾಹಿತ್ಯದ ಬಾಹ್ಯ ಲಕ್ಷಣಗಳಿಂದ ಭಾಷೆಯ ಸ್ಥಿತ್ಯಂತರಗಳನ್ನು ಊಹಿಸುತ್ತಾರೆ.

ರೈಸರು, ಕನ್ನಡಕ್ಕೆ **ಪೂರ್ವದ ಹಳಗನ್ನಡ, ಹಳಗನ್ನಡ, ಹೊಸಗನ್ನಡ**ವೆಂದು ಮೂರು ರೂಪಗಳನ್ನು ಹೇಳುತ್ತಾರೆ. **ಪೂರ್ವದ ಹಳಗನ್ನಡ**ವು ಕ್ರಿ. ಶ. ೭ ನೆಯ ಶತಮಾನದ ಅಂತ್ಯದ ವರೆಗೂ, ಹಳಗನ್ನಡವು ಅಲ್ಲಿಂದ ೧೪ ನೆಯ ಶತಮಾನದ ವರೆಗೂ, ಹೊಸಗನ್ನಡವು ಅಲ್ಲಿಂದ ಈಚೆಗೂ ಎಂದು ಅವರ ಮತ. ಕವಿಚರಿತೆಕಾರರೂ ಇದೇ ಅಭಿಪ್ರಾಯದವರು.

ಕಿಟಲ್ ಸಾಹೇಬರು ಕನ್ನಡ ಭಾಷೆಗೆ, **ಹಳಗನ್ನಡ, ಮಧ್ಯಕಾಲದ ಕನ್ನಡ, ಹೊಸಗನ್ನಡ** ಎಂಬ ಮೂರು ಅವಸ್ಥೆಗಳಿವೆಯೆಂದೂ ಕ್ರಿ. ಶ. ೬ ನೆಯ ಶತಮಾನದಿಂದ ೧೨೫೦ ರ ವರೆಗೆ ಹಳಗನ್ನಡವೂ ೧೨೫೦ ರಿಂದ ೧೫೦೦ ರ ವರೆಗೆ ಮಧ್ಯಕಾಲದ ಕನ್ನಡವೆಂಮೂ ಅಲ್ಲಿಂದೀಚೆಗೆ ಹೊಸಗನ್ನಡವು ಪ್ರಚಾರದಲ್ಲಿದೆಯೆಂದೂ ಹೇಳುತ್ತಾರೆ.

ಪೂರ್ವದ ಹಳಗನ್ನಡ ಕಾಲವೆಂದು ಹೇಳುವುದರಲ್ಲಿ ಈ ಇಬ್ಬರು ಸಾಹೇಬರಲ್ಲಿಯೂ ಮತಭೇದವಿದೆ.

ರೈಸಸಾಹೇಬರ ಕಾರಣಗಳು

೧. ಕವಿರಾಜಮಾರ್ಗದಲ್ಲಿ ತನ್ನ ಹಿಂದಿನ ಭಾಷೆಯು **ಹಳಗನ್ನಡ**ವೆಂದು ಹೇಳಿದೆ. ಇದೇ **ಪೂರ್ವದ ಹಳಗನ್ನಡ.**

೨. ಒಂಬತ್ತನೆಯ ಶತಮಾನದಲ್ಲಿ, ಇಲ್ಲದ ಭಾಷಾವೈಲಕ್ಷಣ್ಯಗಳು ಹಿಂದೆ ಕಂಡುಬರುತ್ತವೆ. ಎಂದರೆ ಹಳಗನ್ನಡ ವ್ಯಾಕರಣದಿಂದ ಸಿದ್ಧಿಸದ ಕೆಲವು ಪ್ರಯೋಗಗಳುಂಟು.

ಇದಕ್ಕೆ ಉದಾಹರಣೆಯಾಗಿ, ದ್ವಿತೀಯಾಭಕ್ತಿಯ ಪ್ರತ್ಯಯ.

ಪೂರ್ವದ ಹಳಗನ್ನಡ 'ಆನ್' ಹಳಗನ್ನಡ 'ಅನ್'.

ಉ:— ಪ್ರಾಸಾದಾಂತರ**ಮಾನ್**, ಮಿಕ್ಕು**ದಾನ್**, ಇದರಂತೆ ಷಷ್ಠಿ, ಸಪ್ತಮಿ ಪ್ರತ್ಯಯಗಳನ್ನು ಉದಾಹರಿಸುತ್ತಾರೆ.

ಇದಕ್ಕೆ ವಿರೋಧವಾದ ಅಂಶಗಳು

೧. ಕವಿರಾಜಮಾರ್ಗದಲ್ಲಿ ಉಲ್ಲೇಖಿತವಾದ 'ಪಟಗನ್ನಡ' ಎಂಬ ಮಾತಿನ ಅರ್ಥವು ಹಿಂದಿನ ಭಾಷೆ, ಈಗಿನಿಂದ ಭಿನ್ನವಾದುದು ಎಂದಿರದೆ

'**ವೇದ**' ಎಂಬುದಕ್ಕೆ ಪ್ರತಿಪಾದಿತವಾದ 'ಪಟಿವಾತು' ಎಂಬ ಮಾತಿನಲ್ಲಿ ಪಟಿ ಶಬ್ದಕ್ಕೆ ಇರುವ ಅರ್ಥವೇ. ಎಂದರೆ ಬಹುಕಾಲದಿಂದಿರುವ,–ಪುರಾತನವಾದ, ಎಂಬ ಅರ್ಥವು 'ಪಟಿಗನ್ನಡ'ಕ್ಕೆ ಇರುತ್ತದೆಂದು ಹೇಳಬಹುದು.

೨. ಎಂಟನೆಯ ಶತಮಾನದ ಹಿಂದಿನ ಕನ್ನಡದಲ್ಲಿ, ಹಳಗನ್ನಡದಿಂದ ಭಿನ್ನವಾದ ರೂಪಗಳಿರುವುದು ನಿಜ. ಆದರೆ ಹಳಗನ್ನಡದ ರೂಪಗಳೂ ಇವೆ. ಇಷ್ಟೇ ಅಲ್ಲ, ಇವೇ ಹೆಚ್ಚು.

೩. ಮೂರನೆಯ ಮಾತೆಂದರೆ, ಈ ರೂಪಗಳ ವಿಷಯ. ಉದಾಹರಣೆಗೆ **ಆನ್**, ಪ್ರತ್ಯಯವನ್ನೇ ತೆಗೆದುಕೊಳ್ಳೋಣ. ರೈಸ ಸಾಹೇಬರ ಮತದಂತೆ ಇದು ಹಳಗನ್ನಡದ **ಅನ್**, ಪ್ರತ್ಯಯದ ಪೂರ್ವರೂಪ. ಕ್ರಿಯಾಪದಗಳಿಗೆ ಹತ್ತುವ ಪುರುಷವಾಚಕ ಪ್ರತ್ಯಯಗಳು ಪುರುಷವಾಚಕ ಸರ್ವನಾಮಗಳಿಂದು ಗೊತ್ತಾಗಿದೆ. ಆದ್ದರಿಂದ ಈ ಸರ್ವನಾಮಗಳ ಮೂಲ ರೂಪಗಳು ಆನ್, ಆಳ್, ಆರ್, ಇತ್ಯಾದಿಯಾಗಿದ್ದಿರಬೇಕು. ಆದರೆ ನಮಗೆ ಅವಾನ್, ಅವಾಳ್ ರೂಪಗಳು ದೊರೆಯುವುದಿಲ್ಲ. ಅಲ್ಲದೆ ತೃತೀಯಾದಿ ವಿಭಕ್ತಿಗಳಲ್ಲಿ ಎನ್ನ, ಎಮ್ಮ, ಎಮಗೆ ಎಂಬ ರೂಪಗಳಾಗುತ್ತವೆ. ಇದರಿಂದ **ಆನ್** ಎಂಬುದರ ಸ್ವರವು ಹ್ರಸ್ವವೆಂದು ತಾನೆ ತಿಳಿಯುವುದು. ಇದು ರೈಸರಿಗೆ ವಿರುದ್ಧ. **ಅನ್** ಎಂಬುದೆ ಮೂಲ ರೂಪ, **ಆನ್** ಎಂಬುದು ಅದರಿಂದ ಹುಟ್ಟಿದುದು. ಇದು ಮಾತನಾಡುವ ಭಾಷೆಯಲ್ಲಿದ್ದು ಸಾಹಿತ್ಯದಲ್ಲಿ ಅಪೂರ್ವವಾಗಿ ಪ್ರಯೋಗವಾಗುತ್ತದೆ.

ಭಾಷೆಯು ಜನರು ಹಳೆಯ ಅಂಗಿಯನ್ನು ಬಿಟ್ಟು, ಹೊಸ ಅಂಗಿಯನ್ನು ತೊಟ್ಟುಕೊಂಡಂತೆ, ಎಂದೋ ಒಂದು ದಿನ, ಒಂದು ಅವಸ್ಥೆಯನ್ನು ಬಿಟ್ಟು ಮತ್ತೊಂದನ್ನು ಪಡೆಯುವುದಿಲ್ಲ. ಹಿಂದಣ ಅವಸ್ಥೆಯ ಚಿನ್ಹಗಳು ಒಂದೊಂದಾಗಿ ಮರೆಯಾಗುತ್ತ ಹೊಸ ಅವಸ್ಥೆಯ ಚಿನ್ಹಗಳು ನೆಲೆಯಾಗಿ ಹಳೆಯ ಚಿನ್ಹಗಳು ಮಾಯವಾಗುತ್ತವೆ. ಈ ದೃಷ್ಟಿಯಿಂದ ೯ನೆಯ ಶತಮಾನದ ಪ್ರಾರಂಭಕ್ಕೆ ಒಮ್ಮೆಲೆ ಹಳಗನ್ನಡವು ತಲೆಯೆತ್ತಿತೆಂದು ಹೇಳುವುದು ಸರಿಯಾಗಲಾರದೆಂದು ಇವರ ಮತ. ಹಳಗನ್ನಡ

ರೂಪವು ರೈಸರ ಪೂರ್ವದ ಹಳಗನ್ನಡವ ಕಾಲದಲ್ಲಿಯೆ ತಲೆಯೆತ್ತಿತೆಂದು ಇವರ ಅಭಿಪ್ರಾಯ. ಇವರಂತೆಯೆ ನಡುಗನ್ನಡದ ಸ್ಥಿತಿ. ಅಂದರೆ ಭಾಷೆಯು ಒಂದು ಮೆಟ್ಟಲಿನಿಂದ ಮತ್ತೊಂದು ಮೆಟ್ಟಲಿಗೆ ಬರಬೇಕಾದರೆ ನಡುವಣ ಕಾಲವು ಬೇಕಾಗುತ್ತದೆಂದೂ ಅದೇ **ಕಿಟಲರ** ಮಧ್ಯಕಾಲವೆಂದೂ ಇವರ ಅಭಿಪ್ರಾಯ.

ಒಟ್ಟಿನಲ್ಲಿ ಇವರ ಅಭಿಪ್ರಾಯದಂತೆ, ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂಬಿವೇ ಕನ್ನಡ ಸಾಹಿತ್ಯದ ಅವಸ್ಥಾಭೇದಗಳು.

ಸಾಹಿತ್ಯವು ಮಾನವನ ಹೃದಯ-ಬುದ್ಧಿಗಳ ಅಗಮ್ಯ ಮತ್ತು ಅಸಾಧಾರಣ ಶಕ್ತಿಗಳಿಂದ ನಿರ್ಮಾಣವಾಗುವದರಿಂದ ಒಂದು ನಿಶ್ಚಿತ ಸ್ವರೂಪವನ್ನು ಹೇಳುವುದು ಕಠಿಣವಿದೆ.

ವಿದ್ವಾಂಸರಿಂದ ಮಾನ್ಯ ಮಾಡಲ್ಪಟ್ಟ, ಈ ಸಾಮಾನ್ಯ ವಿಭಾಗಗಳೇ ನಮಗೆ ಸರಿಯಾಗಿ ಕಾಣುತ್ತವೆ.

ಅವಸ್ಥಾಭೇದಗಳ ಲಕ್ಷಣಗಳು

ಈ ಎಲ್ಲ ವಿದ್ವಾಂಸರು ಹೇಳುವ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡವೆಂದು ಹೇಳುವ ಕನ್ನಡ ಭಾಷೆಯ ಅವಸ್ಥಾಭೇದಗಳ ಲಕ್ಷಣಗಳನ್ನೂ ಅವುಗಳ ಕಾಲವನ್ನೂ ವಿಚಾರ ಮಾಡುವುದು ಕ್ರಮಪ್ರಾಪ್ತವಾಗಿದೆ.

ಮೂಲಗನ್ನಡ ಅರ್ಥಾತ್ ಪೂರ್ವದ ಹಳಗನ್ನಡ (ಕ್ರಿ. ಶ. ೭೫೦ ರ ವರೆಗೆ):— ಇದನ್ನು ಹಳಗನ್ನಡದಲ್ಲಿಯೇ ಸೇರಿಸಲಿ ಬೇಕಾದರೆ ಬಿಡಲಿ, ನೃಪತುಂಗನ ಪೂರ್ವದಲ್ಲಿ ಒಂದು ಬಗೆಯ ಕನ್ನಡವಿತ್ತೆಂಬ ಮಾತು ಎಲ್ಲರಿಗೂ ಒಪ್ಪಿತವಾಗಿದೆ. ಇದಕ್ಕೆ **ಮೂಲಗನ್ನಡ**ವೆಂದೆನ್ನಬಹುದು. ಹಳಗನ್ನಡ ವ್ಯಾಕರಣದಿಂದ ಸಿದ್ಧಿಸದ ‘ ಸಂದಾನ್, ಬಂದೊನ್, ಒಕ್ಕಲ್ಗೆ, ಕೆಡುಗ ಮೊದಲಾದ ರೂಪಗಳು ೮ನೆಯ ಶತಮಾನದ ವರೆಗಿನ ಶಾಸನಗಳಲ್ಲಿ ದೊರೆಯುತ್ತವೆ. ಈ ಪ್ರತ್ಯಯಗಳೂ, ಪ್ರಯೋಗಗಳೂ ಈ **ಮೂಲಗನ್ನಡ**ದ ವೈಶಿಷ್ಟ್ಯವೆಂದು ಹೇಳಬಹುದು. ಇಂತಹ

ರೂಪಗಳು ತಮಿಳಿನಲ್ಲಿಯೂ ದೊರೆಯುವ ರೂಪಗಳನ್ನು ಹೋಲುತ್ತವೆ. ಇದರ ಅರ್ಥವಿಷ್ಟೆ. ತಮಿಳರು ಕನ್ನಡಿಗರಿಂದ ಬೇರೆ ಹೋಗುವ ಪೂರ್ವದಲ್ಲಿ ಮಾತ ನಾಡುತ್ತಿದ್ದ **ಮೂಲಗನ್ನಡವಿದು.** ಹಳಗನ್ನಡವು ತಲೆಯೆತ್ತಿ ಈ ಮೂಲ ಗನ್ನಡದ ರೂಪವನ್ನೆಲ್ಲ ಬದಲಿಸಿತು.

ಹಳಗನ್ನಡ (೯ ನೆಯ ಶತಮಾನದಿಂದ ೧೩ ನೆಯ ಶತಮಾನದ ವರೆಗೆ) ;— (೧) ಸಮತೆಯುಳ್ಳದ್ದು, (೨) ನಯ ನುಣ್ಪು ಉಳ್ಳದ್ದು, (೩) ಭಾಷಾಶುದ್ಧತೆ ಹಾಗು ಸ್ಪಷ್ಟತೆಯುಳ್ಳುದು, (೪) ಸಂಸ್ಕೃತ ತದ್ಭವ ಗಳ ಬಳಿಕೆ, (೫) ಱ, ೞ ಗಳು ಭೇದವುಳ್ಳ ಪ್ರಯೋಗಗಳು, (೬) ಅಲಂಕಾರ ಪ್ರಧಾನ, (೭) ಚಂಪೂಶೈಲಿ, ಇವೇ ಈ ಯುಗದ ವೈಶಿಷ್ಟ್ಯ.

ನಡುಗನ್ನಡ (೧೩ ರಿಂದ ೧೫ ನೆಯ ಶ. ದ ವರೆಗೆ) : — (೧) ವಚನ ಸಾಹಿತ್ಯ, (೨) ಷಟ್ಪದಿಯ ಪ್ರಾರಂಭ, (೩) ವ್ಯಾಕರಣದ ಸ್ವಲ್ಪ ಶಿಥಿಲತೆ, (೪) ಅನೇಕ ಹೊಸ ಪ್ರತ್ಯಯಗಳ ನಿರ್ಮಾಣ, (೫) ಱ, ೞ ಗಳ ಕೊನೆ, (೬) ಪಕಾರಕ್ಕೆ ಹಕಾರ, ಇವು ನಡುಗನ್ನಡದ ವೈಶಿಷ್ಟ್ಯಗಳು.

ಹೊಸಗನ್ನಡ (೧೫ ರಿಂದ ೧೯ ನೆಯ ಶ. ವರೆಗೆ) : — (೧) ಹೆಚ್ಚಾಗಿ ಗದ್ಯ, (೨) ವರ್ತಮಾನಕಾಲಕ್ಕೆ ಉತ್ತ ಪ್ರತ್ಯಯ, (೩) ವಿಭಕ್ತಿ ಪ್ರತ್ಯಯ ಗಳ ಹಾಗು ಧಾತುಪ್ರತ್ಯಯಗಳ ಬದಲಾವಣೆ, (೪) ಅನ್ಯದೇಶ್ಯ ಶಬ್ದಗಳ ಬೆರಿಕೆ, (೫) ಪ್ರಾಂತ ಪ್ರಾಂತಕ್ಕೆ ಭಾಷೆಯ ಪರಿವರ್ತನೆ.

ಇಂದಿನ ಸಾಹಿತ್ಯದಲ್ಲಿ ಈ ಮೂರೂ ರೂಪಗಳನ್ನೂ ನಾವು ನೋಡ ಬಹುದು. **ಓದುಗಬ್ಬ**ಗಳ ಭಾಷೆ (ಚಂಪೂಕಾವ್ಯ) ಯನ್ನು **ಹಳಗನ್ನಡ** ವೆಂದೂ **ಹಾಡುಗಬ್ಬ**ಗಳ (ಷಟ್ಪದಿ) ಭಾಷೆಯನ್ನು **ನಡುಗನ್ನಡ**ವೆಂದೂ ಈಗಿನ **ಗದ್ಯಗ್ರಂಥ**ಗಳ ಭಾಷೆಯನ್ನು **ಹೊಸಗನ್ನಡ**ವೆಂದೂ ಹೇಳ ಬಹುದು. ಈಗಲೂ ಕಂದ, ವೃತ್ತ ಮೊದಲಾದವುಗಳನ್ನು ಬರೆಯು ವವರು ಹಳಗನ್ನಡದಲ್ಲಿಯೂ ಷಟ್ಪದಿ ಮೊದಲಾದವುಗಳನ್ನು ನಡುಗನ್ನಡ ದಲ್ಲಿಯೂ ಬರೆಯುವುದನ್ನು ನಾವು ಕಾಣುತ್ತೇವೆ. ಹಳಗನ್ನಡವು ಹೊಸ ಗನ್ನಡವಾಗಿ ಕ್ರಮಕ್ರಮವಾಗಿ ಬದಲಾಗುತ್ತಿರುವ ನಡುಗನ್ನಡದ ಕಾಲ ದಲ್ಲಿ, ಹೊಸ-ಹಳಗನ್ನಡಗಳೆರಡೂ ಬೆರೆತಿರುವುದು ಸ್ವಾಭಾವಿಕವು. ಕಾಲ ಕ್ರಮದಲ್ಲಿ ಹೊಸಗನ್ನಡದ ರೂಪಗಳು ನೆಲೆಸಿ ಉಳಿದವು ಮಾಯವಾದವು.

೩. ಕನ್ನಡ ಸಾಹಿತ್ಯದ ರೂಪಲಕ್ಷಣಗಳು

ಸಾಹಿತ್ಯಪ್ರಚೋದಕ ಶಕ್ತಿ

ಮಾನವನ ಹೊದಿಕೆಯು ಅವನ ನಿಜ ಸ್ವರೂಪವನ್ನು ಎಂದೂ ಅರುಹಲಾರದು. ಆವರಣವನ್ನು ತೆಗೆದೊಡನೆಯೇ ಅವನ ರೂಪ ಲಕ್ಷಣಗಳು ಹೊರಬೀಳುತ್ತವೆ. ಹಾಗೆಯೇ ಸಾಹಿತ್ಯದ ಅವಸ್ಥಾ ಭೇದಗಳನ್ನು ಅರಿತರೆ, ಅದರ ರೂಪ ಲಾವಣ್ಯಗಳು ತಿಳಿಯಲಾರವು. ಒಳರೂಪವನ್ನರಿಯುವುದೇ ಸಾಹಿತ್ಯ ಚರಿತ್ರೆಯ ಮುಖ್ಯ ಉದ್ದೇಶವು.

ಪ್ರತಿಯೊಂದು ಪದಾರ್ಥಕ್ಕೂ ಅದರ ಒಳಗಣ ಹಾಗು ಹೊರಗಣ ಎಂಬ ಎರಡು ರೂಪಗಳಿರುತ್ತವೆ. ಅಂತಃಶಕ್ತಿಯೇ ಬಹಿಃಸೃಷ್ಟಿಗೆ ಕಾರಣವು. ಆ ಶಕ್ತಿಯು ತಾನು ಹೊರಹೊಮ್ಮಲು ಅನುಕೂಲವಾದ ಸಾಧನ ಹಾಗು ರೂಪಗಳನ್ನು ನಿರ್ಮಿಸಿಕೊಳ್ಳುತ್ತದೆ. ಇದು ಪ್ರಕೃತಿಯ ಸ್ವಭಾವ.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ **ಪ್ರಚೋದನಶಕ್ತಿ** ಯಾವುದು? ಜೀವನವು ಯಾವುದು? ಎಂಬುದೇ ಮುಖ್ಯ ಪ್ರಶ್ನೆ. ಸಾಹಿತ್ಯದ ಪುಟಗಳನ್ನು ತಿರವಹತ್ತಿದರೆ, **ಧರ್ಮವೇ** (ಮತಪ್ರಚಾರ) **ಸ್ಫೂರ್ತಿಯ ಸೆಲೆ** ಎಂದು ತೋರುವುದು. ‘ ಧರ್ಮದ (ಮತದ) ಉಸಿರಿನಿಂದಲೇ ಹಳಗನ್ನಡ ಸಾಹಿತ್ಯವು ಜನ್ಮ ತಾಳಿದೆ ’ ಎಂದು ಹೇಳಬಹುದು. ಪಂಪ, ರನ್ನರಿಂದ ಮೊದಲುಗೊಂಡು, ಎಲ್ಲ ಉದ್ದಾಮ ಕವಿಗಳು ತಮ್ಮ ಮತದ ಸಂದೇಶವನ್ನು ಸಾರುವುದಕ್ಕೆ ಸಾಹಿತ್ಯಕ್ಕೆ ಕೈಯಿಕ್ಕಿದುದು ಕಂಡುಬರುತ್ತದೆ.

ಆದಿಪಂಪನು **ಜಿನಾಗಮವು** ‘ ಸಮಸ್ತ ಭೂತಳಕೆ ಬೆಳಗುವಂತೆ ’ ಮಾಡುವುದಕ್ಕಾಗಿಯೇ (“ ಆದಿಪುರಾಣದೊಳಜಿವುದು ಕಾವ್ಯಧರ್ಮಮುಂ ಧರ್ಮಮುಮಂ ।”) ಆದಿಪುರಾಣವನ್ನು ಬರೆದಿರುವೆನೆಂದು ಹೇಳುತ್ತಾನೆ.

ಪಂಪನನ್ನೇ ಗುರುವಾಗಿ ಇಟ್ಟುಕೊಂಡ, ಬಹುತರ ಆ ಕಾಲದ ಜೈನ ಪ್ರೌಢ ಕವಿಗಳೆಲ್ಲರೂ ಮತಪ್ರಚಾರಕ ಗ್ರಂಥವನ್ನು ಬರೆದುದು

ಕಂಡುಬರುತ್ತದೆ. ಇವೆಲ್ಲ ಸುಂದರವಾದ, ಲಲಿತವಾದ, ಪ್ರೌಢವಾದ ಕಾವ್ಯಗಳು. ಈ ಪುರಾಣಗಳನ್ನೆಲ್ಲ ಮತಪ್ರಚಾರಕ್ಕಾಗಿ, ಸ್ವಧರ್ಮಸ್ಫೂರ್ತಿಯಿಂದ, ಬರೆದ ಕಾವ್ಯಗಳೆಂದು ಒಪ್ಪದೆ ಗತ್ಯಂತರವಿಲ್ಲ.

ಏನೋ ಕೆಲ ಜೈನ ಗ್ರಂಥಕಾರರು, ಮತಾಭಿಮಾನದಿಂದ ಬರೆದಿರಬಹುದು, ಎಂದು ಶಂಕಿಸಬಹುದು. ಆದರೆ ಅವರ ಮುಂದಿನ ಸಾಹಿತ್ಯಕಾರರೂ ಕೂಡ ಇದೇ ಹಾದಿಯನ್ನು ಹಿಡಿದುದು ಕಂಡುಬರುತ್ತದೆ. **ಶ್ರೀ ಬಸವೇಶ್ವರ** ಮೊದಲಾದ ವಚನಕಾರರು ರಚಿಸಿದ, ವಚನದ ರಾಶಿಯೆಲ್ಲವೂ ವೀರಶೈವ ಮತಪ್ರಚಾರವನ್ನೇ ಸೂಚಿಸುತ್ತದೆ. ಆ ಕಾಲಕ್ಕೆ ಹೊರಟ ಮಹಾಕಾವ್ಯಗಳು ಕೂಡ, ಇದೇ ಕಾರ್ಯವನ್ನು ನೆರವೇರಿಸಲು ಹೊರಟವೆ. ಇದಕ್ಕೂ ಮುಂದೆ ಹೆಜ್ಜೆಯನ್ನಿಟ್ಟರೆ ವೈಷ್ಣವ **ದಾಸಕೂಟ** ಸಾಹಿತ್ಯವು ಎದುರಿಗೆ ಬರುತ್ತದೆ. ಅದು ಕೂಡ ಮತಪ್ರಚಾರವಲ್ಲವೇ ? ಈ ಕಾಲದ ಮಹಾಕಾವ್ಯಗಳಾದ ಭಾರತ – ರಾಮಾಯಣಗಳೂ ಒಂದು ಬಗೆಯಿಂದ ವೈದಿಕಮತದ ಪ್ರಚಾರವನ್ನು ಕೈಕೊಂಡಿಲ್ಲವೇ ? ಇವರು ಕವಿಗಳಲ್ಲ, ಸಾಹಿತಿಗಳಲ್ಲ, ಕೇವಲ ಮತಪ್ರಚಾರಕ್ಕಾಗಿಯೇ ಬರೆದಿರುವರು ಎಂದು, ನಮ್ಮ ಅಭಿಪ್ರಾಯವಲ್ಲ. ಈ ಎಲ್ಲ ಸಾಹಿತ್ಯಕ್ಕೆ ಸ್ಫೂರ್ತಿ–ಪ್ರಚೋದನಾಶಕ್ತಿ – **ಧರ್ಮ** ಹಾಗು ಮತಪ್ರಚಾರವೆಂಬುದೇ ಮುಖ್ಯ ವಿಷಯ.

ಇಷ್ಟೇ ಏಕೆ? ಕರ್ನಾಟಕ ಸಂಸ್ಕೃತಿಯೇ ಧರ್ಮದ ಬುನಾದಿಯ ಮೇಲೆ ನಿಂತಿದೆ. ಮಾನವನ ಮನಸ್ಸು ಮೂಡುವುದು ಸಾಹಿತ್ಯ, ಚಿತ್ರ ಶಿಲ್ಪ, ಮತ್ತು ವಾಸ್ತುಶಿಲ್ಪಗಳಲ್ಲಿ. ಈಗ ಪ್ರಾಚೀನ ಸಂಸ್ಕೃತಿಯನ್ನು ತೋರಿಸುವ ಶಿಲ್ಪಕಲೆ, ವಾಸ್ತುಶಿಲ್ಪಗಳಲ್ಲಿ ಏನು ಕಂಡಬರುವದು ? ಬಸದಿ, ದೇವಾಲಯುಗಳು ಏನನ್ನು ಸೂಚಿಸುತ್ತವೆ ? ಇವೆಲ್ಲಕ್ಕೂ **ಧರ್ಮ–ಮತ ಪ್ರಚಾರಗಳೇ ಕಾರಣವಲ್ಲವೇ ?**

ಯಾವ ನಿಟ್ಟಿನಿಂದ ನೋಡಿದರೂ ಆ ಕಾಲದಲ್ಲಿ ಧರ್ಮ–ಮತ ಪ್ರಚಾರಗಳೇ ಪ್ರಚೋದಕ ಶಕ್ತಿಗಳೆಂದು ಕಂಡುಬರುತ್ತದೆ.

ಇದಕ್ಕೆ ಕಾರಣವೂ ಇಲ್ಲದಿಲ್ಲ. ನಮ್ಮ ದೇಶದಲ್ಲಿ ರಾಜ್ಯಕ್ರಾಂತಿಗಳು ಜನತೆಯ ಮೇಲೆ ಅಷ್ಟೊಂದು ಪರಿಣಾಮವನ್ನುಂಟುಮಾಡಿಲ್ಲ, ಆದರೆ

ರಾಜ್ಯಕ್ರಾಂತಿಗಳ ಪರಿಣಾಮಗಳಿಂದ ಸಾಹಿತ್ಯಕ್ಷೇತ್ರವು ಕದಡಿಲ್ಲ. ಆದರೆ ಇದು ಧರ್ಮಕ್ರಾಂತಿಯ ವೀರಭೂಮಿ. ಜೈನ, ವೀರಶೈವ, ಶಂಕರ, ರಾಮಾನುಜ, ಮಧ್ವರಿಂದ ಮತಗಳ ಕ್ರಾಂತಿಗಳು ಎಡೆಬಿಡದೆ ನಡೆದುವು. ಧರ್ಮಕ್ರಾಂತಿಗೆ ಸಾಮಾನ್ಯ ಜನತೆಯ ಮನಸ್ಸೇ ಸಾಧನ. ಆದುದರಿಂದ ಈ ಧರ್ಮಕ್ರಾಂತಿಗಳ ಪರಿಣಾಮವು ಸಾಹಿತ್ಯದ ಮೇಲೆ ಆಗುವುದು ಸ್ವಾಭಾವಿಕ.

ಸಾಹಿತ್ಯದಲ್ಲಿ – ಕಾವ್ಯದಲ್ಲಿ ಜನಮನ ಕರಗಿಸುವಂತಹ ಮಾಯಾ ಶಕ್ತಿಯಿದೆ. ಎಲ್ಲ ಕಲೆಗಳಲ್ಲಿಯೂ ಕಂಡುಬರುವ ಸಾಮಾನ್ಯ ಗುಣವಿದು. ಒಂದು ಧರ್ಮದ ಮತಪ್ರಚಾರದ ಕಾರ್ಯವನ್ನು ಸಕ್ಕರೆಯ ಸವಿಯಿಂದ ಸಹಜವಾಗಿ ಮಾಡಲು ಕಾರ್ಯವು ಉತ್ತಮವಾದ ಸಾಧನ. ಆದುದರಿಂದಲೇ ಮತಪ್ರಚಾರಕ್ಕೆ ಸಾಹಿತ್ಯವು ಬಳಸಲ್ಪಟ್ಟಿರುವುದು.

ಇದೊಂದು ಮತಪ್ರಚಾರಕ್ಕೆ ಸಾಧನವಾದ ಮೇಲೆ, ಜನರ ಬಳಕೆಯ ಭಾಷೆಯಲ್ಲಿ, ನಡಾವಳಿಗಳಲ್ಲಿ ಬೆರೆತು, ಅವರಿಗೆ ತಿಳಿಯುವ ಬಗೆಯಲ್ಲಿ ಹೇಳುವುದು ಕ್ರಮಪ್ರಾಪ್ತವಾಯಿತು. ಈ ಮಾತನ್ನು ನಾವು ಚನ್ನಾಗಿ ಅರಿತರೆ ನಮ್ಮ ಸಾಹಿತ್ಯದ ಬದಲಾವಣೆಗಳು ಬಹು ಬೇಗನೆ ನಮ್ಮ ಮನಸ್ಸನ್ನು ಹಿಡಿಯುವವು.

ತನ್ನತನವನ್ನು ಕಾಯ್ದುಕೊಳ್ಳುವ ಶಕ್ತಿ

ನಮ್ಮ ಸಾಹಿತ್ಯದಲ್ಲಿ ಇನ್ನೊಂದು ಬಗೆಯ ಶಕ್ತಿಯು ಮಸಮಸ ಕಾಗಿ ಕಾಣುವುದು. ಅದೇ **ಪ್ರತಿಭಟನಾಶಕ್ತಿ** ಅಥವಾ **ತನ್ನತನ**ವನ್ನು ಕಾಯ್ದುಕೊಳ್ಳುವ ಶಕ್ತಿ. ಸಾಹಿತ್ಯದ ಪುಟವನ್ನು ತಿರುವಲು ಪ್ರಾರಂಭಿಸಿ ದೊಡನೆಯೆ, ಸಂಸ್ಕೃತವನ್ನು ಎಷ್ಟರಮಟ್ಟಿಗೆ ಬೆರೆಯಿಸಬೇಕೆಂಬ ಬಗೆ **ನೃಪತುಂಗ**ನು ವಿಚಾರಮಾಡಿ ಕೆಲವು ಕಟ್ಟಳೆಗಳನ್ನು ಹೇಳುತ್ತಾನೆ. ಸಂಸ್ಕೃತಮಯವಾದ ಕಾವ್ಯರಚನೆಯನ್ನು ೧೧ನೆಯ ಶತಮಾನದಲ್ಲಿ **ದುರ್ಗಸಿಂಹ**ನೂ, ೧೨ನೆಯ ಶತಮಾನದಲ್ಲಿ "ಪೊಸಗನ್ನಡದಿಂ ವ್ಯಾವರ್ಣಿಸುವೆಂ ಸತ್ಕೃತಿಯನೆಂದು ಕನ್ನಡಂ ಚಿಂತಿಸಿ ಕೂಡಲಾಱಿ-ದಕ್ಕಟ ವಿಸುಕದ ಸಕ್ಕದಮನಿಕ್ಕುವವನುಂ ಕವಿಯೇ" ಎನ್ನುವ ಮಟ್ಟಿಗೆ

ನಯಸೇನನೂ ಪ್ರತಿಭಟಿಸಿದ್ದಾನೆ. ೧೩ನೆಯ ಶತಮಾನದಲ್ಲಿಯಂತೂ **ಆಂಡಯ್ಯನು** ತಾನು ಸಂಸ್ಕೃತವನ್ನು ಬೆರೆಯಿಸದೆ, ಅಚ್ಚಗನ್ನಡದಿಂದ ಕಾವ್ಯವನ್ನು ಬರೆಯುವೆನೆಂದು ಪಣತೊಟ್ಟು 'ಕಬ್ಬಿಗರಕಾವ' ಎಂಬ ಗ್ರಂಥವನ್ನು ಬರೆದು, ಇದು 'ದೇಸಿಯ ಗೊತ್ತು', 'ಜಾಣ್ಣುಡಿಯ ತವರ್ಮನೆ' ಎಂದು ಹೇಳಿ, "**ಕನ್ನಡದೊಳ್ಪಿನ ನುಡಿಯುಂ ಮುನ್ನಿದರೊಳೆ ನೋಡಿ ತಿಳಿದುಕೊಳ್ವುದು ಚದುರಂ**" ಎಂದು ವಿದ್ವಾಂಸರಿಗೆ ಆಹ್ವಾನಿಸಿದ್ದಾನೆ. ಹೀಗೆ **ಕನ್ನಡತನವನ್ನು** ಕಾಯ್ದುಕೊಳ್ಳಲೂ, ಅನ್ಯ ಭಾಷೆಗೆ ಕನ್ನಡದ ಮುದ್ರೆಯನ್ನೊತ್ತಿ '**ಕನ್ನಡಿಸಿಕೊಳ್ಳಲು**' ಹೋರಾಡಿದ ಈ ಸಂಗತಿಯು ಏನನ್ನು ತೋರಿಸುತ್ತದೆ?

ಇನ್ನೊಂದು ಮಾತು. ಸಂಸ್ಕೃತ ವಿದ್ವಾಂಸರಾದ ಜೈನಪಂಡಿತರಿಂದ ಪಾಂಡಿತ್ಯಪ್ರದರ್ಶನಕ್ಕಾಗಿ ಸಂಸ್ಕೃತದ ಧಾಟಿಯಲ್ಲಿ ನಡೆದ ಸಾಹಿತ್ಯವನ್ನು ತಿರುಗಿಸಿ, **ಕನ್ನಡದ ಹಾಡುಗಬ್ಬಕ್ಕೆ** ಹಚ್ಚಿದ ಪ್ರಯತ್ನವಂತೂ ಅತ್ಯಂತ ಆಶ್ಚರ್ಯಕರವಾಗಿದೆ. ಅಕ್ಷರದಿಂದ ಸಾಹಿತ್ಯವು ಒಮ್ಮೆಲೆ ಮಾತ್ರಾವೃತ್ತಕ್ಕೆ ತಿರುಗಿ, ರಗಳೆ ಷಟ್ಪದಿ ರೂಪಕ್ಕೆ ಬಂದುದು ಅತ್ಯಂತ ವಿಚಾರಣೀಯ ಸಂಗತಿಯಾಗಿದೆ.

ಇಂತಿವೆಲ್ಲ ಮಾತುಗಳಿರುವ **ಅಂತಃಶಕ್ತಿಯು ತನ್ನತನವನ್ನು** ಕಾಯ್ದುಕೊಳ್ಳುವುದೇ, ಎಂದು ನಮಗನಿಸುತ್ತದೆ. ವಿದ್ವಾಂಸರು ಈ ದೃಷ್ಟಿಯಿಂದ ಸಾಹಿತ್ಯವನ್ನು ನೋಡಬೇಕು.


ನಮ್ಮ ಸಾಹಿತ್ಯದ ಅಂಗಗಳು

ಇಲ್ಲಿಯ ವರೆಗೆ ನಮ್ಮ ಸಾಹಿತ್ಯದ **ಅಂತಃಶಕ್ತಿಯ** ಬಗ್ಗೆ ವಿಚಾರ ಮಾಡಿದ್ದಾಯಿತು. ಈ ಶಕ್ತಿಯು ಯಾವ ಯಾವ ರೂಪದಿಂದ ಹೊರ-ಹೊಮ್ಮಿದೆ ಎಂಬುದನ್ನು ನೋಡೋಣ.

ಕನ್ನಡ ಸಾಹಿತ್ಯವಾಹಿನಿಯ ಕಡೆಗೆ, ನಮ್ಮ ದೃಷ್ಟಿಯನ್ನು ಚಲ್ಲಿದರೆ, ಆಶ್ಚರ್ಯ ಆನಂದಗಳು ಒಮ್ಮೆಲೆ ಮನಸ್ಸಿನಲ್ಲಿ ಉಂಟಾಗುತ್ತವೆ. ಕಾವ್ಯ, ನಾಟಕ, ಅಲಂಕಾರ, ಶಾಸ್ತ್ರ ಇವೇ ಮೊದಲಾದ ವಿವಿಧ ರೂಪಗಳು ಕಣ್ಣೆದುರಿಗೆ ನಿಲ್ಲುತ್ತವೆ. ಕಾವ್ಯವೊಂದನ್ನೇ ನೋಡಲು ಹೋದರೂ

ಕೂಡ ಅವಕ್ಕೆ ಒಡೆದ ಅನೇಕ ಶಾಖೋಪಶಾಖೆಗಳು ದಿಗ್ಭ್ರಮೆಯನ್ನುಂಟು ಮಾಡುತ್ತವೆ. ಆದರೂ ನಮ್ಮ ಸಾಹಿತ್ಯದ ಅಂಗಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸಬಹುದು.

(೧) ಕಾವ್ಯಗಳು, (೨) ವಚನಗಳು, (೩) ಕೀರ್ತನೆಗಳು, (೪) ನಾಟಕಗಳು, (೫) ಶಾಸ್ತ್ರಗಳು. ಕಾವ್ಯಗಳಲ್ಲಿ, (ಅ) ಚಂಪೂ ಕಾವ್ಯ, (ಬ) ರಗಳೆಗಳು, (ಕ) ಷಟ್ಪದಿಗಳು, (ಡ) ಸಾಂಗತ್ಯ, ಗದ್ಯ. ಚಂಪುಕಾವ್ಯಗಳಲ್ಲಿ ಎರಡು ಪ್ರಕಾರಗಳು ಕಾಣುತ್ತವೆ. ಪುರಾಣ ಮತ್ತು ಲೌಕಿಕ; ಇದರಂತೆಯೇ ಪ್ರತಿಯೊಂದರಲ್ಲಿಯೂ ಶಾಖೋಪಶಾಖೆಗಳು ಕಾಣುತ್ತವೆ. ಒಟ್ಟಿನಲ್ಲಿ ನಮ್ಮ ಸಾಹಿತ್ಯವಾಹಿನಿಯ ಶಾಖೆಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.



ಇದರಂತೆ ಪ್ರತಿಯೊಂದು ಕಾವ್ಯ.

ಹೀಗೆ ನಮ್ಮ ಸಾಹಿತ್ಯವಾಹಿನಿಯು ವಿರಾಟರೂಪವನ್ನು ತಾಳಿದೆ.

ಇನ್ನು ಈ ಅಂಗಗಳ ಲಕ್ಷಣಗಳನ್ನೂ ಅವುಗಳ ರೂಪವನ್ನೂ ಪರೀಕ್ಷಿಸಿದರೆ, ನಾವು ನಮ್ಮ ಸಾಹಿತ್ಯದ ರೂಪ ಲಕ್ಷಣಗಳನ್ನು ತಿಳಿದು ಕೊಂಡಂತಾಯಿತು.

೪. ಕಾವ್ಯಗಳು

ಚಂಪೂಕಾವ್ಯ

ಕನ್ನಡ ಸಾಹಿತ್ಯ ಸಾಮ್ರಾಜ್ಯವನ್ನು ಚಂಪೂಕಾವ್ಯಗಳು ಅಖಂಡವಾಗಿ ಸುಮಾರು ೩೦೦ ವರ್ಷಗಳ ವರೆಗೆ ಆಳಿದುದು ಕಂಡುಬರುತ್ತದೆ. ಕನ್ನಡ ಸಾಹಿತ್ಯ ಸಾಮ್ರಾಟರಾದ **ಪಂಪ, ಪೊನ್ನ, ರನ್ನರೇ ಈ ಯುಗದ ಸೀಮಾಪುರುಷರು.** ಇದು ಮಹಾಕಾವ್ಯಗಳ ಸುಗ್ಗಿಯ ಕಾಲ. ಅಸಾಧಾರಣವಾದ ನಯನುಣ್ಪುಗಳಿಂದಲೂ, ಭಾಷೆಯ ಬಿಗುವಿನಿಂದಲೂ, ಅಲಂಕಾರಗಳಿಂದಲೂ, ಸಂಸ್ಕೃತದ ಬಿಂಕದಿಂದಲೂ, ಪದಲಾಲಿತ್ಯದಿಂದಲೂ, ಭಾಷೆಯ ಪ್ರೌಢಿಮೆಯಿಂದಲೂ ಕಾವ್ಯ ವಾಹಿನಿಯು ಗಂಭೀರವಾಗಿ ಆಳವಾಗಿ ಹರಿಯುವುದನ್ನು ನಾವು ಇಲ್ಲಿ ನೋಡುತ್ತೇವೆ.

ಪಂಪನೇ ಈ ಯುಗದ **ಆದ್ಯಪ್ರವರ್ತಕ.** ಇವನು ಲೌಕಿಕವನ್ನು ಬೆಳಗಿಸುವುದಕ್ಕಾಗಿ ಭಾರತವನ್ನೂ ಧರ್ಮವನ್ನರುಹುವುದಕ್ಕಾಗಿ ಆದಿ ಪುರಾಣವನ್ನು ರಚಿಸಿ ಮಾರ್ಗದರ್ಶಿಯಾದನು. ಇವನು ಬರೆದುದು ಚಂಪೂಗ್ರಂಥ ಮಹಾಕಾವ್ಯ. ಇವನ ದಾರಿಯೇ ಹೆದ್ದಾರಿಯಾಯಿತು. ಈ ಯುಗದ ಕವಿಗಳೆಲ್ಲರೂ ಇವನ ಮಾರ್ಗವನ್ನೇ ಅನುಕರಣ ಮಾಡಿದರು. ಪಂಪನ ಚಂಪೂ ಶೈಲಿಯಲ್ಲಿಯೇ ಪೊನ್ನ, ರನ್ನ, ಜನ್ನ, ನೇಮಿಚಂದ್ರ ಮೊದಲಾದವರೂ ಮಹಾ ಕಾವ್ಯಗಳನ್ನು ಬರೆಯಲು ಮೊದಲು ಮಾಡಿದರು. ಪ್ರತಿಯೊಬ್ಬರೂ ಒಂದು ಲೌಕಿಕ ಕಾವ್ಯವನ್ನು ಬರೆಯಲು ಪ್ರಾರಂಭಿಸಿದರು. ಈ ಅನುಕರಣವು ಇಷ್ಟಕ್ಕೇ ನಿಲ್ಲಲಿಲ್ಲ. ರನ್ನನು ಕಥಾವಸ್ತುವನ್ನೂ ಕೂಡ ಪಂಪನಂತೆ ಭಾರತದಲ್ಲಿಯ ಒಂದು ಸನ್ನಿವೇಶವನ್ನು ಆಯ್ದುಕೊಂಡನು. ಇಷ್ಟೇ ಅಲ್ಲದೆ ನಿರೂಪಣೆಯಲ್ಲಿ ಕೂಡ ಕೊಂಚ ಮಟ್ಟಿಗೆ ಅನುಕರಣೆಯು ಕಂಡುಬರುತ್ತದೆ. ಆದರೆ ರನ್ನನು ಉದ್ದಾಮ ಕವಿಯು; ಕವಿ ಚಕ್ರವರ್ತಿಯು. ಪಂಪನನ್ನು ಗುರುವನ್ನಾಗಿ ತಿಳಿದುಕೊಂಡ ರನ್ನನಲ್ಲಿ ಅವನ ಛಾಯೆಯು ಅಕಲ್ಪಿತವಾಗಿ ಮೂಡಿದರೆ ಅದು ದೋಷವಲ್ಲ. ರನ್ನನು ದುರ್ಯೋಧನನಂತಹ, ಪಾತ್ರದಲ್ಲಿ ಹರಿಸಿದ ಕರುಣಾರಸದ ಒಂದು ಭಾಗ

ವನ್ನು ಓದಿದರೆ ಸಾಕು. ಅವನ ಪ್ರತಿಭೆಯ ಬಗ್ಗೆ ಪೂರ್ಣ ವಿಶ್ವಾಸ ವಾಗುವಂತಿದೆ.

ಅಂತೂ ಈ ಯುಗದ ಯಾವುದೇ ಪ್ರಸಿದ್ಧ ಕವಿಯನ್ನು ತೆಗೆದು ಕೊಂಡರೂ ಶೈಲಿ, ವಸ್ತು, ರೀತಿ, ಅಲಂಕಾರಗಳಲ್ಲಿ ಅನುಸರಿಸಿದುದೇ ಕಂಡು ಬರುತ್ತದೆ. ಪ್ರತಿಯೊಬ್ಬರೂ ಮತ ಪ್ರಚಾರಕ್ಕಾಗಿ ಗ್ರಂಥ ಬರೆದುದು ಕಂಡು ಬರುತ್ತದೆ.

ಹಾಗಾದರೆ ಇವರೆಲ್ಲರೂ ಉದ್ದಾಮ ಕವಿಗಳು ಹೇಗೆ? ಚಾಚೂ ಬಿಡ ದಂತೆ ಅನುಸರಿಸುವದು ನಿಜವಾಗಿಯೂ ಕವಿಯ ಲಕ್ಷಣವೇ? ಎಂಬ ಪ್ರಶ್ನೆಯು ಸಹಜವಾಗಿ ತಲೆ ಎತ್ತುವದು. ಈ ಪ್ರಶ್ನೆಯನ್ನು ಬಿಡಿಸಬೇಕಾದರೆ ಆ ಕಾಲದ ಯುಗಧರ್ಮವನ್ನು ನಾವು ನೋಡಬೇಕು.

ಅನುಕರಣವೆಂದು ತೋರುವ ಈ ಪರಂಪರೆಯು ಸಂಸ್ಕೃತ ಮಹಾ ಕಾವ್ಯಗಳಲ್ಲಿಯೂ ಕಂಡು ಬರುತ್ತದೆ. ಅಶ್ವಘೋಷ, ಕಾಲಿದಾಸರ ವರ್ಣನೆ ಗಳಲ್ಲಿಯೂ ಅನೇಕ ಮಹಾ ಕಾವ್ಯಗಳಲ್ಲಿಯೂ ಈ ಪರಂಪರೆಯುಂಟು ಹಾಗಾದರೆ ಇದರ ಉತ್ತರವು ಆ ಕಾಲದ ಯುಗಧರ್ಮದಲ್ಲಿ.

೯–೧೦ನೇ ಶತಮಾನಗಳು ದಂಡಿಯೇ ಮೊದಲಾದ ಉದ್ದಾಮ ಸಂಸ್ಕೃತ ಕವಿಗಳ ಪ್ರಭಾವದ ಕಾಲ. ಸಂಸ್ಕೃತದ ಸಾಹಿತ್ಯವು ಎಲ್ಲೆ ಲ್ಲಿಯೂ ಮಿಗಿಲಾಗಿ ತನ್ನ ಪ್ರಭಾವವನ್ನು ಭಾರತದಲ್ಲೆಲ್ಲ ಬೀರಿತ್ತು. ಎಲ್ಲೆಲ್ಲಿಯೂ ಅದಕ್ಕೆ ಮನ್ನಣೆ. ಅದರ ಮಾರ್ಗವೇ ಆದರ್ಶ. ಇಂತಹ ಕಾಲದಲ್ಲಿಯೇ ನಮ್ಮ ಹಳಗನ್ನಡ ಪ್ರೌಢ ಗ್ರಂಥಗಳ ಜನ್ಮ. ಪಂಡಿತರು, ಕವಿಗಳು, ಸಂಸ್ಕೃತದ ಧಾಟಿಯನ್ನೇ ಆದರ್ಶವಾಗಿಟ್ಟುಕೊಳ್ಳದೇ ಗತ್ಯಂ ತರವಿರದಷ್ಟು ಅದರ ಪ್ರಾಬಲ್ಯ. ಲಾಕ್ಷಣಿಕರು ಕಾವ್ಯದಲ್ಲಿ ರಸ, ಧ್ವನಿ ಮುಂತಾದ ಯಾವ ಅಂಶಕ್ಕೇ ಪ್ರಾಧಾನ್ಯ ಕೊಡಲಿ, ನೃಪತುಂಗನ ಕಾಲಕ್ಕೆ ಹಿಂದೆಯೇ ಸಂಸ್ಕೃತ ಕವಿಗಳು ಚಮತ್ಕಾರಪ್ರಿಯರಾಗಿ ಬಾಣನ ಕಾವ್ಯಗಳಿಗೆ ಅಗ್ರಸ್ಥಾನವನ್ನು ಕೊಟ್ಟು 'ಬಾಣೋಚ್ಛಿಷ್ಟಂ ಜಗತ್ ಸರ್ವಂ' ಎಂದು ಹೇಳುತ್ತಿದ್ದರು. ಕನ್ನಡಿಗರೂ ಇವರ ಮಾರ್ಗವನ್ನು ಅನುಸರಿಸಿ— **ಪಂಡಿತರಂಜಕವಾದ** ಘನವಾದ **ಚಂಪೂಕಾವ್ಯಗಳನು** ಬರೆದರು. ಆ ಕಾಲದಲ್ಲಿ ಕಾವ್ಯದ ಲಕ್ಷಣಗಳು ನಿರ್ಧರಿಸಲ್ಪಟ್ಟಿದ್ದವು.

ಆ ಲಕ್ಷಣಗಳಿಲ್ಲದ ಕಾವ್ಯವೆಂಬರೆ ಕಾವ್ಯವೇ ಅಲ್ಲವೆನ್ನುವವರೆಗೆ, ಜನಾಭಿಪ್ರಾಯವು ಬೆಳೆದಿತ್ತು.

ಪದ್ಯಕಾವ್ಯಗಳಲ್ಲಿ ಪ್ರಸಿದ್ಧವಾದದ್ದು **ಮಹಾಕಾವ್ಯ.** ಅದರಲ್ಲಿ ಆಶ್ವಾಸ, ಸಂಧಿ ಮೊದಲಾದ ವಿಭಾಗಗಳಿರುತ್ತವೆ. ಮೊದಲಲ್ಲಿ ಆಶೀರ್ವಾದ, ನಮಸ್ಕಾರ ಅಥವಾ ವಸ್ತುನಿರ್ದೇಶವಿರುತ್ತದೆ. ಅದರ ವಸ್ತುವು (ಕಥಾಭಾಗವು) ಪುರಾಣೇತಿಹಾಸದಿಂದಾಗಲೀ ಮತ್ತಾವುದಾದರೂ ಪ್ರಸಿದ್ಧವಾದ ಗ್ರಂಥಗಳಿಂದಾಗಲೀ ತೆಗೆದುಕೊಂಡದ್ದು. ಚತುರ್ವಿಧ ಪುರುಷಾರ್ಥಪ್ರಾಪ್ತಿಯನ್ನುಂಟುಮಾಡುವ ಉದ್ದೇಶವುಳ್ಳದ್ದು. ಪಟ್ಟಣ, ಸಮುದ್ರ, ಪರ್ವತ, ಋತು, ಚಂದ್ರೋದಯ, ಸೂರ್ಯೋದಯ, ಉದ್ಯಾನ, ಜಲಕ್ರೀಡೆ, ಮಧುಪಾನ, ಸಂಭೋಗ–ವಿಪ್ರಲಂಭ–ಶೃಂಗಾರ, ವಿವಾಹ, ಪುತ್ರೋತ್ಪತ್ತಿ, ಮಂತ್ರಾಲೋಚನೆ, ದ್ಯೂತ, ಪಯಣ, ಯುದ್ಧ, ನಾಯಕನ ಜಯಪ್ರಾಪ್ತಿ, ಈ ಹದಿನೆಂಟು ವಿಷಯಗಳ ವರ್ಣನೆಗಳಿಂದ ಕೂಡಿದ್ದು. ವಸ್ತುವಿವರಣವು ಕೇವಲ ಸಂಕ್ಷೇಪವಾಗಿರದೆಯೂ ಆಶ್ವಾಸಾದಿ ವಿಭಾಗಗಳು ಕೇವಲ ವಿಸ್ತಾರವಾದವುಗಳಲ್ಲದೆಯೂ ಇರತಕ್ಕದ್ದು.* ಶ್ರಾವ್ಯವಾದ ವೃತ್ತಗಳಿಂದಲೂ ಒಳ್ಳೆಯ ಸಂಧಿಗಳಿಂದಲೂ ಆಶ್ವಾಸಾಂತ್ಯದಲ್ಲಿ ಬೇರೆ ವೃತ್ತವುಳ್ಳದ್ದೂ, ಒಂದು ಸರ್ಗದ ಕೊನೆಯಲ್ಲಿ ಮುಂದಿನ ಸರ್ಗದ ಸೂಚನೆಯುಳ್ಳದ್ದೂ, ಅಲಂಕಾರಗಳಿಂದ ಯುಕ್ತವಾದದ್ದೂ ಇರಬೇಕು. ಹಾಗೆಯೇ ಸಂಕೇತವಾಗಿ ಉಳಿದ ಅಸದಾಖ್ಯಾತಿ, ಸದಕೀರ್ತನೆ, ನಿಯಮಾರ್ಥ, ಐಕ್ಯ ಮೊದಲಾದ ಕವಿಸಮಯದ ವಿಭಾಗಗಳೂ ಕವಿಸಂಪ್ರದಾಯದ ವಿವಿಧ ಲಕ್ಷಣಗಳೂ ಇರಬೇಕು. ಈ ಲಕ್ಷಣಗಳು ಸಂಸ್ಕೃತ ಕಾವ್ಯಗಳಲ್ಲಿಯೂ ಕಂಡುಬರುವವು. ಹಗಲು ಕಮಲಗಳೇ ಅರಳುತ್ತವೆಂಬುದೂ ರಾತ್ರಿ

---

* ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವ ಗ್ರಂಥದಲ್ಲಿ ಈ ರೀತಿಯಾಗಿ ಹೇಳಿದ್ದಾನೆ.

ವಾರಿಧಿ ಪರ್ವತಂ ಪುರವುಧೀಶ್ವರನುದ್ವಹನಂ ಕುಮಾರನಂ ।
ಭೋರುಹ ವೈರಿ ಮಿತ್ರರುದಯಂ ಋತುನಂದನಮುಂಬು ಸೀಧುಕಾಂ ॥
ತಾರತಿ ಚಿಂತೆ ಮಂತ್ರಚರಯಾನ ವಿರೋಧಿ ಜಯಂಗಳೆಂಬಿವಂ ।
ಸೂರಿಗಳಂಗವೆಂಡು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ॥ ೧ ॥

ಸೂಕ್ತಿಸುಧಾರ್ಣವ

ಕುಮುದಗಳು ಅರಳುತ್ತವೆಂಬುದೂ 'ಲೋಕವಿಖ್ಯಾತ ವಿಷಯವಲ್ಲ.' ಆದರೆ ಕೇವಲ ರೂಢಿವಶದಿಂದ ಮೆರೆಯುವ ಪರಂಪರಾಗೀತ. ಚಾತಕವು ಮಳೆಯ ನೀರಿಗಾಗಿ ಕಾದುನಿಲ್ಲುವುದೂ, ಚಕೋರವು ಬೆಳ್ದಿಂಗಳನ್ನು ಕುಡಿಯುವದೂ ಜಗತ್ತಿನ ಅನುಭವಕ್ಕೆ ಬಾರದ ವಿಷಯ. ಬರಿ ಕಲ್ಪನೆಯ ಸೊಗಸಿಗಾಗಿ ಸಂಪ್ರದಾಯವಶವಾದುದಾಗಿವೆ.

ಮಹಾಕಾವ್ಯಗಳನ್ನು ಬರೆಯುವವನು ಈ ಎಲ್ಲ ಸಾಂಪ್ರದಾಯಗಳನ್ನು ಅನುಸರಿಸಲೇಬೇಕು. ಇಲ್ಲವಾದರೆ ಅದು **ಮಹಾಕಾವ್ಯವಾಗಲಾರದು.**

ಮೇಲಿನ ಮಾತು ಸ್ಪಷ್ಟವಾದರೆ, ನಮ್ಮ ಚಂಪೂ ಕಾವ್ಯಗಳಲ್ಲಿ ಕಾಣುವ ಅನುಕರಣಕ್ಕೆ ಅರ್ಥವಾಗುವುದು. ಮಹಾಕಾವ್ಯವನ್ನು ಬರೆಯಲು ಹೊರಟ ಪ್ರತಿಯೊಬ್ಬನೂ ಮೇಲಿನ ಲಕ್ಷಣಗಳನ್ನು ಅನುಸರಿಸಿ ಬರೆಯಬೇಕಾಗಿದ್ದುದರಿಂದ ಎಲ್ಲರ ಕಾವ್ಯಗಳಲ್ಲಿಯೂ ಒಂದು ಬಗೆಯ ಧಾಟಿಯು ಕಾಣುವುದು ಸಾಭಾವಿಕವು. ಅದು ಅನುಕರಣವಲ್ಲ. **ಸಾಂಪ್ರದಾಯಪರಿಪಾಲನೆ.**

ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವರಾಗಿಯೂ ಸಂಸ್ಕೃತದ ರಾಮಾಯಣ, ಭಾರತ, ಭಾಗವತ, ಮಹಾಕಾವ್ಯ, ನಾಟಕಗಳಿಗೆ ಮರುಳಾಗಿ ಸಂಸ್ಕೃತದಂತೆ ಕನ್ನಡದಲ್ಲಿಯೂ **ಮಹಾಕಾವ್ಯ**ಗಳನ್ನು ಬರೆಯಬೇಕೆಂಬ ಉದ್ದೇಶದಿಂದ ಕನ್ನಡಕ್ಕೆ ಸಂಸ್ಕೃತವನ್ನು ಬೆರೆಯಿಸಿ, ಸಂಸ್ಕೃತ ಛಂದಸ್ಸಿಗೆ ಕನ್ನಡವು ಸರಿಹೋಗುವಂತೆ ಹದಮಾಡಿ, ಸಂಸ್ಕೃತ ಛಂದಸ್ಸನ್ನೇ ತಮ್ಮ ಕಾವ್ಯಗಳಲ್ಲಿ ಮುಖ್ಯವಾಗಿ ಉಪಯೋಗಿಸಿ, ಕಾವ್ಯಗಳನ್ನು ಬರೆಯಲುಪಕ್ರಮಿಸಿದರು. ಕನ್ನಡಕ್ಕೆ ಆದಿಕವಿಯಾದ ಪಂಪನ ಆದಿಪುರಾಣ, ವಿಕ್ರಮಾರ್ಜುನವಿಜಯಗಳಲ್ಲಿಯೂ, ಸಂಸ್ಕೃತ ಛಂದಸ್ಸಿಗೇ ಪ್ರಾಧ್ಯಾನ್ಯತೆ ಇದೆ, ಕನ್ನಡಕ್ಕಲ್ಲ. ಚಂಪೂ ಗ್ರಂಥಕರ್ತರೆಲ್ಲರೂ ಇದೇ ಪದ್ಧತಿಯನ್ನನುಸರಿಸಿದ್ದಾರೆ. ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ ಮತ್ತು ಕಂದಗಳೇ ಈ ಕಾವ್ಯಗಳಲ್ಲಿ ಉಪಯೋಗಿಸಲ್ಪಟ್ಟಿವೆ.

ಇವು ಸಂಸ್ಕೃತ ವೃತ್ತಗಳಾದರೂ ಇವುಗಳಿಗೆ ಕನ್ನಡದ **ಪ್ರಾಸ ಬಂಧದ** ಮುದ್ರೆಯನ್ನೊತ್ತಿ ಕನ್ನಡಕ್ಕೆ ಒಗ್ಗುವಂತೆ ಬಣ್ಣ ಕೊಡಬೇಕಾಯಿತು.

ಗದ್ಯ ಪದ್ಯಗಳೆರಡೂ ಇರತಕ್ಕ ಮಿಶ್ರಕಾವ್ಯವೇ **ಚಂಪೂ**ವೆನಿಸುವದು. ಕಥೆಯ ಪ್ರವಾಹವನ್ನು ಮುಂದೋಡಿಸುವದಕ್ಕಾಗಲೀ ಒಂದು ಸನ್ನಿವೇಶವನ್ನು ವರ್ಣಿಸುವದಕ್ಕಾಗಲೀ ವಚನಗಳನ್ನು ಉಪಯೋಗಿಸುವದುಂಟು. ಈ ವಚನಗಳಲ್ಲಿ ಸಣ್ಣಪುಟ್ಟ ವಾಕ್ಯಗಳಿರದೆ ಅನೇಕ ಸಮಾಸಪದಗಳಿಂದ ಕೂಡಿದ ಉದ್ದುದ್ದ ವಾಕ್ಯಗಳಿರುತ್ತವೆ. ಒಮ್ಮೊಮ್ಮೆ ಇಡಿ ವರ್ಣನೆಯೇ ಒಂದೇ ವಾಕ್ಯದ್ದಿರುತ್ತದೆ. ಅಲ್ಲದೆ ಕೆಲವು ವರ್ಣನೆಗಳನ್ನು **ರಗಳೆ**ಗಳಲ್ಲಿ ರಚಿಸಿದುದು ಕಂಡುಬರುತ್ತದೆ. ವೀರಶೃಂಗಾರ ಶಾಂತರಸಗಳಲ್ಲಿ ಯಾವದಾದರೊಂದು ರಸವು ಪ್ರಧಾನವಾಗಿರಬೇಕು. ಸಂಸ್ಕೃತ ಮಿಶ್ರಣವೇ ಹೆಚ್ಚು.

ಈ ಚಂಪೂಕಾವ್ಯಗಳಲ್ಲಿ ಇಬ್ಬಗೆಯ ಗ್ರಂಥಗಳು ಕಾಣುತ್ತವೆ. ಮತಪ್ರಚಾರಕ ಪುರಾಣಗಳು ಮತ್ತು ಲೌಕಿಕ ಕಾವ್ಯಗಳು. ಎರಡೂ ಪ್ರೌಢವಾದ, ಗಂಭೀರವಾದ ಕಾವ್ಯಗಳೇ. ಅವುಗಳ ಉದ್ದೇಶಗಳು ಮಾತ್ರ ಭಿನ್ನವಾಗಿವೆ.

ಪುರಾಣಗಳು :— ಮತಪ್ರಚಾರಕ್ಕಾಗಿ ಬರೆದ ಗ್ರಂಥಗಳಿವು. ಇವುಗಳಲ್ಲಿ ಜೈನ ಹಾಗು ಶೈವ ಪುರಾಣಗಳು ಕಂಡು ಬರುತ್ತವೆ.

ಜೈನ ಪುರಾಣಗಳಲ್ಲಿ ಜಿನಮಹಾತ್ಮೆಯೂ ಜೈನಮತ ಪ್ರಕ್ರಿಯೆಗಳೂ ಆಚಾರವಿಚಾರಗಳೂ ವರ್ಣಿತವಾಗಿವೆ. ಈ ಪುರಾಣಗಳಿಗೂ ಕಟ್ಟುಕಟ್ಟಳೆಗಳುಂಟು. ತೀರ್ಥಂಕರರು ಹಿಂದಣ ಜನ್ಮಗಳಲ್ಲಿ ತಪಶ್ಚರ್ಯೆಗೈಯುತ್ತ, ಮುಕ್ತರಾಗುತ್ತ, ಈ ಜನ್ಮದಲ್ಲಿ ಹೇಗೆ ತೀರ್ಥಂಕರರಾದರೆಂಬ ವರ್ಣನೆಗಳೂ, ಪ್ರತಿಯೊಬ್ಬ ತೀರ್ಥಂಕರರ ಪಂಚಮಹಾಕಲ್ಯಾಣಗಳ ವರ್ಣನೆಗಳೂ, ಕಂಡು ಬರುತ್ತವೆ. ಈ ಪುರಾಣದ ಕಥೆಗಳೆಲ್ಲ ಸ್ವಲ್ಪ ಹೆಚ್ಚುಕಡಿಮೆ, ಒಂದೇ ರೀತಿಯಾಗಿವೆ. ಇಲ್ಲಿ ಕವಿಗಳಿಗೆ ಹೆಚ್ಚು ಸ್ವಾತಂತ್ರ್ಯವಿಲ್ಲ. ವರ್ಣನೆಗಳಲ್ಲಿ ಮಾತ್ರ ಕವಿಗಳ ಯೋಗ್ಯತೆಯನ್ನು

ಕಾಣಬಹುದು. ತೀರ್ಥಂಕರನ ಹೆಸರು, ಬಣ್ಣ, ನಿಲುವುಗಳಲ್ಲಿ ಬದಲಾವಣೆಗಳನ್ನೂ ನೋಡಬಹುದು. ಆದರೆ ಕಥಾಸರಣಿಯಲ್ಲಿಲ್ಲ. ಆದುದರಿಂದ ಯಾವುದೊಂದು ಪುರಾಣವನ್ನು ಓದಿ ತಿಳಿದುಕೊಂಡರೆ, ಉಳಿದೆಲ್ಲವುಗಳ ಸ್ವರೂಪವನ್ನು ಸುಲಭವಾಗಿ ಊಹಿಸಬಹುದು.

ಪಂಪನು **ಆದಿ ಪುರಾಣದಲ್ಲಿ** ಪ್ರಥಮ ತೀರ್ಥಂಕರನಾದ **ವೃಷಭನನ್ನು** ವರ್ಣಿಸಿದ್ದಾನೆ. ಈ ಕಥೆಯನ್ನು ತನ್ನ ವರ್ಣನಾವೈಖರಿಯಿಂದ, ಅಪೂರ್ವವಾದ ಪದಪ್ರಯೋಗದಿಂದ, ಬಹುರಸವತ್ತಾಗಿ ಹೇಳಿದ್ದಾನೆ. ಆದುದರಿಂದಲೇ ಮುಂದಿನ ಜೈನ ಕವಿಗಳೆಲ್ಲ 'ಜಿನಸಮಯದೀಪಕ' ನೆಂದು ಪಂಪನನ್ನು ಕರೆದಿದ್ದಾರೆ. ರನ್ನನು ಎರಡನೇ ತೀರ್ಥಂಕರನ ಚರಿತ್ರೆಯನ್ನು **'ಅಜಿತನಾಥಪುರಾಣ'** ವೆಂದು ಬರೆದಿದ್ದಾನೆ. ಕವಿಯ ಕವಿತಾ ಚಾತುರ್ಯವನ್ನು ಇಲ್ಲಿ ಕಾಣಬಹುದು. ನಾಗಚಂದ್ರನ **ಮಲ್ಲಿನಾಥಪುರಾಣ,** ನೇಮಿಚಂದ್ರನ **ಅರ್ಧನೇಮಿ ಪುರಾಣ,** ಜನ್ನನ **ಅನಂತನಾಥಪುರಾಣ,** ನಯಸೇನನ **ಧರ್ಮಾಮೃತ** ಮೊದಲಾದವುಗಳು ಪ್ರಸಿದ್ಧವಾಗಿವೆ.

ಜೈನರು ಬರೆದಂತೆಯೇ, ವೀರಶೈವರೂ ಮತಪ್ರಚಾರಕ್ಕಾಗಿಯೇ ಬರೆದುದು ಕಂಡುಬರುತ್ತದೆ. ಇವುಗಳಲ್ಲಿ ಶಿವಭಕ್ತಿ, ಶಿವಶರಣರ ಚರಿತ್ರೆಗಳು ವರ್ಣಿಸಲ್ಪಟ್ಟಿವೆ. ಹರಿಹರನ **ಗಿರಿಜಾಕಲ್ಯಾಣವೂ** ಸುರಂಗ ಕವಿಯ **ತ್ರಿಷಷ್ಠಿ ಪುರಾತನರ ಚರಿತ್ರೆ,** ವೀರಭದ್ರನ **ವೀರಭದ್ರವಿಜಯ,** ಷಡಕ್ಷರಿಯ **ಶಬರಶಂಕರ ವಿಲಾಸ,** ಮತ್ತು **ವೃಷಭೇಂದ್ರ ವಿಜಯಗಳು** ಪ್ರಸಿದ್ಧವಾದುವು. ಇವುಗಳಲ್ಲಿ ಪುರಾತನರ ಲೀಲೆಗಳೂ ವೀರಶೈವ ಮತದ ಮಹಾತ್ಮ್ಯವೂ ವರ್ಣಿಸಲ್ಪಟ್ಟಿವೆ.

ಈ ಕಾಲದ ಒಂದು ಪ್ರಧಾನ ಲಕ್ಷಣವೆಂದರೆ, **ಅನ್ಯಮತ ಸಹನೆ.** ೯–೧೧ನೇ ಶತಮಾನಗಳಲ್ಲಿ ರಚಿತವಾದ ಯಾವ ಪುರಾಣಗಳಲ್ಲಿಯೂ, ಅನ್ಯಮತ–ದೂಷಣೆಯು ಕಾಣುವದಿಲ್ಲ. ಆದರೆ ೧೨ನೇ ಶತಮಾನದಲ್ಲಿ, ಪರಮತ–ಸಹಿಷ್ಣುತೆಯು ಕಡಿಮೆಯಾಗಿ, ಅನ್ಯಮತ–ದೂಷಣೆಗೆ, **ಧರ್ಮಾಮೃತದಿಂದಲೇ** ಪ್ರಾರಂಭವಾಗುತ್ತದೆ. **ಧರ್ಮಪರೀಕ್ಷೆಯನ್ನು** ಬರೆದ ಬ್ರಹ್ಮಶಿವನೂ, **ಸಮಯ ಪರೀಕ್ಷೆಯನ್ನು** ಬರೆದ ವೃತ್ತಿವಿಲಾಸನೂ ಪರ

ಧರ್ಮವನ್ನು ಅಪಹಾಸ್ಯಮಾಡುವದನ್ನೇ ಇಟ್ಟುಕೊಂಡಂತೆ ಕಂಡುಬರುತ್ತದೆ. ಇಂತಿದು ಪುರಾಣಗಳ ವಿಷಯು.

ಲೌಕಿಕಕಾವ್ಯಗಳು: ಕವಿಗಳ ವಿಹಾರಭೂಮಿ. ಮತದ ಕಟ್ಟಿನಿಂದ ದೂರವಾದ ಕವಿಗಳು, ಮುಕ್ತಗಗನದಲ್ಲಿ ವಿಹಗಗಳು ವಿಹರಿಸುವಂತೆ, ತಮ್ಮ ಕಲಾನೈಪುಣ್ಯವನ್ನೆಲ್ಲ ಮನಮೆಚ್ಚುವಂತೆ ತೋರಿಸಿದ್ದಾರೆ. ಈ ಚಂಪೂ ಕಾವ್ಯಗಳು ಕನ್ನಡ ಸಾಹಿತ್ಯಕ್ಕೇ ಕೀರ್ತಿಪ್ರಾಯವಾಗಿವೆ.

ಮಹಾಕಾವ್ಯಗಳನ್ನು ಬರೆಯಲು ಹೊರಟ ಇವರು ತಮ್ಮ ಕಥಾವಸ್ತುಗಳನ್ನು ರಾಮಾಯಣ, ಮಹಾಭಾರತ, ಆಗಮಗಳಿಂದ ಎತ್ತಿದ್ದಾರೆ. ಆದರೆ ಜೈನಕವಿಗಳಿಗೆ ಅವುಗಳಲ್ಲಿಯ ವೈದಿಕ ಪರಂಪರೆಗಳೂ, ದೇವತೆಗಳೂ, ಮಾನ್ಯವಿದ್ದಂತೆ ತೋರುವದಿಲ್ಲ. ಪಂಪನು ಸಹ ತನ್ನ ಭಾರತದ ಕಥಾಸಂಧಾನದಲ್ಲಿ ಎಷ್ಟೋ ವ್ಯತ್ಯಾಸಗಳನ್ನು ಮಾಡಿದ್ದಾನೆ.

ಮಹಾಭಾರತದಲ್ಲಿ ಶ್ರೀಕೃಷ್ಣನು ಸೂತ್ರಧಾರ. ಪಂಪಭಾರತದಲ್ಲಿ ಕೃಷ್ಣನಿಗೆ ಹೆಚ್ಚು ಪ್ರಾಧಾನ್ಯವಿಲ್ಲ. ಅವನು ಅಪ್ರತಿಮ ಬುದ್ಧಿಶಾಲಿಯಾದ ಪಾಂಡವರ ಪರಮಮಿತ್ರ. ಪಾಂಚಾಲಿಯು ಸಕಲ ಪಾಂಡವರ ಪತ್ನಿಯಲ್ಲ. ಒಬ್ಬನ ಹೆಂಡತಿ. ಅರ್ಜುನನೇ ಮುಖ್ಯ ನಾಯಕ. ಪಂಪನು ಪ್ರಧಾನ ನಾಯಕರನ್ನು ವರ್ಣಿಸುವಾಗ ಕೃಷ್ಣನನ್ನು ಹೇಗೆ ಹಿಂದಕ್ಕೆ ಸರಿಸುವನೆಂಬುದು ಕೆಳಗಿನ ಪದ್ಯದಿಂದ ತಿಳಿಯುವಂತಿದೆ.

> ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ।
> ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ।
> ಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ।
> ರ್ಮಲ ಚಿತ್ತಂ ಧರ್ಮಪುತ್ರಂ, ಮಿಗಿಲವರ್ಗಳಿನೀಭಾರತಂ ಲೋಕ ಪೂಜ್ಯಂ ॥

ಮದ್ರೇಶನ ಹೆಸರು ಹೇಳುವ ಪಂಪನಿಗೆ, ಕೃಷ್ಣನ ಹೆಸರು ಹೇಳಲು ಸಾಲದೆ ಹೋಗಿದೆ. ಹಾಗಲ್ಲ. ಕೃಷ್ಣನು ಅವತಾರಿಕ ಪುರುಷನೂ ಪರಮಾತ್ಮನೂ ಎಂಬ ವೈದಿಕ ಮತತತ್ವವನ್ನು ಹೇಳುವದು ಬೇಡಾಗಿ ಜಾಣ್ಮೆಯಿಂದ ಕೃಷ್ಣನನ್ನು ಕಣ್ಮರೆಮಾಡಿದ್ದಾನೆ.

ಇದೇ ರೀತಿ, ಪಂಪರಾಮಾಯಣದಲ್ಲಿ, ವೈದಿಕ ಸಂಪ್ರದಾಯಗಳಾದ ಪುತ್ರಕಾಮೇಷ್ಟಿಯಜ್ಞದ, ವಿಶ್ವಾಮಿತ್ರ, ವಶಿಷ್ಠ ಮೊದಲಾದ ವೈದಿಕ ಧರ್ಮದ ಋಷಿಗಳ ಪ್ರಸ್ತಾಪವೇ ರಾಮಾಯಣದಲ್ಲಿ ಕಾಣುವದಿಲ್ಲ. ಇದರಲ್ಲಿ ದಶರಥ ನಿಗೆ ನಾಲ್ವರು ಪತ್ನಿಯರು. ರಾಮನು ರಾವಣನನ್ನು ಕೊಲ್ಲುವದಿಲ್ಲ, ಲಕ್ಷ್ಮಣನು. ಅವನೇ ಮುಖ್ಯ ಪಾತ್ರ.

ಹೀಗೆ ಜೈನ ಕವಿಗಳು, ರಾಮಾಯಣ ಮಹಾಭಾರತಗಳನ್ನು, ತಮ್ಮ ಮತಕ್ಕೆ ಅನುಕೂಲವಾಗುವಂತೆ, ಅವುಗಳಿಗೆ ರೂಪಗೊಟ್ಟು ಬಣ್ಣಿಸಿದ್ದಾರೆ. ಇದಲ್ಲದೆ ಕವಿಗಳು, ತಮಗೆ ಆಶ್ರಯದಾತರಾದ ಅರಸರನ್ನು, ಅರ್ಜುನ-ನನ್ನೂ, ಭೀಮನನ್ನೂ ಮಾಡಿಕೊಂಡು, ಕಾವ್ಯಗಳನ್ನು ರಚಿಸಿದ್ದಾರೆ. ಪಂಪನು ತನ್ನೊಡೆಯನಾದ ಅರಿಕೇಸರಿಯನ್ನೂ, ರನ್ನನು ನೂರ್ಮಡಿ ತೈಲಪ ನನ್ನೂ ತಮ್ಮ ತಮ್ಮ ಕಥಾನಾಯಕರನ್ನು ಮಾಡಿಕೊಂಡ ಸಂಗತಿಯು ಪ್ರಸಿದ್ಧವೇ ಇದೆ.

ಪಂಪನ **ವಿಕ್ರಮಾರ್ಜುನವಿಜಯು** (೯೪೧), ನಾಗವರ್ಮನ **ಕರ್ನಾಟಕ ಕಾದಂಬರಿ** (೯೯೦), ರನ್ನನ **ಗದಾಯುದ್ಧ** (೯೯೩), ನೇಮಿಚಂದ್ರನ **ಲೀಲಾವತಿ** (೧೧೭೦). ಜನ್ನನ **ಯಶೋಧರ ಚರಿತ್ರೆ** (೧೨೦೯). ಅಂಡಯ್ಯನ **ಕಬ್ಬಿಗರಕಾವ** (೧೨೩೫), ಹರಿಹರನ **ಗಿರಿಜಾಕಲ್ಯಾಣ** (೧೧೩೫), ಚಂದ್ರಕವಿಯ **ವಿರೂಪಾಕ್ಷಸ್ಥಾನ** (೧೪೩೦), ಪ್ರಭುಗನ **ಚೂಡಾರತ್ನ** (೧೩೨೦), ಷಡಕ್ಷರಿಯ **ರಾಜಶೇಖರವಿಳಾಸ** (೧೬೫೫), ಚಂದ್ರರಾಜನ **ಮದನತಿಲಕ** (೧೦೨೯), ದುರ್ಗಸಿಂಹನ **ಪಂಚತಂತ್ರ** (೧೧೪೫), ರುದ್ರಭಟ್ಟನ **ಜಗನ್ನಾಥ ವಿಜಯು** (೧೧೮೦), ದೇವಕವಿಯ **ಕುಸುಮಾವಳಿ** (೧೨೦೦), ಚೌಂಡರಸನ **ಅಭಿನವ ದಶಕುಮಾರ ಚರಿತ್ರ** (೧೩೦೦), ಕವಿಮಲ್ಲನ **ಮನ್ಮಥವಿಜಯು,** ವೆಂಕಟ ಕವಿಯ **ವೆಂಕಟೇಶ ಪ್ರಬಂಧ** (೧೬೫೦), ತಿರುಮಲಾರ್ಯರ **ಚಿಕ್ಕದೇವರಾಜ ವಿಜಯು,** ಚಿಕುಪಾಧ್ಯಾಯರ **ಕಮಲಾಚಲ ಮಹಾತ್ಮೆ** ಇತ್ಯಾದಿ ಚಂಪೂಗ್ರಂಥಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ಎಲ್ಲ ಕಾವ್ಯಗಳು ಪ್ರೌಢವಾದ ಉದ್ಗ್ರಂಥಗಳು. ರಸ, ಅಲಂಕಾರ, ಕವಿಸಮಯ, ಚಮತ್ಕೃತಿ, ಭಾಷೆಯ ಕಟ್ಟು, ಗಂಭೀರತೆಗಳಲ್ಲಿ ತುಂಗಿಳಾಗಿವೆ.

ಸಂಪ್ರದಾಯ ಪರಿಪಾಲನೆಯಿದ್ದರೂ ಕವಿಗಳ ಕಾವ್ಯಕುಶಲತೆಯೂ, ವೈಶಿಷ್ಟ್ಯವೂ ಅವರ ವರ್ಣನಾಶೈಲಿಯಲ್ಲಿ ಪ್ರತಿಬಿಂಬಿತವಾಗಿವೆ.

ಮೂಡಗಾಳಿಯ ವರ್ಣನೆ

ಅಣಿಯರವಾಡಿ ಮೂಡಗಡಲೋಳ್ ತೆರೆಮಾಲೆಯನೆತ್ತಿ ದೇವವಾ ।
ರಣಕರ ಶೀಕರೋತ್ಕರಮನಾಂತು ಶಚೀರಮಣಾಭಿಷೇಕವಾ: ॥
ಕಣ ನಿಕುರುಂಬಮಂ ತಳೆದು ಬಂದೆಸಗಿತ್ತತಿ ಶೈತ್ಯಕಾರಣಂ ।
ಪ್ರಣಯವಿಮುಕ್ತವಲ್ಲಭ ವಿದಾರಣವಿಂದ್ರದಿಶಾಸಮೀರಣಂ ॥

—ಜಗನ್ನಾಥ ವಿಜಯ

ಸುರಕರಿ ಕರ ಮುಕ್ತಾಂಭಃಕಣಂ ಮಂಜಿದೆಂಬಂ ।
ತಿರೆ ತಳೆದು ಶಿಖಾವದ್ಗರ್ವಮಂನುರ್ಗಿ ನೀಲಾಂ ।
ಬುರುಹ ಸುರಭಿಯೊಂದುತ್ತೈದಿದಂ ಮಾಗೆ ಬರ್ಪಂ ।
ತಿರೆ ಧೃತ ಘನಕಾರಾಮೋದಸಾರಂ ಸಮೀರಂ ॥

—ರಾಜಶೇಖರ ವಿಲಾಸ

ಮೇಲಿನ ಎರಡೂ ಪದ್ಯಗಳು ಒಂದೇ ವೃತ್ತ ಒಂದೇ ವಸ್ತುಗಳ ವರ್ಣನೆಗಳಿದ್ದರೂ ಅವರಲ್ಲಿರುವ ಭಾವನೆಯಲ್ಲಿ ರಚನಾ ಚಾತುರಿಯಲ್ಲಿ ಅವರವರ ವ್ಯಕ್ತಿತ್ವವು ತೋರುವದು.

ರಗಳೆಗಳು

ನಾಟಕದಲ್ಲಿ ಪರದೆಯನ್ನು ಎತ್ತಿದೊಡನೆ, ಒಂದು ದೃಶ್ಯವು ಹೋಗಿ ಹೊಸದೊಂದು ದೃಶ್ಯವೇ ಕಣ್ಣಿಗೆ ಬೀಳುವಂತೆ, ೧೨ ನೇ ಶತಮಾನದ ಪ್ರಾರಂಭಕ್ಕೆ ನಮ್ಮ ಸಾಹಿತ್ಯದಲ್ಲಿ ಒಮ್ಮೆಲೆ **ರಗಳೆಗಳು** ಕಣ್ಣಿಗೆ ಬೀಳುತ್ತವೆ. **ಚಂಪೂಕಾವ್ಯಗಳು** ಮಾಯವಾಗುತ್ತವೆ. ಸಂಸ್ಕೃತ ಛಂದಸ್ಸು ಕಾಣದಾಗುತ್ತದೆ. ಸಾಹಿತ್ಯವು ಹೊಸ ಧಾಟಿಯಲ್ಲಿ ನಡೆದುದು ಕಂಡುಬರುತ್ತದೆ. ಒಮ್ಮೆಲೆ ಈ ಬದಲಾವಣೆಗಳಾಗಲು ಕಾರಣಗಳಿವೆಯೇ ಎಂಬುದು ಸಹಜವಾಗಿ ತಲೆ ಎತ್ತುತ್ತದೆ.

೧೨ ನೇ ಶತಮಾನವು, **ಕನ್ನಡ ಸಾಹಿತ್ಯದ ಸ್ವಾತಂತ್ರ್ಯದ ಯುಗವು.** ಅವೈದಿಕವಾದ ಜೈನಮತದ ವಿರುದ್ಧವಾಗಿಯೂ, ಮಡಿವಂತ ದೃಷ್ಟಿಯುಳ್ಳ ವೈದಿಕ ಸನಾತನಿಗಳ ವಿರುದ್ಧವಾಗಿಯೂ, ಬಂಡೆಬ್ಬಿಸಿದ

ಕಾಲ. ಶ್ರೀ ಬಸವೇಶ್ವರರು, **ಧಾರ್ಮಿಕ ಕ್ಷೇತ್ರದಲ್ಲಿ** ಕ್ರಾಂತಿಯನ್ನುಂಟು ಮಾಡಿದರು. ಧಾರ್ಮಿಕ, ಸಾಮಾಜಿಕ ಸಂಪ್ರದಾಯಗಳಿಂದ ಜನತೆಯನ್ನು ಬಿಡುಗಡೆ ಮಾಡಿದರು. ವೈದಿಕ ಧರ್ಮದ ಮುಕ್ತಿಮಾರ್ಗವನ್ನು ಸರ್ವಮಾನವರಿಗೆ ತೆರೆದುಬಿಟ್ಟರು. ಇದರಿಂದ ಎಲ್ಲ ಕ್ಷೇತ್ರಗಳಲ್ಲಿಯೂ ದಿವ್ಯಶಕ್ತಿಯ ಸಂಚಾರವಾಯಿತು. ಸಾಮಾಜಿಕ ಹಾಗು ಧಾರ್ಮಿಕ ದಬ್ಬಾಳಿಕೆಯಿಂದ ಒತ್ತಲ್ಪಟ್ಟ ಆತ್ಮಶಕ್ತಿಯು ಹೊರಹೊಮ್ಮಿತು. ಕನ್ನಡ ಜನಾಂಗದಲ್ಲೆಲ್ಲ ಹೊಸಶಕ್ತಿಯು ಬೆಳಗಹತ್ತಿತು. ವೀರ ಜೀವನವು ಉದಯವಾಯಿತು. **ಧರ್ಮ ಹಾಗು ಸಾಮಾಜಿಕ ಸ್ವಾತಂತ್ರ್ಯವೇ** ಈ ಕ್ರಾಂತಿಯ ಘೋಷ. ಜನಸಾಮಾನ್ಯವೇ ಈ ಕ್ರಾಂತಿಯ ಸಾಧನ. ಹೀಗಾಗಿ ಜನತೆಯಲ್ಲೆಲ್ಲ ಅಲ್ಲೋಲಕಲ್ಲೋಲವಾಗಿ ಎಲ್ಲಿ ನೋಡಿದಲ್ಲಿ ಪ್ರತಿಭಟನೆಯೂ, ನವಸೃಷ್ಟಿಯ ನಿರ್ಮಾಣವೂ ಕಣ್ಣಿಗೆ ಬೀಳಹತ್ತಿತು. ಈ ಜಾಗೃತಿಯ—ಕ್ರಾಂತಿಯ, ಪರಿಣಾಮವು ಕನ್ನಡ ಸಾಹಿತ್ಯದ ಮೇಲೆ ಆಗದೆ ಹೇಗೆ ಉಳಿಯುವದು ?

ಕನ್ನಡ ಯುಗ

೧೬ನೇ ಶತಮಾನದಲ್ಲಿ, ಕನ್ನಡ ಸಾಹಿತ್ಯವಾಹಿನಿಯು, ತನ್ನ ಪಾತ್ರವನ್ನು ಬದಲಿಸಿ, ಬೇರೊಂದು ನಿಟ್ಟಿಗೆ, ಹೊಸದೊಂದು ಓಟದಲ್ಲಿ, ಹೊಸ ಹೊಳಪಿನಿಂದ, ಹರಿಯುವದನ್ನು ನೋಡುತ್ತೇವೆ.

ಇದುವರೆಗಿನ ಸಾಹಿತ್ಯದ ದೃಷ್ಟಿಯೆಲ್ಲ ಸಂಸ್ಕೃತದ ಕಡೆಗೆ. ಸಂಸ್ಕೃತ ಸಾಹಿತ್ಯದ ಸಂಗ್ರಹ, ಇಲ್ಲವೆ ಅನುಕರಣಗಳಲ್ಲಿಯೇ ನಮ್ಮ ಕವಿಗಳಿಗೆ ಆತ್ಮತೃಪ್ತಿ. ಹಿರಿಯರ ದಾರಿಯೇ ಅವರಿಗೆ ಹೆದ್ದಾರಿ. ಅವರ ಛಂದಸ್ಸೇ ಇವರ ಛಂದಸ್ಸು. ಹೀಗೆ ನಮ್ಮ ಕವಿಗಳು ಸಂಸ್ಕೃತ ಸಾಹಿತ್ಯಕ್ಕೆ ಮುಗ್ಧರಾಗಿ **ತಮ್ಮತನವನ್ನು** ಕಳೆದುಕೊಂಡುಬಿಟ್ಟಿದ್ದರು. ಮುನ್ನಿನ ಕಬ್ಬಮನೆಲ್ಲ ಮಿಕ್ಕಿ ಮೆಟ್ಟಬೇಕೆಂಬ ಹಂಬಲದಲ್ಲಿ ಒಬ್ಬರಿಗಿಂತ ಒಬ್ಬರು ತಮ್ಮ ಕಾವ್ಯದಲ್ಲಿ ಸಂಸ್ಕೃತದ ಮೆರಗನ್ನು ತರಲು ಯತ್ನಿಸಿ, ಸಂಸ್ಕೃತ ಪಂಡಿತರಿಂದ ಹೌದೆನಿಸಿಕೊಳ್ಳುವ ಹೌಸಿನಲ್ಲಿ ಸಂಸ್ಕೃತ-ಮಯವಾದ, ಪ್ರೌಢವಾದ ಚಂಪೂ ಕಾವ್ಯಗಳನ್ನು ಬರೆಯುವದರಲ್ಲಿ ಮಗ್ನರಾಗಿದ್ದರು. ಇವು **ಕನ್ನಡ ಕಾವ್ಯಗಳೇ** ಎಂದು ಸಂಶಯ ಬರುವಷ್ಟು

ನಮ್ಮ ಸಾಹಿತ್ಯವು ಸಂಸ್ಕೃತಮಯವಾಯಿತು. ತಾವು ಯಾರು ? ತಮ್ಮ ಸಂಸ್ಕೃತಿ ಯಾವುದು ? ಯಾರ ಸಲುವಾಗಿ ಬರೆಯುತ್ತಲಿದ್ದೇವೆ ? ಎಂಬ ಅರಿವು ಕೂಡ ಉಳಿಯಲಿಲ್ಲ. ಸಂಪೂರ್ಣ ಸಂಸ್ಕೃತದಲ್ಲಿ ನಾಲ್ಕೂ ಚರಣಗಳನ್ನು ಬರೆದು ಕೊನೆಗೆ ಕನ್ನಡ ವಿಭಕ್ತಿಯೊಂದನ್ನು ಸೇರಿಸಿದ ಅನೇಕ ಪದ್ಯಗಳು ರುದ್ರಭಟ್ಟ, ಷಡಕ್ಷರಿ ಮೊದಲಾದವರ ಕಾವ್ಯಗಳಲ್ಲಿ ದೊರೆಯುತ್ತವೆ. ಸಂಪ್ರದಾಯಬದ್ಧವಾಗಿ, ವೈವಿಧ್ಯವಿಲ್ಲದೆ, ಜನಸಾಮಾನ್ಯರಿಗೆ ತಿಳಿಯದ ಸಂಸ್ಕೃತದ ಧಾಟಿಯು ಚಂಪೂ ಕಾವ್ಯಗಳ ರೂಪದಿಂದ ಕನ್ನಡ ಸಾಹಿತ್ಯ ವಾಹಿನಿಯು ಅಖಂಡವಾಗಿ ಎರಡು ನೂರು ವರ್ಷಗಳವರೆಗೆ ಹರಿಯುತ್ತ ಬಂದಿದ್ದಿತು.

ಇದೇ ಸಮಯಕ್ಕೆ **ಕನ್ನಡದ ಅರುಣೋದಯ**ವಾಯಿತು. ಸಂಸ್ಕೃತ ಛಾಯೆಗೆ ಇಳಿಗಾಲವು ಪ್ರಾರಂಭವಾಯಿತು ೧೧ ನೇ ಶತಮಾನದಲ್ಲಿ **ದುರ್ಗಸಿಂಹನು** ಸಂಸ್ಕೃತದ ಈ ಬೆರಕೆಯನ್ನು ವಿರೋಧಿಸಿದನು. **ನಯಸೇನನು** ಅದಕ್ಕಿಂತ ಒಂದು ಹೆಜ್ಜೆಯನ್ನು ಮುಂದಿಟ್ಟು ಇವರು ಕವಿಗಳೇ ಅಲ್ಲವೆಂದನು.:

ಸಕ್ಕದಮಂ ಪೇಳ್ವೊಡೆ ನೆರೆ ।
ಸಕ್ಕದಮಂ ಪೇಳ್ಗೆ ಶುದ್ಧ ಕನ್ನಡದೊಳ್ ತಂ ।–
ದಿಕ್ಕುವುದೇ ಸಕ್ಕದಂಗಳ ।
ತಕ್ಕುದೇ ಬೆರಸಲ್ಕೆ ಘೃತಮುಮಂ ತೈಲಮುಮಂ ॥

—ನಯಸೇನ

ಪೊಸಗನ್ನಡದಿಂ ವ್ಯಾವ ।
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ ।
ತಿಸಿ ಕೂಡಲಾರದಕ್ಕಟ ।
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೆ ॥

—ನಯಸೇನ

ಈ ರೀತಿಯಾಗಿ ಸಂಸ್ಕೃತದ ವಿರೋಧಕ್ಕೇನೋ ಪ್ರಾರಂಭವಾಯಿತು. ಆದರೆ ಮುಂದಿನ ದಾರಿ ಯಾವುದು ? ಸಂಸ್ಕೃತವನ್ನು ಸರಿಯಿಸಿ, ಯಾವ ಧಾಟಿಯಲ್ಲಿ ನಡೆಯಬೇಕು, ಎಂಬ ವಿಚಾರವು–

ಆ ಸಂತೋಷವು, ಮೆಲ್ಲನೆ ಬೆಳೆದು ೧೨ ನೇ ಶತಮಾನದ ಮಧ್ಯದಲ್ಲಿ, ಸಾಹಿತ್ಯ ಸಾಮ್ರಾಜ್ಯದಲ್ಲಿ ಕ್ರಾಂತಿಯ ರೂಪವನ್ನು ತಾಳಿತು.

ಸಾಹಿತ್ಯಕ್ಕೆ ಕನ್ನಡದ ಮುದ್ರೆ

ಬಸವಣ್ಣನವರು ಧರ್ಮಕ್ರಾಂತಿಯನ್ನುಂಟುಮಾಡಿ '**ತನ್ನ ತಾನರಿದೊಡೆ ತನ್ನರಿವೇ ಗುರುವು**' ಎಂಬ ಮಂತ್ರೋಪದೇಶವನ್ನು ಮಾಡಿದ್ದರಿಂದ ಕನ್ನಡ ಜನಾಂಗವು ಜಾಗೃತವಾಯಿತು. ಅಂತರ್ಮುಖವಾಯಿತು. ಪಾರತಂತ್ರ್ಯದಿಂದ ಮುಕ್ತರಾಗಬೇಕೆಂಬ ದೃಷ್ಟಿಯು ಎಲ್ಲ ಕ್ಷೇತ್ರಗಳ ಮೇಲೆ ಬಿದ್ದಿತು. ಈ ಬೆಳಕಿನಲ್ಲಿ ಕನ್ನಡ ಸಾಹಿತಿಗಳಿಗೆ ನಿಜ ಸಾಹಿತ್ಯ ಸ್ವರೂಪದ ದರ್ಶನವಾಯಿತು. ಕಣ್ದೆರೆದರು. ಸಂಸ್ಕೃತದ ಮುದ್ರೆಯನ್ನೊತ್ತಿಸಿಕೊಂಡು ಪರತಂತ್ರವಾದ, ಕನ್ನಡವನ್ನು ಕಂಡು ಕಳವಳಗೊಂಡರು. ಸಂಸ್ಕೃತ ಭಾಷೆಯ ಪ್ರಭಾವವನ್ನೂ, ಅದರ ರೀತಿಗಳನ್ನೂ, ಪೂರ್ಣವಾಗಿ ಕಿತ್ತಿ ಬಿಸುಟು ಕನ್ನಡ ಸಾಹಿತ್ಯವನ್ನು ಕನ್ನಡೀಕರಿಸಿ, ಕನ್ನಡ ಧಾಟಿಯಲ್ಲಿಯೇ ನುಡಿಯಿಸಿ, ಅದನ್ನು ಸಮರ್ಥ ಭಾಷೆಯನ್ನಾಗಿ ಮಾಡಬೇಕೆಂಬ ಹೊಸ ಹುಮ್ಮಸದಿಂದ ಪ್ರೇರಿತರಾಗಿ, ಆ ಕಾಲದ ಸಾಹಿತಿಗಳು ಪಣತೊಟ್ಟುದುದು ಕಾಣುತ್ತದೆ.

ಕ್ರಾಂತಿಕಾರಕ ಬಸವಣ್ಣನವರೇ ಈ ಕಾರ್ಯಕ್ಕೆ ಮೊದಲು ಮಾಡಿದರು. ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹಾದಿಯನ್ನು ಹಾಕಿ ಕೊಟ್ಟರು. ಇವರ ಉದ್ದೇಶವು ಮತಪ್ರಚಾರವೇ ಹೊರತು, ಕಾವ್ಯರಚನೆಯಲ್ಲ. ಯಾವುದೇ ವಿಷಯವು, ಪ್ರಚಾರವಾಗಬೇಕಾದರೆ, ಅವರಿಗೆ ತಿಳಿಯುವ, ಸುಲಭ ಲಲಿತವಾದ ಭಾಷೆಯಲ್ಲಿಯೇ ಆಗಬೇಕೆಂಬ ಮಾತು ಬಸವಣ್ಣನವರಿಗೆ ಹೊಳೆಯಿತು. ಈ ದಿವ್ಯ ದೃಷ್ಟಿಯು ಕನ್ನಡ ಸಾಹಿತ್ಯದ ಪ್ರವಾಹವನ್ನೇ ಬದಲಿಸಿತು. ಸಾಹಿತ್ಯವು ಪಂಡಿತರ ರಂಜನೆಯನ್ನು ಬಿಟ್ಟು, ಜನತೆಯ ಸೇವೆಗೆ ಸಿದ್ಧವಾಯಿತು. ಸಾಮಾನ್ಯ ಜನತೆಗೆ, ಅರ್ಥವಾಗುವ ರೀತಿಯಲ್ಲಿ, ತನ್ನ ಧರ್ಮಬೋಧೆಯನ್ನೆಲ್ಲ **ವಚನ**ಗಳೆಂಬ ಸಾಹಿತ್ಯ ರೀತಿಯಲ್ಲಿ ರಚಿಸಿದರು. ಇವು ಸುಂದರವೂ ಮೋಹಕವೂ ಆಗಿವೆ. ಈ ವಚನ ಪದ್ಧತಿಯು **ಶುದ್ಧ ಕನ್ನಡ ಧಾಟಿ**. ಅನೇಕ ವಚನಗಳನ್ನು

ವೃತ್ತಗಂಧಿ*ಯಲ್ಲಿದ್ದುದರಿಂದ ಹಾಡುಗಳಂತೆ ಹಾಡಬಹುದು. ಈ ವಚನಗಳು ಕನ್ನಡದಲ್ಲಿ ಹೊಸ ಯುಗವನ್ನೇ ಪ್ರಾರಂಭ ಮಾಡಿದವು.

ಬಸವಣ್ಣನವರಿಂದ ಪ್ರಾರಂಭಿಸಲ್ಪಟ್ಟ, ನವಮತದ ಪ್ರಚಾರವು, ಜನತೆಯ ಬಳಿಕೆಯ ಭಾಷೆಯಲ್ಲಿ ಹರಿಯುವುದು ಸ್ವಾಭಾವಿಕ.

ಸಂಪ್ರದಾಯದ ಪರಿಪಾಲನೆ, ಭಾಷೆಯ ಕಟ್ಟು, ಸಂಸ್ಕೃತ ಛಂದಸ್ಸುಗಳು, ಜಾನಪದಕ್ಕೆ ಒಗ್ಗದಾದವು. ಮತಪ್ರಚಾರಕರ ದೃಷ್ಟಿಯಾದರೋ ಶಿವಭಕ್ತರ ಚರಿತ್ರೆಗಳನ್ನೂ ಶಿವಲೀಲೆಗಳನ್ನೂ ಮನಮೆಚ್ಚುವಂತೆ ವರ್ಣಿಸಿ ಜನತೆಯಲ್ಲೆಲ್ಲ, ಹಬ್ಬಿಸಬೇಕೆಂಬುದು. ಹಳೆಯ ಸಾಹಿತ್ಯದ ರೀತಿ–ನೀತಿಗಳು ಇದಕ್ಕೆ ಸುಲಭಾನುಕೂಲವೆನಿಸಲಿಲ್ಲ. ಕಟ್ಟು ಕಟ್ಟಳೆಗಳನ್ನು ಸಡಿಲಿಸಬೇಕೆ! ತಮಗೆಲ್ಲಿ ಕವಿಗಳು ಸಾಹಿತಿಗಳು ಅಲ್ಲವೆನ್ನುವರೋ ಎಂಬ ಬೆದರಿಕೆ. ಒಂದು ವೇಳೆ ಮುರಿದರೂ ಯಾವ ರೂಪ ಕೊಡಬೇಕೆಂಬುದೊಂದು ಪ್ರಶ್ನೆ. ಕಟ್ಟುಗಳನ್ನು ಸಡಿಲಿಸಿ, ರಸವತ್ತಾದ ಕಾವ್ಯಗಳನ್ನು ರಚಿಸಲು ಸಾಧ್ಯವಿಲ್ಲವೇ ಎಂಬ ಆತ್ಮವಿಶ್ವಾಸಿಗಳ ಕೂಗು. ಇವೇ ಮೊದಲಾದ ವಿಚಾರ ತರಂಗಗಳು, ಸಾಹಿತ್ಯಕ್ಷೇತ್ರವನ್ನೆಲ್ಲ ಕದಡಿದ್ದವು.

ಚಂಪೂಕಾರರು ಕೂಡ ವರ್ಣನೆಗಳ ಸಮಯದಲ್ಲಿ ಸಂಸ್ಕೃತ ಛಂದಸ್ಸನ್ನು ಬಿಟ್ಟು, ವಚನಗಳನ್ನೂ, ರಗಳೆಗಳನ್ನೂ ಉಪಯೋಗಿಸುತ್ತಿದ್ದರು. ಅವು ಜನಪದ ಸಾಹಿತ್ಯಕ್ಕೆ ಹೊಂದುತ್ತವೆಂದೆನಿಸಹತ್ತಿತು. ಇವುಗಳನ್ನೇ ಬಳಸಿ ಕಾವ್ಯಗಳನ್ನೇಕೆ ಬರೆಯಬಾರದೆಂಬ ಕಲ್ಪನೆಯು ಮೊಳೆದೋರಿತು. ಈ ನಿಟ್ಟಿನಲ್ಲಿ ವಿಚಾರ ಮಾಡಿದಂತೆ, ಅವರಿಗೆ ಜನ ಸಾಮಾನ್ಯರಲ್ಲಿ ಮನೆಮನೆಗೆ ಹರಡಿರುವ "ಒನಿಕೆವಾಡು" ಮುಂತಾದವುಗಳಲ್ಲಿ ತ್ರಿಪದಿ, ಚೌಪದಿ, ರಗಳೆ, ದಂಡಕಗಳು ಇವೆ ಎಂಬುದು ಕಂಡುಬಂದಿತು. ಮನೆ ಮನೆಗೆ ಹೋಗಿ ಮತಪ್ರಚಾರ ಮಾಡಬೇಕೆಂಬ ಅವರಿಗೆ ಇವೇ ಸರ್ವೋತ್ಕೃಷ್ಟ ಭಾವವಾಹಕವೆಂದೆನಿಸಹತ್ತಿತು. ಈ ಜನಪದ ಛಂದಸ್ಸಿಗೇ ರೂಪಗೊಟ್ಟು ಎಂದರೆ ದೇಶಿಗೆ ಮಾರ್ಗದ ಸಂಸ್ಕಾರಕೊಟ್ಟು, ಕಾವ್ಯಗಳನ್ನು ಬರೆಯಬೇಕು,

---

* ವೃತ್ತಗಂಧಿ:— ಗದ್ಯವು ಯಾವುದಾದರೊಂದು ಮಾತ್ರಗಣದ ಗತಿಯಲ್ಲಿ ನಡೆಯುತ್ತಿದ್ದರೆ ಅದಕ್ಕೆ ವೃತ್ತಗಂಧಿ ಎನ್ನುವರು.

ಸಂಪ್ರದಾಯದಲ್ಲಿ ಸಿಥಿಲವಾದರೂ ದೋಷವಲ್ಲ, ಕಾವ್ಯವು ರಸವತ್ತಾಗಿ ಆಕರ್ಷಕವಾದರೆ ತೀರಿತು ಎಂಬ ವಿಚಾರಗಳು ಉದಯವಾದವು. ಕನ್ನಡ ಸಾಹಿತ್ಯದ **ಓದುಗಬ್ಬವು** (ಚಂಪೂಕಾವ್ಯ) ಪಂಡಿತರಂಜನೆಯ ಸಾಹಿತ್ಯವೆಂದೂ, **ಹಾಡುಗಬ್ಬವೇ** ಜನತೆಗೆ ಯೋಗ್ಯವೆಂದೂ ಅದೂ ಸರ್ವೋತ್ಕೃಷ್ಟವಾದ ಸಾಹಿತ್ಯವೆಂದೂ, ಜನಮತವಾಗತೊಡಗಿತು. ಈ ಹೋರಾಟದ ಚಿತ್ರವನ್ನು ಕೆಳಗಿನ ಪದ್ಯಗಳಲ್ಲಿ ಕಾಣಬಹುದು.

ಕಬ್ಬಿಗರೋದುಗಬ್ಬವ ಹಾಡುಗಬ್ಬವ ಕಬ್ಬದೊಳೊರೆರ್ವರೆರಡು ।
ಕಬ್ಬಿಸಂತಿರಬೇಕು, ಬಿದಿರಂತೆ ಇರಲು ಏ ಕಬ್ಬ ಹೇಳಲೆ ಸರಸ್ವತಿಯೇ ॥

—ರತ್ನಾಕರವರ್ಣಿ

ಸಕಲ ಲಕ್ಷಣವು ವಸ್ತುಕಕೆ ವರ್ಣಕಕಷ್ಟು । ವಿಕಲವಾದರೂ ದೋಷವಿಲ್ಲ ॥
ಸಕಲ ಲಕ್ಷಣವಾಗಿ ಬಿರುಸುಮಾಡಿದರೆ ಪು । ಸ್ತಕದ ಬದನೆಕಾಯಹುದು ॥

—ರತ್ನಾಕರವರ್ಣಿ

ರಳ ಕುಳಸಿಥಿಲ ಸಮಾಸ ಮುಂತಾದವ । ರೊಳಗಿಲ್ಲಿ ಕೆಲವುಳ್ಳರುಂಟು ।
ಕೆಲವಿಲ್ಲ, ಏಕಿಲ್ಲವೆಂದರೆಯುದರ ಕೋ । ಟಲೆಯೇಕೆ ಹಾಡುಗಬ್ಬದೊಳು

—ರತ್ನಾಕರ

ಚಪ್ಪಿನೋಹ ಮುತ್ತು ವಸ್ತುಕ । ವರ್ಣಕ ಚಿಪ್ಪು ಕಳೆದು ಸರಗೆಯ್ದು ।
ಸುಪ್ಪಾಣಿ ಮುತ್ತಿನಹಾರವೆಂದಿನಿಪೊಂ । ದೊಪ್ಪದೋರದೊಡವ ಕವಿಯೆ ?

—ಬಾಹುಬಲಿ

ಶಬ್ದಮಣಿ ಮೊದಲಾದ ಶಾಸ್ತ್ರದ ।
ಹೊದಿಕೆಯು ಸಾಹಿತ್ಯಕಲ್ಲದೆ ।
ಹೃದ್ಯ ಷಟ್ಪದಿ ಹಾಡುಗಬ್ಬಗಳಿಂಗೆ ಬೇಡೆಂದು ।
ಸಿದ್ಧ ನೂತನ ಕವಿಗಳುಸುರಿದ ।
ಪದ್ಧತಿಯೊಳಿಡೆಹೆಡಹಿ ಬೀಳುತ ।
ಬುದ್ಧಿಯರಿವೆಂತೊರೆವೆಸಿದ ಬೆಳ್ನುಡಿಯು ಬೆರಕೆಯಲಿ ॥

—ಆದಿತ್ಯಪುರಾಣ

ಇವೆಲ್ಲ ಮಾತುಗಳು ಆ ಕಾಲದ ಒಂದು ಚಿತ್ರವನ್ನು ಚಿತ್ರಿಸುತ್ತಿವೆ. **ಓದುಗಬ್ಬವು** ಮೆಲ್ಲನೆ ಹಿಂದೆ ಬಿದ್ದು, **ಹಾಡುಗಬ್ಬವು** ತಲೆಯೆತ್ತಿದುದನ್ನು

ಇವು ಸ್ಪಷ್ಟವಾಗಿ ಹೇಳುತ್ತವೆ. ಈ **ಹಾಡುಗಬ್ಬವು** ಕ್ರಾಂತಿಕಾರಕರಿಗೆ ಕೈದೀವಿಗೆಯಾಯಿತು.

ಇದು ಎಲ್ಲವೂ ಅಂತರಂಗದ ಕುದಿಯಾದರೂ ಬಹಿರಂಗವಾಗಿ, ಪ್ರತಿಭಟಿಸಿ ನಿಲ್ಲುವ ಧೈರ್ಯವು ಬೇಕಲ್ಲವೇ ? ಕ್ರಾಂತಿಯಿಂದ ಉತ್ಪನ್ನವಾದ ಸ್ವಾತಂತ್ರ್ಯದ ಕಲ್ಪನೆಯು ಸಾಹಿತ್ಯದ ದಾಸ್ಯವನ್ನೂ ಹರಿದೊಗೆಯಲು ಪ್ರೇರಿಸಿತು. ಕಥನ ಕಾವ್ಯಕ್ಕೆ, ರಗಳೆಗಳೇ ಚೆನ್ನಾಗಿ ಹೊಂದುತ್ತವೆಂದು ಮೊದಲು ಮನಗಂಡು ಹೊಸ ಹಾದಿಯನ್ನು ಹಿಡಿದ ವೀರನು **ಹರಿಹರನು**. ತನ್ನ ಅದ್ಭುತವಾದ ವರ್ಣನಾ ಶಕ್ತಿಯಿಂದ ಶಿವಲೀಲೆಗಳ ಚಿತ್ರವನ್ನು ಮನೋಹರವಾಗಿ ಚಿತ್ರಿಸಿ, ರಗಳೆಗಳಲ್ಲಿ ಎಂತಹ ಸಾಮರ್ಥ್ಯವಿರುವದೆಂಬುದನ್ನು ತೋರಿಸಿದನು. ಇವನ ರಗಳೆಗಳು ಎಲ್ಲರನ್ನೂ ತಲೆದೂಗಿಸಿದವು. ಅವನ ಕೀರ್ತಿಯು ಇಂದಿಗೂ ಮಾಸದೆ ನಿಂತಿರುವುದು, ಅವನ ರಗಳೆಗಳಿಂದ. '**ವೀರಮಾಹೇಶ್ವರಾಚಾರ ಸಂಗ್ರಹ**' ವೆಂಬ ಸಂಸ್ಕೃತ ಗ್ರಂಥಕಾರನು

> ಯಃಪುರಾತನ ಚಾರಿತ್ರ್ಯಂ ಕೃತವಾನ್ ದೇಶಭಾಷಯಾ ।
> ಪಂಪಾಹರೀಶ್ವರಂ ನೌಮಿ ಸಂಪಾದಿತ ಶಿವಾಸ್ಪದಂ ॥

ಎಂದು ಹರಿಹರನಿಗೆ ಗೌರವದಿಂದ ತಲೆಬಾಗುತ್ತಾನೆ. ಇದರ ಅರ್ಥವಿಷ್ಟೇ, ರಗಳೆಗಳು ಪಂಡಿತರಿಗೂ ಮಾನ್ಯವಾದವು. ಸಾಹಿತ್ಯದಲ್ಲಿ ಸ್ಥಾನವನ್ನು ಪಡೆದವು. ಈ ಕನ್ನಡ ಛಂದಸ್ಸನ್ನು ಬೆಳಕಿಗೆ ತಂದು ಕನ್ನಡ ಸಾಹಿತ್ಯವಾಹಿನಿಗೆ ಒಂದು ಹೊಸ ದಾರಿಯನ್ನು ಮಾಡಿಕೊಟ್ಟ ಕೀರ್ತಿಯು ಹರಿಹರನಿಗೇ ಸಲ್ಲುವದು. ಇದರಿಂದ ಹಲವು ಮಾತುಗಳು ನಿಚ್ಚಳವಾದವು.

ಚಂಪೂ ಕಾವ್ಯಗಳನ್ನು ಬಿಟ್ಟು ರಸವತ್ತಾಗಿ ಕಾವ್ಯಗಳನ್ನು ಬರೆಯಬಹುದು.

ಹಾಡುಗಬ್ಬಗಳೇ ಜಾಗ್ರತೆಗೆ–ಮತಪ್ರಚಾರಕ್ಕೆ ಅನುಕೂಲವಾದವುಗಳು.

ಜನಪದಸಾಹಿತ್ಯವೆಂದರೆ, ಕನ್ನಡ ಛಂದಸ್ಸಿನ ಧಾಟಿ. ಇವುಗಳಲ್ಲಿ

ಸಾಹಿತ್ಯವು ಬೆಳೆದರೆ ಜನರಲ್ಲಿ ಉಳಿಯುವದು. ಇಲ್ಲವಾದರೆ ಅದು ಪುಸ್ತಕದ ಬದನೇಕಾಯಿಯಾಗುವದು.

ಆದರೆ ಕೇವಲ ವಚನ ರಗಳೆಗಳೆರಡೇ ಕವಿಹೃದಯಕ್ಕೆ ಸಾಲದಾದುವು. ಕವಿಗೆ ತನ್ನ ಕುಸುರನ್ನು ತೋರಿಸಲು, ಹೃದಯ ಚಿತ್ರನನ್ನು ಚಿತ್ರಿಸಲು ಹಾಡನ್ನು ಒಳ್ಳೇ ಬೆಡಗಿನ ಬಿಗುವಿನಿಂದ ಕುಣಿಸಲು ಇವು ಅಪೂರ್ಣವೆನಿಸಿ ಇನ್ನೂ ಹೊಸರೀತಿಗಳ ಅವಶ್ಯಕತೆ ತೋರಿತು. ಈ ಅವಶ್ಯಕತೆಯೇ ನವಸೃಷ್ಟಿಯನ್ನು ನಿರ್ಮಿಸಿತು. ಇದೇ ಕನ್ನಡೀಕರಣವನ್ನು ಹೊಂದಿದ ಅರ್ಥಾತ್ – ಕರ್ನಾಟಕತ್ವದ ದೃಷ್ಟಿಯಿಂದ ಹುಟ್ಟಿದ **ಕನ್ನಡ ಸಾಹಿತ್ಯ.**

ಕನ್ನಡ ಜನಜೀವನವೆಲ್ಲವೂ ಪಾಡುಗಬ್ಬದಲ್ಲಿ; ಹಾಡಿನಲ್ಲಿ. ಆ ಕಾಲದ ಸಾಹಿತಿಗಳು, ಜೀವನದ ಈ ಜೀವಾಳವನ್ನರಿತು ಜನಜೀವನದ ನಾಲಿಗೆಯಲ್ಲಿ ತಮ್ಮ ಸಾಹಿತ್ಯವು ನಲಿದಾಡಬೇಕೆಂದು ಬಯಸಿ, **ಕನ್ನಡ ಸಂಗೀತದ** ತಾಳ, ಲಯ, ಶ್ರುತಿಗಳಿಗೆ ಸರಿಹೊಂದಿ, ಸುಶ್ರಾವ್ಯವಾಗುವಂತೆ, ಸಾಹಿತ್ಯಕ್ಕೆ ರೂಪುಗೊಡಲು ಯತ್ನಿಸಿದರು. ಕನ್ನಡ ಸಂಗೀತದ ಪಡಿಯಚ್ಚಿನಲ್ಲಿ ಸಾಹಿತ್ಯದ ಎರಕವನ್ನು ಹೊಯ್ದು, ಕನ್ನಡ ಸಾಹಿತ್ಯವನ್ನು ನಿರ್ಮಿಸಿದರು. ಈ ಅದ್ಭುತವಾದ ಕನ್ನಡೀಕರಣವು ಸಾಹಿತ್ಯದ ಜೀವನದಲ್ಲಿ ಕರ್ನಾಟಕತ್ವದ ದೃಷ್ಟಿಯಿಂದ ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂತಹದಿದೆ.

ಸಾಹಿತ್ಯವನ್ನು ಸಂಗೀತದೊಡನೆ ಬೆರಿಸಿದೊಡನೆಯೇ ತಾಳಕ್ಕೆ ತಕ್ಕಂತೆ ವಿವಿಧ ರೂಪಗಳನ್ನು ಧರಿಸಿ ಷಟ್ಪದಿ, ಸಾಂಗತ್ಯಗಳಾದವು.

ಷಟ್ಪದಿಗಳ ಹಾಗು ಸಾಂಗತ್ಯದ ರೂಪಗಳನ್ನೂ ಸಂಗೀತದ ತಾಳಗಳನ್ನೂ ಪರೀಕ್ಷಿಸಿದರೆ, ನಮ್ಮ ಮಾತಿನ ಸತ್ಯತೆಯು ಕಂಡುಬರುವದು.

ನಮ್ಮಲ್ಲಿಯ ಷಟ್ಪದಿಗಳು, ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಿಕ ಎಂದು ಆರು. ಮತ್ತು ಸಾಂಗತ್ಯ.

ಕರ್ನಾಟಕ ಸಂಗೀತದಲ್ಲಿ ತಾಳಗಳಿರುವುದು ಏಳು. ಈ ತಾಳದ ಗತಿ, ಲಯಗಳನ್ನನುಸರಿಸಿದ ಮಾತ್ರಾಗಣಗಳನ್ನು ನಿರ್ಮಿಸಿ ಆ ಗಣಗಳಿಂದ

೬ ಷಟ್ಪದಿಗಳನ್ನೂ ಸಾಂಗತ್ಯವನ್ನೂ ಅಂದಿನ ಕ್ರಾಂತಿಕಾರರು ರಚಿಸಿಕೊಂಡರು.

ಅದರ ವಿವರಣೆಯು

ಶರಷಟ್ಪದಿಯು ೪ + ೪ ಮಾತ್ರೆಯ ಗಣಗಳಿಂದ ಕೂಡಿ ಆದುದು. **ಏಕತಾಳದ** ಗತಿಯು ೪ ಮಾತ್ರೆಗಳುಳ್ಳದು.

ಮುರಿದೆ ಕನುತವನು । ಹಿರಿಯರ ಹೊಲ ರೈ ।
ತರಿಗೆ ಕೊಟ್ಟು ಕಷ್ಟವ ಪಡುವೆ ।
ನೆರೆದುಡಿವಾಳ್ಗಳ । ತೊರೆಯುತ ದುಡಿಯುವೆ ।
ಹೆರವರ ಆಳ್ನೀನಾಗಿರುವೆ ॥

ಕುಸುಮ ಷಟ್ಪದಿಯು ೫+೫ ಮಾತ್ರೆಯ ಗಣಗಳಿಂದ ರಚಿತವಾದುದು. **ಝಂಪೆತಾಳವು** ೫ ಮಾತ್ರೆಗಳಲ್ಲಿ ನಡೆಯುವುದು.

ಉಲಿಯೆಚಾದಗೆಗಳು । ನ್ಮಳಿಸೆ ಹಂಸೆಗಳು ಬೆಳು ।
ಸುಳಿವುಟ್ಟಿಗಟ್ಟಿ ಕೇತಕಿಗಳಲ್ಲಿ ।
ನಲಿದು ನರ್ತಿಸೆ ಕೇಕಿ । ಕುಳವಲರೆ ಕಡವು ಕ ।
ಣ್ಮಲೆದು ತೀಡಿತ್ತು ಪಶ್ಚಿಮಮಾರುತಂ ॥

ಭೋಗ ಷಟ್ಪದಿಯು ೬ + ೬ ಮಾತ್ರೆಗಳ ಗಣಗಳಿಂದ ರಚಿತವಾದುದು. **ರೂಪಕತಾಳವು** ೬ ಮಾತ್ರೆಯ ನಡಿಗೆಯದು. ೬ ಮಾತ್ರೆಯ ಗಣಗಳು ಉದ್ದವಾಗುವವೆಂದು ಬಗೆದು, ೬ ಮಾತ್ರೆಯ ಅಖಂಡಗಣದಲ್ಲಿ ಮತ್ತೆ ಒಡೆದು ಮೂರು ಮೂರು ಮಾತ್ರೆಗಳ ಗಣಗಳನ್ನೇ ಇಲ್ಲಿ ಮಾಡಿಕೊಂಡಿದ್ದಾರೆ.

ಊರನೆಲ್ಲ ತಿರಿದು ಒಡಲ । ಪೂರ ಉಂಬೆನೆಂದು ಬರಲು ।
ದಾರಿಯಲ್ಲಿ ತಿರಿದುದೆಲ್ಲ ಚೆಲ್ಲಿ ಹೋಗಲು ।
ಮೀರಿ ಆಚೆ ಪುರವ ತಿರಿಯೆ । ಆರು ಇಲ್ಲವೆನಲಿ ಎನಗೆ ।
ಮಾರಹರನ ನೆನೆವುದಿಂತುಟಲ್ಲದಾಗದು ॥

ಭಾಮಿನೀಷಟ್ಪದಿಯು ೭ + ೭ ಮಾತ್ರೆಗಳ ಗಣದಿಂದ ಕೂಡಿದೆ. **ತ್ರಿವಡಿಯು** ತಾಳವು ೭ ಮಾತ್ರೆಗಳಲ್ಲಿ ನಡೆಯುವದು.

ನೀಲಗಿರಿ ಹಿಮಶೈಲಮೆನಿಸೆ ತ । ಮಾಲಕಾನನಮುಮುಳಮುಕ್ತಾ ।
ಜಾಲಮಂಟಪಮೆನಿಸೆ ಜಾನ್ಹವಿಯೆನಿಸೆ ಕಾಳಿಂದಿ ॥
ಶೂಲಿಯೆನಿಸೆ ಮುಕುಂದಮೂರ್ತಿಮ । ರಾಳಮಾಳೆಯೆನಿಸೆ ಪಿಕಾವಳಿ ।
ಕಾಳಿಕಾಪರುಮಾಣುವಿಂ ಚಂದ್ರಿಕೆ ವಿರಾಜಿಸಿತು ॥

ಪರಿವರ್ಧಿನಿಯು ೮+೮ ಮಾತ್ರೆಗಳಿಂದ ಕೂಡಿದೆ. **ಆದಿತಾಳವೂ** ೮ ಮಾತ್ರೆಯದು.

ಕೆಲಕೆಲಬರ್ ಕೀಲಿಸಿದಂತಿರ್ದರ್ । ಕೆಲಕೆಲಬರ್ ಸ್ತಂಭಿಸಿದಂತಿರ್ದರ್ ।
ಕೆಲಕೆಲಬರ್ ಮೂರ್ಛಿಸಿದಂತಿರ್ದರ್ ವಸುಧಾಪಾಲಕರು ॥
ತಲಕೆಲಬರ್ ಪಾವಡರ್ದಂತಿರ್ದರ್ । ಕೆಲಕೆಲಬರ್ ಮೆಯ್ಮರೆದಂತಿರ್ದರ್ ।
ಗೆಲೆ ಚಿತ್ರದ ಸಭೆಯಂ ಸಭೆ ಜಾನಕಿ ಪುಗಲು ರತಿಯು ಮಿಗಲು ॥

ವಾರ್ಧಿಕ ಷಟ್ಪದಿಯು ೧೦+೧೦ ಮಾತ್ರೆಗಳ ಗಣಗಳಿಂದ ರಚನೆಗೊಂಡಿರುವದು. **ಮಟ್ಯ**ತಾಳವು ೧೦ ಮಾತ್ರೆಗಳನ್ನು ಒಳಗೊಂಡಿರುವದು.

ಸುಳಿವ ತೆಂಗಾಳಿಯಿಂ ಪರಿಪಕ್ವಫಲರಸದೆ ।
ಬಳಸಿದ ಸುಗಂಧದಿಂ ಲಲಿತತರುಲತೆಗಳಿಂ ।
ಕೆಳಕಂಠ ಕೂಜಿತದೆ ಮೆಯ್ಗೆ ರಸನೆಗೆ ನಾಸಿಕಕ್ಕೆ ಕಣ್ಗಳಿಗೆ ಕಿವಿಗೆ ॥
ನಲವನಿಂಪಂ ಸೊಗಸನಾಶ್ಚರ್ಯಮಂ ಕುತೂ ।
ಹಳತೆಯಂ ಮಾಳ್ಪುದೊದವಿಪುದು ವಿತರಿಪುದು ಸಂ ।
ಗಳಿಪುದೀವುದು ಜಗಂ ಪೊಗಳೆ ಕೊಂಡಾಡೆ ತಲೆದೂಗೆ ಬಣ್ಣಿಸೆ ಬಯಸೆ
ವನಮೆಸೆದುದು ॥

ಸಾಂಗತ್ಯವು ಅಷ್ಟತಾಳಗಳಲ್ಲಿ ನಡೆಯುವದು. ಇದರ ಗಣಗಳು ನಿಯತ ಮಾತ್ರಾಗಣಗಳಲ್ಲಿ ಇಲ್ಲವಾದರೂ **ಸಾಂಗತ್ಯವನ್ನು** ತಾಳದೊಂದಿಗೆ ಹೇಳಬೇಕಾದಾಗ, ಗುರು ಲಘುಗಳನ್ನು ಎಳೆದಾಡಿಕೊಂಡು **ಅಷ್ಟತಾಳ**ದಲ್ಲಿಯೇ ಹೇಳುತ್ತಿರುವದನ್ನು ನಾವು ನೋಡುವೆವು.

ತರ್ಕ ಶಾಸ್ತ್ರವನೋದಿ ತಗರು ತಗರಿನಂತೆ । ಮಾರ್ಕೊಂಡು ಹೊಡೆದಾಡಬಹುದು ॥
ಅರ್ಕನಂತೆಸೆವಾತ್ಮಯೋಗವಿಂತಿಹುದೆಂದು । ಬೇರ್ಕೆಯುಬ್ಬ ವಚನಿಕಲರಿದು ॥

ಸಂಗೀತವು ಸಾಹಿತ್ಯಕ್ಕೆ ಹೇಗೆ ರೂಪಗೊಟ್ಟಿತೆಂಬುದನ್ನು ಈ **ನಮ್ಮ ನಿರೀಕ್ಷಣವು ಸ್ಪಷ್ಟಗೊಳಿಸುವದು.**

ಹೀಗೆ ಸಾಹಿತ್ಯವು ಕನ್ನಡ ಸಂಗೀತದೊಡನೆ ಬೆರೆತು, ಕನ್ನಡ ಸಾಹಿತ್ಯವಾಗಿ ಹೊಸ ಬೆಡಗಿನಿಂದ ಹರಿಯತೊಡಗಿತು. ಈ ಯುಗದಲ್ಲಿ ಸಾಹಿತ್ಯಕ್ಕೆ **ಕನ್ನಡತನ**ವುಂಟಾಯಿತು. **ಕನ್ನಡವು** ಕನ್ನಡವಾಯ್ತು. ಕನ್ನಡದ ಮೆರಗಿನಿಂದ ಕನ್ನಡದ ಥಾಟಿಯಿಂದ ಕನ್ನಡದ ಒನಪಿನಿಂದ ಕನ್ನಡ ಸಾಹಿತ್ಯವು ತನ್ನ ನಾಡಿನಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಇಂತಿದೆ ರಗಳೆಗಳ ಪುರಾಣ. ಈ ಕನ್ನಡದ ಬೆಳಕಿನಲ್ಲಿಯೇ ಮುಂದಿನ ಸಾಹಿತ್ಯವು ಸಾಗಿದೆ.

ಹರಿಹರನೇ ರಗಳೆಕಾವ್ಯಗಳ ಮೊದಲಿಗನಾದರೂ ಅಲ್ಲಲ್ಲಿ ಚಂಪೂ ಕಾವ್ಯಗಳಲ್ಲಿಯೇ ರಗಳೆಗಳು ಕಾಣುತ್ತವೆ. ಪಂಪನು ವರ್ಣನಾಪ್ರಸಂಗದಲ್ಲಿ ಈ ಬಗೆಯ ರಗಳೆಗಳನ್ನು ಬಹು ರಂಜಕವಾಗಿ ಉಪಯೋಗಿಸಿದ್ದಾನೆ. ವಾಚಕರ ಚಿತ್ತವು ಜೀಕುವಂತೆ, ರಚಿಸಿದ ಮನೋಹರವಾದ ಪಂಪನ ರಗಳೆಯೊಂದುಂಟು.

" ಅದರ ಪೊರವೊಳಲವಿಶಾಲ, ಕನಕಕೃತಕ ಗಿರಿಗಳಿಂ ।
ಫಲ ಪ್ರಕೀರ್ಣ ತರುಗಳಿಂ "

ಎಂದು ಸಾಗುತ್ತದೆ.

ಹರಿಹರನು ಚಂಪೂಕಾವ್ಯಗಳಲ್ಲಿ ಕಾಣುವ ಈ ರಗಳೆಗಳಿಗೆ ಜೀವ ಕೊಟ್ಟು ಕುಣಿಸಿದನು. ಅವನ ಚಿತ್ತವೃತ್ತಿಯ ವರ್ಣನಾಚಿತ್ರಗಳು ಈ ರಗಳೆಗಳು. ಶಿವಶರಣರ ಚರಿತ್ರೆಗಳಲ್ಲಿ **ಭಕ್ತಿರಸವು** ಪ್ರವಾಹರೂಪವಾಗಿ ಹರಿದಂತೆ ಭಾಸವಾಗುತ್ತದೆ. ಆ ರಸಕ್ಕೆ ರುಚಿಗಟ್ಟುವಂತೆ, ಅರ್ಥಾಲಂಕಾರ, ಶಬ್ದಾಲಂಕಾರಗಳನ್ನು ಬೆರೆಸಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಹರಿಹರನ ರಗಳೆಗಳು ಒಂದು ವೈಶಿಷ್ಟ್ಯವನ್ನು ಪಡೆದಿವೆ.

ಇವನು **ರಗಳೆ ಕವಿ**ಯೆಂದೇ ಪ್ರಸಿದ್ಧನಾಗಿದ್ದಾನೆ. ಶಿವಶರಣರ ಚರಿತ್ರೆಗಳನ್ನೆಲ್ಲ ರಗಳೆಯ ಛಂದಸ್ಸಿನಲ್ಲಿಯೇ ಬರೆದಿದ್ದಾನೆ. ಅವು ನೂರೊಂದು ರಗಳೆಗಳೆಂದೂ, ನೂರಿಪ್ಪತ್ತು ರಗಳೆಗಳೆಂದೂ ಹೇಳುತ್ತಾರೆ. ಈ ರಗಳೆಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು. ಕ್ಷೇತ್ರ, ವಿಭೂತಿ–ರುದ್ರಾಕ್ಷಿಗಳ ಮಹಾತ್ಮೆಗಳು, ಮತ್ತು ಪುರಾತನ ಹಾಗು ಆಧುನಿಕ ಶಿವಭಕ್ತರ

ವರ್ಣನೆಗಳು. ಬಸರಾಜದೇವ ರಗಳೆ, ಅಕ್ಕಮಹಾದೇವಿಯ ರಗಳೆ, ಪ್ರಭುದೇವರ ರಗಳೆಗಳು ಪ್ರಸಿದ್ಧವಾಗಿವೆ.

ಹರಿಹರನು ತನ್ನ ವಸ್ತುಗಳನ್ನು ಎಲ್ಲಿಂದ ತೆಗೆದುಕೊಂಡನು ? ಎಂಬುದನ್ನು ಬೇರೆ ಬೇರೆಯವರು ಬೇರೆ ಬೇರೆಯಾಗಿ ಹೇಳುತ್ತಾರೆ. ಸ್ಕಂದಪುರಾಣಗಳಲ್ಲಿಯೂ ಶಿವರಹಸ್ಯವೆಂಬ ಪುರಾಣದಲ್ಲಿಯೂ ಈ ಕಥೆಗಳಿರುವವಂತೆ. ಅವನ್ನೇ ತೆಗೆದುಕೊಂಡನೆಂದು ಕೆಲವರೂ, ತಮಿಳಿನ **ಪೆರಿಯ ಪುರಾಣದಿಂದ** ಎಂದು ಕವಿಚರಿತೆಕಾರರೂ ಹೇಳುತ್ತಾರೆ.

ಈ ರಗಳೆಗಳಲ್ಲಿ ಭಕ್ತಿಯ ಅನೇಕ ಮಾರ್ಗಗಳು ಹೇಳಿವೆ. ಸತಿಪತಿಭಾವ, ಸ್ವಾಮಿಭೃತ್ಯಭಾವ, ಸಖ್ಯಭಾವ, ಪಶುಪತಿಭಾವ, ವಾತ್ಸಲ್ಯಭಾವ ಇವು ಮುಖ್ಯವಾದುವು. ಅಲ್ಲದೆ ಶಿವಮೂರ್ತಿಯ ದರ್ಶನ, ಸ್ಪರ್ಶನ, ಕ್ಷೇತ್ರಸೇವೆ, ಜಾಗರಣೆ, ದೇವಾಲಯನಿರ್ಮಾಣ, ಶ್ರವಣ, ಕೀರ್ತನ, ಜಪ, ಅಭಿಷೇಕ ಮುಂತಾದ ಪೂಜಾಕಾರ್ಯಗಳೂ ಭಗವಂತನ ಕರುಣೆಯನ್ನು ಪಡೆಯಲು ಸಾಧನಗಳು. ಇವುಗಳಲ್ಲಿ ಯಾವುದಾದರೂ ಒಂದನ್ನು ಎಷ್ಟೇ ತೊಂದರೆಗಳು ಬರಲಿ, ನಡುವೆ ಬಿಡದೆ ನಿಷ್ಠೆಯಿಂದ ಆಚರಿಸಿದರೆ ಶಿವ ಮೆಚ್ಚಿ ಕೈಲಾಸಕ್ಕೆ ಕರೆದುಕೊಂಡು ಹೋದ ಶರಣರ ಮಹಿಮೆಯ ಕಥೆಗಳಿವೆ.

ಹರಿಹರನ ಪ್ರಸಿದ್ಧವಾದ **ನೂರೊಂದು ರಗಳೆಗಳೂ,** ಕೆರೆಯ ಪದ್ಮರಸನ **ದೀಕ್ಷಾಬೋಧೆಯೂ** (೧೧೭೫), ಪಾಲ್ಕುರಿಕೆಯ ಸೋಮನಾಥನ **ಶರಣಬಸವ ರಗಳೆ**ಯೂ (೧೩೯೫) ಪ್ರಸಿದ್ಧವಾಗಿವೆ. ತ್ರಿಭುವನತಾತನು (೧೬೯೦) **ಅಮ್ಮವ್ವೆಯ ರಗಳೆ, ಪಗಲ್ಚೋಳನ ರಗಳೆ** ಮತ್ತು **ಚೋಳಿಯಕ್ಕನ ರಗಳೆ**ಗಳನ್ನು ಬರೆದಿದ್ದಾನೆಂದು ತಿಳಿಯುತ್ತದೆ. ಸದಾ-ಶಿವಲಿಂಗನು (೧೩೫೦) ರಗಳೆಗಳನ್ನೂ ಬರೆದಿರುವಂತೆ ತೋರುತ್ತದೆ. ಸ್ವತಂತ್ರ ಸಿದ್ಧಲಿಂಗೇಶ್ವರನ (೧೪೮೦) **ಜಂಗಮ ರಗಳೆ,** ಶಂಕರದೇವನ (೧೬೨೦) **ಷಡಕ್ಷರ** ರಗಳೆ ಮತ್ತು **ಭಕ್ತಿಬಿನ್ನಹದ** ರಗಳೆಗಳು ಸುಪ್ರಸಿದ್ಧವಿವೆ.

ರಗಳೆ ಎಂಬುದು ಒಂದು ಬಗೆಯ ಪದ್ಯಜಾತಿ. ಇದರಲ್ಲಿ **ಮಂದಾನಿಲ, ಲಲಿತ, ಉತ್ಸಾಹ**ಗಳೆಂಬ ಮೂರು ಭೇದಗಳಿವೆ. ೪ ಮಾತ್ರೆಯ

೪ ಗಣಗಳಿಂದ **ಮಂದಾನಿಲ**ವಾಗುತ್ತದೆ. ೫ ಮಾತ್ರೆಯ ೫ ಗಣಗಳಿಂದ **ಲಲಿತ,** ಮೂರು ಮಾತ್ರೆಯ ೮ ಗಣಗಳಿಂದ **ಉತ್ಸಾಹ**ಗಳಾಗುತ್ತವೆ. ನಾಗವರ್ಮನು ಹೇಳುವ **ರಘುಟಾ**ಲಕ್ಷಣವು ರಗಳೆಗೆ ಅನ್ವಯಿಸುತ್ತದೆ.

ಷಟ್ಪದಿಗಳು

ಹರಿಹರನು ಬಂಡನ್ನೆಬ್ಬಿಸಿ, ಕ್ರಾಂತಿಯನ್ನುಂಟುಮಾಡಿದನು. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬಂತೆ, ಅವನ ಶಿಷ್ಯನಾದ **ರಾಘವಾಂಕನು ಷಟ್ಪದಿಗಳಿಗೆ** ಕನ್ನಡ ಸಾಹಿತ್ಯ ಸಾಮ್ರಾಜ್ಯದ ಪಟ್ಟಗಟ್ಟಿದನು. ಷಟ್ಪದಿಗಳು ೧೩ ನೇ ಶತಮಾನದಿಂದ ೧೬ ನೇ ಶತಮಾನದ ಅಂತ್ಯದ ವರೆಗೆ ಅಖಂಡವಾಗಿ ರಾಜ್ಯಭಾರ ಮಾಡಿದ್ದುದು ಕಂಡುಬರುತ್ತದೆ.

ಕನ್ನಡ ಸಾಹಿತ್ಯಕ್ಕೆ ಇದು **ವಸಂತಕಾಲ**ವೆನ್ನಬಹುದು. ಕಸಿ ಮಾಡಿಗೊಬ್ಬರವನ್ನು ಹಾಕಿದೊಡನೆಯೇ, ಬಳ್ಳಿಯು ಭರದಿಂದ ಬೆಳೆದು ಹುಲಸಾಗಿ ಹೂ, ಕಾಯಿಗಳನ್ನು ಬಿಡುವಂತೆ, ಬಸವ, ಹರಿಹರರಿಂದ ಕಸಿ ಮಾಡಲ್ಪಟ್ಟ ಕನ್ನಡ ಸಾಹಿತ್ಯವು, ಸುಂದರವಾದ, ಪರಿಪಕ್ವವಾದ, **ಹರಿಶ್ಚಂದ್ರ ಕಾವ್ಯ, ಪ್ರಭುಲಿಂಗಲೀಲೆ, ಕುಮಾರವ್ಯಾಸನ ಭಾರತ, ಜೈಮಿನಿಭಾರತ**ಗಳಂತಹ ಒಳ್ಳೇ ಫಲವನ್ನು ಕೊಟ್ಟಿತು. ನೂರಾರು ಕವಿಗಳು ನಾ ಮೇಲು ನೀ ಮೇಲು ಎಂದು ಕಾವ್ಯಗಳನ್ನು ಬರೆದುದು ಕಂಡುಬರುತ್ತದೆ. ಈ ಕಾಲದಲ್ಲಿ ಕನ್ನಡ ಸಾಹಿತ್ಯವು ಮನೆಮನೆಯಲ್ಲಿ, ಜನಜೀವನದ ನಾಲಿಗೆಯ ಮೇಲೆ ನಲಿದಾಡಹತ್ತಿತು.

ರಾಘವಾಂಕನೇ ಷಟ್ಪದಿಗಳ ಜನಕನೆಂದು, **ಸಿದ್ಧನಂಜೇಶನು** ರಾಘವಾಂಕ ಚರಿತೆಯಲ್ಲಿ ಹೇಳುತ್ತಾನೆ. ರಾಘವಾಂಕನು ಹರಿಹರನ ಲಲಿತ **ರಗಳೆಯ** ಪಾದಗಳನ್ನೇ ೧–೨, ೪–೫ ಪಾದಗಳನ್ನು ಮಾಡಿಕೊಂಡು, **ವಾರ್ಧಿಕ–ಷಟ್ಪದಿಯನ್ನು** ನಿರ್ಮಿಸಿ, ಷಟ್ಪದಿಕಾರರಿಗೆ, **ಮಾರ್ಗದರ್ಶಿ**ಯಾದನು. ಮುಂದೆ ಅವು ಕವಿಗಳ ಹೃದಯದ ವೈವಿಧ್ಯದಂತೆ, ವಿವಿಧ ರೂಪಗಳನ್ನು ತಾಳಿದವು.

ರಾಘವಾಂಕನು ಷಟ್ಪದಿಗಳ ಜನಕನಾದರೂ, ಷಟ್ಪದಿಗಳ ಸುಳಿವು ಮೊದಲಿನ ಸಾಹಿತ್ಯದಲ್ಲಿ ಇಲ್ಲದೆ ಇಲ್ಲ; **ನಾಗವರ್ಮನು** ತನ್ನ ಛಂದೋ

ಗ್ರಂಥದಲ್ಲಿ, **ಶರಷಟ್ಪದಿ**ಯೊಂದನ್ನು ಹೇಳುತ್ತಾನೆ. ಚಂದ್ರರಾಜನು (೧೦೭೯) ತನ್ನ **ಮದನಮಂಜರಿ**ಯಲ್ಲಿ ೮೪ ವೃತ್ತಗಳನ್ನು ತೋರಿಸುವಾಗ ಎರಡು ಷಟ್ಪದಿಗಳೂ ಆಗುತ್ತವೆಂದು ಹೇಳಿದ್ದಾನೆ. ರನ್ನನ ಗದಾಯುದ್ಧ-ದಲ್ಲಿಯೂ ಒಂದು ಪರಿವರ್ಧಿನಿವರ್ಧಿ ಷಟ್ಪದಿಯು ಕಂಡುಬರುತ್ತದೆ. ಆದರೆ, ಇಲ್ಲಿ ಅವು ಇನ್ನೂ ಕಲ್ಪನಾಸೃಷ್ಟಿಯಲ್ಲಿದ್ದುವು. ರನ್ನನು ರಚಿಸುವಾಗ ಸಹಜ ವಾಗಿ ಬಂದುದು ಎಂದು ಹೇಳಬಹುದೇ ವಿನಃ **ಮಹಾಕಾವ್ಯ**ಗಳನ್ನು ರಚಿಸಲು ತಕ್ಕ ಸಾಧನಗಳೆಂದಿರಲಿಲ್ಲ.

ಷಟ್ಪದಿಗೆ ಪ್ರಾಶಸ್ತ್ಯ ದೊರೆತುದುದು **ರಾಘವಾಂಕನಿಂದ.** ಚಂಪು ಶೈಲಿಯನ್ನುಳಿದರೆ, ಬೇರೆಯವರ ವೃತ್ತವೂ, **ಮಹಾಕಾವ್ಯಗಳ** ರಚನೆಗೆ ಸರಿಹೋಗದೆಂಬ ನಂಬುಗೆಯು ದುರ್ಬಲವಾದುದು ಎಂಬುದನ್ನು **ಹರಿ-ಶ್ಚಂದ್ರ** ಕಾವ್ಯವನ್ನು ರಚಿಸಿ ಲೋಕಕ್ಕೆ ತಿಳಿಸಿಕೊಟ್ಟನು. ರಾಘವಾಂಕನು ಷಟ್ಪದಿಗಳು ಕವಿಯ ವಿಹಾರಕ್ಕೆ ತಕ್ಕ ಸಾಧನಗಳೆಂದು ಸಿದ್ಧಪಡಿಸಿದನು. ಮಹಾಕಾವ್ಯಗಳನ್ನು ರಚಿಸಲು ಸರ್ವೋತ್ಕೃಷ್ಟ ಸಾಧನಗಳೆಂದು ಮನ ಗಾಣಿಸಿಕೊಟ್ಟನು. ರಾಘವಾಂಕನ ಈ ಕಾವ್ಯವು, ತದ್ವಿರುದ್ಧ ಗುಣು ಗುಟ್ಟುವವರ ಬಾಯಿಗೆ ಬೀಗಹಾಕಿ ಬಿಟ್ಟಿತು. **ರಾಘವಾಂಕ, ಕುಮಾರ ವ್ಯಾಸ, ಚಾಮರಸ, ಲಕ್ಷ್ಮೀಶ, ವಿರುಪಾಕ್ಷಪಂಡಿತ** ಈ ಯುಗದ **ಸೀಮಾಪುರುಷರು.**

ಷಟ್ಪದಿ ಕಾವ್ಯಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು. **ಪುರಾಣ**ಗಳು ಮತ್ತು **ಕಾವ್ಯ**ಗಳೆಂದು. ಮತಪ್ರಚಾರವೇ ಬಹು ಕವಿಗಳ ಉದ್ದೇಶವಿದ್ದುದರಿಂದ ಈ ಕಾಲದಲ್ಲಿ ಪುರಾಣಗಳೂ, ಮತಾಚಾರದ ಗ್ರಂಥಗಳೂ ಹುಟ್ಟುವದು ಸ್ವಾಭಾವಿಕ. ವೀರಶೈವರು ಹೆಚ್ಚಾಗಿ ಪುರಾಣ ಗಳನ್ನು ರಚಿಸಿದುದು ಕಂಡುಬರುತ್ತದೆ. ರಾಘವಾಂಕನ **ಸಿದ್ಧರಾಮ** ಪುರಾಣ, ಭೀಮಕವಿಯ **ಬಸವ** ಪುರಾಣ, ಮಲ್ಲಣ್ಣನ **ರೇವಣಸಿದ್ಧೇಶ್ವರ** ಕಾವ್ಯ, ಲಕ್ಕಣ ದಂಡೇಶನ **ಶಿವತತ್ವ ಚಿಂತಾಮಣಿ,** ನೀಲಕಂಠಾಚಾ ರ್ಯರ **ಆರಾಧ್ಯಚರಿತ್ರ,** ಗುಬ್ಬಿಮಲ್ಲಣಾರ್ಯರ **ಭಾವಚಿಂತಾರತ್ನ,** **ಚೆನ್ನ**ಬಸವಾಂಕನ **ಮಹಾದೇವಿಯಕ್ಕನ** ಪುರಾಣ, ವಿರುಪಾಕ್ಷಪಂಡಿತನ **ಚನ್ನಬಸವ** ಪುರಾಣ, ಹರೀಶ್ವರನ **ಪ್ರಭುದೇವರ** ಪುರಾಣ, ಬಸವಲಿಂಗನ

ಶಿವಾಧಿಕ್ಯ ಪುರಾಣ, ಗೋವಿಂದನ **ನಂದೀಮಹಾತ್ಮೆ,** ಕುಮಾರ ಪದ್ಮರಸನ **ಸಾನಂದಚರಿತ್ರೆ,** ಪದ್ಮಣಾಂಕನ **ಪದ್ಮರಾಜ** ಪುರಾಣ, ಗುರುಬಸವನ **ಶಿವಯೋಗಾಂಗ ಭೂಷಣ,** ಚೇರಮಾಂಕನ **ಚೇರಮ ಕಾವ್ಯ,** ಪೆಮ್ಮ ಶೆಟ್ಟಿಯ **ಗುರುಭಕ್ತಿ ಭಂಡಾರ ಚರಿತ್ರೆ,** ಮಂಗರಸನ **ಸಮ್ಯಕ್ತ್ವ ಕೌಮುದಿ,** ತಿರುಮಲಭಟ್ಟನ **ಶಿವಗೀತೆ**ಗಳು ಪ್ರಸಿದ್ಧವಾಗಿವೆ.

ಇವೆಲ್ಲವೂ ಶಿವಭಕ್ತರ ಕಥೆಗಳನ್ನೂ ವೀರಶೈವ ಧರ್ಮದ ಮಹಾತ್ಮೆಯ ಗಳನ್ನೂ ವರ್ಣಿಸುವ ಷಟ್ಪದಿ ಕಾವ್ಯಗಳು. ಈ ಪುರಾಣಗಳಿಗೆ ವಸ್ತುಗಳು, ಆ ಕಾಲದ ಜ್ಞಾನಿಗಳಾದ ಶಿವಭಕ್ತರು. ಸಿದ್ಧರಾಮ ಪುರಾಣಕ್ಕೆ **ಸೊನ್ನಲಾಪುರ** (ಸೊಲ್ಲಾಪುರ)ದ ಮಹಾಜ್ಞಾನಿಯಾದ **ಸಿದ್ಧರಾಮನೇ** ನಾಯಕನು. ಕವಿಯ ಭಕ್ತಿ, ವೈರಾಗ್ಯ, ರಸಗಳನ್ನು ಈ ಕಾವ್ಯದಲ್ಲಿ ನೋಡಬೇಕು. ರಾಘವಾಂಕನೇ ಈ ಕಾವ್ಯದ ವಿಷಯಕ್ಕೆ "ನೆರೆವ ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯದಾಗರಂ" ಎಂದು ಬಣ್ಣಿಸಿದ್ದಾನೆ. ಅದರಂತೆಯೆ **ಬಸವ** ಪುರಾಣಕ್ಕೆ ಶ್ರೀ ಬಸವೇಶ್ವರನೇ ಕಥಾನಾಯಕನು. ಅವನು ಮಾಡಿದ ಪವಾಡಗಳು ಅದ್ಭುತವಾಗಿ ವರ್ಣಿಸಲ್ಪಟ್ಟಿವೆ. ಅವನ ಚರಿತ್ರೆಯೂ ಹೇಳಲ್ಪಟ್ಟಿದೆ. ಅಲ್ಲಲ್ಲಿ ಶಿವಭಕ್ತರ ಕಥೆಗಳೂ ಹೇಳಿವೆ. ಭೀಮಕವಿಯ **ಪದಬಂಧವು** ಸುಲಲಿತ. ಪದ್ಮರಾಜ ಪುರಾಣವು **ಕೆರೆಯ ಪದ್ಮರಸನ ಚರಿತ್ರ. ಶಿವಾಧಿಕ್ಯ** ಪುರಾಣದಲ್ಲಿ **ಶಿವಸರ್ವೋತ್ತಮತ್ವವು** ಬಹು ರಂಜಕವಾಗಿ ವರ್ಣಿಸಲ್ಪಟ್ಟಿದೆ. ಜೈನಪುರಾಣಗಳೂ, ಶಿವಗೀತೆಯಂಥ ತಾತ್ವಿಕ ಗ್ರಂಥಗಳೂ ಪ್ರೌಢವಾಗಿವೆ. ರಂಗನಾಥನ **ಅನುಭವಾಮೃತ**ವೆಂಬ **ತತ್ವಗ್ರಂಥವು** ಪ್ರಸಿದ್ಧವೇ ಇದೆ. 'ಅಖಿಳ ವೇದಾಂತದರ್ಶನವನು ಸಂಗ್ರಹಿಸಿ ಪೇಳುವೆ ಸಕಲರಿಗೆ ತಿಳಿಯುವಂತೆ' ಎಂದು ಕವಿಯು ಹೇಳಿಕೊಳ್ಳುತ್ತಾನೆ. ಮನೋಹರವಾದ ಷಟ್ಪದಿಯಲ್ಲಿ ಹೇಳಲ್ಪಟ್ಟಿದೆ.

ಕವಿಗಳ ಕಾವ್ಯ ಚಮತ್ಕೃತಿಯನ್ನು ಈ ಕಾಲದ **ಮಹಾಕಾವ್ಯ ಗಳಲ್ಲಿ** ನೋಡಬಹುದು. ರಾಘವಾಂಕನ ಪ್ರತಿಭೆಯನ್ನು **ಹರಿಶ್ಚಂದ್ರ ಕಾವ್ಯದಲ್ಲಿ** ನೋಡಬೇಕು. ಅವನ ಗಾಂಭೀರ್ಯ, ವಿಶ್ವಾಮಿತ್ರಾದಿಗಳ ಪಾತ್ರಗಳನ್ನು ರಚಿಸಿರುವ ರೀತಿ, ಸಂಭಾಷಣೆಯ ಶೈಲಿ, ನಾಡಿನ ಅಭಿ ಮಾನಗಳು ವರ್ಣನಾತೀತವಾಗಿವೆ. ಓದುಗರನ್ನು ಬೆರಗು ಮಾಡುತ್ತವೆ.

"ಉಭಯಕವಿ ಕಮಲರವಿ" ಎಂದು ಹೇಳಿಕೊಳ್ಳುವ ಇವನ ಹೆಮ್ಮೆಯು ಯಥಾರ್ಥವೆನಿಸುತ್ತದೆ. ಇವನು ಆರಿಸಿದ ಕಥಾವಸ್ತುವು ಪುರಾಣ ಹಾಗು ಐತರೇಯ ಬ್ರಾಹ್ಮಣದಲ್ಲಿ ವರ್ಣಿತವಾಗಿರುವ ಹರಿಶ್ಚಂದ್ರನ ಕಥೆ. ಇವನ ಎಲ್ಲ ರೀತಿಯಲ್ಲಿಯೂ **ನಾವೀನ್ಯತೆಯು** ತುಂಬಿತುಳುಕುತ್ತದೆ. ಕುಮಾರ ವ್ಯಾಸನು ಇದಕ್ಕೆ ಕಳಸವನ್ನೇ ಇಟ್ಟಿರುವನು. ಸರಸ್ವತಿಯನ್ನು ಭಾಮಿನಿ ಷಟ್ಪದಿಯಲ್ಲಿ ಕುಣಿಸಿಬಿಟ್ಟಿದ್ದಾನೆ. ಕಥಾಸಂವಿಧಾನ, ಶೈಲಿ, ಪಾತ್ರರಚನೆ, ಅಲಂಕಾರಗಳಲ್ಲಿ ಕನ್ನಡ ಕವಿಗಳಲ್ಲಿ ಈತನು ಅಗ್ರಗಣ್ಯನು. ನೂತನ ಭಾವನೆಗಳ ತವರ್ಮನೆ ಕುಮಾರವ್ಯಾಸ. ಪ್ರತಿಭೆ, ಭಾಷೆ, ಕಲ್ಪನಾಶಕ್ತಿ, ಯಾವ ದೃಷ್ಟಿಯಿಂದ ನೋಡಿದರೂ ಕುಮಾರವ್ಯಾಸ ಬಹು ದೊಡ್ಡ ಕವಿ. ಗದುಗಿನ ಭಾರತವನ್ನು ಹಾಡುವಾಗ ನಿಜವಾಗಿಯೂ 'ಕಲಿಯುಗ ದ್ವಾಪರ ವಾಗುವದು; ಭಾರತ ಕಣ್ಣಲಿ ಕುಣಿಯುವುದು.' ಕನ್ನಡದಲ್ಲಿ ಗದಗಿನ ಭಾರತವನ್ನು ಓದದ ಹಳ್ಳಿಯಿಲ್ಲ. ಓದಿ ತಲೆದೂಗದ ಕನ್ನಡಿಗನಿಲ್ಲ. **ಕರ್ನಾಟ ಕವಿಚೂತವನಚೈತ್ರ**ನೆಂದು ಹೆಸರಾಗಿರುವ ಲಕ್ಷ್ಮೀಶನ ಜೈಮಿನಿ ಭಾರತವು ಲಲಿತವಾಗಿಯೂ ಮನೋಹರವಾಗಿಯೂ ಶಬ್ದ ಅಲಂಕಾರಗಳ ಚಮತ್ಕೃತಿಯಿಂದೊಡಗೂಡಿಯೂ ಇದೆ. ಲಕ್ಷ್ಮೀಶನು ಚಮತ್ಕಾರವಾಗಿ ಶ್ಲೇಷವನ್ನು ತರುವದರಲ್ಲಿಯೂ ಕಿವಿಗೆ ಇಂಪಾಗುವಂತೆ ಪದಗಳನ್ನು ಜೋಡಿ ಸುವದರಲ್ಲಿಯೂ ನಿಪುಣ. 'ಲಕ್ಷ್ಮೀಶ ನಿಂಚರದಿಂಪು' ಜಗಪ್ರಸಿದ್ಧವಾಗಿದೆ ತಮ್ಮ ಕಾವ್ಯಗುಣದ ಮೂಲಕ ಕುಮಾರವ್ಯಾಸ ಲಕ್ಷ್ಮೀಶರು ಜಾತಿ–ಮತ–ಪಂಥಗಳ ಮರ್ಯಾದೆಯನ್ನು ಮೀರಿಯೂ ಅಖಿಲ ಕನ್ನಡಿಗರ ಹೃದಯದಲ್ಲಿ ಸ್ಥಾನವನ್ನು ಪಡೆದಿದ್ದಾರೆ. ಇವುಗಳ ರಸವನ್ನು ಓದಿ ಸವಿಯಬೇಕಲ್ಲದೆ ಹೇಳಲು ಸಾಧ್ಯವಿಲ್ಲ.

ರಾಘವಾಂಕನ (೧೧೬೫) **ಹರಿಶ್ಚಂದ್ರಕಾವ್ಯ,** ಕುಮುದೇಂದುವಿನ (೧೨೭೫) **ಕುಮುದೇಂದು ರಾಮಾಯಣ,** ಭಾಸ್ಕರನ (೧೪೨೪) **ಜೀವಂಧರ ಚರಿತ್ರೆ,** ಕುಮಾರವ್ಯಾಸನ (೧೪೩೦) **ಭಾರತ,** ಕಲ್ಯಾಣಕೀರ್ತಿಯ (೧೪೩೯) **ಜ್ಞಾನಚಂದ್ರಾಭ್ಯುದಯ,** ತೆರಕಣಾಂಬಿ ಬೊಮ್ಮರಸನ (೧೪೮೫) **ಸನತ್ಕುಮಾರಚರಿತ್ರೆ,** ಚಾಮರಸನ (೧೪೩೦) **ಪ್ರಭುಲಿಂಗಲೀಲೆ,** ಕುಮಾರ ವಾಲ್ಮೀಕಿಯ (೧೫೦೦) **ತೊರವೆರಾಮಾಯಣ,** ತಿಮ್ಮಣ

ಕವಿಯ (೧೫೧೦) **ಭಾರತ,** ಕೋಟೇಶ್ವರನ (೧೫೦೦) **ಜೀವಂಧರಷಟ್ಪದಿ,** ೩ನೇ ಮಂಗರಸನ (೧೫೦೮) **ಜಯನೃಪಕಾವ್ಯ,** ಚಾಟುವಿಠ್ಠಲನ (೧೫೩೦) **ಭಾಗವತ** ಮತ್ತು **ಭಾರತ,** ಲಕ್ಷ್ಮೀಶನ (೧೭೦೦) **ಜೈಮಿನಿಭಾರತ**ಗಳು ಷಟ್ಪದಿಗಳಲ್ಲಿ ಪ್ರಸಿದ್ಧವಾಗಿವೆ.

ಷಟ್ಪದಿಯು ಶುದ್ಧ ಕರ್ನಾಟಕ ಛಂದಸ್ಸು. ಇವುಗಳಲ್ಲಿ **ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಿಕ** ಎಂದು ೬ ಬಗೆಗಳುಂಟು. ಈ ಮಹಾಕಾವ್ಯಗಳಲ್ಲಿ ಕೆಲವು ಕವಿಗಳು ಒಂದೊಂದು ಕಾವ್ಯದಲ್ಲಿ ಒಂದೊಂದೇ ಬಗೆಯ ಷಟ್ಪದಿಯನ್ನು ಬಳಿಸಿದ್ದಾರೆ. ಒಬ್ಬಿಬ್ಬರು ಎಲ್ಲವನ್ನೂ ಬಳಿಸಿದ್ದಾರೆ. ಷಟ್ಪದಿಗಳು ತಾಳ, ಲಯ, ಶ್ರುತಿಗಳಿಗೆ ಒಳಪಟ್ಟು ಸುಶ್ರಾವ್ಯವಾಗುವಂತೆ, ಪಾಡುಗಬ್ಬಕ್ಕೆ ತಕ್ಕುದಾದ ಸಾಧನಗಳಾಗಿವೆ. ಪ್ರತಿಯೊಂದು ಪದ್ಯಕ್ಕೂ ಆರು ಸಾಲುಗಳು. ಈ ಆರೂ ಸಾಲುಗಳಲ್ಲಿ ಪೂರ್ವಾರ್ಧದಂತೆಯೇ ಉತ್ತರಾರ್ಧವಿರುತ್ತದೆ. ಎಂದರೆ ೧–೪, ೨–೫, ೩–೬ ಸಾಲುಗಳು ಇರುತ್ತವೆ. ಷಟ್ಪದಿಯಲ್ಲಿ ೧–೨, ೪–೫ ಚರಣಗಳು ಲಘುಚರಣಗಳು, ೩–೬ ದೀರ್ಘಚರಣಗಳು. ಲಘುಚರಣಕ್ಕಿಂತ ದೀರ್ಘ ಚರಣವು ಒಂದುವರೆಯಷ್ಟು ದೊಡ್ಡದಿದ್ದು ಸಂಗೀತದ ಅನುಕೂಲತೆಗಾಗಿ, ಕೊನೆಗೊಂದು ಗುರುವಿನಿಂದ ಕೂಡಿರುತ್ತದೆ.

ತ್ರಿಪದಿ ಹಾಗು ಸಾಂಗತ್ಯ

ತ್ರಿಪದಿಯು ಕನ್ನಡ ಸಾಹಿತ್ಯದ **ತಾಯಿಬೇರು.** ಇದು ಶುದ್ಧ **ಕನ್ನಡ ಛಂದಸ್ಸು.** ಜನಜೀವನದಲ್ಲಿದ್ದುದು. ಜನಸಾಮಾನ್ಯರ ಬಳಿಕೆಯಲ್ಲಿರುವುದೇ ಶಿಲಾಶಾಸನಗಳಲ್ಲಿ ಮೂಡಿದೆ. ೭ ನೇ ಶತಮಾನದ ಬದಾಮಿಯ ಶಿಲಾಶಾಸನದಲ್ಲಿ ತ್ರಿಪದಿಯು ಕಾಣುತ್ತದೆ. ಅದು ಹೀಗಿದೆ:—

> ಸಾಧುವಿಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
> ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
> ಮಾಧವನೀತನ್ ಪೆರನಿಲ್ಲ ।

ಮನೆಮನೆಗಳಲ್ಲಿ ಕುಟ್ಟುವಾಗ, ಬೀಸುವಾಗ, ಮನೆಗೆಲಸವನ್ನು ಮಾಡುವಾಗ ಹಾಡಿಕೊಳ್ಳುವ ಗೀತವಿದು. ನಮ್ಮ ಹಳ್ಳಿಯ ಸಾಹಿತ್ಯವೆಲ್ಲವೂ ಬಹುತರವಾಗಿ

ಈ ಪ್ರದಿಯಲ್ಲಿಯೇ ಕಾಣುತ್ತದೆ. ಮನುಷ್ಯನ ಸತ್ಯಾನುಭವ ಹಾಗು ರಸಾನುಭವ, ಆಕಾಂಕ್ಷೆ ಹಾಗು ಉಪದೇಶಗಳನ್ನು ಸ್ವಲ್ಪದರಲ್ಲಿ ಹೇಳುವದಕ್ಕೆ–ಹಾಡಿಕೊಳ್ಳುವದಕ್ಕೆ ತ್ರಿಪದಿಯು ಒಳ್ಳೇ ಸಾಧನವಿದೆ. ಆನುದರಿಂದಲೇ ನೀತಿಯನ್ನು ಹೇಳುವದಕ್ಕೆ, ಕಾಲಜ್ಞಾನವನ್ನು ಸಾರುವದಕ್ಕೆ, ತ್ರಿಪದಿಯನ್ನು ಉಪಯೋಗಿಸಿದ್ದುಂಟು. ಸರ್ವಜ್ಞನ ಕೃತಿಗಳಿಂದಲೇ ತ್ರಿಪದಿಯು ಲೋಕಕ್ಕೆಲ್ಲ ಗೊತ್ತಾಗಿದೆ. ಆದರೆ ತ್ರಿಪದಿಯ ಜನ್ಮವು ಬಹು ಪ್ರಾಚೀನ. ಅವನ ಕಾಲಕ್ಕಿಂತಲೂ ೩೦೦ ವರ್ಷಗಳ ಪೂರ್ವದಲ್ಲಿಯೇ ತ್ರಿಪದಿಯಲ್ಲಿ ಗ್ರಂಥರಚನೆಗೆ ಪ್ರಾರಂಭವಾಗಿದೆ.

ಕರಸ್ಥಳದ ನಾಗದೇವನ (೧೪೩೦) **ಕರಸ್ಥಳ ನಾಗದೇವ ತ್ರಿಪದಿ,** ನಿಜಗುಣಶಿವಯೋಗಿಗಳ (೧೫೦೦) **ಅರವತ್ತುಮೂರರ ತ್ರಿಪದಿ,** ವಿರತ ಮಹಲಿಂಗದೇವನ (೧೫೦೦) **ಗುರುಬೋಧಾಮೃತ,** ಮಲ್ಲಿಕಾರ್ಜುನ ರಾಯನ **ಚೋರಕಥೆ, ಸರ್ವಜ್ಞನ ತ್ರಿಪದಿಗಳು** ಪ್ರಸಿದ್ಧವಾಗಿವೆ.

ಸರ್ವಜ್ಞನೇ ತ್ರಿಪದಿಯ ಸೀಮಾಪುರುಷ. ಅವನ ವಿಲಕ್ಷಣ ವಾಕ್ ಸರಣಿ, ಸಮಾಜವನ್ನು ಬಡಿದೆಬ್ಬಿಸುವ ಧಿಟ್ಟತನ, ತತ್ವಜ್ಞಾನ, ನೀತಿ, ಕಾಲಜ್ಞಾನ, ಜೋತಿಷ್ಯಗಳಲ್ಲಿರುವ ಅವನ ಅಗಾಧಜ್ಞಾನ, ಇವು ನೋಡತಕ್ಕಂಥವಿವೆ. ಅವನ ಒಂದೊಂದು ಮಾತು, ಹಸಿಯಗೋಡೆಯಲ್ಲಿ ಹರಳು ನಟ್ಟಂತೆ ಮನಸ್ಸಿನಲ್ಲಿ ನಟ್ಟುಬಿಡುತ್ತವೆ. ಆದುದರಿಂದಲೇ ಹಳ್ಳಿಗರ ನಾಲಿಗೆಯ ಮೇಲೆ ಇಂದು ಸರ್ವಜ್ಞನು ನಲಿದಾಡುತ್ತಲಿದ್ದಾನೆ. ಜೀವ ತುಂಬುತ್ತಲಿದ್ದಾನೆ.

ಸರ್ವಜ್ಞನ ವೈಶಿಷ್ಟ್ಯವು ಉಳಿದವುಗಳಲ್ಲಿಲ್ಲ. ಅವೆಲ್ಲವೂ ಕೇವಲ ಮತ ಪ್ರಚಾರಕ ಗ್ರಂಥಗಳು. ಕರಸ್ಥಳದ ನಾಗದೇವ ತ್ರಿಪದಿಯಲ್ಲಿ ವೀರಶೈವ ಸಿದ್ಧಾಂತವನ್ನು ಹೇಳಿದೆ. **ಅರವತ್ತುಮೂರು ತ್ರಿಪದಿಗಳು** ಪುರಾತನರ ಸ್ತುತಿರೂಪವಾಗಿವೆ. **ಗುರುಬೋಧಾಮೃತ**ದಲ್ಲಿ ವೈರಾಗ್ಯವು ವರ್ಣಿಸಲ್ಪಟ್ಟಿದೆ. ಚೋರಕಥೆಯಲ್ಲಿ ರತ್ನಪುರಿಯನ್ನು ಆಳುತ್ತಿದ್ದ ವಜ್ರಮುಕುಟರಾಯನ ಇಬ್ಬರು ಮಕ್ಕಳು ಚೋರರಾದ ಕಥೆಯಿದೆ.

ಸರ್ವಜ್ಞನು ಮಾತ್ರ ಎಲ್ಲ ಜಾತಿ–ಮತ–ಪಂಥಗಳವರಿಗೆ ಪ್ರಿಯನಾಗಿದ್ದಾನೆ.

ತ್ರಿಪದಿಯು ಶುದ್ಧ ಕನ್ನಡ ಛಂದಸ್ಸು. ೫ ಮಾತ್ರೆಯ ೪ ಗಣಗಳು ಮೊದಲನೆಯ ಚರಣದಲ್ಲಿ, ೫ + ೩ + ೫ + ೫ ಹೀಗೆ ಮಾತ್ರೆಗಳು ಎರಡನೇ ಚರಣದಲ್ಲಿ, ೫ + ೩ + ೫ ಮಾತ್ರೆಗಳು ೩ನೇ ಚರಣದಲ್ಲಿರುತ್ತವೆ.

ಸಾಂಗತ್ಯ

ಸಾಂಗತ್ಯಗಳು ಹಾಡುಗಬ್ಬಕ್ಕೆ ಒಳ್ಳೇ ಅನುಕೂಲವಾದವುಗಳು. ಜನಪದ ಸಾಹಿತ್ಯವು ಬಹುತರವಾಗಿ, ತ್ರಿಪದಿ, ಸಾಂಗತ್ಯಗಳಲ್ಲಿಯೇ ಇರುತ್ತದೆ. ಇದು ಶುದ್ಧ ಕನ್ನಡ ಛಂದಸ್ಸು. ಸಂಪ್ರದಾಯ ಮಾನ್ಯವಿಲ್ಲದವರು ಇದನ್ನು ಆಶ್ರಯಿಸುವದು ಸ್ವಾಭಾವಿಕ.

೧೬ನೇ ಶತಮಾನದಲ್ಲಿ ಕ್ರಾಂತಿಯಾಗಿ, ಸಾಹಿತ್ಯವು ಜನಪದದ ಕಡೆಗೆ ತಿರುಗಿದೊಡನೆಯೇ ಸಾಂಗತ್ಯವು ಸಾಹಿತ್ಯಕ್ಷೇತ್ರದಲ್ಲಿ ಬೆಳಗಹತ್ತಿತು. ಯುಗಧರ್ಮವು ಪ್ರಬಲವಾದುದು. **ಶಿಶುಮಾಯಣ**ನಂಥ ಜೈನ ಪಂಡಿತನು ಕೂಡ ಸಂಪ್ರದಾಯವನ್ನು ಬದಿಗಿರಿಸಿ **ಸಾಂಗತ್ಯ**ದಲ್ಲಿ ಗ್ರಂಥಗಳನ್ನು ಬರೆಯಲು ಮುಂದಾದನು. ಶಿಶುಮಾಯಣನೇ ಸಾಂಗತ್ಯ ಕಾವ್ಯಕ್ಕೆ ಮೊದಲಿಗನೆಂಬ ಪ್ರತೀತಿ ಇದೆ. ಇದಿನ್ನೂ ನಿರ್ಧರಿಸಲ್ಪಡಬೇಕಾದ ವಿಷಯ. ೧೩ ನೇ ಶತಮಾನದಿಂದಲೇ ಸಾಂಗತ್ಯ ರಚನೆಗೆ ಪ್ರಾರಂಭವಾಯಿತು. **ರತ್ನಾಕರವರ್ಣಿ, ಚಂದ್ರಮ, ಕನಕದಾಸ, ಹೊನ್ನಮ್ಮ** ಇವರೇ ಈ ಕಾಲದ ಪ್ರತಿನಿಧಿಗಳು.

ಸಾಂಗತ್ಯದಲ್ಲಿ ಪುರಾಣಗಳೂ, ಐತಿಹಾಸಿಕ–ಪುರುಷರ ಚರಿತ್ರೆಗಳೂ, ತಾತ್ವಿಕ, ನೀತಿಯ ಗ್ರಂಥಗಳೂ ಇವೆ.

ಪುರಾಣಗಳಲ್ಲಿ, ರತ್ನಾಕರವರ್ಣಿಯ **ಭರತೇಶವೈಭವವೂ** ಚಂದ್ರಮನ **ಗೋಮಟೇಶ್ವರ ಚರಿತ್ರೆಯೂ** ವಿರೂಪರಾಜನ **ತ್ರಿಭುವನ ತಿಲಕವೂ** ಲಿಂಗನ **ಚೋಳರಾಜಸಾಂಗತ್ಯ**ಗಳೂ ಪ್ರಸಿದ್ಧವಾಗಿವೆ. **ಶಿಶುಮಾಯಣ**ನ ಅಂಜನಾ ಚರಿತ್ರೆಯು ಒಂದು ಬಗೆಯ ಪುರಾಣವೇ.

ರತ್ನಾಕರ ವರ್ಣಿಯು ತನ್ನ ಭರತೇಶ ವೈಭವಕ್ಕೆ ಪ್ರಥಮ ತೀರ್ಥಂಕರನ ಹಿರಿಯ ಮಗನಾದ ಭರತನನ್ನೇ ಕಥಾನಾಯಕನನ್ನು ಮಾಡಿಕೊಂಡಿದ್ದಾನೆ. "ಗಣನೆಯಿಲ್ಲದ ರಾಜ್ಯಸುಖದೊಳೋಲಾಡಿ ಧಾರಿಣಿ

ಮೆಚ್ಚಿ. ಜನಯೋಗಿ, ಕ್ಷಣಕೆ ಕರ್ಮವ ಸುಟ್ಟು, ಜಿನನಾದ" ವೈಭವವು ಇದರಲ್ಲಿ ವರ್ಣಿಸಲ್ಪಟ್ಟಿದೆ. ಇದು ಬಹು ದೊಡ್ಡ ಗ್ರಂಥ. ೮೦ ಸಂಧಿಗಳಿಂದ ಕೂಡಿದೆ. ಇಷ್ಟೊಂದು ದೊಡ್ಡ ಸಾಂಗತ್ಯ ಗ್ರಂಥವು ಬಹುಶಃ ಇನ್ನೊಂದು ಇಲ್ಲ. ಇದರಲ್ಲಿ ಚಿತ್ರವಿಚಿತ್ರವಾದ ವರ್ಣನೆಗಳಿವೆ. ವರ್ಣಿಸುವಲ್ಲಿ ಹೊಸಬಗೆಯಿದೆ, ನವರಸ ಪುಷ್ಟಿಯಿದೆ, ತತ್ವಜ್ಞಾನವಿದೆ. ಕವಿಯ ಸರಳವಾದ, ಸಹಜ ಮನೋಹರವಾದ ಶೈಲಿಯು, ವಾಚಕರನ್ನು ಸೆಳೆದು ಕೊಂಡು ಮುಂದಕ್ಕೆ ಒಯ್ಯುತ್ತದೆ. ಎಂತಹ ದೊಡ್ಡ ವಿಷಯವಿದ್ದರೂ ಕೆಲವೇ ಪದಗಳಲ್ಲಿ ಎಲ್ಲವನ್ನೂ ಹೇಳುವ ಅದ್ಭುತವಾದ ಶಕ್ತಿಯು ರತ್ನಾಕರ ವರ್ಣಿ-ಯಲ್ಲಿದೆ. ಕವಿಯು ತನ್ನ ಅದ್ಭುತವಾದ ಕಾವ್ಯ ಸಾಮರ್ಥ್ಯದಿಂದ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿರುತ್ತಾನೆ. ಗೊಮ್ಮಟೇಶ್ವರ ಚರಿತೆಗೆ, ಕಾರ್ಕಳದ ಗೊಮ್ಮಟೇಶ್ವರನೆ ಕಥಾನಾಯಕ. ತ್ರಿಭುವನತಿಲಕಕ್ಕೂ ಚೋಳರಾಜಸಾಂಗತ್ಯಕ್ಕೂ, ಶಿವಭಕ್ತರೇ ನಾಯಕಿಯರು. ಇವೆಲ್ಲವೂ ಒಳ್ಳೇ ರಸವತ್ತಾದ ಲಲಿತವಾದ ಕಾವ್ಯಗಳು.

ಸಾಂಗತ್ಯದ ಕಾವ್ಯಗಳಲ್ಲಿ ಇನ್ನೊಂದು ವಿಶೇಷ ಉಂಟು. ನಮ್ಮ ಸಾಹಿತ್ಯದಲ್ಲಿ ಐತಿಹಾಸಿಕ ಚರಿತ್ರೆಗಳು ವಿರಳ. ನಂಜುಂಡನ **ಕುಮಾರ ರಾಮನ** ಚರಿತ್ರವೂ ಗೋವಿಂದ ವೈದ್ಯನ **ಕಂಠೀರವನರಸರಾಜ ಚರಿತ್ರೆ**ಯೂ ಈ ಕಾಲದ ವೈಶಿಷ್ಟ್ಯವೆಂದು ಹೇಳಬಹುದು. ನಂಜುಂಡನು ವಿಜಯನಗರದ ಅರಸನಾದ ಕಂಪರಾಜನ ಮಗನಾದ **ಕುಮಾರ ರಾಮನ** ಚರಿತ್ರೆಯನ್ನು ಬಹು ಮನೋಹರವಾಗಿ ವರ್ಣಿಸಿದ್ದಾನೆ. ಕಾವ್ಯ ಬಂಧವು ಬಹು ಸೊಗಸಾಗಿದೆ. ಕಂಠೀರವನರಸರಾಜರ ವಿಜಯಕ್ಕೆ, ಅವರೇ ನಾಯಕರು, 'ತರುಣೀಜನ ನೇತ್ರೋತ್ಪಲ ಚಂದ್ರನ, ಸರಸ ವಿದ್ಯಾ-ವಿಶಾರದನ, ನರಸರಾಜೇಂದ್ರನ, ಮೈಸೂರೊಡೆಯನ,' ಚರಿತೆಯನ್ನು ಇಲ್ಲಿ ಹೇಳಿದೆ— ಕವಿಯ ವೀರದಾಟಿಯನ್ನೂ ವರ್ಣನಾಶಕ್ತಿಯನ್ನೂ ಇಲ್ಲಿ ನೋಡಬೇಕು.

ಹೊನ್ನಮ್ಮನ **ಹದಿಬದೆಯ ಧರ್ಮವು**, ಪ್ರಸಿದ್ಧವಾದ ನೀತಿಯ ಗ್ರಂಥ. ರಾಮಾಯಣ, ಮಹಾಭಾರತ, ಸ್ಮೃತಿಗಳಲ್ಲಿಯ ಸ್ತ್ರೀ ನೀತಿಯ

ನ್ನೆಲ್ಲ ಸಂಗ್ರಹಿಸಿ, ಸರಸವಾಗಿ ವರ್ಣಿಸಿದ್ದಾಳೆ. ಪತಿವ್ರತಾ ಧರ್ಮದ ವಿಸ್ತೃತವಾದ ವಿವರಣೆಯನ್ನು ಇಲ್ಲಿ ನೋಡಬಹುದು. ಹೊನ್ನಮ್ಮನ ಕಾವ್ಯದ ಹೆಣಿಕೆಯೂ ಹೇಳುವ ರೀತಿಯೂ ಮೃದುಮಧುರವಾಗಿದೆ. ಹೆಣ್ಣಿನ ಕರಳು. ನುರಿತ, ನೊಂದು ಬೆಂದ ಹೆಣ್ಣು ಹೃದಯದಿಂದ ಹೊರ ಬಂದ ವಾಣಿ ಸಹಜವಾಗಿ ರಸಿಕರ ಹೃದಯವನ್ನು ನಾಟುತ್ತದೆ, ತಂತಿ ಯನ್ನು ಮೀಟುತ್ತದೆ.

ಸಾಂಗತ್ಯವು ಶುದ್ಧ ಕನ್ನಡ ಛಂದಸ್ಸು. ತ್ರಿಪದಿಯೇ ಹಿಗ್ಗಿ ಸಾಂಗತ್ಯ ವಾಗಿದೆ. ತ್ರಿಪದಿಯ ಎರಡನೇ ಚರಣದ ಮೊದಲಿನ ಮೂರು ಗಣಕ್ಕೆ ನಿಲ್ಲಿಸಿ, ಅದನ್ನು ಎರಡನೇ ಚರಣದಂತೆ ಮಾಡಿ, ಮತ್ತೆ ಮೊದಲಿನಿಂದಲೂ ಎರಡನೇ ಚರಣವನ್ನು ಪ್ರಾರಂಭಿಸಿ ಮುಗಿಸಿ, ಮೂರನೇ ಚರಣದಂತೆ ಮಾಡುವರು. ಉಳಿದ ಚರಣವು ಆಗ ನಾಲ್ಕನೇ ಚರಣವಾಗಿ ಪರಿಣಮಿಸು ವದು. ತ್ರಿಪದಿಯು ಹಿಗ್ಗಿ ಚೌಪದಿ (ಸಾಂಗತ್ಯ) ಯಾದುದು ಹೀಗೆ.

ತ್ರಿಪದಿ

ಆಗ ಬಾ ಈಗ ಬಾ ಹೋಗಿ ಬಾ ಎನ್ನದೆ ।
ಆಗಲೆ ಕರೆದು ಕೊಡುವವನ ದಾನ ಹೊ ।
ನ್ನಾಗದೆ ಬಿಡದು ಸರ್ವಜ್ಞ ॥

ತ್ರಿಪದಿಯು (ಚೌಪದಿ) ಸಾಂಗತ್ಯವಾದುದು.

ಆಗ ಬಾ ಈಗ ಬಾ ಹೋಗಿ ಬಾ ಎನ್ನದೆ ।
ಆಗಲೇ ಕರೆದು ಕೊಡುವವನ ।
ಆಗಲೇ ಕರೆದು ಕೊಡುವವನ ದಾನ ಹೊ ।
ನ್ನಾಗದೆ ಬಿಡದು ಸರ್ವಜ್ಞ ॥

ಹೀಗೆ ಅಂದದ್ದನ್ನೆ ಅನ್ನುವದಕ್ಕಿಂತ ಹೊಸದನ್ನು ಹೇಳಬೇಕೆಂದು ದ್ವಿರುಕ್ತಿಯ ಚರಣವನ್ನು ಬಿಡಲು ಸುರುವು ಮಾಡಿದರು.

ಸಾಂಗತ್ಯ

ಕಾಲದ ಗಂಡ, ಕರ್ಮದ ಖಂಡ ದುಂಪೊರ್ಗದ ।
ಜಾಲಾಂಧಕಾರ ಮಾರ್ತಾಂಡ ।
ಶೀಲಾಂಗ ಮಂಡಿತದೋರಿದ ನಿಜಬೋಧ ಸುಜ್ಞಾನ ।
ಲೋಲ ನಿರಂಜನ ಸಿದ್ಧ ।

ಹೀಗೆ ಚೌಪದಿಯನ್ನೇ ಕನ್ನಡ ಸಾಹಿತ್ಯದ ಕ್ರಾಂತಿಕಾಲದಲ್ಲಿ ಸಾಂಗತ್ಯವೆಂಬ ಹೆಸರನ್ನಿಟ್ಟು, ಲಿಖಿತವಾಙ್ಮಯಕ್ಕೆ ತೆಗೆದುಕೊಂಡಿದ್ದಾರೆ.

ಸಾಂಗತ್ಯದ ಲಕ್ಷಣ:— ಇದರ ಒಂದು ಮೂರನೆಯ ಪಾದಗಳಲ್ಲಿ ೬ ಮಾತ್ರೆಯ ೪ ಗಣಗಳು, (೪ ವಿಷ್ಣುಗಣಗಳು) ಎರಡನೇ ನಾಲ್ಕನೆಯ ಪಾದಗಳಲ್ಲಿ ೬ ಮಾತ್ರೆಯ ಎರಡು ಮತ್ತು ೪ ಮಾತ್ರೆಯ ಒಂದು ಗಣವು (ಎರಡು ವಿಷ್ಣುಗಣ ಕೊನೆಯಲ್ಲಿ ಒಂದು ಬ್ರಹ್ಮಗಣ) ಇರಬೇಕು. ಈ ಸಾಂಗತ್ಯವನ್ನು ಅಷ್ಟ ತಾಳದ ಗತಿಯಲ್ಲಿ ಹೇಳಲಿಕ್ಕೆ ಬರುವದು.

ಶತಕಗಳು

ಕನ್ನಡ ಸಾಹಿತ್ಯದಲ್ಲಿ ತ್ರಿಪದಿಗಳು ಒಂದು ಸ್ಥಾನವನ್ನು ಪಡೆದಂತೆ ಶತಕಗಳೂ ಒಂದು ಬಗೆಯ ಸ್ಥಾನವನ್ನು ಪಡೆದಿವೆ.

ಈ ಶತಕಗಳು ೧೧ನೆಯ ಶತಮಾನದಿಂದಲೇ ದೊರೆಯುತ್ತವೆ. ಇವು ಬಗೆ ಬಗೆಯ ವೃತ್ತ, ಷಟ್ಪದಿ, ಕಂದಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಜ್ಞಾನ, ಭಕ್ತಿ, ವೈರಾಗ್ಯಗಳನ್ನು ವರ್ಣಿಸುವ ಶತಕಗಳು ಹೆಚ್ಚು. ಇವುಗಳಲ್ಲಿ ಕೆಲವು ಪಂಪಾವಿರೂಪನ ಸ್ತುತಿಗಳಿವೆ. ಹಲವು ವೀರಶೈವ ಮತದ ಹಾಗು ಶಿವಸರ್ವೋತ್ತಮದ ಪ್ರತಿಪಾದನೆಯನ್ನು ಮಾಡುತ್ತವೆ. ತ್ರಿಲೋಕಶತಕದಂಥ ಕೆಲವು ಜೈನ ಮತದ ವರ್ಣನೆಯನ್ನು ಹೇಳುತ್ತವೆ.

ಇವುಗಳಲ್ಲಿ ರತ್ನಾಕರಾಧೀಶ್ವರ, ಅಪರಾಜಿತೇಶ್ವರ, ಸೋಮೇಶ್ವರವೆಂಬ ಶತಕತ್ರಯಗಳು ಜನಜೀವನದಲ್ಲಿ ನಿಂತಿವೆ. ಅವುಗಳ ಶೈಲಿಯೂ ಪದ ಲಾಲಿತ್ಯವೂ ಗಂಭೀರವಾಗಿವೆ.

ನಾಗವರ್ಮನ (೧೦೬೦) 'ಚಂದ್ರಚೂಡಾಮಣಿ ಶತಕ', ಹರಿಹರನ (೧೧೬೫) 'ಪಂಪಾಶತಕ', ಪುಲಗಿರೆಯ ಸೋಮನಾಥನ (೧೧೯೫) 'ಸೋಮೇಶ್ವರ ಶತಕ', ಮಗ್ಗೆಯಮಾಯಿದೇವನ (೧೪೩೦) ಶಿವಾಧವ 'ಶಿವಾವಲ್ಲಭಿ' ಐಪುರಿ ಶತಕಗಳು, ರತ್ನಾಕರವರ್ಣಿಯ (೧೫೫೭) ತ್ರಿಲೋಕ ಹಾಗು ಅಪರಾಜಿತೇಶ್ವರ ಶತಕಗಳು, ಚೆನ್ನಮಲ್ಲಿಕಾರ್ಜುನನ (೧೫೬೦) 'ಶಿವಮಹಿಮಾ ಶತಕ', ಹಿರಿಯೂರು ರಂಗನ (೧೬೫೦) 'ಪಂಪಾ ವಿರೂಪನ ಶತಕ', ಲಕ್ಷ್ಮಯ್ಯನ (೧೭೦೦) 'ಪಶ್ಚಿಮರಂಗಧಾಮ ಶತಕ', ವೀರಭದ್ರರಾಜನ ಶತಕಗಳು, ಶಂಕರ ದೇವನ (೧೬೩೦) 'ಶಂಕರ ಶತಕ',

ಕಾಡಸಿದ್ಧೇಶನ (೧೭೨೫) ಇಷ್ಟ ಶತಕಗಳು ಪ್ರಸಿದ್ಧವಾಗಿವೆ. ರತ್ನಾಕರ ಶತಕವನ್ನಂತೂ ಕೇಳದವರು ಇಲ್ಲ.

ಶತಕದ ರೀತಿಯಲ್ಲಿಯೇ ಬರೆದ ನೀತಿ ಗ್ರಂಥಗಳು ಕೆಲವು ಇವೆ. ನಮ್ಮ ಸಾಹಿತ್ಯದಲ್ಲಿ, **ಸಿದ್ಧನೀತಿ, ವಿರೂಪಾಕ್ಷನೀತಿ, ಚೂಡಾರತ್ನ** ಮೊದಲಾದವು ಪ್ರಸಿದ್ಧವಾಗಿವೆ.

ಗದ್ಯಕಾವ್ಯಗಳು

ಗದ್ಯಕಾವ್ಯವೆಂಬ ಹೆಸರು ಇತ್ತೀಚಿನ ಕೆಲವರಿಗೆ ಆಶ್ಚರ್ಯವನ್ನುಂಟು ಮಾಡಬಹುದು. ರಸ, ಅಲಂಕಾರಗಳಿಂದ ಯುಕ್ತವಾದ ಛಂದೋಬದ್ಧವಾದ ಕಾವ್ಯವಿರುವಂತೆ, ರಸಮಯವಾಗಿ ವರ್ಣಿಸಿದ ಗದ್ಯಕಾವ್ಯಗಳೂ ಕನ್ನಡ ಸಾಹಿತ್ಯದಲ್ಲುಂಟು.

ಕ್ರಿ. ಶ. ೪೫೦ ರಲ್ಲಿ ದೊರೆತ ಹಲ್ಮಿಡಿ ಶಾಸನವು ಗದ್ಯದಲ್ಲಿದೆ. ಅದರ ಭಾಷೆಯು ಸರಸವಾಗಿದೆ. ಅದರ ಒಲವು ಕಾವ್ಯದ ಕಡೆಗೆ ಇದ್ದುದು ಕಾಣುತ್ತದೆ. ೬–೭ ನೇ ಶತಮಾನಗಳಿಂದ ಶಿಲಾಶಾಸನಗಳಲ್ಲಿರುವ ಗದ್ಯವು ಸೊಗಸಾದ ಕಾವ್ಯಗಳಂತೆ ಇದೆ ಎಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಕನ್ನಡದಲ್ಲಿ ಉಪಲಬ್ಧವಿರುವ ಮೊದಲನೆಯ ಗದ್ಯ ಕಾವ್ಯವು ಕ್ರಿ. ಶ. ೬೫೦ ರಲ್ಲಿ ಬರೆಯಲ್ಪಟ್ಟ ತುಂಬಲೂರಾಚಾರ್ಯರ ೯೬ ಗ್ರಂಥ ಪರಿಮಿತಿ ಯುಳ್ಳ **ಚೂಡಾಮಣಿ** ಗ್ರಂಥವು ನಮಗೆ ದೊರೆತಿಲ್ಲ. ನೃಪತುಂಗನು ತನ್ನ ಪೂರ್ವಜರಾದ **ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತಾ**ದಿಗಳು ಗದ್ಯಕಾವ್ಯಕಾರರೆಂದು ಹೇಳುತ್ತಾನೆ. ಅವರ ಗ್ರಂಥ ಗಳೂ ಉಪಲಬ್ಧವಿಲ್ಲ.

ಚಂಪೂಕಾರರು ತಮ್ಮ ಗ್ರಂಥಗಳಲ್ಲಿ ಗದ್ಯವನ್ನು ಉಪಯೋಗಿಸು ತ್ತಾರೆ. ಅದೆಲ್ಲವೂ ಕಾವ್ಯಮಯವಾಗಿದೆ ಎಂಬುದನ್ನು ಹೇಳಲಿಕ್ಕೇ ಬೇಡ. ದುರ್ಗಸಿಂಹನ ಪಂಚತಂತ್ರ ಕಥಾಗ್ರಂಥವಾದುದರಿಂದ ಗದ್ಯವು ಹೆಚ್ಚು ಮಿಶ್ರವಾಗಿದೆ. ಸರಸವಾದ ಗದ್ಯವಿದೆ.

ಕನ್ನಡ ಸಾಹಿತ್ಯದಲ್ಲಿ ಉಪಲಬ್ಧವಾಗಿರುವ ಮೊದಲನೆಯ ಗ್ರಂಥ

ವೆಂದರೆ ತೀರ ಇತ್ತೀಚೆಗೆ ಬೆಳಕಿಗೆ ಬಂದಿರುವ 'ವೊಡ್ಡಾರಾಧನೆ' ಎಂಬ ಗ್ರಂಥ. ಶ್ರೀ. ಗೋವಿಂದ ಪೈಗಳವರು ಇದರ ಕಾಲವನ್ನು ೭ ನೆಯ ಶತಮಾನಕ್ಕೆ ಒಯ್ಯುತ್ತಾರೆ; ಇವರ ನಿರ್ಣಯವನ್ನು ಸ್ವೀಕರಿಸುವದಾದರೆ 'ವೊಡ್ಡಾರಾಧನೆ' ಯೆ ಕನ್ನಡ ಪ್ರಥಮ ಗದ್ಯ ಸಾಹಿತ್ಯವೆಂದು ಹೇಳಬೇಕಾಗುತ್ತದೆ. ಇದಾದ ಮೇಲೆ ಚಾವುಂಡರಾಯನ (೯೭೮) **ಚಾವುಂಡರಾಯ ಪುರಾಣ.** ಇದು ಚತುರ್ವಿಂಶತಿ ತೀರ್ಥಂಕರರ ಚರಿತವು. ಗ್ರಂಥಾಂತ್ಯದಲ್ಲಿ

'ಇದು ಸಕಲಭುವನ ಜನ ವಂದ್ಯಮಾನ ಸಂಯಮ ಸಮಾಧಾನ ವಿಜಿತ ದುರಿತಾರಾತಿಸೇನ, ಶ್ರೀಮದಜಿತಸೇನ ಬಟ್ಟಾರಕ, ಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ ಧರ್ಮವಿಜಯ ಶ್ರೀಮಚ್ಚಾವುಂಡರಾಯ ವಿರಚಿತಮಪ್ಪ, ತ್ರಿಷಷ್ಟಿ ಲಕ್ಷಣ ಮಹಾಪುರಾಣದೊಳ್' ಎಂದು ಹೇಳಿದೆ.

ಶಾಂತಲಿಂಗ ದೇಸಿಕನ (೧೬೭೨) 'ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ', ಜಕ್ಕಭೂಪಾಲನ 'ಭಾರತ ಕಥಾಸಂಗ್ರಹ' ಚಿಕದೇವರಾಜನ (೧೬೭೨) 'ಚಿಕದೇವರಾಜ ಬಿನ್ನಪ', ತಿರುಮಲಾರ್ಯರ (೧೬೪೫) 'ಚಿಕದೇವರಾಜ ವಂಶಾವಳಿ', ದೊಡ್ಡತಿಮ್ಮದಾಸರ (೧೭೦೦) 'ರಾಮಾನುಜ ವಿಜಯ', ಯಾದವರ (೧೮೦೦) 'ಕಲಾವತಿ ಪರಿಣಯ', ಮುಮ್ಮಡಿ ಕೃಷ್ಣರಾಜರ 'ವತ್ಸರಾಜನ ಕಥೆ', ಕೆಂಪು ನಾರಾಯಣನ (೧೮೨೩) 'ಮುದ್ರಾಮಂಜೂಷ' ಗಳು ಪ್ರಸಿದ್ಧವಾಗಿವೆ.

ಇವುಗಳಲ್ಲಿ ಮತಪ್ರಚಾರಕ ಗ್ರಂಥಗಳೇ ಹೆಚ್ಚು. ಚಾವುಂಡರಾಯ ಪುರಾಣವು ಜೈನ ಪುರಾತನರ, ಭೈರವೇಶ್ವರ ಕಾವ್ಯ ಕಥಾಸೂತ್ರರತ್ನಾಕರವು ವೀರಶೈವ ಪುರಾತನರ ಕಥೆಗಳನ್ನು ಹೇಳುತ್ತವೆ. ಭಾರತ ಕಥಾಸಂಗ್ರಹವಂತೂ ಭಾರತವನ್ನು ಹೇಳುತ್ತದೆ. ರಾಮಾನುಜ ವಿಜಯವು ವಿಷ್ಣು ಸರ್ವೋತ್ತಮತ್ವವನ್ನೂ ರಾಮಾನುಜ ಪಂಥವನ್ನೂ ಹೇಳುತ್ತದೆ. ಇವೆಲ್ಲವೂ ಒಳ್ಳೇ ಬಿಗುವುಳ್ಳ ಅಲಂಕಾರಿಕ ಭಾಷೆಯಲ್ಲಿವೆ.

ಇವುಗಳಲ್ಲಿ ಚಿಕದೇವರಾಜ ಬಿನ್ನಪವು ಅತ್ಯಂತ ಶ್ರೇಷ್ಠವಾಗಿದೆ.

ಚಿಕದೇವರಾಜನ ಪ್ರತಿಭೆಯೂ ವರ್ಣನಾಶೈಲಿಯೂ, ಅವರ್ಣನೀಯವಿವೆ. ಶಬ್ದ ಜೋಡಣೆಯು ಕಿವಿಗೆ ಇಂಪಾಗಿದೆ.

ಮೇಲುಕೋಟೆಯ ನಾರಾಯಣದೇವರಿಗೆ, ಬಿನ್ನವಿಸಿಕೊಂಡು ೩೦ ಬಿನ್ನಹಗಳಿಂದ ಇದು ಕೂಡಿದೆ. ಉದಾಹರಣೆಗೆ—

> "ಸಕಲ ಲೋಕನಿಯಾಮಕಾ! ನೀನೀ ಸಂಸಾರದೊಳೋರೋರ್ವಂಗೆ ಪಟ್ಟಾಭಿಷೇಕಾದಿ ಸುಖಮಂ ಓರೊರ್ವಂಗೆ ಶಿರಶ್ಛೇದನಾದ ದುಃಖಮನೆಸಗುವುದರಿಂ ವಿಷಮನೆಂದುಂ, ಕರ್ಮಾನುಗುಣಮಾದ ಫಲಮನೀವುದರಿಂ, ಕರ್ಮಕ್ಕೆ ಪರತಂತ್ರನೆಂದುಂ, ಪಾಪಿಗಳ್ ಪಡುವ ದುಃಖಮಂ ಪರಿಹರಿಸದೆ ನೋಡುತಿರ್ಪುದರಿಂ ನಿರ್ದಯನೆಂದುಂ ಸ್ವಲ್ಪ ಬುದ್ಧಿಗಳ್ಗೆ ತೋರ್ಕುಂ"

ಇದರಂತೆಯೇ ಚಿಕದೇವರಾಜ ವಂಶಾವಳಿಯೂ ಬಹು ರಮಣೀಯವಾದ ಕಾವ್ಯವಿದೆ. ಬಂಧವು ಪ್ರೌಢವಾಗಿದೆ.

ಚಿಕದೇವರಾಜನೂ, ತಿರುಮಲರಾಯನೂ ಗದ್ಯಕಾವ್ಯಗಳ ಸೀಮಾಪುರುಷರೆಂದು ಹೇಳಬಹುದು.

೫. ನಾಟಕಗಳು

ಕನ್ನಡ ಸಾಹಿತ್ಯದಲ್ಲಿ ೧೭ನೆಯ ಶತಮಾನದ ವರೆಗೆ, ಒಂದೂ ನಾಟಕವು ದೊರೆಯದಿರುವದು ಆಶ್ಚರ್ಯದ ಮಾತಾಗಿದೆ. **ಸಿಂಗರಾರ್ಯರ, 'ಮಿತ್ರವಿಂದಾ ಗೋವಿಂದ"** ಎಂಬ ನಾಟಕವು ಒಂದನ್ನು ಬಿಟ್ಟರೆ, ಮತ್ತೊಂದು ತತ್ಪೂರ್ವ ಗ್ರಂಥ ಉಪಲಬ್ಧವಿಲ್ಲ. ಸಾಗರದಂತಿರುವ, ಹಳಗನ್ನಡ ಸಾಹಿತ್ಯದಲ್ಲಿ ಈ ನಾಟಕಗಳು ಇಲ್ಲದಿರುವದು ವಿಚಾರಣೀಯ ಸಂಗತಿಯಾಗಿದೆ.

ಕನ್ನಡ ಸಾಹಿತ್ಯ ಹುಟ್ಟುವದಕ್ಕೆ ಎಷ್ಟೋ ಮೊದಲೇ ಸಂಸ್ಕೃತದಲ್ಲಿ **ಅಶ್ವಘೋಷ, ಭಾಸ, ಕಾಳಿದಾಸ, ಶೂದ್ರಕ** ಮೊದಲಾದ ಮಹಾಕವಿಗಳು ನಾಟಕಗಳನ್ನು ಬರೆದು ಪ್ರಚಾರಗೊಳಿಸಿದ್ದರು. ಇವರನ್ನೇ ಆದರ್ಶವಾಗಿ ಇಟ್ಟುಕೊಂಡ ನಮ್ಮ ಕನ್ನಡ ಕವಿಗಳು ಈ ನಾಟಕಗಳನ್ನು ನೋಡಿರ. ಲಾರರೆ? ರನ್ನಕವಿಯು ಭಟ್ಟನಾರಾಯಣನ **'ವೇಣೀಸಂಹಾರ'** ವನ್ನು ಓದಿದ್ದನೆಂದು ಸಾಧಾರಣವಾಗಿ ಹೇಳಬಹುದು. ಇವರಿಗೆ ನಾಟಕಗಳನ್ನು ಬರೆಯಲು, ಸಾಮರ್ಥ್ಯವಿದ್ದಿಲ್ಲವೆನ್ನಬೇಕೆ? ಪಂಪರನ್ನರು ತಮ್ಮ ಕಾವ್ಯಗಳಲ್ಲಿ, ಹಲವು ಸಂದರ್ಭಗಳನ್ನು ಬಹಳ ಸುಂದರವಾಗಿ, ಕಣ್ಣೆದುರಿಗೆ ನಡೆದಂತೆ, ಸಂಭಾಷಣೆಯ ಚಮತ್ಕಾರವನ್ನು ಮಿಂಚಿಸಿ ನಾಟಕೀಯವಾಗಿ ವರ್ಣಿಸಿದ್ದಾರೆ.

ನಿಜವಾಗಿಯೂ ವಿಚಾರ ಮಾಡಿದರೆ, ನಮ್ಮ ಜನಾಂಗವೇ ನಾಟ್ಯ ಜನಾಂಗ. **ನಟರೇ ನಮ್ಮ ಮೊದಲಿಗರು.** ಕುಣಿತದವರೆಂದೇ ಈ ಜನಾಂಗದ ಕೀರ್ತಿ. ನೃತ್ಯವಿದ ಜನಾಂಗದಲ್ಲಿ ನಾಟಕಗಳೂ ಬಳಕೆಯಲ್ಲಿದ್ದಿರಬೇಕೆಂದು ಊಹಿಸುವುದು ಅಪ್ರಾಪ್ತವಲ್ಲ.

ಕವಿರಾಜ ಮಾರ್ಗದಲ್ಲಿ ಬಂದಿರುವ **'ಪಗರಣ'** ವೆಂಬ ಶಬ್ದವು, **'ಪ್ರಕರ್ಣ'** ವೆಂಬ ಶಬ್ದದ ತದ್ಭವ. ಪ್ರಕರ್ಣವು ನಾಟಕ ವಿಭಾಗ. ಇದಕ್ಕೆ ಇಷ್ಟು ದೂರಾನ್ವಯವು ಕಾರಣವಿಲ್ಲ. 'ಪಗರಣ' ಶಬ್ದವೇ ನಟನೆ, ನಾಟಕವೆಂದೆನಿಸುತ್ತದೆ. **'ಹಗರಣ'** ವೆಂಬ ಶಬ್ದವನ್ನು ನಾವು

ಇಂದು ಬಳಸುತ್ತೇವೆ. ಇದಕ್ಕೆ ಗೂಢಾರ್ಥವೇನಿದೆ? **ಸೋಗುಮಾಡು ವದು,** ಒಂದು ಬಗೆಯ ಭಾವಪ್ರದರ್ಶನ ಮಾಡುವದು, ನಟನೆ ಮಾಡು ವದು ಎಂದಿಲ್ಲವೇ? **ಪಂಪನು** ತನ್ನ ಕಾವ್ಯದಲ್ಲಿ '**ಪಗರಣದರಸು**' ಎಂದು ಉಪಯೋಗಿಸಿದ್ದಾನೆ. ಅಂದರೆ ನಾಟಕದಲ್ಲಿಯ ಅರಸು ಎಂಬರ್ಥ. ಸ್ವತಃ ಪಂಪನು ಅರ್ಜುನನು ಕಲಿತ ವಿದ್ಯೆಗಳನ್ನು ಹೇಳುವಾಗ ಭರತ ಮುನಿಯ ನೃತ್ಯ–ನಾಟಕ–ಶಾಸ್ತ್ರವನ್ನೂ ಕಲಿತನೆಂದು ಹೇಳುತ್ತಾನೆ. **ನಾಗ-ಚಂದ್ರನ** (೧೧೦೦) ಕಾವ್ಯಗಳಲ್ಲಿ, **ನೃತ್ಯ, ನಾಟಕ–ರಂಗಭೂಮಿ ಗಳನ್ನೊಳಗೊಂಡ** ಉತ್ಪ್ರೇಕ್ಷೆ, ರೂಪಕಗಳು ದೊರೆಯುತ್ತವೆ. **ನೇಮಿ-ಚಂದ್ರನು** (೧೧೭೦) ತಿಮಿರ ಜವನಿಕೆ ಓಸರಿಸಲು **ನರ್ತಕಿಯು ಸೂರೆಗೆಯ್ದ ಪುಷ್ಪಗಳಂತಿದ್ದ** ನಕ್ಷತ್ರಗಳನ್ನು ಬಣ್ಣಿಸುತ್ತಾನೆ. **ಕೇಶಿ-ರಾಜನು** ಶಬ್ದಮಣಿದರ್ಪಣದಲ್ಲಿ, ಸತಿ ಸಪ್ತಮಿಯ ಉದಾಹರಣೆಯನ್ನು ಹೇಳುವಾಗ '**ಪಾತ್ರವಾಡೆ ವಾದಕಂ ಬಾಜಿಸಿದಂ**' ಎಂದು ಹೇಳಿದ್ದಾನೆ. **ರಾಘವಾಂಕನ** ಹರಿಶ್ಚಂದ್ರ ಕಾವ್ಯವಂತೂ ಒಂದು ನಾಟಕವಂತೆಯೆ ಇದೆ. **ಕರ್ಣಪಾರ್ಯನ** (೧೧೪೦) 'ಮಾಳವೀಮಾಧವ' **ಕೇಶಿರಾಜನ** (೧೨೬೦) 'ಸುಭದ್ರಾಹರಣ' ಹಾಗು 'ಪ್ರಬೋಧಚಂದ್ರೋದಯ' ವೂ, ನಾಟಕಗಳಾಗಿರಬೇಕೆಂದು ಕವಿಚರಿತೆಕಾರರು ಊಹಿಸುತ್ತಾರೆ.

ವಿಜಯನಗರದ ಅರಸರ ನಾಟಕ ಪ್ರೀತಿಯಂತೂ ಇತಿಹಾಸ ಪ್ರಸಿದ್ಧವಿದೆ. ಅನೇಕ ರಾಜರು ಸ್ವತಃ ಸಂಸ್ಕೃತ ನಾಟಕಗಳನ್ನು ಬರೆದು ಅರಮನೆಗಳಲ್ಲಿ ಆಡಿಸುತ್ತಿದ್ದರು. **ಕೃಷ್ಣದೇವರಾಯನನ್ನೇ** ತೆಗೆದು ಕೊಂಡರೆ, ಅವನೇ ಸ್ವತಃ '**ಜಾಂಬವತೀ**' ಎಂಬ ಸಂಸ್ಕೃತ ನಾಟಕ ವನ್ನು ಬರೆದು ಆಡಿದುದು ಪ್ರಸಿದ್ಧವಿದೆ. ಇವನು ರಸಿಕನೂ, ಸಂಗೀತ ಪ್ರಿಯನೂ ಇದ್ದುದರಿಂದ ಎಷ್ಟೋ ನಟರಿಗೆ, ಮೆಚ್ಚುಗೆಗಳನ್ನು ಕೊಟ್ಟ ಉಲ್ಲೇಖಗಳು ದೊರೆಯುತ್ತವೆ. ಆ ಕಾಲಕ್ಕೆ **ನಾಟಕಗೃಹವೊಂದಿ** ತ್ತೆಂದು ಡಾ. **ಸಾಲೇತೋರರು** ಸಿದ್ಧಮಾಡಿದ್ದಾರೆ. ರಂಗದೇವ ರಾಯನು (೧೫೨೦) ಬೊಂಬೆಯಾಟದವನಿಗೆ ದತ್ತಿಯನ್ನು ಕೊಟ್ಟನೆಂದು ಉಲ್ಲೇಖವಿದೆ.

ರತ್ನಾಕರವರ್ಣಿಯು (೧೫೫೭) ಭರತೇಶ ವೈಭವದಲ್ಲಿ **ಪೂರ್ವ**

ನಾಟಕಸಂಧಿ, ಉತ್ತರನಾಟಕಸಂಧಿ ಎಂಬ ಎರಡು ಪ್ರಕರಣಗಳನ್ನೇ ಮಾಡಿದ್ದಾನೆ. ಭರತೇಶನು ತನ್ನ ಸಾಮಂತ ಮೊದಲಾದ ಪರಿವಾರದೊಡನೆ ನಾಟ್ಯಶಾಲೆಗೆ ಬಂದು, ನಟರ ನಾಟಕವನ್ನು ನೋಡಿ ಹರುಷಿತನಾಗಿ, ನಟರಿಗೆ ಮೆಚ್ಚುಗಳನ್ನು ಕೊಟ್ಟು ಹೋದ ಸುಂದರವಾದ ವರ್ಣನೆಯನ್ನು ನಾವು ನೋಡಬಹುದು. ರಂಗಭೂಮಿ, ನಟಿಗಳ ವೇಷಭೂಷಣ, ರೀತಿ–ನೀತಿಗಳನ್ನು ಬಹು ಸೊಗಸಾಗಿ ವರ್ಣಿಸಿದ್ದಾನೆ. ಈ ವರ್ಣನೆ ಓದಿದೊಡನೆಯೇ ರಂಗಭೂಮಿಯ ಚಿತ್ರವು ಕಣ್ಣೆದುರಿಗೆ ನಿಲ್ಲುತ್ತದೆ.

ಭಟ್ಟಾಕಳಂಕನು (೧೬೦೪) ತನ್ನ ಕಾಲದಲ್ಲಿ ನಾಟಕಗಳು ಇದ್ದುವೆಂದು ಹೇಳುತ್ತಾನೆ. '**ಮಂಜರೀಮಕರಂದದಲ್ಲಿ**' ಕನ್ನಡ ಭಾಷೆಯ ಪ್ರೌಢಿಮೆಯನ್ನು ಕೆಳಗಿನಂತೆ ಬಣ್ಣಿಸಿದೆ.

"ನ ಚೈಷಾ ಭಾಷಾಶಾಸ್ತ್ರಾನುಪಯೋಗಿನೀ ತತ್ವಾರ್ಥ ಮಹಾಶಾಸ್ತ್ರ ವ್ಯಾಖ್ಯಾನಸ್ಯ, ಷಣ್ಣವತಿ ಸಹಸ್ರ ಪ್ರಮಿತಗ್ರಂಥ ಸಂದರ್ಭರೂಪಸ್ಯ, ಚೂಡಾಮಣ್ಯಭಿಧಾನಸ್ಯ, ಮಹಾಶಾಸ್ತ್ರಸ್ಯ, ಅನ್ಯೇಷಾಂಚ, (ಶಬ್ದಾಗಮ ಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾ ಕಾವ್ಯನಾಟಕಾಲಂಕಾರ ಕಲಾ ಉಪಲಭ್ಯಮಾನತ್ವಾತ್, ಅತ ಏವ ಮಹಾರಾಜ ಪರಿಗ್ರಾಹ್ಯಾ ಏತದ್ ಗ್ರಂಥಕರ್ತೃಣಾಮೇವ ಮಹಾಜನತ್ವಾತ್"

ಗೋವಿಂದ ವೈದ್ಯನು (೧೬೪೮) ಕಂಠೀರವ ನರಸರಾಜ ವಿಜಯದಲ್ಲಿಯೂ **ನಾಟ್ಯಸಾಲೆಯ** ವರ್ಣನೆಯನ್ನು ಬಹು ಮನೋಹರವಾಗಿ ವರ್ಣಿಸುತ್ತಾನೆ.

ಕಂಠೀರವ ನರಸರಾಜನು ಪರಿವಾರದೊಡನೆ ನಾಟ್ಯಶಾಲೆಯನ್ನು ಪ್ರವೇಶಿಸಿ ಆಸನದ ಮೇಲೆ ಕುಳಿತ ಬಳಿಕ :

"ತೂರ್ಯತ್ರಯದ ಮಂಗಳಘೋಷವು ಕಿವಿಗಳನ್ನು ಆಕರ್ಷಿಸುತ್ತಿರುವಾಗಲೇ, 'ಭಾಸುರ ಬಿರುದಿನ **ನಾಟ್ಯ**ವಧುಗಳು ಸಂತೋಷದೆ ನಡೆತಂದರು. ಇವರು ತೊಳಗುವ **ನವರತ್ನಗಾಸೆ**ಯಿಂದ ಪರಿಶೋಭಿಸುತ್ತಿದ್ದರು; ಸರ್ವಾಂಗಕ್ಕೆ **ಮಣಿಭೂಷಣ** ಅಳವಟ್ಟವರು. ಥಳಥಳಿಸುವ ಮುದ್ದುಮೊಗದ ಚೆನ್ನೆಯರು. ಇವರಿಗೆ ನಾಟ್ಯಾಭಿನಯಗಳನ್ನು ಕಲಿಸಿದ

ಭರತಾಚಾರ್ಯನೊ, ನಾಟ್ಯವಧುಗಳ ಗುಂಪಿನಲ್ಲಿದ್ದನು. ಆತನ 'ಉಡಿಯ ಸುತ್ತಿದವಲ್ಲಿಪಾಟನ, ಕರದಲಿ ಪಿಡಿದು ರಂಜಿಪ ರನ್ನಸೆಳೆಯ ಬೆಡಗನ್ನು' ಬಣ್ಣಿಸಲಿಕ್ಕಾಗದಂತಹದು. ನಾಟ್ಯವಧುಗಳೆಲ್ಲ **ಕಾಂಡಪಟದ** ಮರೆಯೊಳು, (ಪರದೆಯ ಹಿಂದೆ) ಭರತಶಾಸ್ತ್ರಾಧಿದೇವಿಯರಂತೆ, ರಂಜಿಸತೊಡಗಿದರು. ಆಗ ತಾಳ, ಮದ್ದಳೆ, ಮುಖವೀಣೆ, ಆವುಜ, ಗೀತಾದಳಪ, ನಾಟ್ಯವಧುಗಳ ಕಾಲ ಗೆಜ್ಜೆಯ ರವ, ಗತಿ, ಇವೆಲ್ಲ ಕೂಡಿ ಕಿವಿಗೊಂದು ಹೊಸ ಸವಿಯನ್ನು ಬೀರಲು ತೊಡಗಿದುವು. ಮೊದಲು **ಸೂತ್ರಧಾರನು** ಬಂದು, ತತ್ತಕಾರವ ವಿರಚಿಸಿ ಜವನಿಕೆ (ಪರದೆ) ದೆಗೆಯೆ, ಭರತಶಾಸ್ತ್ರಾಗಮದಂತೆ, ಪ್ರೌಢೆಯರು ಪುಷ್ಪಗಳನ್ನು ಸೂಸಿದರು. ಬಳಿಕ ಮಂಗಳಾಚರಣಕ್ಕೆ ಮೊದಲಾಯಿತು. ಇನಿದಾದ ದನಿಯಲ್ಲಿ

> "ನರಸಿಂಹಸ್ತುತಿ ಗೀತ-ಪ್ರಬಂಧವ | ಪಿರಿದು ಸುಳಾದಿ ತಾಳದಲಿ |
> ಕರದಭಿನಯಗೂಡಿ ಕಡು ಕುಶಲದೆ ನಾಟ್ಯ | ದಿರವ ಮೆರೆದರಂಗನೆಯರು."

ಅಲ್ಲದೆ ಅವರು **'ಕರಭೇದ' 'ದೃಷ್ಟಿಭೇದ' 'ಶಿರಭೇದ' 'ಸ್ಥಾನಕಭೇದ' 'ಚಾರಿಯಭೇದ'** ಇವೆಲ್ಲವುಗಳ ಮೂಲಕ ಭಾವವನ್ನು ಪ್ರದರ್ಶಿಸಿದರು. ಆ ನರ್ತಕಿಯರಿಗೆ, ನಾಟ್ಯಭೇದಗಳಾದ ಅಂಗ, ಪ್ರತ್ಯಂಗೋಪಾಂಗ ಬಹುಚಾಳಿ, ವರದೇಶಿ, ಕೋಲಚಾರಿ, ಅಂಗಹಾರ, ಮಂಡಲ, ಕರಕ್ಷೇತ್ರ' ಎಂಬವೆಲ್ಲ ಚನ್ನಾಗಿ ಗೊತ್ತಿದ್ದುವು. 'ರಂಭಾನಾರಿಯ ಪಾತ್ರದ ಪರಿಣತಿಯ.......ಊರ್ವಶಿಯ ಮುಂಬರಿದೆಸೆವ ಕಟ್ಟಣೆಗಳ ಗತಿಯ' ಅವರು ಆಡಿ ತೋರಿಸಿದರು. ಅದರಂತೆಯೇ 'ಪಿರಿದು ಪ್ರಬಂಧ-ಜಕ್ಕಣಿ ರಾಜಕೀರನ ಮೆರೆವ ಕಟ್ಟಳೆಯಾಟಗಳ', ಪ್ರದರ್ಶನಮಾಡಿದರು. ಆಗ ಅವರ ಪಾತ್ರಕ್ಕೆ ಮೆಚ್ಚಿ, **ಪಾರ್ವತಿ, ಶಚಿ, ಶಾರದೆ** ಮೊದಲಾದವರು ಹೂಮಳೆಗರೆದರೇನೋ ಎಂಬಂತೆ, ಅಲ್ಲಿ ಕೃತ್ರಿಮವಾಗಿ ರಚಿಸಿದ **ಸೂತ್ರಾಭ್ರ** (ಅಭ್ರ-ಮೋಡ) ಗಳಿಂದ ಪರಿಮಳ ಪುಷ್ಪಗಳು ಸೂಸಿದವು. ನಾಟ್ಯವನ್ನು ನೋಡಿ ನಲಿದ ನರಸರಾಜನು 'ಭರತಜ್ಞ-ಮೇಳಗಾರರಿಗೆ' ನಾಟ್ಯವಧುಗಳಿಗೆ 'ಸುರಚಿರ ವಸನ, ಕರ್ಪುರದ ಪರಿಮಳಮೆರೆವ ವೀಳೆಯಗಳನು ಇತ್ತು ಮನ್ನಿಸಿದ"* ಈ ವರ್ಣನೆಯು ನಮ್ಮ ಜನಾಂಗದ ನಾಟ್ಯಕಲೆಯ ಪರಿಪೂರ್ಣತೆಯನ್ನು ವರ್ಣಿಸುತ್ತದೆ.

---

* **'ಕರ್ನಾಟಕ ಜನಜೀವನ'.**

೧೬೮೦ರಲ್ಲಿಯಂತೂ **ಸಿಂಗರಾರ್ಯರ ನಾಟಕವೇ** ದೊರೆಯುತ್ತದೆ. ಆದೆ 'ಮಿತ್ರವಿಂದಾ ಗೋವಿಂದ' ವೆಂಬ ನಾಟಕವು. ಇದು ರತ್ನಾವಳೀ ಎಂಬ ಸಂಸ್ಕೃತ ನಾಟಕದ ರೂಪಾಂತರ.

ಈಗಿನ ನಮ್ಮ ಜನಪದದಲ್ಲಿ **ದೊಡ್ಡಾಟ, ಬೈಲಾಟ**ಗಳು ಕಾಣುತ್ತವೆ. ಇವೇ ನಮ್ಮ ನಾಟಕಗಳಾಗಿರಬೇಕು. ಭರತನ ನಾಟ್ಯಶಾಸ್ತ್ರವನ್ನರಿತ, ಕನ್ನಡಿಗರ ಬೆಳವಣಿಗೆಯು ಈ ದಿಶೆಯಲ್ಲಿ ಆಗಲಿಲ್ಲವೆಂಬ ಮಾತನ್ನು ನಮ್ಮ ಸಾಹಿತ್ಯವು ಅಲ್ಲಗಳೆಯುತ್ತದೆಂಬುದು ಮೇಲಿನ ವರ್ಣನೆಗಳಿಂದ ಸ್ಪಷ್ಟವಾಗುತ್ತದೆ.

ನಮ್ಮ **ಶಿಲ್ಪಕಲೆ**ಯೂ ನಮ್ಮ ಮಾತಿಗೆ ಸಾಕ್ಷಿಯನ್ನು ಕೊಡುತ್ತದೆ. ನಮ್ಮ ಶಿಲ್ಪದಲ್ಲಿ ಕಾಣುವ, **ಭಾವಭಂಗಿ**ಗಳು ಇನ್ನೂ ನಮ್ಮ ದೊಡ್ಡಾಟ ದಲ್ಲಿ ನೋಡಲು ಸಿಗುತ್ತವೆ. ಈ ಭಂಗಿಗಳು ಜೀವನದಲ್ಲಿರದೆ ಶಿಲ್ಪದಲ್ಲಿ ಮೂಡಬಹುದೇ! ಭರತನ ನಾಟ್ಯಶಾಸ್ತ್ರಕ್ಕೂ ಕನ್ನಡಿಗರ ನೃತ್ಯವೇ ಆಧಾರ ವಾಗಿರಬೇಕೆಂದು ನಮಗೆ ಅನಿಸುತ್ತದೆ. ಈ ಪ್ರಶ್ನೆಯನ್ನು ವಿದ್ವಾಂಸರಿಗೆ ಬಿಟ್ಟುಬಿಡುತ್ತೇನೆ.

ಇಷ್ಟೆಲ್ಲ ಸಂಗತಿಗಳು ಕನ್ನಡಿಗರ **ನಾಟ್ಯಮಯ ಜೀವನವನ್ನು** ಹೇಳುತ್ತಿದ್ದರೂ, ಕನ್ನಡಿಗರೇ ಸಂಸ್ಕೃತ ನಾಟಕಗಳನ್ನು ಬರೆದಿದ್ದರೂ, ಕನ್ನಡ ನಾಟಕಗಳೇಕಿಲ್ಲವೆಂಬ ಪ್ರಶ್ನೆಯು ಹಾಗೆಯೇ ಉಳಿಯುತ್ತದೆ.

ಮತಪ್ರಚಾರಕ ದೃಷ್ಟಿಯು ಈ ಕಡೆಗೆ ನಮ್ಮ ಕವಿಗಳ ಲಕ್ಷ್ಯವನ್ನು ಎಳೆದಂತೆ ತೋರುವದಿಲ್ಲ. ವೀರಶೈವರಿಗಂತೂ ಆ ಕಾಲಕ್ಕೆ ಮತಪ್ರಚಾರ ವನ್ನು ಮಾಡುವದೇ ಬಹು ಮುಖ್ಯ ಕಾರ್ಯವಾಗಿತ್ತು. ಜೈನರೂ, ಮತ ಪ್ರಚಾರಕ್ಕಾಗಿಯೇ ಕನ್ನಡದಲ್ಲಿ ಬರೆಯಲು ಪ್ರಾರಂಭಿಸಿದುದು. ಆದರೆ ಈ ಕಾರಣವು ನಮಗೆ ಸಬಲವಾಗಿ ಕಾಣಲೊಲ್ಲದು.

ರಾಜಾಂಗಣದಲ್ಲಿ ಸಂಸ್ಕೃತ ನಾಟಕಗಳು, ನಡೆಯುತ್ತಿದ್ದವೆಂಬ ಮಾತು ನಮ್ಮ ಮೇಲಿನ ತರ್ಕಸರಣಿಗೆ ವಿರೋಧವಾಗಿದೆ. ಕನ್ನಡದಲ್ಲಿ ಬರೆಯುವ ಅವಶ್ಯಕತೆಯೇ ತೋರಿರಲಿಕ್ಕಿಲ್ಲವೇ? ಈ ದೃಷ್ಟಿಯಿಂದ ನೋಡಿದರೆ ಒಂದು ಕಲ್ಪನೆಯು ಮುಸಮುಸಕಾಗಿ ಒಡಮೂಡುವದು.

ನಮ್ಮ ನಟರು **ಕಾವ್ಯಗಳನ್ನೇ ನಾಟಕರೂಪವಾಗಿ ಉಪಯೋಗಿಸಿರಬೇಕು.** ಯಾಕಂದರೆ, ಇಂದಿಗೂ ಹಳ್ಳಿಗಳಲ್ಲಿ ಭಾಗವತನು ತನ್ನ ಮೇಳದೊಂದಿಗೆ, ಕಥೆಗಳನ್ನಾಡುವದನ್ನು ನೋಡಿದರೆ, ನಮ್ಮ ಮಾತಿಗೆ ಅರ್ಥವಾಗುವದು. ಇದರಿಂದ ನಾಟಕಗಳು ಎಂದು ಹೆಸರಿಟ್ಟು ಬರೆಯುವ ಅವಶ್ಯಕತೆ ತೋರದಿರಲು ಸಾಕು. ರಾಜಾಂಗಣದಲ್ಲಿ ಸಂಸ್ಕೃತ, ಜನಜೀವನದಲ್ಲಿ ಕನ್ನಡವಿರಬಹುದು. ಇದೂ ಒಂದು ಊಹೆ. ನಾಟಕಗಳು ಇರಬಹುದು, ದೊರೆತಿರಲಿಕ್ಕಿಲ್ಲ. ಏನೇ ಆದರೂ ಸಾಹಿತ್ಯದ ದೃಷ್ಟಿಯಿಂದ ಇದು ಒಂದು ಕೊರತೆಯೇ ಸರಿ.

೬. ವಚನಸಾಹಿತ್ಯ

೧೨ನೇ ಶತಮಾನವು ಕನ್ನಡ ಸಾಹಿತ್ಯದ ಸ್ವಾತಂತ್ರ್ಯ ಯುಗ. ಶ್ರೀ ಬಸವೇಶ್ವರರು ಅವೈದಿಕವಾದ ಜೈನ ಮತದ ವಿರುದ್ಧವಾಗಿಯೂ ವೈದಿಕ ಸನಾತನಿಗಳ ವಿರುದ್ಧವಾಗಿಯೂ ಬಂಡೆಬ್ಬಿಸಿ, ವರ್ಣಗಳ ಸಂಕೋಲೆಗಳನ್ನು ಕಡಿದೊಗೆದು, ಸಮಾಜವನ್ನು ಬಂಧಮುಕ್ತ ಮಾಡಿದರು. ಅಧ್ಯಾತ್ಮದ ಜಿಜ್ಞಾಸುಗಳೆಲ್ಲರೂ ಒಂದೇ ಎಂದೂ, ಅದಕ್ಕೆ ಜಾತಿ, ಕೋತಿಗಳಿಲ್ಲವೆಂದೂ ಹೆಣ್ಣು-ಗಂಡುಗಳ ಭೇದವಿಲ್ಲವೆಂದೂ ಸಾರಿ, ಸಮಾಜವನ್ನೇ ಕಲಕುಮಲಕು ಮಾಡಿಬಿಟ್ಟರು. ವೈದಿಕ ಮುಕ್ತಿ ಮಾರ್ಗವನ್ನು, ಸರ್ವಮಾನವರಿಗೆ ತೆರೆದರು. ಸಾಮಾಜಿಕ ಹಾಗು, ಧಾರ್ಮಿಕ ಕಟ್ಟು ಕಟ್ಟಳೆಗಳಿಂದ ಹತ್ತಿಕ್ಕಲ್ಪಟ್ಟ ಆತ್ಮಿಕ ಶಕ್ತಿಗೆ ಪುಟ ಸಿಕ್ಕಂತಾಗಿ ಮುಮುಕ್ಷುಗಳ ತೃಷೆಯು ಭುಗಿಲೆಂದು ಮೇಲಕ್ಕೆ ಬಂದಿತು. ಸ್ತ್ರೀಯರಲ್ಲಿ ಪುರುಷರಲ್ಲಿ ಬ್ರಾಹ್ಮಣರಲ್ಲಿ ಹೊಲೆಯರಲ್ಲಿ ಎಲ್ಲಿ ನೋಡಿದರೂ ಆತ್ಮಿಕ ಶಕ್ತಿಯ-ಜ್ಞಾನಪಿಪಾಸೆಯ ಬೆಳಕು ಕಾಣಹತ್ತಿತು. ಅಧ್ಯಾತ್ಮವಾದಿಗಳ ಗುಂಪೇ ಕಣ್ಣಿಗೆ ಬೀಳಹತ್ತಿದವು. ಇದಕ್ಕೆ ಕರ್ನಾಟಕದ **ಆಧ್ಯಾತ್ಮಿಕ ಯುಗವೆಂದೇ** ಹೇಳಬಹುದು. ಈ ಸಾಧಕರ, ಶಿವಶರಣರ, ಮುಮುಕ್ಷುಗಳ, ಅನುಭಾವಿಗಳ **ಉಸಿರೇ ವಚನಗಳು.**

ಬಸವೇಶ್ವರರು ತಮ್ಮ ಉಪದೇಶವನ್ನೆಲ್ಲ — ಅನುಭವಗಳನ್ನೆಲ್ಲ ಸಾಮಾನ್ಯ ಜನರ ಬಳಿಕೆಯ ಭಾಷೆಯಲ್ಲಿ ಸುಲಭವಾಗಿ ಲಲಿತವಾಗಿ ಹೇಳ ತೊಡಗಿದರು. **ಅದೇ ವಚನರೂಪವಾಗಿ** ಹೊರಬಿದ್ದಿತು. ಜನ ಸಾಮಾನ್ಯ ರಿಗೆ ತಿಳಿಯಬೇಕೆಂಬ ಈ ದೃಷ್ಟಿಯು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟು ಮಾಡಿತು. ಈ ವಚನಗಳು ಸಾಹಿತ್ಯದಲ್ಲಿ ಹೊಸ ಮನ್ವಂತರವನ್ನೇ ಪ್ರಾರಂಭಿಸಿದವು.

ಚಂಪೂಕಾವ್ಯಗಳಲ್ಲಿಯ ಗದ್ಯಕ್ಕೆ ವಚನವೆಂದೇ ಕರೆಯುತ್ತಿದ್ದರು. ಬಸವೇಶ್ವರರು ಈ ವಚನಗಳನ್ನೇ ವಿಶಿಷ್ಟ ರೀತಿಯಿಂದ ಉಪಯೋಗಿಸಿ, ಅವುಗಳಿಗೆ ಜೀವಕಳೆಯನ್ನು ತುಂಬಿ ವಚನಗಳಿಗೆ ಕನ್ನಡ ಸಾಹಿತ್ಯದಲ್ಲಿ

ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟರು. ವಚನ ವಾಙ್ಮಯಕ್ಕೆ ಬಸವೇಶ್ವರರಿಂದ ಕಳೆಬಂದುದಾದರೂ ಅದಕ್ಕಿಂತಲೂ ಮೊದಲೇ ಈ ಸಾಹಿತ್ಯಕ್ಕೆ ಪ್ರಾರಂಭವಾಗಿದೆ. **ಜೇಡರ ದಾಸಿಮಯ್ಯ** (೧೦೪೦) **ಸಕಲೇಶಮಾದರಸ** (೧೧೫೦) **ಗಣದಾಸಿ ವೀರಣ್ಣ** ಮೊದಲಾದವರು ವಚನದಲ್ಲಿಯೇ ಬರೆಯಲು ಪ್ರಾರಂಭಿಸಿದ್ದರು. ಬಸವ, ಶರಣಬಸವಾದಿಗಳ ಕೈವಾಡದಿಂದ ವಚನಗಳು ಸರ್ವೋತ್ಕೃಷ್ಟವಾದ, ಆಧ್ಯಾತ್ಮಜ್ಞಾನ, ಅನುಭವ, ವೇದೋಪನಿಷತ್ತುಗಳ ತತ್ತ್ವಜ್ಞಾನಗಳನ್ನು ಹೇಳುವ ಉತ್ತಮ ಸಾಧನಗಳಾಗಿ ಪರಿಣಮಿಸಿದವು. ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದವು. ಇಂತಹ **ತೇಜಸ್ವಿಯಾದ ವಾಙ್ಮಯವು** ಯಾವ ದ್ರಾವಿಡ ಭಾಷೆಯಲ್ಲಿಯೂ ದೊರೆಯದು. **ವೇದೋಪನಿಷತ್ತುಗಳ ಸಾಮರ್ಥ್ಯ, ಹಾಗು ಗುಣಗಳುಳ್ಳ ದಿವ್ಯವಾಙ್ಮಯವಿದು.** ಬಸವ, ಶರಣಬಸವ, ಅಲ್ಲಮಪ್ರಭು ಮೊದಲಾದ ಶಿವಶರಣರು, ವೀರಶೈವ ಮತದ ಪ್ರಚಾರಕ್ಕಾಗಿ, ಅನುಭವಗಳನ್ನು ಹೇಳುವದಕ್ಕಾಗಿ, ವಚನಗಳನ್ನು ಉಪಯೋಗಿಸಿದ್ದರಿಂದ ಇವು **ವಚನಶಾಸ್ತ್ರ**ವೆಂಬ ರೂಪವನ್ನೇ ತಾಳಿದವು.

ವೀರಶೈವ ಮತದ ತತ್ವಗಳನ್ನೂ ವೀರಶೈವ ಧರ್ಮಾಚಾರಗಳನ್ನೂ ಹೇಳುವುದೇ ಈ ವಚನಗಳ ಉದ್ದೇಶವು. ವೇದಾಗಮಗಳಲ್ಲಿ ಹೇಳಲ್ಪಟ್ಟ ತತ್ವಗಳನ್ನು ಸುಲಭವಾಗಿ ಅನುಭವ ಪೂರ್ಣವಾಗಿ ಶಿವಶರಣರು ಹೇಳಿದ್ದಾರೆ. ಅನನ್ಯಭಕ್ತರಾದ ಶಿವಶರಣರು ಮೋಕ್ಷವನ್ನು ತಮ್ಮ ಗುರಿಯನ್ನಾಗಿ ಇಟ್ಟುಕೊಂಡು ಹೇಳಿದ **ಅಧ್ಯಾತ್ಮಶಾಸ್ತ್ರವಿದು.**

ಅಧ್ಯಾತ್ಮವನ್ನೇ ಧ್ಯೇಯವಾಗಿಟ್ಟುಕೊಂಡ ಈ ವಚನಗಳಲ್ಲಿ ಎರಡು ರೀತಿಯ ವಚನಗಳು ಕಣ್ಣಿಗೆ ಬೀಳುತ್ತವೆ. ಒಂದು ತತ್ವಗಳ ವಿಚಾರ, ಇನ್ನೊಂದು ವೀರಶೈವ ಮತಕ್ಕೆ ವಿಶಿಷ್ಟವಾದ ಶಕ್ತಿವಿಶಿಷ್ಟಾದ್ವೈತ, ಷಟ್‌ಸ್ಥಳ, ಅಂಗ ಲಿಂಗ ಸಂಬಂಧ, ಲಿಂಗಧಾರಣಾದಿ ವೀರಶೈವಾಚಾರ, ಅಷ್ಟಾವರಣ ಮತ್ತು ಪಂಚಾಚಾರ ಮುಂತಾದ ಮತದ ವಿಚಾರಗಳು.

ಅವರ ಸಂಪ್ರದಾಯದ ರೀತಿಯಲ್ಲಿ ನೋಡಿದರೆ, ಶಿವೈಕ್ಯ-ಲಿಂಗೈಕ್ಯವೇ,

ಗುರಿಯು. ಶಿವನೇ ಲಿಂಗನು. ಜೀವವೇ ಅಂಗ. ಸಾಧಕರಲ್ಲಿ ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಸ್ಥಲ ಪ್ರಾಣಲಿಂಗಸ್ಥಲ, ಶರಣಸ್ಥಲ, ಮತ್ತು ಐಕ್ಯ ಸ್ಥಲವೆಂದು **ಷಟ್‌ಸ್ಥಲಗಳು.** ಲಿಂಗಾಂಗ ಸಾಮರಸ್ಯವು ಉಂಟಾಗಲಿಕ್ಕೆ, ಗುರುಲಿಂಗ, ಜಂಗಮಪೂಜೆ, ಪಾದೋದಕ, ಪ್ರಸಾದಗ್ರಹಣ, ವಿಭೂತಿ, ರುದ್ರಾಕ್ಷಿಧಾರಣ, ಮತ್ತು ಷಡಕ್ಷರಿ ಮಂತ್ರವೆಂಬ **ಅಷ್ಟಾವರಣ ಮಾರ್ಗವು** ಹೇಳಲ್ಪಟ್ಟಿದೆ. ಇದರಂತೆಯೇ ಸದಾಚಾರ, ಗಣಾಚಾರ, ನಿತ್ಯಾಚಾರ, ಶಿವಾಚಾರ, ಮತ್ತು ಲಿಂಗಾಚಾರಗಳೆಂದು **ಪಂಚಾಚಾರ**ಗಳು ಈ ವಚನಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ.

ತಾತ್ವಿಕ ದೃಷ್ಟಿಯಿಂದ ನೋಡಿದರೆ ಮಾನವನು ಜ್ಞಾನವಂತನಾಗಿ ಲಿಂಗಾಂಗ ಸಾಮರಸ್ಯ (ಶಿವೈಕ್ಯ) ವನ್ನು ಹೊಂದುವ ವರೆಗಿನ ಎಲ್ಲ ತತ್ವಗಳ ವಿವೇಚನೆಯು ಈ ವಚನಗಳಲ್ಲಿ ಕಂಡು ಬರುವದು.

> ಪರವಸ್ತುವಿನ (ಪರಮಾತ್ಮನ) ಸ್ವರೂಪ, ಸೃಷ್ಟಿ, ಸೃಷ್ಟಿರಚನೆಯ ಕ್ರಮ. ಪರಮಾತ್ಮನ ಅಸ್ತಿತ್ವ, ಮುಕ್ತಿಯೇ ಮಾನವನ ಧ್ಯೇಯ, ಸಾಕ್ಷಾತ್ಕಾರ, ಸಾಕ್ಷಾತ್ಕಾರಿಯ ನಿಲವು, ಅಜ್ಞಾನಮುಕ್ತಿಯ ಬಯಕೆ, ಸರ್ವಾರ್ಪಣ, ಜ್ಞಾನ ಯೋಗ, ಭಕ್ತಿಯೋಗ, ಕರ್ಮಯೋಗ, ಧ್ಯಾನಯೋಗ, ಜ್ಞಾನ-ಭಕ್ತಿ-ಕ್ರಿಯಾ-ಧ್ಯಾನಗಳ ಸಂಬಂಧ, ಸಾಧಕನಿಗೆ ಅವಶ್ಯವಿದ್ದ ಗುಣ, ಶೀಲಕರ್ಮ-ಗಳು, ವಿಧಿನಿಷೇಧಗಳು, ವರ್ಣಿಸಲ್ಪಟ್ಟಿವೆ. ಅಂತು ಶಿವಸರ್ವೋತ್ತಮತ್ವ, ಶಿವಾದ್ವೈತಗಳೇ ಈ ವಚನಗಳ ಗುರಿಯು ಅವನ್ನು ಪ್ರತಿಪಾದಿಸಿದೆ.

ಈ ವಚನ ವಾಙ್ಮಯಕ್ಕೆ ವೇದೋಪನಿಷತ್ತುಗಳಿಂದ, ವಿಶೇಷವಾಗಿ ಶೈವಾಗಮಗಳಿಂದಲೇ ವಿಷಯವನ್ನೆತ್ತಿದ್ದಾರೆ.

ಶಿವಸರ್ವೋತ್ತಮತ್ವವನ್ನು ಪ್ರತಿಪಾದಿಸುವದೇ ಶೈವಾಗಮಗಳ ಧ್ಯೇಯ, ಇವು ೨೮ ಇರುವವು. ಇವು ವೇದಗಳಂತೆ ಅಪೌರುಷೇಯ ವೆಂದು ಶೈವರ ನಂಬುಗೆ, ಇವಲ್ಲದೆ ಉಪಾಗಮಗಳೂ ಇವೆ. ಇಪ್ಪತ್ತೆಂಟು ದಿವ್ಯಾಗಮಗಳು, ಎಂದು ಗಣದಾಸೀ ವೀರಣ್ಣನು ಉಲ್ಲೇಖಿಸುತ್ತಾನೆ. ಜೀವನು ಅಷ್ಟಾವರಣ ಸಾಧನಗಳಿಂದ, ಪಂಚಾಚಾರ ಗಳಿಂದ ಷಟ್‌ಸ್ಥಲಗಳಾಚರಣೆಯಿಂದ, ಇಷ್ಟಲಿಂಗ ಪೂಜೆಯಿಂದ, ಸರ್ವಾರ್ಪಣದಿಂದ ಶಿವಾದ್ವೈತವನ್ನು ಸಾಧಿಸಬೇಕೆಂದು ಈ ಆಗಮಗಳು

ಹೇಳುತ್ತವೆ. **ಕನ್ನಡ ವಚನ ಆಗಮುಗಳೂ** (ವಚನಗಳೂ) ಇವನ್ನೇ ಹೇಳುತ್ತವೆ. ಇದಲ್ಲದೆ, ಪುರಾತನರ ವಚನಗಳೂ ಇವರಿಗೆ ಆಧಾರ-ವಾಗಿವೆ.

"ಆದ್ಯರ ವಚನ ಪರುಷ ಕಂಡಯ್ಯ, ಅವರು ಶ್ರುತಿಯ ತೋರಿ ನುಡಿವರು, ದೃಷ್ಟವ ತೋರಿ ನಡೆವರು, ಶ್ರುತಿ–ಸ್ಮೃತ್ಯಾದಿಗಳೆಲ್ಲ ಮಾಯವಾದರೂ ಇಷ್ಟವಾದ ಪುರಾತನರ ನುಡಿಗಳುಳಿದರೆ ಸಾಕು. ಏಕೆಂದರೆ ಪರಮಾತ್ಮನ ಜ್ಞಾನವಾಗಲು ಆದ್ಯರ ವಚನ ಬಹು ವೇದ್ಯವಯ್ಯ" ಎಂದು ಮುಂತಾಗಿ ವಚನಕಾರರು ಹೇಳುತ್ತಾರೆ.

ಈ ವಚನ ಯುಗವು ೧೨ ನೇ ಶತಮಾನದಿಂದ ಪ್ರಾರಂಭವಾಯಿತು. ಆದರೂ ಈ ಶತಮಾನದ ಉತ್ತರಾರ್ಧದಿಂದ ೧೩ ನೇ ಶತಮಾನದ ವರೆಗೆ ವಚನಕ್ಕೆ ಊರ್ಜಿತ ಕಾಲ. ಈ ೫೦ ವರ್ಷಗಳಲ್ಲಿ ಆಗಿ ಹೋದ ವಚನಕಾರರಷ್ಟು ಮುಂದೆ ಯಾವ ಕಾಲದಲ್ಲಿಯೂ ಆಗಲಿಲ್ಲ. ಭೀಮಕವಿಯ ಕಾಲಕ್ಕೆ (೧೩೬೯) ವಚನಗಳು ತಮ್ಮ ಸಾಹಿತ್ಯದಲ್ಲಿ ಪ್ರಾಮುಖ್ಯತೆಯನ್ನು ಕಳೆದುಕೊಂಡವು. ಮುಂದೆ ತೋಂಟದ ಸಿದ್ಧಲಿಂಗ ಯತಿಗಳ ಕಾಲಕ್ಕೆ (೧೪೭೦) ಮತ್ತೆ ವಚನಗಳು ತಲೆಯೆತ್ತಿದವಾದರೂ ಮೊದಲಿನಷ್ಟು ವಿಪುಲವಾಗಿ ಬೆಳೆದಂತೆ ಕಾಣುವದಿಲ್ಲ. ಸಂಗೀತದ ಬೆರಕೆಯಿಂದ ಈ ವಚನಗಳು, ತ್ರಿಪದಿ, ಸಾಂಗತ್ಯ, ಷಟ್ಪದಿಗಳ ರೂಪಗಳನ್ನು ತಾಳಿದುವು.

ಈ ವಚನಕಾರರನ್ನು ಲಕ್ಷಣಗಳ ಮೇಲಿಂದ, ಬಸವೇಶ್ವರ, ಚೆನ್ನಬಸವೇಶ್ವರ, ಅಲ್ಲಮಪ್ರಭು, ಅಂಬಿಗರ ಚೌಡಯ್ಯ ಹಾಗು ಸಿದ್ಧಲಿಂಗ ಯತಿ ಈ ಐವರ ವಚನಗಳ ಮೇರೆಗೆ ವಿಭಾಗಿಸಬಹುದು. **ಬಸವೇಶ್ವರನ** ವಚನಗಳಲ್ಲಿ ಅವನ ನಿಷ್ಕಪಟಭಾವವೂ, ಉದಾರಬುದ್ಧಿ, ಭಕ್ತಿ, ಅಂತರಂಗ ಸ್ಪರ್ಶಿಯಾದ ಗುಣ ಇವೇ ಮೊದಲಾದ ಲಕ್ಷಣಗಳು ಎದ್ದು ಕಾಣುತ್ತವೆ. ಈ ಲಕ್ಷಣಗಳುಳ್ಳ ವಚನಗಳನ್ನೆಲ್ಲ ಬಸವೇಶ್ವರರ ವರ್ಗದಲ್ಲಿ ಸೇರಿಸಬಹುದು.

ಚೆನ್ನಬಸವೇಶ್ವರರು, ಚಿತ್ಕಳೆಯ ಅವತಾರಿಯೆಂದೂ ಮಹಾ ಜ್ಞಾನಿ

ಯೆಂದೂ ಪ್ರಸಿದ್ಧಿಯಿದೆ. ಅದಕ್ಕೆ ತಕ್ಕಂತೆಯೇ ಇವರ ವಚನಗಳಲ್ಲಿ ಜ್ಞಾನದ ತೇಜವು ಕಂಡುಬರುವದು. ಶುದ್ಧ, ನಿರ್ಮಲವಾದ, ಸಂಶಯಾ-ತೀತವಾದ, ಸ್ಪಷ್ಟವಾದ ಜ್ಞಾನದ ದಿವ್ಯ ಜ್ಯೋತಿಯನ್ನು ಈ ವಚನಗಳಲ್ಲಿ ನಾವು ಕಾಣಬಹುದು. ಈ ಬಗೆಯ ವಚನಗಳನ್ನೆಲ್ಲ ನಾವು ಚೆನ್ನಬಸವೇಶ್ವರರ ಮಾರ್ಗದಲ್ಲಿ ಸೇರಿಸುತ್ತೇವೆ.

ವೀರಶೈವರಲ್ಲಿ **ಅಲ್ಲಮಪ್ರಭುಗಳಿಗೆ** ಅಗ್ರಸ್ಥಾನವಿದೆ. ಕಪಟ, ಮೋಸ ಗಳುಳ್ಳ ಜಂಗಮರ ಲೋಪದೋಷಗಳನ್ನು ಇವರು ಸಹಿಸುವದಿಲ್ಲ. ಶೂನ್ಯ ಸಿಂಹಾಸನಾಧಿಪತಿಗಳಾಗಿದ್ದ, ವೈರಾಗ್ಯನಿಧಿಯಾಗಿದ್ದ ಇವರ ವಚನಗಳಲ್ಲಿಯ ವೀರವೈರಾಗ್ಯವೂ ಆಧ್ಯಾತ್ಮಿಕ ಅನುಭವಗಳೂ ಹೆಚ್ಚಾಗಿವೆ. ಕೆಲವು ವಿಷಯ ಗಳು ಸಾಮಾನ್ಯರ ಬುದ್ಧಿಗೆ ನಿಲುಕದಂತಹವು. ಇಂಥ ವಚನಗಳನ್ನೆಲ್ಲ ಅಲ್ಲಮಪ್ರಭುಗಳ ವರ್ಗದಲ್ಲಿ ಸೇರಿಸಬಹುದು.

ನಾಲ್ಕನೆಯ ವರ್ಗವೆಂದರೆ, ಅಂಬಿಗರ ಚೌಡಯ್ಯನದು. ಈತನ ವಚನ ಗಳಲ್ಲಿ ದಯಾದಾಕ್ಷಿಣ್ಯಗಳಿಲ್ಲ, ಮೋಸ, ಆಡಂಬರಗಳನ್ನು, ಬೈಲಿಗೆಳೆಯುವದ ರಲ್ಲಿ ಇವನು ನಿಪುಣನು. ಈ ರೀತಿಯ ವಚನಗಳನ್ನೆಲ್ಲ ಚೌಡಯ್ಯನ ವಚನದ ರೀತಿಯಲ್ಲಿ ವರ್ಣಿಸಬಹುದು.

ಒಟ್ಟು ವಚನಕಾರರೆಲ್ಲ ಈ ನಾಲ್ಕು ವರ್ಗಗಳಲ್ಲಿ ಯಾವುದೊಂದು ವರ್ಗದಲ್ಲಿ ಬರುತ್ತಾರೆ. ವಚನಕಾರರ ಸಂಖ್ಯೆಯೂ ವಚನಗಳ ಸಂಖ್ಯೆಯೂ ವಿಪುಲವಾಗಿದೆ. ವಚನ ಶಾಸ್ತ್ರದ ವಿಸ್ತಾರವು ಇಂತಿಷ್ಟೇ ಎಂದು ವಚ ನಿಸಲು ಬರುವದಿಲ್ಲ. ಸಿದ್ಧರಾಮಯ್ಯನು ಒಂದು ವಚನದಲ್ಲಿ ಅಲ್ಲಯ್ಯನ ಮತ್ತು ಇನ್ನೆಂಟು ಜನರ ವಚನಗಳು ಕೂಡಿ ೧೬೩೧೧೩೦೩೦೦ ಇರುವವು ಎಂದು ಹೇಳಿದ್ದಾನೆ. ಈ ವಚನಗಳು ಕೋಟ್ಯಾನುಕೋಟಿ ಇರುವ ವೆಂದು ವೀರಶೈವರ ನಂಬುಗೆಯಿದೆ. ಇದರ ಅರ್ಥವಿಷ್ಟೆ! ವಚನಗಳು ವಿಪುಲವಾಗಿವೆ. ಈ ವರೆಗೆ, ೨೧೩ ಜನ ವಚನಕಾರರ ವಚನಗಳ ಶೋಧವಾಗಿದೆ. ಇವರಲ್ಲಿ ಸುಪ್ರಸಿದ್ಧ ವಚನಕಾರರು ಹದಿಮೂರು ಜನರು ಮಾತ್ರ, ಉಳಿದವರೆಲ್ಲರೂ ಒಂದಿಲ್ಲೊಂದು ಬಗೆಯಿಂದ ಇವರನ್ನೇ ಅನುಸರಿಸಿದ್ದಾರೆ.

ಬಸವ, ಚೆನ್ನಬಸವ, ಅಲ್ಲಮಪ್ರಭು, ಮಡಿವಾಳ ಮಾಚಯ್ಯ, ಕೊಂಡಗುಳಿ ಕೇಶಿರಾಜ, ಸಿದ್ಧರಾಮ, ಅಂಬಿಗರ ಚೌಡಯ್ಯ, ಸೊಡ್ಡಳದ ಬಾಚರಸ, ಮೋಳಿಗೆಯ ಮಾರಯ್ಯ, ಹಡಪದ ಅಪ್ಪಣ್ಣ, ಡಕ್ಕೆಯ ಬೊಮ್ಮಣ್ಣ, ಮಹಾದೇವಿಯಕ್ಕ, ಮಹಾದೇವಿ, ಬಿಜ್ಜಳದೇವಿ, ಕಾಳವ್ವ, ಮುಕ್ತಾಯಕ್ಕ, ನಿಂಬವ್ವೆ ಇವರೇ ಹೆಸರಾದವರು. ವಚನಶಾಸ್ತ್ರ ನಿರ್ಮಾಣ ಕರು. ಅನುಭಾವಿಗಳು.

ವಚನದ ಸಾಹಿತ್ಯ ಸ್ವರೂಪ

ವಚನಗಳು ಕೇವಲ ನೀರಸವಾದ, ತರ್ಕಗಳ ಹೆಬ್ಬೊತ್ತಿಗೆಯೆಂದು ಯಾರೂ ತಿಳಿಯಕೂಡದು. ಭಕ್ತಿಯ ಭಾವಾವೇಶದಿಂದ, ತಲ್ಲೀನರಾದ ಶಿವಶರಣರ ಹೃದಯದಿಂದ ಹೊರಹೊರಟ ಈ ವಚನಗಳು ಕಾವ್ಯಮಯ ವಾಗಿವೆ. ಅಂತರಂಗದ ಶುದ್ಧಿಗಾಗಿ ಕವಿಹೃದಯವು ಕಾತರಗೊಂಡಾಗ ಹೊರಹೊಮ್ಮಿದ ದಿವ್ಯ ಸ್ಫೂರ್ತಿಯ ಕಾವ್ಯಗಳಿವು. ಸಣ್ಣ ಸಣ್ಣ ವಾಕ್ಯಗಳಲ್ಲಿ ವಿಪುಲಾರ್ಥವನ್ನು ತುಂಬುವ ಅವರ ರೀತಿ, ಬಾಣದಂತೆ ನೇರವಾಗಿ ಹೃದ ಯಕ್ಕೆ ಬಂದು ತಗಲುವ ಅವರ ಸರಣಿ, ತಿಳಿಯಾದ ದೇಶಿಗನ್ನಡದ ಬೆಡಗು ಮೋಹಕವಾಗಿವೆ. ಸುಂದರವಾದ ಸಾಹಿತ್ಯದ ಲಕ್ಷಣಗಳಿಂದ ಒಡಗೂಡಿವೆ. ಈ ಕನ್ನಡ ಸಾಹಿತ್ಯದಲ್ಲಿ ಇಲ್ಲಿಯವರೆಗೆ, ವ್ಯಕ್ತಿಯ ವ್ಯಕ್ತಿತ್ವವನ್ನು ಕನ್ನಡಿ ಯಂತೆ ತೋರುವ ಸಾಹಿತ್ಯವಿರಲಿಲ್ಲ. ವಚನಗಳು ಅವರವರ ಮನಸ್ಸಿನ ಚಿತ್ರಗಳನ್ನು ಅತ್ಯಂತ ಮನೋಹರವಾಗಿ ಚಿತ್ರಿಸಿವೆ. ಇದು ಈ ಸಾಹಿತ್ಯದ ವೈಶಿಷ್ಟ್ಯವೆಂದೇ ಹೇಳಬೇಕು.

ಕಾವ್ಯವು ಕವಿಯ ದಿವ್ಯದರ್ಶನದ–ಅನುಭವದ ವಾಣಿಯಾಗಿರಬೇಕೆಂಬ ಮಾತು ವಚನಗಳಿಗೆ ಪೂರ್ಣವಾಗಿ ಅನ್ವಯಿಸುತ್ತದೆ. ಚೆನ್ನಬಸವನ ಜ್ಞಾನ, ಬಸವೇಶ್ವರನ ಭಕ್ತಿಯ ಉತ್ಕಟತೆ, ಪ್ರಭುದೇವರ ವೈರಾಗ್ಯಭಾವ, ಚೌಡಯ್ಯನ ಕಟುವಿಡಂಬನೆಗಳ ವರ್ಣನೆಗಳು ರೋಮಾಂಚಕಾರಿಯಾಗಿವೆ. ಉಪದೇಶ ಮಾಡುವ ರೀತಿ, ವರ್ಣನೆ, ಅಸಂಧಿಗ್ಧವಾಗಿ ಹೇಳುವ ಸರಣಿ, ಅಲಂಕಾರ ಗಳು, ಶಬ್ದಗಳ ಜೋಡಣೆ, ಹಾಗು ಔಚಿತ್ಯಗಳು ವರ್ಣನಾತೀತ ವಾಗಿವೆ. ಅಲ್ಲಲ್ಲಿ ಉಪಯೋಗಿಸಲ್ಪಟ್ಟ ಜಾನಪದದ ನಾಣ್ನುಡಿಗಳು

ಕಾವ್ಯಕ್ಕೆ ಕಾಂತಿಯನ್ನುಂಟು ಮಾಡಿವೆ. ಉಪಮೆಗಳು ಒಮ್ಮೆಲೆ ಚಿತ್ತವನ್ನು ಆಕರ್ಷಿಸುತ್ತವೆ.

ಈ ವಚನಗಳಿಗೆ ಕಾವ್ಯದ ಕಟ್ಟು ಯಾವುದೇ ಇರದಿದ್ದರೂ ತಾನೇ ತಾನಾಗಿ ಕಾಣಿಸಿಕೊಂಡ ಅನುಪ್ರಾಸವುಳ್ಳ, ಗತಿಬದ್ಧವಾದ ಕಾವ್ಯವನ್ನು ಕಾಣಬಹುದಾಗಿದೆ. ಅನೇಕ ವಚನಗಳನ್ನು ಏಕನಾದದ ಶ್ರುತಿಯೊಂದಿಗೆ ಹಾಡುವ ವಾಡಿಕೆಯುಂಟು. ಒಟ್ಟಿನಲ್ಲಿ ವಚನವಾಙ್ಮಯವು ಸಾಹಿತ್ಯದ ಲಕ್ಷಣಗಳಿಂದ, ತನ್ನ ವಿಶಿಷ್ಟವಾದ ರೀತಿಯಿಂದ, ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ.

ಕಿರಿದರಲ್ಲಿ ಪಿರಿದರ್ಥವುಳ್ಳ—

> ಆಸೆಯೇ ದಾಸತ್ವ, ನಿರಾಸೆಯೇ ಈಶತ್ವ, ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕುಲವಿಲ್ಲ. ತನ್ನತಾನರಿದಡೆ ತನ್ನರಿವೆ ಗುರು. ಆತ್ಮನಿಶ್ಚಯವಾದಲ್ಲಿಯೇ ಕೈವಲ್ಯ. ತನ್ನನರಿದಲ್ಲಿಯೇ ಒಳಗು.

ಎಂಬ ಈ ಬಗೆಯ ವಚನಗಳು ಧಾರಾಳವಾಗಿವೆ.

ವರ್ಣನೆಗಳು :

ವರ್ಣನಾಕುಶಲರು ನಮ್ಮ ವಚನಕಾರರು. ಪರಮಾತ್ಮನ ವಿಶ್ವರೂಪದ ವರ್ಣನೆಯನ್ನು ಹೀಗೆ ಮಾಡಿದ್ದಾರೆ:

> "ಪಾತಾಳದಿಂ ಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತಮಾಂಗ, ಬ್ರಹ್ಮಾಂಡವೇ ಮುಕುಟ, ಗಗನವೇ ಮುಖ; ಚಂದ್ರಾರ್ಕಾಗ್ನಿಗಳೇ ನೇತ್ರ. ದಶದಿಕ್ಕುಗಳೇ ಬಾಹುಗಳು. ಮಹದಾಕಾಶವೇ ಶರೀರ..............

ಉಪದೇಶದ ರೀತಿ

ಉಪದೇಶಮಾಡುವ ರೀತಿಯು ಬಹು ಸೊಗಸಾಗಿದೆ. ಉಪದೇಶವು ನಾಟಿ, ಜ್ಞಾನದ ಬೆಳಕು ಬೀಳುವ ಹಾಗೆ ಮಾಡುವ ರೀತಿಯಿದು.

> "ಅಷ್ಟಾಷಷ್ಟಿ ಕೋಟಿ ತೀರ್ಥವ ಮಿಂದರಿಲ್ಲ, ಕಾಣಿರಣ್ಣ. ಲಕ್ಷಕೋಟಿ ಜಪವನೆಣಿಸಿ ಧ್ಯಾನ, ಹೋಮ, ನೇಮ, ಮೌನ, ಜಪಮಾಡಿದರಿಲ್ಲ ಕಾಣಿರಣ್ಣ. ನೂರಿಪ್ಪತ್ತು ವೇಳೆ ಭೂಪ್ರದಕ್ಷಿಣೆ ಮಾಡಿದರಿಲ್ಲ ಕಾಣಿರಣ್ಣ! ಕಾಶಿ, ಕೇದಾರ, ಶ್ರೀಶೈಲ, ಶಿವಗಂಗೆ ಹೋದರಿಲ್ಲ ಕಾಣಿರಣ್ಣ. ಇವು ಎಲ್ಲವೂ ಬರಿಯ ಭ್ರಾಂತಿ ಕೇಳಿರಣ್ಣಾ! ಇಪ್ಪಠಾವು ಹೇಳಿಹೆ ಕೇಳಿರಣ್ಣ. ಶ್ರೀಗುರು ಕರುಣದಿಂದೆ ಬಿಜಯಂಗೈಸಿ ಕೊಟ್ಟ ಪರಮಲಿಂಗ

ತನ್ನ ಕರದಲ್ಲಿ ತುಂಬಿಪ್ಪುದಯ್ಯ, ಹಲವು ಕಡೆಗೆ ಹೋಔ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಆ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆಯಬಲ್ಲರೆ ಅಲ್ಲಿಪ್ಪನು ಪರಮೇಶ್ವರನು. ಇದೇ ನಿಶ್ಚಯ. ಉಳಿದುದೆಲ್ಲ ಹುಸಿ ಕಂಡೆಯಾ. ಮಹಲಿಂಗ ಗುರು ಸಿದ್ಧೇಶ್ವರ ಪ್ರಭುವೇ."

ನೀರ ಕಂಡಲ್ಲಿ ಮುಳುಗುವರಯ್ಯ ! ಮರನ ಕಂಡಲ್ಲಿ ಸುತ್ತುವರಯ್ಯ ! ಬತ್ತುವ ಜಲವ, ಒಣಗುವ ಮರವ, ನೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ !

ಆರ್ತಹೃದಯ

ಮುಕ್ತಿಯ ಬಯಕೆಯಿಂದ ಹೃದಯವು ಕಾತರಗೊಂಡು ಪ್ರಾರ್ಥಿಸುತ್ತದೆ.

"ವಿಷಯವೆಂಬ ಹಸುರನೆನ್ನ ಮುಂದೆ ಪಸರಿಸದಿರಯ್ಯ; ಪಶುವೇನು ಬಲ್ಲದು ಹಸುರೆಂದೆಳೆಸುವದಲ್ಲದೆ ? ವಿಷಯ ರಹಿತವಮಾಡಿ, ಭಕ್ತಿರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವ ನೆರೆದುನೋಡಿ, ಸಲಹಯ್ಯ ಕೂಡಲಸಂಗಮದೇವಾ ! ಕೆಸರಲ್ಲಿ ಬಿದ್ದ ಪಶುವಿನಂತೆ, ದೆಸೆದೆಸೆಗೆ ಬಾಯಿಬಿಡುತ್ತಿದ್ದೇನಯ್ಯ, ಆರೈವರಿಲ್ಲ, ಅಕಟಾ ! ಪಶುವೆಂದೆನ್ನ ಕೂಡಲಸಂಗಮದೇವ ಕೊಂಬುಹಿಡಿದೆತ್ತುವನ್ನಕ್ಕರ.

ಎನ್ನ ಯೋಗಕ್ಷೇಮ ನಿಮ್ಮದಯ್ಯ, ಎನ್ನ ಹಾನಿ ವೃದ್ಧಿ ನಿಮ್ಮದಯ್ಯ ! ಎನ್ನ ಮಾನಾಪಮಾನ ನಿಮ್ಮದಯ್ಯ, ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ !

ಈ ವಚನಗಳಲ್ಲಿ ಭಕ್ತಿ, ವೈರಾಗ್ಯ ಆರ್ತಹೃದಯಗಳನ್ನು ಕಾಣಬಹುದು.

ಸತಿ-ಪತಿ-ಕೂಟ (ಆತ್ಮಾನಂದ)

ಪರಮಾತ್ಮನೇ ಪತಿ. ಆತ್ಮನೆ ಸತಿ-ಎಂದು ಬಗೆದು ಸತಿ-ಪತಿಗಳ ಸಂಗವನ್ನೇ ಆತ್ಮಾನಂದಕ್ಕೆ ಹೋಲಿಸಿದ ವಚನಗಳು ಬಹು ಮನೋಹರವಾಗಿವೆ.

"ಎಲವೋ ಎಲವೋ ನಲ್ಲ; ನಿಮ್ಮ ಕೂಡದ ಮುನ್ನ ನಾ ಕಾಣೆ, ಕೂಡಿದ ಬಳಿಕ ಮತ್ತೆ ಕಾಣೆನಯ್ಯ ! ಕೂಟದ ಸುಖದಿಂದ ನಾನೀನೆಂದರಿಯೆ ಕಪಿಲ ಸಿದ್ಧಮಲ್ಲಿನಾಥಯ್ಯ.

ನಲ್ಲನ ಕೂಡುವ ಭರದಲ್ಲಿ ಎನ್ನ ಇದಿರು ಏನೆಂದರಿಯೆ. ನಲ್ಲನ ಕೂಡವಾಗಲು ಎನ್ನ

ನಲ್ಲನ ಏನೆಂದರಿಯೆ. ಉರಲಿಂಗದೇವನ ಕೂಡಿದ ಬಳಿಕ ನಾನೋ ತಾನೋ ಏನೆಂದರಿಯೆ.

ಅಂತರಂಗ, ಬಹಿರಂಗ, ಆತ್ಮಸಂಗ, ಒಂದೇ ಅಯ್ಯಾ, ಆರೂಢ ಸುಖವನು ಕೂಡಲಸಂಗಮದೇವ ತಾನೇ ಬಲ್ಲನು.

ಆತ್ಮನಿರೀಕ್ಷಣೆ

ಕವಿಯ ಹೃದಯ ಮಂದಿರದಲ್ಲಿರುವ ಅವನ ಮನೋದೇವತೆಯನ್ನು ಚಿತ್ರಿಸುವ ವಚನಗಳು.

ಹರಿವ ಹಾವಿಗಂಜೆ, ಉರಿಯ ನಾಲಿಗಂಜೆ, ಸುರಿಗೆಯ ಮೊನೆಗಂಜೆ, ಒಂದಕ್ಕಂಜುವೆ, ಒಂದಕ್ಕಳುಕುವೆ. ಪರಸ್ತ್ರೀ ಎಂಬ ಜೂಜಿಗಂಜುವೆ. ಮುನ್ನಂಜದ ರಾವಣನೇ ವಿಧಿಗೊಳಗಾದ ? ಅಂಜುವೆನಯ್ಯ ಕೂಡಲಸಂಗಮದೇವ.

ಶಿವಪೂಜೆಯೆತ್ತ ವಿಷಯದ ಸವಿಯೆತ್ತ? ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂಬೆನಯ್ಯ ರಾಮನಾಥಾ.

ವಚನಗಳಲ್ಲಿಯ ಶಬ್ದಾಲಂಕಾರ

ನೀನೊಲಿದರೆ ಕೊರಡು ಕೊನರುವದಯ್ಯ ! ನೀನೊಲಿದರೆ ಬರಡು ಹಯನಹುದಯ್ಯ ! ನೀನೊಲಿದರೆ ವಿಷಯವೆಲ್ಲ ಅಮೃತವಹುದಯ್ಯ ! ನೀನೊಲಿದರೆ ಸಕಲ ಪದಾರ್ಥ ಇದಿರಲ್ಲಪ್ಪವು, ಕೂಡಲಸಂಗಮದೇವಾ !

ವಚನದಲ್ಲಿ ನಾಮಾಮೃತತುಂಬಿ, ! ನಯನದಲ್ಲಿ ಮೂರುತಿತುಂಬಿ ! ಕಿವಿಯಲ್ಲಿ ನಿಮ್ಮ ಕೀರ್ತಿತುಂಬಿ! ಮನದಲ್ಲಿ ನಿಮ್ಮ ನೆನವುತುಂಬಿ ! ಕೂಡಲಸಂಗಮದೇವಾ! ನಿಮ್ಮ ಚರಣಕಮಲದೊಳು ಸೊಗದ ಬಂಡನುಂಬ ತುಂಬಿಯಾರ್ಪೆನು.

ಸಮಪದಗಳ ಸಮಾಕ್ಷರಗಳ ಅಲಂಕಾರ, ಆದಿ-ಮಧ್ಯ-ಅಂತ್ಯ ಪ್ರಾಸಗಳು, ಮನೋಹರವಾಗಿವೆ. ಇಂತಹ ಅನೇಕ ವಚನಗಳನ್ನು ನಾವು ನೋಡಬಹುದು.

ವಚನದಲ್ಲಿ (ಗದ್ಯದಲ್ಲಿ) ತಾಲಬದ್ಧತೆಯನ್ನು ಅಪೇಕ್ಷಿಸುವದು ಅನುಚಿತವಾದರೂ, ಪದಪ್ರಯೋಗದ ಕುಶಲತೆಯಿಂದ ಸ್ವಾಭಾವಿಕವಾಗಿ ಒಂದು ಬಗೆಯ ತಾಲಬದ್ಧತೆಯು ಅನೇಕ ವಚನಗಳಲ್ಲಿ ತಾನಾಗಿಯೇ ಉಂಟಾಗಿದೆ. ವಚನಗಳಲ್ಲಿ ಉಪಯೋಗಿಸಲ್ಪಟ್ಟ ದೃಷ್ಟಾಂತಗಳು ಅಂತಃಕರಣಕ್ಕೆ ನೇರವಾಗಿ ಮುಟ್ಟುತ್ತವೆ.

"ಕರಿ ಘನ ಅಂಕುಶ ಕಿರಿದೆನ್ನಬಹುದೇನಯ್ಯ ! ಗಿರಿ ಘನ ವಜ್ರ ಕಿರಿದೆನ್ನಬಹುದೇನಯ್ಯ ! ತಮ್ಮಂಥ ಘನ ನಿಮ್ಮ ನೆನಹು ಕಿರಿದೆನ್ನಬಹುದೇ ಅಯ್ಯ ! ಕೂಡಲಸಂಗಮದೇವಾ ನಿಮ್ಮ ಕೃಪೆಯ ಘನವ ನೀವೇ ಬಲ್ಲಿರಿ.

ಸಿಂಹದ ಮುಂದೆ ಜಿಗಿದಾಟವೇ ! ಪ್ರಳಯಾಗ್ನಿಯ ಮುಂದೆ ಪತಂಗದಾಟವೇ ! ಸೂರ್ಯನ ಮುಂದೆ ಕೀಟದಾಟವೇ ! ನಿಮ್ಮ ಮುಂದೆ ನನ್ನಾಟವೇ ಕಲಿದೇವರ ದೇವಾ ?

ತುಂಬಿದುದು ತುಳುಕದು ನೋಡಾ ! ನಂಬಿದುದು ಸಂದೇಹಿಸದು ನೋಡಾ ! ಒಲಿದುದು ಓಸರಿಸದು ನೋಡಾ ! ನೆರೆಯರಿದುದು ಮರೆಯದು ನೋಡಾ ! ಚನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ !

ಈ ಎಲ್ಲ ವಚನಗಳಲ್ಲಿ ಪ್ರಾಸಾದಿ ಶಬ್ದಾಲಂಕಾರಗಳನ್ನೂ ಶಬ್ದಗಳ ಔಚಿತ್ಯವನ್ನೂ ತಾಲಬದ್ಧತೆಯನ್ನೂ ಸುಂದರವಾದ ದೃಷ್ಟಾಂತಗಳನ್ನೂ ನಾವು ನೋಡಬಹುದು. ಮುಂದಿನ ವಚನವು ಇವೆಲ್ಲವುಗಳಿಗಿಂತ ಒಂದು ಕೈ ಮಿಗಿಲಾಗಿದೆ.

'ಅಮೃತಕ್ಕೆ ಹಸಿವು ಉಂಟೇ ! ಜಲಕ್ಕೆ ತೃಷೆಯುಂಟೇ ! ಘನಪುರುಷಂಗೆ ವಿಷಯವುಂಟೇ ! ಸದ್ಗುರು ಕಾರುಣ್ಯವಿಡಿದು ಲಿಂಗಾರ್ಚನೆಯ ಮಾಡುವ ಮಹಾಶರಣಂಗೆ ಮುಕ್ತಿಯ ಬಯಕೆಯುಂಟೇ ? ! ಅವರುಗಳಿಗೆ ಅದು ಸ್ವಯಂಭು ಸಹಜಸ್ವಭಾವ! ಇನ್ನು ತೃಪ್ತಿ ಅಪ್ಯಾಯನವನರಸಲುಂಟೇ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ ? !

ಅವ್ಯಕ್ತಸೃಷ್ಟಿಯಲ್ಲಿರುವ ಸತ್ಯಗಳನ್ನು ವ್ಯಕ್ತರೂಪಕ್ಕೆ ತರಲು ವಿವಿಧ ದೃಷ್ಟಾಂತಗಳನ್ನು ಉಪಯೋಗಿಸಿದ ವಚನಕಾರರ ಕುಶಲತೆಯು ಅವರ್ಣನೀಯವಿದೆ.

ಅರ್ಥಾಲಂಕಾರ

ಅರ್ಥಾಲಂಕಾರದ ದೃಷ್ಟಿಯಿಂದ ವಿಚಾರಿಸಿದರೆ, ಉಪಮೆ, ರೂಪಕ, ಉತ್ಪ್ರೇಕ್ಷೆಗಳು ವಚನಗಳಲ್ಲಿ ಕಾಣುತ್ತವೆ. ವಚನಕಾರರು ಕೊಟ್ಟ ದೃಷ್ಟಾಂತಗಳಲ್ಲಿ ಉಪಮಾರೂಪಕಾದಿಗಳು ತುಂಬಿರುವವು.

ಜ್ಞಾನಿಯು ತಾನೆನ್ನದೆ, ಇದಿರೆನ್ನದೆ, 'ಕಾದ ಹಂಚಿನಮೇಲೆ ಬಿಟ್ಟನೀರಿನಂತೆ' 'ಬಧೀರನ ಕಾವ್ಯದಂತೆ' ತಲೆದೋರದೆ ನಿಲ್ಲುವನು ಎಂದು ಅಂಬಿಗರ ಚೌಡಯ್ಯನು ವರ್ಣಿಸಿರುವನು. **ಹುಲಿಯಬಾಯಿಯಲಿ ಸಿಕ್ಕ ಹುಲ್ಲೆಯಂತೆ, ಸರ್ಪನಬಾಯಲ್ಲಿ ಸಿಕ್ಕ ಕಪ್ಪೆಯಂತೆ,**

ಎಂದು ಮಾಯೆಯ ಬಾಯಿಯಲ್ಲಿ ಸಿಕ್ಕ ಜಗತ್ತನ್ನು ಅಖಂಡೇಶ್ವರನು ಉಪಮಿಸಿರುವನು.

'ಕರ್ಪುರದ ಗಿರಿಯನು ಉರಿಹಿಡಿದಬಳಿಕ ಇದ್ದಲುಂಟೇ? ಮಂಜಿನ ಶಿವಾ. ಲಯಕ್ಕೆ ಬಿಸಿಲಿನ ಕಳಸವುಂಟೆ? ಕೆಂಡದ ಗಿರಿಯ ಅರಗಿನ ಬಾಣದಲಿ ಎಚ್ಚಡೆ ಬಳಿಕ ಮರಳಿ ಬಾಣವನರಸಲುಂಟೆ? ಗುಹೇಶ್ವರ ಲಿಂಗವನರಿದ ಬಳಿಕ, ದೇವ ರೆಂದು ಅರಸಲುಂಟೇ ಸಿದ್ಧರಾಮಯ್ಯ,

ಇದೆಂತಹ ಸುಂದರವಾದ ರೂಪಕವು!

'ಮುಗಿಲಮರೆಯ ಸೂರ್ಯನಂತೆ, ನೆಲದ ಮರೆಯ ನಿದಾನದಂತೆ, ಒರೆಯ ಮರೆಯ ಅಲಗಿನಂತೆ, ಹಣ್ಣಿನೊಳಗಿನ ರಸದಂತೆ ಶರಣಶರೀರವ ಮರೆಗೊಂಡು ಪರಮಪಾವನಮೂರ್ತಿ ಪರಾಪರ ತಾನುತಾನಾಗಿರ್ದುದನೇನೆಂಬೆನಯ್ಯ ಮಹಾ ಲಿಂಗ ಗುರುಸಿದ್ಧೇಶ್ವರ ಪ್ರಭುವೇ.

ಇದು ಉಪಮೆಗಳ ಮುಕ್ತಾಹಾರವೆಂದೇ ಹೇಳಬಹುದು.

'ಹಾವಿನ ಹೆಡೆಗಳಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿಕೊಳ್ಳಿಯಕೊಂಡು ಮಂಡೆಯ ಸಿಕ್ಕಬಿಡಿಸುವಂತೆ, ಹುಲಿಯ ಮೀಸೆ ಹಿಡಿದುಕೊಂಡು ಒಲೆದುಯ್ಯಲನಾಡುವಂತೆ,' ಎಂಬ ಬಸವನ ಸರಸವಾಟದ ವರ್ಣನೆಯೂ, ಮಾಡುವ ಮನ ಹೀನವಾದರೆ - ಅದೇ ಕಡೆ ಎಂದು ವಿಧಿಸುವಾಗ **ಚೇಳಿಗೆ ಬಸುರಾಯಿತ್ತೆ ಕಡೆ, ಬಾಳೆಗೆ ಫಲವಾಯಿತ್ತೆ ಕಡೆ, ಕಾದುವ ಓಲೆಕಾರಂಗೆ ಓಸರಿಸಿತ್ತೆ ಕಡೆ,** ಎಂದು ಹೀಯಾಳಿಸುವದೂ, ಯಾವುದೇ ಶ್ರೇಷ್ಠಕವಿಯ ಕಲ್ಪನಾಶಕ್ತಿಗೂ ವರ್ಣನಾ ಸಾಮರ್ಥ್ಯಕ್ಕೂ ಸಲ್ಲುವಂತಹದಿದೆ.

ವಚನಗಳು ಕನ್ನಡ ಸಾಹಿತ್ಯಕ್ಕೆ ಮಾಡಿದ ಉಪಕೃತಿ ಅಷ್ಟಿಷ್ಟಲ್ಲ. ಮೊದಲಿನ ಸಾಹಿತ್ಯ ಸ್ವರೂಪವನ್ನೇ ಬದಲಿಸಿ, ಸಾಹಿತ್ಯಕ್ಕೆ ಒಂದು ವಿಶಾಲ ದೃಷ್ಟಿಯನ್ನು ತಂದ ಶ್ರೇಯಸ್ಸು ವಚನಗಳಿಗೇ ಸಲ್ಲುವದು.

ಸಾಹಿತ್ಯವು ಪಂಡಿತರಂಜನೆಗಾಗಿ ಇರದೆ ಜನಸಾಮಾನ್ಯರ ಜೀವನವನ್ನರಳಿಸಲು ಇದೆ ಎಂಬ ಉದಾತ್ತ ಧ್ಯೇಯವನ್ನು ಕನ್ನಡ ಸಾಹಿತ್ಯಕ್ಕೆ ವಚನಗಳು ಕಾಣಿಕೆಯಾಗಿ ಕೊಟ್ಟವು.

ವೇದೋಪನಿಷತ್ತುಗಳಷ್ಟೇ ಸೂತ್ರಮಯವಾಗಿ ಅರ್ಥಗರ್ಭಿತವಾಗಿ

ತೇಜೋಮಯವಾಗಿ, ದೇವವಾಣಿಯಾಗಲು **ಕನ್ನಡವು ಯೋಗ್ಯವಾಗಿದೆ,** ಎಂದು ವಚನಗಳು ಜಗತ್ತಿಗೆ ತೋರಿಸಿದವು. ಜೈನರು ಸಂಸ್ಕೃತವನ್ನು ಸಾಹಿತ್ಯದಲ್ಲಿ ಬಹುಲಗೊಳಿಸಿದರೆ ವೀರಶೈವರು ಸಂಸ್ಕೃತವನ್ನು ವಿರಲಗೊಳಿಸಿ, ಕನ್ನಡ ಸಾಹಿತ್ಯಕ್ಕೆ ಕನ್ನಡ ಮುದ್ರೆಯನ್ನೊತ್ತಿದರು.

ವಚನಗಳು ಕನ್ನಡ ಸಾಹಿತ್ಯದಲ್ಲಿ ಸ್ತ್ರೀಯರಿಗೊಂದು ವಿಶಿಷ್ಟ ಸ್ಥಾನವನ್ನು ದೊರಕಿಸಿಕೊಟ್ಟವು. ಈ ಕಾಲದಲ್ಲಿದ್ದಷ್ಟು **ಕಬ್ಬಿಗಿತಿಯರು,** ಕನ್ನಡದಲ್ಲಿ ಇನ್ನಾವ ಕಾಲದಲ್ಲಿಯೂ ದೊರೆಯಲಾರರು.

ಕನ್ನಡದ ಬೇರೆ ಯಾವುದೇ ಸಾಹಿತ್ಯಾಂಗದಲ್ಲಿ, ಕವಿಯ ವ್ಯಕ್ತಿತ್ವವು ಕಂಡುಬರುವದಿಲ್ಲ. ಕವಿಯ ಹೃದಯ, ಸ್ವಭಾವಗಳು ಸ್ಫುಟವಾಗಿ ಒಡಮೂಡಿದುದು ವಚನಗಳಲ್ಲಿಯೇ. ಇದೊಂದು ವಚನ ವಾಙ್ಮಯದ ವೈಶಿಷ್ಟ್ಯವೆಂದೇ ಹೇಳಬಹುದು. ಕವಿಯ ಜೀವನವೂ ಪ್ರಪಂಚಾನುಭವವೂ, ಆತ್ಮಾನುಭವವೂ, ಆ ಕಾಲದ ಸಾಮಾಜಿಕ ಜೀವನದ ಚಿತ್ರವೂ ಕೆಲವು ಕಡೆಗಳಲ್ಲಿ ಜೀವಂತವಾಗಿ ಚಿತ್ರಿತವಾಗಿವೆ.

ಎಂತಹ ಭಾವವನ್ನಾದರೂ ಪ್ರಕಟಿಸಲು ಕನ್ನಡವು ಸಮರ್ಥವಿದೆ ಎಂಬುದನ್ನು ವಚನಗಳು ಸಿದ್ಧಪಡಿಸಿದವು.

ಅಂತೂ ಕನ್ನಡ ಸಾಹಿತ್ಯವಾಹಿನಿಗೆ, ಕನ್ನಡದ ಮುದ್ರೆಯನ್ನೊತ್ತಿದವರು, ವಚನಕಾರರೇ ಎಂದು ಸ್ಪಷ್ಟವಾಗಿ ಹೇಳಬಹುದು.*

---

* ಈ ಭಾಗವನ್ನು ಶ್ರೀ ದಿವಾಕರ ರಂಗರಾಯರ 'ವಚನಶಾಸ್ತ್ರ ರಹಸ್ಯ'ದ ಆಧಾರದ ಮೇಲಿಂದ ಬರೆಯಲಾಗಿದೆ.

೭. ಕೀರ್ತನೆಗಳು

೧೬ ನೇ ಶತಮಾನವು ಕನ್ನಡ ಸಾಹಿತ್ಯದಲ್ಲಿ ಮಹತ್ವದ ಕಾಲ. ಸಾಹಿತ್ಯವು ಸಂಗೀತವನ್ನು ಬೆರೆತು ಕೀರ್ತನರೂಪದಿಂದ ಅಮೃತಪ್ರವಾಹ ವನ್ನೇ ಹರಿಯಿಸಿ ಜನಸಾಮಾನ್ಯರ ಸ್ವತ್ತಾಯಿತು. ಈಶ್ವರ ಭಕ್ತಿಯಿಂದ ಪ್ರೇರಿತರಾದ ಭಕ್ತರು ಜನಸಾಮಾನ್ಯರಲ್ಲಿ ಭಕ್ತಿಯ ಬೀಜಗಳನ್ನು ಬಿತ್ತಿದರು. ಜ್ಞಾನ, ಭಕ್ತಿ, ವೈರಾಗ್ಯಗಳು ಮುಮುಕ್ಷುಗಳ ಹೃದಯದಿಂದ ಕೀರ್ತನ ರೂಪವಾಗಿ ಹೊರಬಿದ್ದುವು. **'ಭಕ್ತಿಶ್ಚ ತತ್‌ಸಾಧನಂ'** ಮುಕ್ತಿಗೆ ಭಕ್ತಿಯೇ ಪರಮಸಾಧನವೆಂದು ಸಾರಿದ ಶ್ರೀಮಾನ್ **ಮಧ್ವಾಚಾರ್ಯರ** ಅವತಾರದಿಂದ ಈ ಪಂಥಕ್ಕೆ ಕಳೆಯೇರಿತು. ಅವರು ಪರಮ ಭಗವದ್ಭಕ್ತರು. ಅವರನ್ನೆ ಗುರುಗಳನ್ನಾಗಿ ಇಟ್ಟುಕೊಂಡ **ವೈಷ್ಣವದಾಸರು** ಅವರ ದಿವ್ಯ ಸ್ಫೂರ್ತಿಯಿಂದ ಕರ್ನಾಟಕದಲ್ಲಿ ಭಕ್ತಿ ಪ್ರವಾಹವನ್ನೇ ಹರಿಸಿದರು. ಈ ವೈಷ್ಣವದಾಸರ ಭಕ್ತಿರಸವು ಬಂಗಾಲಕ್ಕೆ ನವಚೈತನ್ಯವನ್ನು ಕೊಟ್ಟಿತು. ಭಕ್ತಶ್ರೇಷ್ಠನಾದ **ಗೌರಾಂಗ ಚೈತನ್ಯನು** ದಾಸವರ್ಯರಾದ **ಶ್ರೀ ವ್ಯಾಸ-ರಾಯರಿಂದ** ಭಕ್ತಿ ದೀಕ್ಷೆಯನ್ನು ಹೊಂದಿದನು. ದಾಸ ಶ್ರೇಷ್ಠರಾದ ಪುರಂದರದಾಸರ ಕೀರ್ತನೆಗಳಿಂದ ಸ್ಫೂರ್ತಿಗೊಂಡ **ತ್ಯಾಗರಾಜನು** ತನ್ನ ಕೃತಿಗಳಿಂದ ಆಂಧ್ರದಲ್ಲಿ ಭಕ್ತಿರಸದ ಹೊಳೆಯನ್ನು ಹರಿಸಿದನು. ಹೀಗೆ ವೈಷ್ಣವದಾಸರ ಈ ಭಕ್ತಿರಸದ ಕೀರ್ತನೆಗಳು ಆ ಕಾಲಕ್ಕೆ ಭಕ್ತಿಸ್ಫೂರ್ತಿಯ ದಿವ್ಯಜ್ಯೋತಿಗಳಾದವು. ಈ ಜ್ಯೋತಿಯಲ್ಲಿಯೇ ವೈಷ್ಣವರಂತೆ ಶೈವರೂ ಹಾಗು ವೀರಶೈವರೂ ಕೀರ್ತನೆಗಳನ್ನು ರಚಿಸಿರುವರು. ಜನಮನದಲ್ಲಿ ಈಶ್ವರ ಪ್ರೇಮತರಂಗಗಳನ್ನು ಎಬ್ಬಿಸಿ ಮುಕ್ತಿಪಥಕ್ಕೆ ಮುಟ್ಟಿಸುವ ಈ ವಾಙ್ಮಯವು ಸಾಹಿತ್ಯದಲ್ಲಿ ಅಗ್ರಸ್ಥಾನವನ್ನು ಪಡೆಯದೆ ಯಾವುದು ಪಡೆಯಬೇಕು ?

ಈ ಭಕ್ತಿವಾಙ್ಮಯವು ಅರ್ಥಾತ್ ಕೀರ್ತನೆಗಳು, ಅನೇಕ ಶತಕಗಳಿಂದ ಸಂಸ್ಕೃತದ ಬೀಗ ಮುದ್ರೆಯಿಂದ ಬಂಧಿಸಲ್ಪಟ್ಟ ಭಕ್ತಿಭಂಡಾರವನ್ನು

ಸೂರೆಗೆಯ್ದುವು. ಸಂಸ್ಕೃತವನ್ನರಿಯದ ಆರ್ತ ಭಕ್ತ ಹೃದಯವನ್ನು ತಮ್ಮ ಹರಿಭಕ್ತಿಸುಧೆಯಿಂದ ತಣಿಸಿದವು. ಆದರೆ ತಾವು ಆರ್ಯರು, ಸಂಸ್ಕೃತವು ದೇವವಾಣಿಯೆಂದು ಹೆಮ್ಮೆಯ ಬಿಂಕದಿಂದ ಬಿಗಿದ ಪಂಡಿತೋತ್ತಮರು ಇದನ್ನು ಹೇಗೆ ಸಹಿಸುವರು?

೯ ನೆಯ ಶತಮಾನದಿಂದ ಪ್ರಾರಂಭವಾದ ಕನ್ನಡದ ಹೋರಾಟವು ಇನ್ನೂ ನಡೆದೇಯಿತ್ತು. ಸಂಸ್ಕೃತದ ಛಂದಸ್ಸನ್ನು ತ್ಯಜಿಸಿ ಕನ್ನಡದ ಸಾಹಿತ್ಯವು ತನ್ನ ನಡಿಗೆಯಲ್ಲಿ ನಡೆದಿತ್ತು. ಬಸವೇಶ್ವರರು ತಮ್ಮ ವಿಶಿಷ್ಟ ಶೈಲಿಯಿಂದ ಎಂತಹ ಭಾವವನ್ನಾದರೂ ಕನ್ನಡದಲ್ಲಿ ಹೇಳಬಹುದೆಂದು ತೋರಿಸಿದ್ದರು. ಉಪನಿಷದಗಳ ಸೂತ್ರಮಯವಾದ ಅರ್ಥವನ್ನು ಸೂತ್ರ ರೂಪವಾಗಿ ಅಷ್ಟೇ ಬಿಗುವಿನಿಂದ ಹೇಳಬಹುದೆಂಬುದನ್ನು ವಚನಗಳು ಸಿದ್ಧಮಾಡಿ ತೋರಿಸಿದ್ದವು. ಆದರೂ ಆರ್ಯರೆಂದು ಹೇಳಿಕೊಳ್ಳುವ ಬ್ರಾಹ್ಮಣರು, ಇದೆಲ್ಲವೂ ಜನಸಾಮಾನ್ಯರ, ಪಾಮರರ, ಬುದ್ಧಿಹೀನರ ನುಡಿಯೆಂದು ಹಳಿಯುವವನ್ನು ಬಿಡಲಿಲ್ಲ. ದಾಸರ ಕೀರ್ತನೆಗಳ ವಿಷಯವಾಗಿಯೂ ಇದೇ ಮಾತು ಆ ಕಾಲದಲ್ಲಿ ತಲೆಯೆತ್ತಿತು. **ದಾಸ ಶ್ರೇಷ್ಠರಾದ ವ್ಯಾಸರಾಯರು** (೧೫೩೯) ಪುರಂದರದಾಸರ ಕೀರ್ತನೆಗಳ ಮಹಿಮೆಯನ್ನು ಕಂಡು, ಶ್ರೀ ಮಧ್ವಾಚಾರ್ಯರ ಸರ್ವಮೂಲ ಗ್ರಂಥ ಗಳೊಡನೆ, ಅವುಗಳನ್ನು ಇಟ್ಟು ಪೂಜಿಸಿದರು. ಆಗ ಮಠದ ವಿದ್ವಾಂಸ ರೆಲ್ಲರೂ ಸಿಟ್ಟಿಗೆದ್ದು, ಚಿನಿವಾಲನ ಹಾಡುಗಳು ಎಷ್ಟೇ ಚೆನ್ನಾಗಿರಲಿ, ಸರ್ವಜ್ಞರ ಸರ್ವಮೂಲವನ್ನು ಸರಿಗಟ್ಟುವವೇ? ಅಯೋಗ್ಯ! ಪೂಜೆಯು ಅಯೋಗ್ಯ! ಎಂದು ಕೂಗನ್ನೆಬ್ಬಿಸಿ ಹಾಡುಗಳ ಹೊತ್ತಿಗೆಯನ್ನು ಕಿತ್ತೊಗೆದಂತೆಯೂ, ಆದರೆ ಅವು ಮತ್ತೆ ಅದೇ ಸ್ಥಾನವನ್ನು ಅಲಂಕರಿಸಿ ದಂತೆಯೂ, ಕಥೆಯುಂಟು. ಆಗ ವ್ಯಾಸರಾಯರು ಅವುಗಳಿಗೆ **'ಪುರಂದ-ರೋಪನಿಷತ್ತು'** ಎಂದು ಕರೆದು, ಅವುಗಳ ಮಹಿಮೆಯನ್ನು ಹೊಗಳಿದರಂತೆ. ಅವರ ಸಮಕಾಲೀನರೂ, ವ್ಯಾಸರಾಯರ ಮಠದಲ್ಲಿಯೇ ಇದ್ದವರೂ, ಪುರಂದರದಾಸರ ಮಕ್ಕಳೂ, ಆದ **ವರದಪ್ಪನಾಯಕರೂ** ಇದನ್ನೇ ದೇವರ ನಾಮವಾಗಿ ಹಾಡಿರುವರು.

ಎರಡಾವರ್ತಿ ಬೀಸಾಡಲಾಗಿ ಅದು।
ತಿರುತಿರುಗಿ, ಬಂದು ಮೇಲೆ ಕುಳ್ಳಿರಲು ॥
ಗುರುವ್ಯಾಸರಾಯರು ನೋಡಿ ಹರುಷದಿಂದ ।
ಪುರಂದರ ಉಪನಿಷತ್ತೆಂದು ಕರೆದರು ॥

—ವರದಪುರಂದರ ವಿಠಲರು

"ಮಾಧವನ ಗುಣ ಪೇಳ್ವ ಪ್ರಾಕೃತವಾದರೆಯು ಸರಿ"
ಎಂದೂ ದತ್ತ ಸ್ವಾ. ಸಂ. ೩೪ ಹರಿಕಥಾಮೃತಸಾರ

"ಸಂಸ್ಕೃತವಿದಲ್ಲೆಂದು ಕುಹಕು ತಿ ।
ರಸ್ಕರಿಸಲೇನಹುದು, ಭಕ್ತಿಪು ।
ರಸ್ಸರದಿ ಕೇಳ್ವರಿಗೆ ಒಲಿವನು ಪುಸ್ಕರಾಕ್ಷಸಖಾ ॥

ದ. ಸ್ವಾ. ಸ. ೩೫

ಎಂದು ನಿಂದಕರನ್ನು ಹೀಯಾಳಿಸಿ

ಕೃತಿ, ಪತಿ, ಕಥಾನ್ವಿತವೆನಿಪ ।
ಪ್ರಾಕೃತವೆ, ತಾ ಸಂಸ್ಕೃತವೆನಿಸಿ ಸದ್ಗತಿಯನೀವುದು
ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ.

ದ. ಸ್ವಾ. ಸ. ೩೬

ಹೀಗೆ ಭಕ್ತರಿಗೆ ಅಭಯವನ್ನಿತ್ತು ಜಗನ್ನಾಥದಾಸರು **ಹರಿಕಥಾಮೃತ ಸಾರ**ದಲ್ಲಿ ಕನ್ನಡವನ್ನು ಎತ್ತಿ ಹಿಡಿದಿದ್ದಾರೆ.

ಶ್ರೀಕೃತಿ ಪತಿಯ ಅಮಲ ಗುಣಗಳು ।
ಈ ಕೃತಿಯೊಳುಂಟಾದ ಬಳಿಕ
ಪ್ರಾಕೃತವೇ ? ಸಂಸ್ಕೃತದ ಸಡಗರವೇನು ಸುಗುಣರಿಗೆ ॥

ಎಂದು ಜಗನ್ನಾಥದಾಸರ ಶಿಷ್ಯರು ಹರಿಕಥಾಮೃತಸಾರದ ಫಲಶೃತಿಯಲ್ಲಿ ನಿಂದಕರ ಬಾಯಿಗೆ ಬೀಗ ಬಿಗಿದಿದ್ದಾರೆ.

"ಕನ್ನಡುಕ್ತಿಗಳಿವು ಎನ್ನದೆ ಕೇಳಿರಿ ಘನರು ದಯಾಪರರು" ಎಂದು ಪ್ರಸನ್ನವೆಂಕಟರು ಸಾರಿದ್ದಾರೆ.

ಹೀಗೆ ಕನ್ನಡವು ಸಂಸ್ಕೃತದೊಡನೆ ಅಖಂಡವಾಗಿ, ಏಳು ನೂರು ವರ್ಷಗಳ ವರೆಗೆ ಹೋರಾಟವನ್ನು ನಡೆಯಿಸಿ, ಕೊನೆಗೆ ಬ್ರಾಹ್ಮಣರಿಂದ ಮನ್ನಣೆ ಪಡೆಯಿತು. ಇಷ್ಟು ದಿನಗಳ ವರೆಗೆ ಸಾಹಿತ್ಯಕ್ಷೇತ್ರದಲ್ಲಿ ಕನ್ನಡವು

ಮನ್ನಣೆ ಪಡೆದಿದ್ದರೂ ವೈದಿಕ ಸಾಮ್ರಾಜ್ಯದಲ್ಲಿ ಬ್ರಾಹ್ಮಣರಿಂದ ಅದಕ್ಕೆ ಮನ್ನಣೆ ದೊರೆತಿರಲಿಲ್ಲ. ಆ ಮನ್ನಣೆಯನ್ನು ದೊರಕಿಸಿಕೊಟ್ಟ ಕೀರ್ತಿಯು **ಪುರಂದರದಾಸರ ಕೀರ್ತನೆಗಳಿಗೇ** ಸಲ್ಲುವದು. ಇದು **ಕನ್ನಡದ ದಿಗ್ವಿಜಯ.**

ದಾಸಕೂಟ

ದಾಸರೆಂದರೆ ಪುರಂದರ ದಾಸರಯ್ಯಾ ।
ವಾಸುದೇವ ಕೃಷ್ಣನ್ನ ಪೂಜಿಸುವ ॥
— ಶ್ರೀವ್ಯಾಸರಾಯರು

ದಾಸಕೂಟದ ಹೆಸರನ್ನೆತ್ತಿದೊಡನೆಯೇ ಪುರಂದರ ದಾಸರೆಂದು ಎಲ್ಲರ ಎದುರಿಗೆ ಅವರ ಹೆಸರು ನಿಲ್ಲುತ್ತದೆ. ಪುರಂದರ ದಾಸರಿಂದಲೇ ದಾಸ ಕೂಟವು ಕಳೆಕಟ್ಟಿದರೂ ದಾಸಕೂಟಕ್ಕೆ ಒಂದು ರೂಪ ಬಂದರೂ ಅವರಿಂದಲೇ ದಾಸಕೂಟವು ನಿರ್ಮಾಣವಾಯಿತೆಂಬುದು ನಿಜವಿದ್ದರೂ ಇವರೇ ಹರಿದಾಸ ರಲ್ಲಿ ಮೊದಲಿಗರು ಎಂದು ಹೇಳಲಿಕ್ಕಾಗದು. ದಾಸಕೂಟದ ಪರಂಪರೆ ಯಲ್ಲಿಯೇ,

"ನಮಃ ಶ್ರೀಪಾದರಾಜಾಯ । ನಮಸ್ತೆ ವ್ಯಾಸಯೋಗಿನೆ ।
ನಮಃ ಪುರಂದರಾರ್ಯಾಯ । ವಿಜಯಾರ್ಯಾಯ ತೇ ನಮಃ ॥

ಎಂದು ಪ್ರಾರ್ಥಿಸುವರು. ಅಂದರೆ ಪರಂಪರೆಯಿಂದಲೇ ಪುರಂದರದಾಸರು ಮೂರನೇಯವರಾಗುವರು.

ಸ್ವಲ್ಪ ಶಾಂತರೀತಿಯಿಂದ ವಿಚಾರಿಸಿದರೆ, ಭಕ್ತಿಪಂಥದ ಉಗಮವು ಬಹು ದೂರದವರೆಗೆ ಹೋಗುವದು. ಯುಗ ಯುಗಾಂತರಗಳಿಂದ ಭಾಗವತ ಧರ್ಮವು ಪ್ರತಿಪಾದಿಸಲ್ಪಟ್ಟಿರುವದು. ಭಕ್ತಿಯು ದಕ್ಷಿಣದಲ್ಲಿ ಹುಟ್ಟಿದ್ದರೂ "ವೃದ್ಧಿಂ ಕರ್ನಾಟಕೇ ಗತಾ" ಎಂದರೆ ಕರ್ನಾಟಕದಲ್ಲಿಯೇ ಅದು ಪರಿಪಕ್ವವಾಯಿತೆಂದು ಪದ್ಮಪುರಾಣದಲ್ಲಿ ಉಲ್ಲೇಖವಿದೆ. ಕನ್ನಡ ನಾಡು ಭಕ್ತಿಯ ಬೀಡು. ದಾಸ್ಯಭಕ್ತಿಯಲ್ಲಿ ಪ್ರಖ್ಯಾತನಾದ ಹನುಮನುದಿಸಿದ ನಾಡು. **ವಾಯುದೇವರ** ಅವತಾರವೆಂದು ಪ್ರಸಿದ್ಧರಾದ ಶ್ರೀಮಧ್ವಾಚಾರ್ಯರು ೧೩ ನೇ ಶತಮಾನದಲ್ಲಿ ಅವತರಿಸಿ, **ಪರಮಾತ್ಮನ ಪ್ರಸಾದದಿಂದಲೇ ಮುಕ್ತಿಯೆಂದೂ** ಪ್ರಸಾದಕ್ಕೆ ಸರ್ವಾರ್ಪಣೆಯುಕ್ತ

ಭಕ್ತಿಯೇ ಮುಖ್ಯ ಸಾಧನವೆಂದೂ ಸಾರಿ ಭಾಗವತಧರ್ಮವನ್ನು ಮತ್ತೆ ಪುನರುಜ್ಜೀವನಗೊಳಿಸಿದರು. ಮಧ್ವರಾಯರಿಂದ ಭಕ್ತಿಪಂಥದ ಅಂಕುರವಾಯಿತು. ಅದೇ ಬೆಳೆದು ಫಲಪುಷ್ಪಗಳನ್ನು ಬಿಟ್ಟಿತು. **ಅದೇ ದಾಸ ಕೂಟವು.** ಯುಗಯುಗಾಂತರದಿಂದ ಬಂದ ಈ ಭಾಗವತ ಧರ್ಮದಲ್ಲಿಯೇ ದಾಸಕೂಟದ ಮೂಲಬೇರುಗಳಿವೆ. ಮಧ್ವಾಚಾರ್ಯರಿಂದ ಮೂರನೆಯವರಾದ ಶ್ರೀನರಹರಿ ತೀರ್ಥರಿಂದ (೧೨೮೧) ಈ ಭಕ್ತಿ ಪಂಥಕ್ಕೆ ಚಿಗುರೊಡೆಯಿತು. ಸಂಸ್ಕೃತ ಪಾಂಡಿತ್ಯದಿಂದ ಮಧ್ವಮತ ಪ್ರಚಾರವನ್ನೂ ಕೀರ್ತನೆಗಳಿಂದ ಭಾಗವತ ಧರ್ಮ ಪ್ರಸಾರವನ್ನೂ ಮಾಡಹತ್ತಿದರು. ಇವರನಂತರ ಮುಂದೆ, ಎರಡು ನೂರು ವರ್ಷಗಳ ವರೆಗೆ, ಇದನ್ನು ಕಾಪಾಡುವ ಮಹಾನುಭಾವರಾರೂ ಆಗಲಿಲ್ಲ. ಆದರೆ, ಈ ಧರ್ಮಪೀಠದ ಆಶ್ರಯದಲ್ಲಿ ಅದು ಕಮರಲಿಲ್ಲ. ದಾಸಶ್ರೇಷ್ಠರೂ ದಾಸಕೂಟದ ಪಿತಾಮಹರೂ ಎಂದರೆ **ಶ್ರೀಪಾದರಾಯರೇ.** (೧೪೭೬) ದಾಸಕೂಟಕ್ಕೆ, ಭಾಗವತ ಧರ್ಮೋದ್ಧಾರಕ್ಕೆ ಇವರೇ ಮುಖ್ಯಕಾರಣ ಕರ್ತರು. **ಇವರೇ ಮೊದಲಿಗರು.** ಪೀಠಸ್ಥ ಶ್ರೀಗಳು. ಸಂಧ್ಯಾ ಸಮಯದ ಪೂಜೆಯಲ್ಲಿ ಪರಮಾತ್ಮನ ಕೀರ್ತನೆಗಳನ್ನು ಹಾಡುತ್ತ ಭಕ್ತಿ ಪರವಶರಾಗಿ ಮೈಮರೆತು ಕುಣಿಯುತ್ತಿದ್ದರು. ವೇಣುಗೀತ-ಗೋಪಿ ಗೀತ, ಭ್ರಮರಗೀತಗಳು ಇವರಿಂದ ಕನ್ನಡವಾಗಿ ಮನೆಮನೆಗಳಲ್ಲಿ ನಿತ್ಯಭಜನೆಯ ಸಾಧನಗಳಾದವು. ಜನಸಾಮಾನ್ಯರ ಅಂತಃಕರಣವನ್ನೆಲ್ಲ ಭಕ್ತಿರಸದಿಂದ ತುಂಬಿ ಬಿಟ್ಟವು. ಕುಂದಿದ ಭಕ್ತಿವೃಕ್ಷಕ್ಕೆ ಇವರಿಂದ ಕಸಿಮಾಡಿದಂತಾಗಿ, ಅದು ಭರದಿಂದ ಬೆಳೆಯಿತು. ಇವರ ಶಿಷ್ಯರಾದ **ಶ್ರೀ ವ್ಯಾಸರಾಯರಿಂದ** ಈ ವೃಕ್ಷವು ಪರಿಪುಷ್ಟವಾಯಿತು. ವ್ಯಾಸ ರಾಯರು ಭಕ್ತಾಗ್ರೇಸರರಿದ್ದು, ಈ ಪಂಥದ ಪ್ರಚಾರಕ್ಕೆ ಗುರುಗಳಂತೆ ಸ್ವತಃ ಟೊಂಕಕಟ್ಟಿದರು. ಭಕ್ತಿಪರವಾದ ನೂರಾರು ಹಾಡುಗಳನ್ನು ಹಾಡಿದರು. ಇವರ ಶಿಷ್ಯರಾದ **ಪುರಂದರದಾಸರಂತೂ,** ಭಕ್ತಿಪಂಥದ ಸುಮಧುರವಾದ ಫಲಪುಷ್ಪಗಳನ್ನು ಪಾಂಡುರಂಗನಿಗೆ ಅರ್ಪಿಸಿ ತಾವು ಸವಿದು, ಸಾವಿರಾರು ಜನರಿಗೆ ಆದರ ಸವಿಯುಣಿಸಿದರು. ಈ ಸಾಹಿತ್ಯಕ್ಕೆ ಇದು ವಸಂತ ಕಾಲವೆಂದು ಹೇಳಬಹುದು. ದಾಸ ಶ್ರೇಷ್ಠರಾದ

ಪುರಂದರರು, ಕನಕರು, ವಾದಿರಾಜರು, ವ್ಯಾಸರಾಯರು, ವೈಕುಂಠ ದಾಸರೇ ಮೊದಲಾದ ಎಲ್ಲ ಅಪರೋಕ್ಷ ಜ್ಞಾನಿಗಳೂ ಇದೇ ಕಾಲದಲ್ಲಿ ಜನಿಸಿದರು. ೧೩ ನೇ ಶತಮಾನದಿಂದ ೧೮ ನೇ ಶತಮಾನದ ವರೆಗೆ, ಹರಿದಾಸರು ತಮ್ಮ ದಿವ್ಯವಾಣಿಯಿಂದ ಸಮಾಜದ ಉದ್ಧಾರವನ್ನು ಮಾಡಿದರು.

ನರಹರಿ ತೀರ್ಥರು (ಕ್ರಿ. ೧೨೮೧), ಶ್ರೀಪಾದರಾಯರು (೧೪೮೬), ವ್ಯಾಸರಾಯರು (೧೫೫೭), ಪುರಂದರದಾಸರು (೧೪೮೦), ಕನಕ ದಾಸರು (೧೪೮೦), ವಾದಿರಾಜರು (೧೪೮೦), ವಿಜಯದಾಸರು (೧೬೮೭), ಭಾಗಣ್ಣದಾಸರು (೧೬೧೮), ಜಗನ್ನಾಥದಾಸರು (೧೭೨೭), ಮೋಹನ ದಾಸರು (೧೭೫೦) ತಮ್ಮಣ್ಣದಾಸರು, ಪ್ರಸನ್ನವೆಂಕಟರು ಇವರೇ ಮುಖ್ಯ ರೆಂದು ಹೇಳಬಹುದು.

ಪರಮಾತ್ಮನ ಪ್ರೇಮದಿಂದ ಪ್ರೇರಿತರಾಗಿ, ಭಕ್ತಿಪರವಶರಾದ ಸಮಯದಲ್ಲಿ ಹೊರಹೊಮ್ಮಿದ ಭಾವಗೀತೆಗಳು ಈ ಕೀರ್ತನೆಗಳು. ಶ್ರೇಷ್ಠ ಸಾಧಕರೂ ಅಹೇತುಕ ನಿರ್ಮಲಭಕ್ತಿಪ್ರೇರಿತರೂ ಉಚ್ಚ ಆಧ್ಯಾತ್ಮಿಕ ಅನುಭಾವಿಗಳೂ ಆದ ಈ ದಾಸಶ್ರೇಷ್ಠರು ಪರಮಕಾರುಣ್ಯದಿಂದ, ಮಠ-ಮಂದಿರಗಳಲ್ಲಿ ಹುಗಿದಿದ್ದ ದಿವ್ಯ ಧರ್ಮತತ್ವಗಳನ್ನು ಮನೆಮನೆಗೆ ಬೀರಿ ಭಕ್ತರನ್ನು ಉದ್ಧರಿಸಿದರು. ತಾವು ಸವಿದ ಭಕ್ತಿರಸದ ಅಮೃತ ವನ್ನು ಕೈಯೊಡ್ಡಿದವರಿಗೆಲ್ಲ ನೀಡಿದರು. ಪಾವನಗೆಯ್ದರು. ಈ ದಾಸರ ಅಮೃತತುಲ್ಯವಾದ ದಾಸ ಸಾಹಿತ್ಯವು ಶ್ರೇಷ್ಠವಾದ ಭಕ್ತಿ-ಯೋಗವೆಂದೇ ಹೇಳಬಹುದು.

ಈ ದಾಸ ಸಂಪ್ರದಾಯದಲ್ಲಿ ಸೇರಿದ ಕೀರ್ತನೆಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು. ಒಂದು ಭಕ್ತಿ, ಶಾಸ್ತ್ರ; ಇನ್ನೊಂದು ಮತಪ್ರಚಾರ.

ಭಕ್ತಿಯೋಗದ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಎಂಬ ಐದು ಭಾವಗಳೂ, ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಮತ್ತು ಆತ್ಮನಿವೇದನವೆಂಬ ಒಂಭತ್ತು ಸಾಧನಗಳೂ ವರ್ಣಿಸಲ್ಪಟ್ಟಿವೆ.

ಪರಮಾತ್ಮ ಭಕ್ತಿ, ಮುಕ್ತಿಯ ಬಯಕೆ, ದೇಹ–ಸಂಸಾರಗಳ ನಶ್ವರತ್ವ, ಅವುಗಳ ಬಗ್ಗೆ ಪೂರ್ಣವಿರಾಗ, ಭಕ್ತಿಯಸಾಧನೆ ಮೊದಲಾದವುಗಳನ್ನು ಪ್ರತಿಯೊಬ್ಬರೂ ವ್ಯಕ್ತಪಡಿಸಿದ್ದಾರೆ.

ಅವರು ಉಪಯೋಗಿಸಿದ ಭಾವ ಭಾಷೆಗಳು ಚಿತ್ರವಿಚಿತ್ರವಾಗಿವೆ. ಪುರಂದರದಾಸರ ಕೀರ್ತನೆಗಳಲ್ಲಿಯ ತಿರುಳುಗನ್ನಡ ಸುಲಭತೆ ಪ್ರಸಾದಗಳು ವಿಶೇಷಲಕ್ಷಣಗಳು. ಅವರ ವಿವಿಧಭಾವಗಳೂ ಉಪಮೆಗಳೂ ಹೃದಯಂಗಮವಾಗಿವೆ. ಕನಕದಾಸರ ವೀರವಾಣಿ ಶುದ್ಧವೂ ನಿರ್ಮಲವೂ ಆದ ಅವರ ಹೃದಯದಿಂದ ಬಂದ ಮುಂಡಿಗೆಗಳು, ಮನಸ್ಸನ್ನು ಮುಗ್ಧಗೊಳಿಸುತ್ತವೆ. ವಿಜಯದಾಸರಲ್ಲಿ ಸರಲತೆ, ಸ್ಪಷ್ಟತೆ, ಸುಲಭತೆ, ಪದಲಾಲಿತ್ಯ, ಪ್ರಸಾದ ಗುಣಗಳು ಎದ್ದು ಕಾಣುತ್ತವೆ. ಜಗನ್ನಾಥದಾಸರ ಪಾಂಡಿತ್ಯ, ತತ್ವ ವಿವೇಚನೆ, ಅರ್ಥಗಾಂಭೀರ್ಯಗಳು ಮರುಳುಮಾಡುತ್ತವೆ. ಪ್ರಸನ್ನ ವೆಂಕಟರ ವಾಕ್‌ಪ್ರವಾಹ, ಶೈಲಿ, ಶಬ್ದಗಳ ಇಂಪಾದ ಜೋಡಣೆಗಳು ಆಶ್ಚರ್ಯಗೊಳಿಸುತ್ತವೆ.

ಭಕ್ತರು ಈಶ್ವರ ವಿರಹದಿಂದ ಒಮ್ಮೆ ವಿಹ್ವಲರಾಗುವರು, ಪರಮಾತ್ಮನ ದರ್ಶನದಿಂದ ಮೈಮರೆವರು, ಹುಚ್ಚರಂತೆ ಕುಣಿದಾಡುವರು. ಆರ್ತ ಭಾವದಿಂದ ಬೇಡುವರೊಮ್ಮೆ, ಧನ್ಯಭಾವದಿಂದ ಹೊಗಳುವರೊಮ್ಮೆ, ತಾಯಿಯಾಗಿ ದೇವನೊಡನೆ ಚಿನ್ನಾಟವಾಡುವರು, ಸಖರಾಗಿ ಪರಮಾತ್ಮನೊಡನೆ ನಗೆಯಾಡುವರು. ನಿರಾಶರಾಗಿ ಒಮ್ಮೆ ತೆಗಳಿದರೆ, ಆನಂದದಿಂದ ಮತ್ತರಾಗಿ ಒಮ್ಮೆ ಹೊಗಳುವರು. ಪ್ರಿಯೆಗಾಗಿ ಪ್ರಿಯನನ್ನು ಮಧುರಭಾವದಿಂದ ಆರಾಧಿಸುವರು. ಹೀಗೆ ಭಕ್ತರ ಎಲ್ಲ ಭಾವಗಳು ಕನ್ನಡಿಯಲ್ಲಿ ಪ್ರತಿಬಿಂಬಿಸುವಂತೆ, ಕೀರ್ತನೆಗಳಲ್ಲಿ ಒಡಮೂಡಿವೆ. ಭಕ್ತಿಯು ಈ ಕೀರ್ತನಗಳಲ್ಲಿ ಚರಮ ಸೀಮೆಯನ್ನು ಮುಟ್ಟಿದೆ.

ಈ ದಾಸಕೂಟಕ್ಕೆ ದ್ವೈತಮತವೇ ಮೂಲಾಧಾರ. ಪಂಚರಾತ್ರಾಗಮ, ಭಾಗವತ, ವಿಷ್ಣುಪುರಾಣ, ವೇದೋಪನಿಷತ್ತುಗಳು ಇವೇ ಇವರಿಗೆ ಮುಖ್ಯ ಆಧಾರಗ್ರಂಥಗಳು. ಹರಿಸರ್ವೋತ್ತಮತ್ವ, ಭಕ್ತಿ, ಮೋಕ್ಷ, ಇವೇ ಇವರ ಪ್ರತಿಪಾದನದ ವಿಷಯಗಳು.

ದಾಸಕೂಟ ಸಾಹಿತ್ಯವು ಅಪರಿಮಿತವೆಂದು ಈ ಸಂಪ್ರದಾಯದವರ ಮತ. ಪುರಂದರದಾಸರು ತಮ್ಮದೊಂದು ಸುಳಾದಿಯಲ್ಲಿ

'ಇಂತು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ಕೃತಿಯು ।
ಕಂತು ಜನಕನ ನಾಮಘನಮಹಿಮೆ ॥
ಸಂತಸದಿ ಶ್ರುತಿ, ಸ್ಮೃತಿ ಸಮ್ಮತದಿಂದ ।
ಪುರಂದರ ವಿಠಲ ವ್ಯಾಸ ಮುನಿಗಳು ಪೇಳಿಸಿದರು ॥'

—ಪುರಂದರದಾಸರು

ಎಂದು ಹೇಳಿರುವರು. ಅಂದಮೇಲೆ, ಎಲ್ಲ ದಾಸರ ಸಾಹಿತ್ಯವು ಕೂಡಿ ಎಷ್ಟಿರಬಹುದು? ಇಂತಹ ಪವಿತ್ರವಾದ ವಾಙ್ಮಯವು ಹುಳ ಹುಪ್ಪಡಿಗಳ ಆಹಾರವಾಗದೆ ಬೆಳಕಿಗೆ ಬರುವದು ಅವಶ್ಯವಿದೆ.

ಕೇವಲ ಸಾಹಿತ್ಯ ದೃಷ್ಟಿಯಿಂದ ನೋಡಿದರೂ ಈ ವಾಙ್ಮಯದಲ್ಲಿ ಅತ್ಯುಚ್ಚ ಗುಣಗಳು ಕಂಡುಬರುವವು. ಮನುಷ್ಯನ ಸ್ವಭಾವಚಿತ್ರ, ಎಂತಹ ಭಾವವನ್ನೂ ಲಲಿತವಾಗಿಯೂ ಸುಲಭವಾಗಿಯೂ ಹೇಳುವ ರೀತಿ, ದೇವರ ಅವತಾರಗಳನ್ನು ವರ್ಣಿಸುವ ಅವರ ಚಮತ್ಕಾರ, ರೂಪಕ, ಉತ್ಪ್ರೇಕ್ಷೆಗಳು, ಕವಿಗಳ ಕಲ್ಪಕತೆ, ಹೊಗಳತಕ್ಕಂತಹವಿವೆ. ಕಾವ್ಯದ ಲಕ್ಷಣಗಳೂ ಪ್ರತಿಭೆಯೂ ದಾಸರ ಕೀರ್ತನೆಗಳಲ್ಲಿ ಒಡೆದು ಕಾಣುತ್ತವೆ. ದಾಸರ ಕಾವ್ಯವಾಣಿ ಆಳವಾಗಿಯೂ, ಗಂಭೀರವಾಗಿಯೂ, ಸುಲಭವಾಗಿಯೂ, ಆಕರ್ಷಕವಾಗಿಯೂ, ಉದ್ಬೋಧಕವಾಗಿಯೂ ಇದ್ದು ಮೋಕ್ಷ-ದಾಯಕವಾಗಿದೆ.

ಈ ಕೀರ್ತನೆಗಳು, ಸುಳಾದಿ, ಉಗಾಭೋಗ, ಹಾಡು ಎಂಬ ರೂಪದಲ್ಲಿವೆ. ಎಲ್ಲವೂ ಸಂಗೀತದ ತಾಲ, ಲಯ, ರಾಗಗಳಿಗೆ ಬದ್ಧವಾಗಿ ಸುಮಧುರತೆಯಿಂದ ಕರ್ಣಾನಂದವನ್ನುಂಟುಮಾಡುತ್ತವೆ. ಕೀರ್ತನೆಗಳಿಂದ ಕರ್ನಾಟಕಸಂಗೀತಕ್ಕೊಂದು ಮಟ್ಟ ಬಂತು, ಸ್ವರೂಪ ಬಂತು.

ಕೀರ್ತನೆಗಳಲ್ಲಿ ಅಡಕವಾದ ವಿಶಿಷ್ಟ ಸಂಗತಿಗಳು

ಹರಿಯೇ ಸರ್ವೋತ್ತಮನು

ಶ್ರೀ ಹರಿಯೇ ಸರ್ವೋತ್ತಮನು, ಅವನೇ ಪರದೈವತವು ಎಂಬುದೇ ಇವರ ದೃಢವಾದ ನಂಬುಗೆ.

"ಹರಿಯೇ ಸರ್ವೋತ್ತಮ ಸಿರಿಯು ಆತನ ರಾಣಿ
ಸರಸಿಜೋದ್ಭವ ಮಾರುತ ಪುತ್ರರಯ್ಯ"
—ಮೋಹನ ವಿಠ್ಠಲರು

ಶ್ರೀಹರಿಯ ಮಹಿಮೆಗಳನ್ನು ಎಷ್ಟು ಹೊಗಳಿದರೂ ಕೊಂಡಾಡಿದರೂ ದಾಸರಿಗೆ ತೃಪ್ತಿಯಿಲ್ಲ.

"ಆರು ಬಲ್ಲರು ಹರಿಹರಾದಿಗಳ ಮಹಿಮೆಯನು
ವಾರಿಜೋದ್ಭವ ಸುರೇಂದ್ರಾದಿಗಳಿಗಳವಲ್ಲ"
—ಕನಕದಾಸರು

ಭಗವಂತನು ಭಕ್ತವತ್ಸಲನು, ಕರುಣಾನಿಧಿಯು. ಭಜಿಸಿ ಬದುಕಿರಿ ಎಂಬುದೇ ಮಾನವರಿಗೆ ದಾಸರ ಸಂದೇಶ.

'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
ನಂಬದೆ ಕೆಟ್ಟರೆ ಕೆಡಲಿ.
—ಪುರಂದರದಾಸರು

ಹರಿಭಜನೆಯ ಮಹಿಮೆ

"ಹರಿಯ ಭಜನೆ ಮಾಡೋ ನಿರಂತರ ।
ಪರಗತಿಗಿದು ನಿರ್ಧಾರ ನೋಡೊ ॥
—ವಾದಿರಾಜರು

ಭಕ್ತಿಯೇ ಮುಕ್ತಿಸಾಧನ

'ಭಕ್ತಿಶ್ಚ ಸತ್ಸಾಧನಂ', ಎಂದು ದಾಸರು ಮುಕ್ತಿಯ ಬೆನ್ನು ಬೀಳದೆ ಭಕ್ತಿಯೊಂದನ್ನನುಸರಿಸಿದರೆ, ಮುಕ್ತಿಯು ತಾನೇ ಆಳವಡುವದು ಎಂದು ಅವರ ಸಿದ್ಧಾಂತ. ಭಕುತಿಯಿಂದಲೇ **"ಘನಜ್ಞಾನ ಪುಟ್ಟುವುದು, ಅನಿಮಿಷೇಶನ ಪ್ರೀತಿ ದಿನದಿನಕೆ ವೆಗ್ಗಳವಾಗುವದು"** ಎಂದು ಪುರಂದರದಾಸರು ಎದೆ ತಟ್ಟಿ ಹೇಳುವರು. **'ಭಕುತಿಯಿಲ್ಲವೊ ಅದರ ಹೊರತು ಮುಕುತಿಯಿಲ್ಲವೊ'** ಎಂದು ವಿಜಯದಾಸರು ಸಾರುವರು. **'ಹರಿಯ ಪರಮಭಕ್ತಿಯಿಂದ ಭಜಿಪ ನರನು ಮುಕ್ತನಲ್ಲವೆ, ಭವದಿ ಮುಕ್ತನಲ್ಲವೆ'** ಎಂದು ಜಗನ್ನಾಥದಾಸರು ಸವಾಲು ಮಾಡುವರು.

ಭಕುತಿಯು ಪಾಲಿಸು । ಜೀಯು ಮುಂದೆ ।
ಮುಕುತಿ ಗೊಡುವೆ ಯಾಕೆ ನೀನೊಲಿದ ಮೇಲೆ ॥

—ವಿಜಯವಿಠ್ಠಲರು

ನಮೋ ನಮೋ ನಮೋ ಸಿರಿಕೃಷ್ಣನೆಂಬ ಘೋಷ ।
ಮುಕುತಿ ಕನ್ನಿಕೆಯ ಮದುವೆಯು ವಾದ್ಯಘೋಷ ॥
ಅಚ್ಯುತಾನಂತ ಶ್ರೀ ಪುರಂದರ ವಿಠಲನ ।
ನಿಶ್ಚಲ ಭಕುತಿಯಿಂ ನೆನೆ ಕಂಡ್ಯಾ ಮನವೇ ॥

—ಪುರಂದರದಾಸರು

ಭಕುತಿ ಸುಖವೋ ರಂಗ ಮುಕುತಿ ಸುಖವೊ ।
ಭಕುತಿ ಸುಖವೊ ಮುಕುತಿ ಸುಖವೊ ಯುಕುತಿನಂತರೆಲ್ಲ ಪೇಳಿ ॥

—ವಿಜಯವಿಠ್ಠಲರು

ಆರ್ತಭಾವ

ವಿವಿಧ ದುಃಖಗಳಿಂದ ಬೆಂದು ನೊಂದು, ತನ್ನ ಶಕ್ತಿಯ ಅರಿವು ಉಂಟಾಗಿ **ದೇವರೇ ನೀನೇ ಗತಿ** ಎಂದು ಹಂಬಲಿಸಿ ಮೊರೆಯಿಡುವದೇ ಆರ್ತಭಾವವು. ಇದೇ ಭಕ್ತನ ಮೊದಲನೆಯ ಮೆಟ್ಟಲು. ಈ ರೀತಿ ಯಾಗಿ ದಾಸರ ಆರ್ತಹೃದಯಗಳು ಮೊರೆಯಿಟ್ಟ ಕೀರ್ತನೆಗಳು ಸಾವಿರಾರು ಇವೆ.

ಯಾಕೆನ್ನೊಳಿಂತು ಕೃಪೆಯಿಲ್ಲ ಹರಿಯೇ
ಕಾಕುಮಾಡದೆ ಕಾಯೊ ಭವದೊಳಗೆ ಬಳಲುವೆನು ।

—ಪುರಂದರದಾಸರು

ಯಾಕೆ ಪುಟ್ಟಿಸಿದಿ ನೀ ಸಾಕಲಾರದೆ ಜಗ-
ದೇಕ ಕಾರಣ ಪುರುಷನೇ ಕೃಷ್ಣಾ ॥

—ರಂಗವಿಠ್ಠಲರು

ಸಾಕು ಸಾಕು ಮನುಜ ಸೇವೆಯು ಶ್ರೀರಂಗರಾಯಾ ।

—ಕನಕ

ವೈರಾಗ್ಯಭಾವ

ಆರ್ತಭಾವವು ತಲೆದೋರಿದೊಡನೆ ಮನವು ದೇವರತ್ತ ಎಳೆದೊಡನೆ, ಸಿರಿಸಂಪತ್ತು ಸ್ತ್ರೀ ಪುತ್ರಾದಿಗಳಲ್ಲಿಯ ಮೋಹವು ಕಡಿಮೆ

ಯಾಗುವದು. ಇದೇ ವೈರಾಗ್ಯಭಾವವು. ಇದು ಭಕ್ತಿಯೋಗದ **ಎರಡನೇ ಮೆಟ್ಟಲು.**

> 'ವಿಷಯಂದ ವಿಚಾರ ಬಿಡು, ವಿಹಿತ ಕರ್ಮವ ಮಾಡು ।
> ವೈರಾಗ್ಯಭಾಗ್ಯವ ಬೇಡು ॥'
>
> —ಪುರಂದರದಾಸರು

> ಹಿಗ್ಗುವಿ ಯಾಕೋ ಈ ದೇಹಕ್ಕೆ ಕುಗ್ಗುವಿ ಯಾಕೋ ॥
> ಮೋಸ ಹೋದೆನಲ್ಲ । ಸಕಲವು ವಾಸುದೇವ ಬಲ್ಲ ॥
>
> —ಪುರಂದರದಾಸರು

ವೈರಾಗ್ಯವನ್ನು ಉಪದೇಶಿಸಿ, ತರುಣರನ್ನು ಸಂಸಾರಗೇಡಿಗಳನ್ನು ಮಾಡುವರೆಂದು ಯಾರೂ ತಿಳಿಯಕೂಡದು. **ಜಗತ್ತು ಸತ್ಯ**ವೆಂದು ಸಾರುವ ದಾಸರು ಸಂಸಾರವನ್ನು ತಿರಸ್ಕರಿಸಲಿಲ್ಲ. ಆದರ ಮೋಹತ್ಯಾಗವನ್ನು ಮಾಡಲು ಹೇಳುವರು. ಅಲ್ಲದೆ ಸಂಸಾರದಲ್ಲಿ ಹೇಗಿರಬೇಕೆಂಬ ಮಾರ್ಗವನ್ನೂ ಬಹು ಸೊಗಸಾಗಿ ವರ್ಣಿಸುವರು.

> ಈಸಬೇಕು ಇದ್ದು ಜಯಿಸಬೇಕು ॥
>
> —ಪುರಂದರದಾಸರು

> ಸಂಸಾರವೆಂಬಂಥ ಭಾಗ್ಯವಿರಲಿ ॥
> ಕಂಸಾರಿ ನೆನೆವೆಂಬ ಸೌಭಾಗ್ಯವಿರಲಿ ॥

ಎಂದು ವಿರಾಗಪೂರ್ಣರಾಗಿ ಪರಮಾತ್ಮನನ್ನು ಧ್ಯಾನಿಸುತ್ತ **ಜನಕ**ರಾಯನಂತೆ ವರ್ತಿಸಲು ಉಪದೇಶಿಸುವರು.

ಮುಮುಕ್ಷುಭಾವ

ತಾಪತ್ರಯಗಳಿಂದ ಆರ್ತನಾಗಿ, ವಿಷಯಗಳ ಬಗ್ಗೆ ವಿರಕ್ತನಾಗಿ ಕ್ಷಣ-ಭಂಗುರ ಸುಖವನ್ನೆಣಿಸದೆ, ನಿತ್ಯ, ನಿರಂತರ ಸುಖದತ್ತ ಸಾಗಲಿಚ್ಛಿಸುವದೇ ಮುಮುಕ್ಷುಭಾವವು. **ಇದೇ ಮೂರನೆಯ ಮೆಟ್ಟಲು.**

> ಕಂಡೂ ಕಂಡೂ ಎನ್ನ ಕೈಬಿಡುವರೆ
> ಪುಂಡರೀಕಾಕ್ಷ ಶ್ರೀಪುರುಷೋತ್ತಮ ॥
>
> —ಪುರಂದರದಾಸರು

ಇಂದು ಎನಗೆ ಗೋವಿಂದ ನಿನ್ನ ಪಾದಾರ-
ವಿಂದು ತೋರೋ ಮುಕುಂದ ಇಂದಿರೆ ರಮಣಾ ॥

—ವೇಣುಗೋಪಾಲರು

ಮುಮುಕ್ಷು ಜೀವವು ಪರಮಾತ್ಮನ ಚಿಂತನವನ್ನೂ ಸಾನ್ನಿಧ್ಯವನ್ನೂ ಅಪೇಕ್ಷಿಸಿ ಅತ್ಯಂತ ವಿಹ್ವಲಗೊಳ್ಳುತ್ತದೆ. ದೇವನಲ್ಲಿ ಮೊರೆಯಿಡುತ್ತದೆ. ಬೇಡಿಕೊಳ್ಳುತ್ತದೆ.

ತೊರೆದು ಜೀವಿಸಬಹುದೆ ಹರಿ ನಿನ್ನ ಚರಣಗಳ ।
ಬರಿದೆ ಮಾತ್ಯಾಕಿನ್ನು ಅರಿತು ಪೇಳುವೆನಯ್ಯ ॥

—ಕನಕದಾಸರು

ಇನ್ನೂ ದಯಬಾರದೆ ದಾಸನಮೇಲೆ ।
ಪನ್ನಂಗಶಯನ ಪಾಲ್ಗಡಲೊಡೆಯನೆ ಕೃಷ್ಣ ॥

—ಪುರಂದರದಾಸರು

ಎಂದಿಗೆ ನಾನಿನ್ನು ಧನ್ಯನಾಹೆ ।
ಎಂದಿಗೆ ನಿನ್ನ ಚಿತ್ತಕೆ ಬಾಹೆ ॥

—ಪುರಂದರದಾಸರು

ದಾಸ್ಯಭಾವ

ಮುಮುಕ್ಷುವು ಪರಮಾತ್ಮನ ಅನುಗ್ರಹಕ್ಕಾಗಿ, ವಿವಿಧ ರೀತಿಯಿಂದ ಭಜಿಸಲು ಯತ್ನಿಸುವನು. ದಾಸನಾಗುವನು. ಸಖನಾಗುವನು. ತಾಯಿಯಾಗುವನು.

ದಾಸನ್ನ ಮಾಡಿಕೋ ಎನ್ನ ಸ್ವಾಮಿ ।
ಸಾಸಿರ ನಾಮದ ವೆಂಕಟರಮಣಾ ।

—ಪುರಂದರದಾಸರು

ಸಖ್ಯಭಾವ

ಏನೆಂದು ಕೊಂಡಾಡಿ ಸ್ತುತಿಸಲೋ ದೇವಾ ।
ನಾನೇನು ಬಲ್ಲೆ ನಿಮ್ಮ ಮಹಿಮೆಗಳ ಮಾಧವಾ ॥

ವಾತ್ಸಲ್ಯಭಾವ

ಎಂದಪ್ಪಿಕೊಂಬೆ ರಂಗಯ್ಯನ ಎಂದಪ್ಪಿಕೊಂಬೆ ।
ಎಂದಪ್ಪಿಕೊಂಬೆ ನಾ ಎಂದು ಮುದ್ದಾಡುವೆ

—ಪುರಂದರದಾಸರು

ಎಂದಿಗೆ ಸವಿಮಾತು ಕೇಳಿ ನಾ ದಣಿವೆ ॥
ಎಲ್ಲಾಡಿ ಬಂದ್ಯೋ ಮುದ್ದು ರಂಗಯ್ಯ ನೀ-
ನೆಲ್ಲಾಡಿ ಬಂದ್ಯೋ ಕೃಷ್ಣಯ್ಯ ॥

—ರಂಗವಿಠ್ಠಲರು

ಮಧುರಭಾವ

ಬಾರೋ ನೀ ಎನ್ನ ಮನಮಂದಿರಕ್ಕೆ, ತಡಮಾಡುವದ್ಯಾಕೆ
ಮಾರಜ ಜನಕ ಹರಿ ನಿನ್ನಗ್ಗಳಿಕೆ ಸ್ಮರಿಸುವೆ ಕ್ಷಣಕ್ಷಣಕೆ ॥

— ಪುರಂದರದಾಸರು

ನಿನ್ನನಗಲಿ ಪೋಗಲಾರೆವೊ ನೀರಜಾಕ್ಷ
ನಿನ್ನ ಸೇರಿ ಸುಖಿಸ ಬಂದೆವೋ ॥

— ವಿಜಯವಿಠ್ಠಲರು

ಶಾಂತ-ಭಾವ

ಭಕ್ತನು ವಿಹ್ವಲತೆ, ಮೊದಲಾದ ಸ್ಥಿತಿಗಳಿಂದ ಪಾರಾಗಿ ಘನ ಜ್ಞಾನ ಪುಟ್ಟಿ ಶಾಂತನಾಗುವನು. ಶುದ್ಧ ಪ್ರೇಮದಿಂದ ಅವನ ಗುಣಗಾನ ಮಾಡುವನು. ಈ ಭಾವದಲ್ಲಿ ಜ್ಞಾನಜ್ಯೋತಿಯು ಬೆಳಗುವದು.

ಸಿರಿಯಲ್ಲಿಯು ನೀನೇ ಪರಮೇಷ್ಠಿಯಲ್ಲಿಯು ನೀನೇ ।
ಮರುತವಾಣಿ ಭಾರತಿ ಎಲ್ಲರಲ್ಲಿಯೂ ನೀನೇ ॥

— ಗೋಪಾಲವಿಠಲರು

ಜಗದಂತರ್ಯಾಮಿಯೆಂದೆಂದು ನಿಮ್ಮ
ನಿಗಮ ಸಾರುವ ಮಾತು ಪುಸಿಯೆ ರಂಗ ॥

ಸರ್ವಾರ್ಪಣಭಾವ (ಆತ್ಮನಿವೇದನ)

ಈ ಭಾವದಲ್ಲಿ ಭಕ್ತನು, ತನ್ನ ಸರ್ವಸ್ವವನ್ನು ಪರಮಾತ್ಮನಿಗೆ ಅರ್ಪಿಸಿಬಿಡುವನು. ತನ್ನ ವ್ಯಕ್ತಿತ್ವವನ್ನು ನಷ್ಟಪಡಿಸಿ ತಾನು ಕೇವಲ

ನಿಮಿತ್ತ ಮಾತ್ರನಾಗಿ, ಉಳಿಯುವನು. ಈ ಭಾವದಲ್ಲಿ ಮನವು ಯಾವಾಗಲೂ ಪರಮಾತ್ಮನಲ್ಲಿರುವದು. 'ವಾಸುದೇವಃ ಸರ್ವಮಿತಿ', ಎಂಬ ಭಾವದಲ್ಲಿ ತನ್ಮಯನಾಗುವನು.

ನನ್ನಿಂದ ನಾನೆ ಜನಿಸಿ ಬಂದೆನೆ ದೇವಾ ।
ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ
ನಿನ್ನದೆ ತಪ್ಪೊ ಎನ್ನದು ತಪ್ಪೋ ಗೋವಿಂದಾ ॥

—ವಾದಿರಾಜರು

ಇಟ್ಹಾಂಗೆ ಇರುವೆನು ಹರಿಯೇ ಎನ್ನ ದೊರೆಯೇ
ಶ್ರೇಷ್ಠರೊಂದಿತ ಪಾದಪದುಮ ಶ್ರೀಹರಿಯೇ ॥

—ರಂಗವಿಠ್ಠಲರು

ದೇವದರ್ಶನ ಅರ್ಥಾತ್ ಸಾಕ್ಷಾತ್ಕಾರ

ಸರ್ವಾರ್ಪಣ ಮಾಡಿದ ಭಕ್ತರಿಗೆ ಫಲವೇ ದೇವದರ್ಶನವು. ಭಕ್ತಿಯೋಗಾರೂಢರಾದ ದಾಸರು ದೇವದರ್ಶನದಿಂದ ಪುಲುಕಿತವಾದ ಕೀರ್ತನೆಗಳು ಭಕ್ತಿಯೋಗದ ಸುಮಧುರವಾದ ಫಲಗಳು.

ಕೃಷ್ಣ ಮೂರ್ತಿ ಕಣ್ಣುಮುಂದೆ ಕಟ್ಟಿದಂತಿದೆ

—ಪುರಂದರದಾಸರು

ಬಂದುನಿಂದ ಕಣ್ಣುಮುಂದೆ ಬಂದುನಿಂದ ।
ಬಂದು ನಿಂದನಿಂದು ಭಾಗವತರ ಪ್ರಿಯ
ಕಂದರ್ಪಜನಕ ಶ್ರೀಕರುಣಾಸಾಗರ ಮೂರ್ತಿ ॥

—ವಿಜಯವಿಠ್ಠಲರು

ಧನ್ಯಭಾವ

ನಿನ್ನ ನೋಡಿ ಧನ್ಯನಾದೆನೊ ಹೇ ಶ್ರೀನಿವಾಸಾ ।
ಧನ್ಯನಾದೆ ನಾ ಈ ಜಗದೊಳು ।
ಪನ್ನಗಶಯನನ ಕಣ್ಣಿನಿಂದಲಿ ಕಂಡು ॥

—ಪುರಂದರರು

ಧನ್ಯನಾದೆ ವಿಠಲನ ಕಂಡು ॥

—ಜಗನ್ನಾಥರು

ತಂದೆ ಪುರಂದರ ವಿಠಲನೆಂದೆಂಬ ಪರದೈವ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ ||

—ಪುರಂದರದಾಸರು

ಸೇರಿದೆನು ಸೇರಿದೆನು ಜಗದೀಶನ |
ನರಕ ಜನ್ಮದ ಭಯವು ಎನಗೆ ಇನಿತಿಲ್ಲ ||
ಹರಿಪ್ರೀತಿಯಾಗಿದೆ ನೋಡಿದರೆನ್ನ ದೇಹ
ಸಿರಿ ಕೃಷ್ಣರಾಯನ್ನ ಮನಮಂದಿರದಿ ಕಂಡೆ ||

—ವ್ಯಾಸರಾಯರು

ಭಕ್ತಿಯೋಗದಿಂದ ಇಷ್ಟಾರ್ಥವ ಸಾಧಿಸಿದ ಪರಮಭಕ್ತರಾದ ಈ ದಾಸರು ಧನ್ಯರು.

ಮಧ್ವಮತದಲ್ಲಿ ಅವರ ಸಿದ್ಧಾಂತದಲ್ಲಿ ಇವರಿಗೆ ನಿಶ್ಚಲವಾದ ವಿಶ್ವಾಸ :

ಮಧ್ವಮತದ ಸಿದ್ಧಾಂತದ ಪದ್ಧತಿ ಬಿಡಬ್ಯಾಡಿ | ಬಿಟ್ಟು ಕೆಡಬೇಡಿ

— ಪುರಂದರದಾಸರು

ಏನು ಶಪಥವ ಮಾಡಲೀ ಮತವು ಸಿರಿದೆಂದು
ಜ್ಞಾನಿಗಳ ಸಮ್ಮತವೋ ಪ್ರಾಣಿ ||
ವರಮಧ್ವಶಾಸ್ತ್ರವೇ ಸಕಲ ಶಾಸ್ತ್ರಾಧಿಕವೆಂದು ||

—ವಾದಿರಾಜರು

ಆವಾವ ಕರ್ಮವು | ದೇವಾಗರ್ಪಿಸುವಂಥ
ಜೀವರು ಧನ್ಯರೋ | ಗೋಪಾಲ ವಿಠ್ಠಲ ||

ದಾಸ ಸಾಹಿತ್ಯವು ಧರ್ಮಸಾಧನೆಯಲ್ಲಿ ಹೊಸ ಹಾದಿಯನ್ನು ಹಾಕಿತು, ಕನ್ನಡ ಕಾವ್ಯೇತಿಹಾಸದಲ್ಲಿ ಅಪೂರ್ವ ಮಾರ್ಗವನ್ನು ತೆರೆಯಿತು, ಕರ್ನಾಟಕ ಸಂಗೀತವನ್ನು ಉದ್ಧಾರ ಮಾಡಿತು.

ಶಿವಶರಣರ ಕೀರ್ತನೆಗಳು

ವೈಷ್ಣವ ದಾಸರ ಈ ಕೀರ್ತನೆಗಳ ಪರಿಣಾಮವು ಆ ಕಾಲದಲ್ಲಿ ಎಲ್ಲರ ಮೇಲೆಯೂ ಆಗುವದು ಸ್ವಾಭಾವಿಕ. ಶೈವರೂ, ವೀರಶೈವರೂ ಈ ಬೆಳಕಿನಲ್ಲಿ ಶಿವಭಕ್ತಿಯನ್ನು ಸಾರುವ ಕೀರ್ತನೆಗಳನ್ನು ರಚಿಸಿದರು.

ಇವರಲ್ಲಿ ನಿಜಗುಣಶಿವಯೋಗಿಗಳೂ (೧೫೦೦), ಸರ್ಪಭೂಷಣರೂ (೧೭೦೦) ಮುಪ್ಪಿನ ಷಡಕ್ಷರಿ (೧೬೫೦), ಚಿದಾನಂದಾವಧೂತರು ಇವರೇ ಮುಖ್ಯರಾದರು.

ನಿಜಗುಣಶಿವಯೋಗಿಗಳು ‘ ಕೈವಲ್ಯ ಪದ್ಧತಿ ’ ಎಂಬ ಗ್ರಂಥವನ್ನು ರಚಿಸಿದರು. ಇದರಲ್ಲಿ ತತ್ವವಿವೇಚನೆಯು ಬಹು ಮನೋಹರವಾಗಿದೆ- **ಶಂಭುಲಿಂಗ**ವೆಂಬುದೇ ಇವರ ಅಂಕಿತವು. ಸಂಗನಬಸವೇಶ್ವರರು ‘ರಘೋ.ದ್ಧರಣೆ’ ಎಂಬ ಗ್ರಂಥವನ್ನು ರಚಿಸಿಪ್ಪಾರೆ. ಇದು ವೇದಾಂತ ಬೋಧಕವಾಗಿದೆ. ಮುಪ್ಪಿನ ಷಡಕ್ಷರಿಗಳ ಭಕ್ತಿಪರ ಹಾಡುಗಳಂತೂ ಮನೆಮನೆ ಕೇಳಬರುತ್ತವೆ. ಸರ್ಪಭೂಷಣರ-ಸಪ್ಪಣ್ಣಪ್ಪನವರ ಹೆಸರು ಕೇಳದ ವೀರಶೈವರು ದುರ್ಲಭ. ಇವರ **ಕೈವಲ್ಯಕಲ್ಪವಲ್ಲರಿಯು,** ವೀರಶೈವರ ಪಾರಾಯಣ ಗ್ರಂಥವಾಗಿದೆ. ಅನೇಕ ಗ್ರಂಥಗಳಲ್ಲಿ ಹಟಯೋಗವು ಹೆಚ್ಚಾಗಿ ವರ್ಣಿಸಲ್ಪಟ್ಟಿದೆ. ಕಾಲಜ್ಞಾನ ವಿದೆ. ನೀತಿಯಿದೆ. ತತ್ವಜ್ಞಾನವಿದೆ. *

---

* ತತ್ವಜ್ಞಾನ ಮೊದಲಾದ ವಿಚಾರಗಳು ವಚನಗಳ ಪ್ರಕರಣದಲ್ಲಿವೆ.

ಯಕ್ಷಗಾನಗಳು

ಯಕ್ಷಗಾನಗಳು ಕರ್ನಾಟಕಕ್ಕೇ ವಿಶಿಷ್ಟ ನಾಟ್ಯಕಲೆ. ಕನ್ನಡ ಸಾಹಿತ್ಯದಲ್ಲಿ ಒಂದು ಪ್ರತ್ಯೇಕ ಸ್ಥಾನವನ್ನು ಆವರಿಸಿವೆ. ಈ ಸಾಹಿತ್ಯವು ಜನಪದ ಸಾಹಿತ್ಯದ ದ್ಯೋತಕವಾಗಿದೆ. ಇದರ ಉಗಮವು, ಮಲಬಾರಿನಲ್ಲಿರುವ 'ಕಥಕಲಿ'ಯಲ್ಲಿ ಎಂದು ಹೇಳುವರು. ಕಥಕಲಿಯಲ್ಲಿ ನೃತ್ಯಾಂಗಗಳಿಂದ ಕೂಡಿದ ಅಭಿನಯವಿದೆ. ಇದಕ್ಕೆ ಕಥಾವಸ್ತುಗಳು ಪೌರಾಣಿಕ ಕಥೆಗಳು. ಜೊತೆಗೆ ತಂತುವಾದ್ಯ ಚರ್ಮವಾದ್ಯಗಳಿರುತ್ತವೆ. ನಾನಾ ಬಗೆಯ ರಸ, ಭಾವಗಳನ್ನು ತೋರಿಸುವದಕ್ಕಾಗಿ ಅಂಗವಿಕ್ಷೇಪ, ವಿನ್ಯಾಸಗಳನ್ನು ಭರತನಾಟ್ಯಶಾಸ್ತ್ರದಂತೆ, ಉಪಯೋಗಿಸುವರು. ಪ್ರತಿಯೊಂದು ವಿಕ್ಷೇಪವಿನ್ಯಾಸಕ್ಕೆ ಒಂದು ಅರ್ಥವಿದೆ. ಆ ಅರ್ಥಕ್ಕೆ ತಕ್ಕಂತೆ ಮುಖಮುದ್ರೆಯಲ್ಲಿ ಹಾವ ಭಾವಗಳಲ್ಲಿ ಬದಲಾವಣೆಗಳಾಗಬೇಕು. ಕಥಕಲಿಗೆ ಸಂಗೀತದ ಬಾಹುಲ್ಯವನ್ನು ಬೆರೆಯಿಸಿ ಈಗಿನ ಯಕ್ಷಗಾನದ ಸ್ವರೂಪಕ್ಕೆ ಇಳಿಸಿರುವರು.

ವಿಜಯನಗರದ ತುಳುವಂಶದ ರಾಜರು, ಈ ಯಕ್ಷಗಾನವನ್ನು ಕನ್ನಡ ನಾಡಿನಲ್ಲಿ ಹರಡಿದರು. **ರಘುನಾಥನಾಯಕನು** ಸ್ವತಃ 'ಶ್ರೀ ರುಕ್ಮಿಣೀ ಕೃಷ್ಣವಿವಾಹ', ಯಕ್ಷಗಾನವನ್ನು ಬರೆದಂತೆ ಗೋವಿಂದ ದೀಕ್ಷಿತನ '**ಸಾಹಿತ್ಯಸುಧೆ**'ಯಿಂದ ತಿಳಿಯುತ್ತದೆ. ಯಕ್ಷಗಾನವು ವಿಜಯನಗರದ ಕಾಲಕ್ಕೆ ಪ್ರಾರಂಭವಾದರೂ ೧೮ ನೇ ಶತಮಾನದಲ್ಲಿಯೇ ಅದು ವಿಶೇಷವಾಗಿ ಬೆಳೆದಿದೆ.

ರಾಮಕವಿಯ (೧೭೫೫) **ಪದ್ಮಾವತಿ,** ತಿಪ್ಪಯಾರನ **ಹನುಮದ್ವಿಲಾಸ,** ಪದ್ಮರಾಜನ **ವಿಜಯ ಕುಮಾರನ ಕಥೆ,** ನಂಜಯ್ಯನ **ಕಪೋತವಾಕ್ಯ,** ಗಂಗನ **ಗಿರಿಜಾಕಲ್ಯಾಣ,** ಕಾಶೀರಾಮನ **ಮಲ್ಲಿಕಾರ್ಜುನ ಚರಿತೆ,** ಸ್ವಾಮಿಕವಿಯ **ರಂಗಸ್ವಾಮಿಯ ಪಾರಿಜಾತ,** ಸಾಂಬಯ್ಯನ **ಸಾರಂಗಧರನ ಕಥೆ,** ಮತ್ತು **ಕರಿಯ ಬಂಟನ ಕಥೆ,** ರಂಗಾಚಾರ್ಯರ

ಪ್ರಲ್ಹಾದಚರಿತ್ರೆ, ಕಸ್ತೂರಿಸಿದ್ಧನ **ಚೋರ ಕಥೆ**ಗಳು ಯಕ್ಷಗಾನದಲ್ಲಿ ಪ್ರಸಿದ್ಧವಾಗಿವೆ. *

ಈ ಯಕ್ಷಗಾನಗಳ ಪ್ರಚಾರವು ಇಬ್ಬಗೆಯಾಗಿದೆ. ದಕ್ಷಿಣ–ಉತ್ತರ ಕನ್ನಡಗಳಲ್ಲಿ ಯಕ್ಷಗಾನವೇಷ ಹೆಸರಿನಿಂದಲೂ ಉತ್ತರ ಕರ್ನಾಟಕದಲ್ಲಿ '**ಮೂಡಲಪಾಯ**' ಅಥವಾ ದೊಡ್ಡಾಟ–ಭಾಗವತರ ಆಟವೆಂಬ ಹೆಸರಿನಿಂದಲೂ ಪ್ರಸಿದ್ಧಿಯಾಗಿವೆ. ಯಕ್ಷಗಾನಗಳನ್ನು ತಾಳ ಮದ್ದಳೆಯೊಂದಿಗೆ, ಕಥೆ ಮಾಡುವದೂ ಉಂಟು. ಪಾತ್ರವಹಿಸಿ ಬಣ್ಣ ಬಳಿದುಕೊಂಡು ಪ್ರಸಂಗವಾಡುವದೂ ಉಂಟು. ಈ ಎರಡೂ ಪದ್ಧತಿಗಳು ದಕ್ಷಿಣ–ಉತ್ತರ ಕನ್ನಡಗಳಲ್ಲಿ ಈಗಲೂ ನೋಡಲು ದೊರೆಯುತ್ತವೆ.

ಈ ಯಕ್ಷಗಾನದೊಂದಿಗೆ ಗೊಂಬೆಯಾಟಗಳನ್ನೂ ಆಡುವದುಂಟು. ಹೊಲೆದಾಸರು **ದಾಸರ** ಆಟವೆಂದು ಆಡುವದೂ ಉಂಟು.

ಸ್ತ್ರೀಯರಿಗೆ ಸಾಹಿತ್ಯ ಪರಿಚಯವನ್ನು ಮಾಡಿಕೊಟ್ಟವುಗಳೆಂದರೆ **ಗೋಕಾವಿಯ ಅನಂತಾಚಾರ್ಯರ** ವೆಂಕಟೇಶ ಪಾರಿಜಾತ, ಪ್ರಲ್ಹಾದ ಚರಿತ್ರೆ, ಧ್ರುವಚರಿತ್ರೆ, ಶಿವಪಾರಿಜಾತ ಮೊದಲಾದ ಯಕ್ಷಗಾನಗಳೇ. ಹೆಣ್ಣು ಮಕ್ಕಳ ಇಂದಿನ ನಿತ್ಯ ಜೀವನದಲ್ಲಿ ಇವುಗಳನ್ನು ನಾವು ನೋಡುತ್ತೇವೆ. **ಅಪರಾಲ ತಮ್ಮಣ್ಣನ** ಕೃಷ್ಣಪಾರಿಜಾತವು ಈ ಭಾಗದಲ್ಲಿ ಅತ್ಯಂತ ಲೋಕ ಪ್ರಿಯವಿದೆ. ಇತ್ತಿತ್ತಲಾಗಿ ಉತ್ತರಕರ್ನಾಟಕದಲ್ಲಿ ಯಕ್ಷಗಾನಗಳೂ ಬೈಲಾಟಗಳೂ ಮುಗ್ಗುತ್ತ ನಡೆದಿವೆ.

ಯಕ್ಷಗಾನದ ಉತ್ಪತ್ತಿಯು 'ಮಳಿಯಾಳಿನಲ್ಲಿ' ಎಂಬ ಮಾತು ವಿವಾದಾಸ್ಪದವಿದೆ. ನಮ್ಮ ಸಾಹಿತ್ಯವು ಇದಕ್ಕೆ ಸಮ್ಮತಿಸಲಾರದು. ನಾಟ್ಯಮಯ ಜೀವಿಗಳಾದ ರಸಿಕ ಕನ್ನಡಿಗರ ಆ ಕಾಲದ ಜನಜೀವನದ ಶೋಧವು ಇನ್ನೂ ಆಗಬೇಕಾಗಿದೆ. ಆ ಕತ್ತಲೆಯಲ್ಲಿರುವ ಮಾತುಗಳಲ್ಲಿ ಇದೊಂದು.

---

* **ಧಾರವಾಡದ ಸಂಶೋಧನ ಕಚೇರಿಯಲ್ಲಿ ಇನ್ನೂ ಅನೇಕ ಅಪ್ರಕಟಿತ ಯಕ್ಷಗಾನಗಳಿವೆ.**

೮. ಕನ್ನಡ ಸಾಹಿತ್ಯದಲ್ಲಿಯ ಲಕ್ಷಣಗ್ರಂಥಗಳು

ಯಾವುದೊಂದು ಸಾಹಿತ್ಯವು ಪರಿಪೂರ್ಣವೆಂದು ಅನ್ನಬೇಕಾದರೆ ಅದರ ಸಾಹಿತ್ಯಾಂಗಗಳೆಲ್ಲ ಪೂರ್ಣವಾಗಿ ಬೆಳೆದು ಪುರಿಪುಷ್ಟವಾಗಿರಬೇಕು. ಪ್ರತಿಯೊಂದು ಅಂಗವೂ ಶಾಸ್ತ್ರೀಯವಾಗಿ ತನ್ನಷ್ಟಕ್ಕೆ ತಾನು ಪೂರ್ಣವಾಗಿ ತನ್ನ ಸಾಹಿತ್ಯವನ್ನು ಪೋಷಿಸುತ್ತಿರಬೇಕು. ಅಂದರೇ ಆ ಸಾಹಿತ್ಯವು ಜೀವಂತವಾಗಿ, ತೇಜೋಮಯವಾಗಿ ಸಾಹಿತ್ಯವೆಂದು ಬಾಳಿ ಬದುಕುವದು. ಅಂದರೆ ಸಾಹಿತ್ಯದ ಜೀವಾಳವಾದ ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ಮೊದಲಾದವುಗಳು ಶಾಸ್ತ್ರವಾಗಿ ಪರಿಪೂರ್ಣವಾಗಿ ಬೆಳೆದಿರಬೇಕೆಂಬರ್ಥ. ಈ ಲಕ್ಷಣ ಗ್ರಂಥಗಳಿಂದಲೇ ಆ ಸಾಹಿತ್ಯದ ಬೆಲೆಯು, ಪರಿಪೂರ್ಣತೆಯು.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಕಡೆಗೆ ನೋಡಿದರೆ, ಯಾವ ಬಗೆಯ ಕುಂದು ಕೊರತೆಗಳೂ ಇಲ್ಲದೆ, ಸಾಹಿತ್ಯದ ವಿವಿಧಾಂಗಗಳು ಶಾಸ್ತ್ರೀಯವಾಗಿ ಬೆಳೆದು ಪೂರ್ಣಾವಸ್ಥೆಗೆ ಮುಟ್ಟಿರುವವೆಂದು ಕಂಡು ಬರುತ್ತದೆ. ಆಯಾಕಾಲಕ್ಕೆ ವ್ಯಾಕರಣದ ಕಟ್ಟು ಕಟ್ಟಳೆಗಳಿಂದ ಭಾಷೆಗೆ ಶುದ್ಧ ಸ್ವರೂಪವನ್ನು ಕೊಟ್ಟಿದ್ದು ಕಾಣುತ್ತದೆ. ಕವಿಗಳ ಬಗೆಗೆ ತಕ್ಕಂತೆ, ವಿವಿಧ ಛಂದಸ್ಸುಗಳ ನಿರ್ಮಾಣವು ಕಂಡುಬರುತ್ತದೆ. ಈ ಪ್ರಕರಣದಲ್ಲಿ, ಕನ್ನಡ ಸಾಹಿತ್ಯದ ಲಕ್ಷಣ ಗ್ರಂಥಗಳಾದ **ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ಶಬ್ದಕೋಶ** ಇವೇ ಮೊದಲಾದವುಗಳು ಹೇಗೆ ಬೆಳೆದು ಕನ್ನಡ ಸಾಹಿತ್ಯವಾಹಿನಿಗೆ ಪೋಷಕವಾಗಿವೆ ಎಂಬುದನ್ನೇ ವಿಚಾರ ಮಾಡಬೇಕಾಗಿದೆ.

ಕನ್ನಡ ವ್ಯಾಕರಣಗಳು

ಮಾನವನ ಅಂತಃಕರಣದಲ್ಲಿಯ ವಿವಿಧ ಭಾವನೆಗಳು ಜೆಡಗಿನ ನುಡಿಯಲ್ಲಿ ರೂಹುಗೊಂಡು ಹೊರಬೀಳುತ್ತವೆ. ಅದೇ ನುಡಿಯು ಗ್ರಂಥಸ್ಥವಾಗಿ ಸಾಹಿತ್ಯ ರೂಪವನ್ನು ತಾಳುತ್ತದೆ. ದೇಶ, ಕಾಲ, ಪರಿಸ್ಥಿತಿಗೆ ಅನುಸರಿಸಿಯೂ, ಭಾವಗಳ ವೈವಿಧ್ಯಕ್ಕೆ ತಕ್ಕಂತೆಯೂ ಸಾಹಿತ್ಯವು

ವಿವಿಧ ರೂಪಗಳನ್ನು ತಾಳಿ ಬೆಳೆಯುಹತ್ತುತ್ತದೆ. ಆಚಾರ, ವಿಚಾರ, ಉಚ್ಚಾರಗಳಲ್ಲಿ ವಿವಿಧತ್ವವು ಬೆಳೆದೊಡನೆಯೆ ಭಾಷೆಯು ಏಕತ್ವಕ್ಕಾಗಿ ಕಟ್ಟು ನಿಟ್ಟುಗಳ ಅವಶ್ಯಕತೆಯು ತಲೆದೋರುತ್ತದೆ. ಈ ಭಾವನೆಯೇ ಬೆಳೆದು ವ್ಯಾಕರಣಗಳು ಉದಯುವಾಗುತ್ತವೆ. ಎಲ್ಲ ಸಾಹಿತ್ಯಗಳಲ್ಲಿಯೂ ಕಂಡುಬರುವ ಸಾಮಾನ್ಯ ನಿಯಮವಿದು.

ಕನ್ನಡ ಸಾಹಿತ್ಯವು ೪–೫ನೆಯ ಶತಮಾನಗಳಿಂದ ಬೆಳೆದು ಬಂದಿದ್ದರೂ ೧೨ನೇ ಶತಮಾನದ ವರೆಗೆ, ನಮಗೆ ವ್ಯಾಕರಣ ಗ್ರಂಥಗಳು ದೊರೆಯುವದಿಲ್ಲ. ನಾಗವರ್ಮನ (೧೧೪೫) **ಶಬ್ದಸ್ಮೃತಿ, ಭಾಷಾ ಭೂಷಣ**ಗಳೇ ನಮಗೆ ಪ್ರಾಚೀನ. ಆದರೆ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ವ್ಯಾಕರಣದ ಬಗ್ಗೆ ಕೆಲವು ಕಟ್ಟಳೆಗಳನ್ನು ಹೇಳುತ್ತಾನೆ. ಇದಲ್ಲದೆ ಕನ್ನಡ ಭಾಷೆಯಲ್ಲಿ ಉತ್ತರ ದಕ್ಷಿಣಗಳೆಂಬ ಎರಡು ಮಾರ್ಗಗಳಿದ್ದು ಅವುಗಳ ಪದ ಪ್ರಯೋಗದಲ್ಲಿಯೂ ಭೇದವಿದೆ ಎಂದು ತೋರಿಸುತ್ತಾನೆ. ಸಂಸ್ಕೃತ ಶಬ್ದಗಳ ವಿಪರೀತ ಬೆರಕೆಯನ್ನು ನಿಷೇಧಿಸುತ್ತಾನೆ. ಅರಿಸಮಾಸವನ್ನು ಮಾಡಕೂಡದೆಂದು ಕಟ್ಟುಮಾಡುತ್ತಾನೆ. ಅಂದರೆ ಇವನ ಕಾಲಕ್ಕೆ ಭಾಷೆಯು ಬೆಳೆದು ವಿವಿಧ ರೂಪಗಳನ್ನು ತಾಳಿತ್ತೆಂದೂ, ವ್ಯಾಕರಣದ ಆವಶ್ಯಕತೆಯು ತಲೆದೋರಿತ್ತೆಂದೂ ವ್ಯಕ್ತವಾಗುವದು. ನೃಪತುಂಗನಿಂದ ಮುಂದೆ ಕನ್ನಡ ಸಾಹಿತ್ಯವು ಹುಲುಸಾಗಿ ಬೆಳೆಯಿತು. ೧೨ನೇ ಶತಮಾನವೆಂದರೆ ಸಾಹಿತ್ಯಕ್ಕೆ ಯೌವನ. ಆಗ ವ್ಯಾಕರಣದ ಆವಶ್ಯಕತೆಯುಂಟಾಗುವುದು ಸ್ವಾಭಾವಿಕ. ಇದೇ ಸುಮಾರಿಗೆ ನಯಸೇನನು (೧೧೧೨) ಉದಯುವಾದಂತೆ ತಿಳಿಯುತ್ತದೆ. ನಾಗವರ್ಮನು ತನ್ನ ಭಾಷಾಭೂಷಣದ ಎಪ್ಪತ್ತೆರಡನೇ ಸೂತ್ರದಲ್ಲಿ "ದೀರ್ಘೋಕ್ತಿ ನಯಸೇನಸ್ಯ" ನಯಸೇನನ ಮತಾನುಸಾರವಾಗಿ ಸಂಬೋಧನಕ್ಕೆ ದೀರ್ಘ ಉಂಟೆಂದು ಹೇಳುವದರಿಂದ, ನಯಸೇನನೂ **ವ್ಯಾಕರಣ ಗ್ರಂಥ**ವನ್ನು ಬರೆದಂತೆ ಕಂಡುಬರುವದು. ಆದರೆ ಆ ಗ್ರಂಥವು ಇನ್ನೂ ಬೆಳಕಿಗೆ ಬಂದಿಲ್ಲ. ಮುಂದೆ ಸ್ವಲ್ಪ ದಿನಗಳಲ್ಲಿಯೆ ಸುಪ್ರಸಿದ್ಧ ವೈಯಾಕರಣಿಯಾದ ನಾಗವರ್ಮನು ತಲೆದೋರುವನು.

ಈಗ ಪ್ರಸಿದ್ಧವಿರುವ **ನಾಗವರ್ಮನ** "ಕರ್ನಾಟಕ ಭಾಷಾ.

ಭೂಷಣ, ಶಬ್ದಸ್ಮೃತಿ ”ಗಳೇ ಇಂದಿನ ಗ್ರಂಥಸ್ಥ ಪ್ರಾಚೀನ ಕನ್ನಡ ವ್ಯಾಕರಣಗಳು. ಇದರಲ್ಲಿ ಶಬ್ದಸ್ಮೃತಿಯು ಕಾವ್ಯಾವಲೋಕನವೆಂಬ ಅಲಂಕಾರ ಗ್ರಂಥದ ಭಾಗವು. ಅದರ ಆದಿ ಭಾಗದಲ್ಲಿ ವ್ಯಾಕರಣವನ್ನು ಸಂಗ್ರಹವಾಗಿ ಹೇಳಿದೆ. ಇದೇ **ಶಬ್ದಸ್ಮೃತಿಯು.** ಇದರಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ ಎಂದು ಐದು ಅಧ್ಯಾಯಗಳಿವೆ. ಇದು ಕನ್ನಡ ಭಾಷೆಯಲ್ಲಿಯೇ ಇದೆ. ಎರಡನೆಯ ಗ್ರಂಥವೆಂದರೆ ಕರ್ನಾಟಕ ಭಾಷಾಭೂಷಣ. ಇದರಲ್ಲಿಯ ಸೂತ್ರ ವೃತ್ತಿಗಳು ಸಂಸ್ಕೃತ ದಲ್ಲಿ ಬರೆಯಲ್ಪಟ್ಟಿವೆ. ನಾಗವರ್ಮನು ತನ್ನ ಪೂರ್ವ ಕವಿಗಳ ಕನ್ನಡ ಗ್ರಂಥಗಳಿಂದಲೇ ಉದಾಹರಣೆಯನ್ನು ಕೊಟ್ಟಿದ್ದಾನೆ. ಇದರಲ್ಲಿ ೨೮೦ ಸೂತ್ರಗಳಿದ್ದು ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತ ನಿಯಮ, ಅವ್ಯಯ ನಿರೂಪಣ, ನಿಪಾತ ನಿರೂಪಣ ಎಂದು ಹತ್ತು ಪರಿಚ್ಛೇದಗಳಾಗಿ ಗ್ರಂಥವು ವಿಸ್ತರಿಸಲ್ಪಟ್ಟಿದೆ. ೮ನೆಯ ಶತಮಾನದಿಂದ ೧೨ನೆಯ ಶತಮಾನದ ವರೆಗೆ ಬೆಳೆದು ಬಂದ ಸಾಹಿತ್ಯದ ಪ್ರತಿಬಿಂಬವೇ ಕರ್ನಾಟಕ ಭಾಷಾಭೂಷಣವೆಂದು ಹೇಳಬಹುದು. ಗ್ರಂಥದ ಕೊನೆಯಲ್ಲಿ ನಾಗವರ್ಮನು ಈ ರೀತಿಯಾಗಿ ಹೇಳಿಕೊಂಡಿದ್ದಾನೆ.

“ಕರ್ನಾಟಕ ಶಬ್ದ ಸೂತ್ರಾಣಿ । ಲೋಕವ್ಯುತ್ಪತ್ತಿ ಹೇತವೆ ॥
ರಚಿತಾನಿ ಸ್ಫುಟಾರ್ಥಾನಿ । ಕೃತೀನಿ ನಾಗವರ್ಮಣಾ ॥

೧೨ನೇ ಶತಮಾನದಲ್ಲಿ ಹಳಗನ್ನಡವು ಕಾಲ್ದೆಗೆದು ನಡುಗನ್ನಡವು ತಲೆಯೆತ್ತಿತ್ತು. ಪರೆಯನ್ನು ತೊರೆದ ಹಾವಿನಂತೆ, ಕನ್ನಡ ಸಾಹಿತ್ಯವು ಚಂಪೂ ರೂಪವನ್ನು ಬಿಟ್ಟು, ಹೊಸ ವೇಷದಿಂದ ಮುಂದೆ ಸಾಗಿತ್ತು. ಇಂತಹ ಸಂಧಿಕಾಲದಲ್ಲಿ **ಕೇಶಿರಾಜನು** (೧೨೬೦) ವ್ಯಾಕರಣವನ್ನು ಬರೆಯಲು ಮುಂದಾದನು. ಇವನ **ಶಬ್ದಮಣಿದರ್ಪಣ**ದಲ್ಲಿ ಹೊಸ ಹಳೆಯ ಕಾಲಗಳ ಪಡಿನೆಳಲನ್ನು ಕಾಣಬಹುದು. ಹಳೆಯದನ್ನು ಬಿಡಲಾರದ ಹೊಸದನ್ನು ಅಲ್ಲಗಳೆಯಲಾರದ ಒಂದು ಪರಿಸ್ಥಿತಿ. ೞ ಱ ಕುಳಗಳನ್ನು ಉಳಿಸುವ ಹೆಣಗಾಟವು ಕಾಣುವದು. ಹೊಸದನ್ನು ತಡೆಗಟ್ಟುವ ಸಾಹಸವು ತೋರುವದು.

ಶಬ್ದಮಣಿದರ್ಪಣವು ಹಳಗನ್ನಡ ಭಾಷೆಗೆ ಪ್ರಮಾಣ ಗ್ರಂಥವು. ನಾಗವರ್ಮನ ಭಾಷಾಭೂಷಣಕ್ಕಿಂತಲೂ, ಇದರಲ್ಲಿ ಹೆಚ್ಚು ವಿಷಯಗಳು ಅಡಕವಾಗಿವೆ. ಇಲ್ಲಿ ನಾವು ಇನ್ನೊಂದು ಮಾತನ್ನು ಗಮನಕ್ಕೆ ತೆಗೆದು ಕೊಳ್ಳಬೇಕು. ಕನ್ನಡ ಸಾಹಿತ್ಯವು ಸಂಸ್ಕೃತ ಛಂದಸ್ಸನ್ನು ತ್ಯಜಿಸಿ ಕನ್ನಡ ವಾಗುತ್ತ ನಡೆದಿತ್ತು. ನಾಗವರ್ಮನ ಭಾಷಾಭೂಷಣವು ಸಂಸ್ಕೃತದ ರೀತಿಯಲ್ಲಿಯದು. ಸಾಹಿತ್ಯದ ಹೊಸ ರೀತಿಯಿಂದ ಶಬ್ದಮಣಿದರ್ಪಣಕ್ಕೆ ಕನ್ನಡದ ಸ್ವರೂಪವು ಸ್ವಾಭಾವಿಕ ಪ್ರಾಪ್ತವಾಯಿತು. ಇದರಲ್ಲಿ ಇದೊಂದು ವೈಶಿಷ್ಟ್ಯವು. ಕವಿಯು ಕನ್ನಡ ಭಾಷೆಯ ಸ್ವರೂಪವನ್ನು ಸಂಕ್ಷೇಪವಾಗಿ ವರ್ಣಿಸಿದ್ದಾನೆ.

"ಗಮಕ ಸಮಾಸದಿಂ ಱ ೞ ಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ ।
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ ॥
ಮಹಪ ಭೇದದಿಂ ವಿರಹಿತಾನ್ವಯು ಸಂಸ್ಕೃತ ಲಿಂಗದಿಂದ ಪದೋ ।
ತ್ತಮ ಶಿಥಿಲತ್ವದಿಂ ಯತಿ ವಿಲಂಘನದಿಂದರಿದಲ್ತೆ ಕನ್ನಡಂ ॥

ಶಬ್ದಮಣಿದರ್ಪಣವಲ್ಲಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಎಂಟು ಸಂಧಿಗಳಿವೆ. ಗ್ರಂಥದ ಕೊನೆಯಲ್ಲಿ 'ಪ್ರಯೋಗಸಾರವೆಂಬ ಶಬ್ದಾರ್ಥ ನಿರ್ಣಯಂ' ಎಂಬ ಹೆಸರಿನಿಂದ ಒಂಬತ್ತನೆಯ ಸಂಧಿಯೊಂದಿದೆ. ಇದರಲ್ಲಿ ಮೊದಲಿನ ಕವಿಗಳು ಉಪಯೋಗಿಸಿದ ಗೂಢ ಪದಗಳ ಅರ್ಥವನ್ನು ಕೊಟ್ಟಿದ್ದಾನೆ. ತನ್ನ ಕಾಲದ ಗ್ರಂಥೋಪಯುಕ್ತ ಧಾತುಗಳನ್ನೆಲ್ಲ ಅಂತ್ಯಾಕ್ಷರ ಪ್ರಾಸಾನು ಕ್ರಮದಿಂದ ಸಂಗ್ರಹಿಸಿದ್ದಾನೆ. ಉಳಿದ ವ್ಯಾಕರಣಕಾರರು ಮಾಡದ ಕೆಲಸವಿದು ಅಲ್ಲದೆ ಕೃತ್ ತದ್ಧಿತಗಳ ವಿಚಾರವನ್ನು ಕೇಶಿರಾಜನಷ್ಟು ಇನ್ನಾದರೂ ಮಾಡಿಲ್ಲ. ಈ ಗ್ರಂಥದಲ್ಲಿಯ ಸೂತ್ರಗಳು ಕಂದರೂಪ ವಾಗಿವೆ. ಅವುಗಳಿಗೆ ವೃತ್ತಿಯೂ ಬರೆಯಲ್ಪಟ್ಟಿದೆ. ಅದು ಗದ್ಯದಲ್ಲಿ ಇದೆ. ಕನ್ನಡ ಭಾಷೆಯಲ್ಲಿ ಕರ್ನಾಟಕ ಶಬ್ದಶಾಸ್ತ್ರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥವು ಇದೊಂದೇ. ಇದಕ್ಕೆ **ನಿಟ್ಟೂರ ನಂಜಯ್ಯನು** ವ್ಯಾಖ್ಯಾನವನ್ನು ಬರೆದಿದ್ದಾನೆ.

ಕೇಶಿರಾಜನು ವ್ಯಾಕರಣದ ಫಲವನ್ನು ಬಹು ಮಾರ್ಮಿಕವಾಗಿ ಹೇಳಿದ್ದಾನೆ.

ವ್ಯಾಕರಣದಿಂದೆ ಪದವೂ । ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವ ।
ಲೋಕಂ ತತ್ತ್ವಾಲೋಕದಿ । ನಾಕಾಂಕ್ಷಿಸ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ॥

ಮುಂದೆ ೧೬೦೪ ರಲ್ಲಿ ಭಟ್ಟಾಕಳಂಕನು **ಶಬ್ದಾನುಶಾಸನ**ವೆಂಬ ಸುಪ್ರಸಿದ್ಧವಾದ ವ್ಯಾಕರಣ ಗ್ರಂಥವನ್ನು ಬರೆದನು. ನಾಗವರ್ಮನ ಭಾಷಾಭೂಷಣದಂತೆ ಸಂಸ್ಕೃತದಲ್ಲಿ ರಚಿತವಾಗಿದೆ. ಭಾಷಾಭೂಷಣ-ಕ್ಕಿಂತಲೂ ವಿಸ್ತಾರವಾಗಿಯೂ ಪ್ರೌಢವಾಗಿಯೂ ಇದೆ. ಶಬ್ದಮಣಿ-ದರ್ಪಣಕ್ಕಿಂತಲೂ ಹೆಚ್ಚು ವಿಷಯಗಳನ್ನು ಒಳಗೊಂಡಿದೆ. ಕನ್ನಡ ಭಾಷೆಗೆ ಇದು ಅತ್ಯುತ್ತಮವಾದ ವ್ಯಾಕರಣಗ್ರಂಥವೆಂದು ಹೇಳಬಹುದು. ಇದರಲ್ಲಿ ೪ ಪಾದಗಳಿವೆ. ೫೯೨ ಸೂತ್ರಗಳಿವೆ. ಈ ಸೂತ್ರಗಳಿಗೆ, **ಭಾಷಾಮಂಜರಿ** ಎಂಬ ವೃತ್ತಿಯೂ **ಮಂಜರೀ ಮಕರಂದ**ವೆಂಬ ವ್ಯಾಖ್ಯಾನವೂ ಇದೆ. ವ್ಯಾಕರಣದ ಪ್ರಕ್ರಿಯೆಯ ದೃಷ್ಟಿಯಿಂದ ಇದೇ ಅತ್ಯಂತ ಪ್ರೌಢವೂ ಗೌರವಾರ್ಹವೂ ಆದ ಗ್ರಂಥ. ಆದರೆ ಪ್ರಯೋಗ ಗಳ ಪ್ರಾಮಾಣ್ಯದ ವಿಷಯದಲ್ಲಿ ಭಟ್ಟಾಕಳಂಕನಿಗಿಂತಲೂ ಕೇಶಿರಾಜನೇ ಹೆಚ್ಚು ವಿಶ್ವಾಸಾರ್ಹನು.

ಒಟ್ಟಿನಲ್ಲಿ ನೃಪತುಂಗನು ವ್ಯಾಕರಣಕ್ಕೆ ಸಂಬಂಧಪಟ್ಟ ಕೆಲವು ಮಾತುಗಳನ್ನು ಹೇಳಿದ್ದಾನೆ. ಆನುಪೂರ್ವಿಯಾಗಿ ಗ್ರಂಥರೂಪದಿಂದ ನಾಗವರ್ಮನು ಶಬ್ದಸ್ಮೃತಿ ಹಾಗು ಕರ್ನಾಟಕ ಭಾಷಾಭೂಷಣ ಗಳನ್ನು ರಚಿಸಿದ್ದಾನೆ. ಕೇಶಿರಾಜನು ಶಬ್ದಮಣಿದರ್ಪಣವನ್ನು ಬರೆದು ನಾಗವರ್ಮನ ದಾರಿಯನ್ನು ಮುಂದರಿಸಿದ್ದಾನೆ. ಭಟ್ಟಾಕಳಂಕನು ಶಬ್ದಾನುಶಾಸನವನ್ನು ಬರೆದು ವ್ಯಾಕರಣ ಶಾಸ್ತ್ರವನ್ನು ಪರಿಪೂರ್ತಿ-ಗೊಳಿಸಿದ್ದಾನೆ. ಮುಂದಿನ ಸಾಹಿತ್ಯವು ಹೊಸ ವೈಯಾಕರಣಿಗಳನ್ನು ಎದುರು ನೋಡುತ್ತಿದೆ.

ಕನ್ನಡ ಛಂದಸ್ಸುಗಳು

ವ್ಯಾಕರಣವು ಸಾಹಿತ್ಯಕ್ಕೆ ತಳಹದಿಯಾದರೆ ಛಂದಸ್ಸು ಕಾವ್ಯಕ್ಕೆ ಜೀವಾಳವಾಗಿದೆ. ವ್ಯಾಕರಣವು ಗದ್ಯಪದ್ಯಗಳೆರಡಕ್ಕೂ ಸಂಬಂಧಿಸಿದರೆ ಛಂದಸ್ಸು ಕಾವ್ಯ (ಪದ್ಯ) ಕ್ಕೆ ಸಂಬಂಧಿಸಿದೆ. ಗಹನವಾದ–ವಿಸ್ತೃತವಾದ ವಿಚಾರಗಳನ್ನು ಸಂಗ್ರಹಿಸಿ, ಉದಾತ್ತವಾದ ವಿಷಯಗಳನ್ನು, ಲಲಿತ

ವಾಗಿಯೂ ಮನೋಹರವಾಗಿಯೂ ರಸವತ್ತಾಗಿಯೂ ಹೇಳಲು ಪದ್ಯವು ಬಹಳ ಅನುಕೂಲವು. ಸುಲಭವಾಗಿ ನೆನಪಿಡಲು ಪದ್ಯವು ಬಹು ಸಹಾಯಕವು. ಆದುದರಿಂದಲೇ ಪದ್ಯ ಸಾಹಿತ್ಯವೇ ಹೆಚ್ಚು. ಪದ್ಯಗಳ ನಿಯಮವನ್ನೇ ಛಂದಶ್ಶಾಸ್ತ್ರವು ಹೇಳುವದು. ಛಂದಶ್ಶಾಸ್ತ್ರವು ಆ ಸಾಹಿತ್ಯದ ಅಳಿಗೋಲು ಇದ್ದಂತೆ.

ಕನ್ನಡ ಛಂದಶ್ಶಾಸ್ತ್ರಗಳ ಕಡೆಗೆ ಈ ದೃಷ್ಟಿಯಿಂದ ನೋಡಿದರೆ, ೧೦ನೇ ಶತಮಾನದ ವರೆಗೆ, ನಮಗೆ ಛಂದೋಗ್ರಂಥಗಳು ಕಾಣುವುದಿಲ್ಲ. ನಾಗವರ್ಮನ (೯೯೦) **ಛಂದೋಂಬುಧಿಯೇ** ಈಗ ದೊರೆತಿರುವ ಗ್ರಂಥಗಳಲ್ಲಿ ಅತಿ ಪ್ರಾಚೀನ. ಕನ್ನಡ ಸಾಹಿತ್ಯಕ್ಕೂ ಇದು ಒಳ್ಳೇ ಕಾಲ. ಅದೇ ಹುಲುಸಾಗಿ ಬೆಳೆಯಲು ಪ್ರಾರಂಭವಾಗಿತ್ತು. ೯ನೆಯ ಶತಮಾನದಲ್ಲಿಯೇ 'ಗುಣಗಾಂಕಿಯಂ' ಎಂಬ ಛಂದೋಗ್ರಂಥವು ಉದಯವಾಗಿತ್ತೆಂದು 'ಯಾಪ್ಪರುಂಗಲಕ್ಕಾರಿಹೈ' ಎಂಬ ತಮಿಳು ಗ್ರಂಥದಿಂದ ತಿಳಿಯುತ್ತದೆ. ಆದರೆ ಆ ಗ್ರಂಥವು ಉಪಲಬ್ಧವಿಲ್ಲ. ಇದೇ ಶತಮಾನದ ಸುಪ್ರಸಿದ್ಧ ಲಕ್ಷಣ ಗ್ರಂಥಕಾರನಾದ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ಕನ್ನಡ ಛಂದಸ್ಸಿನ ಕೆಲವು ಮಾತುಗಳನ್ನು ಹೇಳುವನು. **ಚಿತ್ತಾಣ, ಬೆಂದಡೆ**ಗಳೆಂಬ ಕನ್ನಡ ಕಾವ್ಯಭೇದಗಳನ್ನು ವಿವರಿಸಿ, ಅವುಗಳ ಲಕ್ಷಣಗಳನ್ನು ಹೇಳುವ ಮುಂದೆ **ಕಂದ, ವೃತ್ತ, ಅಕ್ಕರ, ಚೌಪದಿ, ತಿವಿದಿ** ಮೊದಲಾದ ದೇಶಿ ಪದ್ಯಗಳನ್ನು ಹೇಳುತ್ತಾನೆ. ಅದರಂತೆ ಕಾವ್ಯದ ದೋಷವನ್ನು ಹೇಳುವಾಗ ಯತಿಯ ವಿಚಾರವಾಗಿಯೂ ವಿಚಾರ ಮಾಡುತ್ತಾನೆ.

ಆದರೆ ಅನುಪೂರ್ವಿಯಾಗಿ ಬರೆದ ಗ್ರಂಥವೆಂದರೆ ನಾಗವರ್ಮನ ಛಂದೋಂಬುಧಿಯೇ. ನಾಗವರ್ಮನು ತನ್ನ ಪೂರ್ವದ ಗುಣಗಾಂಕಿ ಮೊದಲಾದವರ ಯಾರ ಹೆಸರನ್ನೂ ಹೇಳದೆ,

'ಇಂದುಧರನುಮೆಗೆ ಪೇಳ್ದಾ ।
ಛಂದಂ ಪಿಂಗಳನಿನವನಿಯೊಳ್ ಪರಪಿದೊಡಾ ।
ಛಂದೋಂಬುರಾಶಿಯೋಳ್ ನೊಗೆ ।
ತಂದದನಾತ್ಮೀಯನಾಕಿಗನುಸಿರ್ದಂ ॥

—ಛಂದೋಂಬುಧಿ

ಎಂದು ಪಿಂಗಳನ ಹೆಸರನ್ನು ಹೇಳುತ್ತಾನೆ. ಈಶ್ವರನು ಉಮೆಗೆ ಉಪದೇಶ ಮಾಡಿದ ಛಂದಸ್ಸು ಪಿಂಗಳನಿಂದ ಭೂಲೋಕದಲ್ಲಿ ವಿಸ್ತಾರವಾಯಿತೆಂದೂ ಅದನ್ನೇ ತಾನು ಅಭ್ಯಸಿಸಿ, ತನ್ನ ಹೆಂಡತಿಗೆ ಹೇಳಿದಂತೆಯೂ ಹೇಳುವನು. ಅಂದರೆ ಪಿಂಗಳನ ಛಂದೋಗ್ರಂಥದ ಆಧಾರದಿಂದಲೇ ಇವನು ಬರೆದನು. ಈ ಗ್ರಂಥವು ಆರು ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಪೀಠಿಕೆಯ ನಂತರ (೧) **ಸಂಜ್ಞಾಧಿಕಾರ**ದಲ್ಲಿ ಪ್ರಾಸದ ವಿಷಯಗಳನ್ನು ಹೇಳುವನು. ನೃಪತುಂಗನ ಉದಾಹರಣ ಪದ್ಯಗಳನ್ನು ಉದಾಹರಿಸುವನು. ಭಾಷೆಯ ವಿಷಯದಲ್ಲಿ—

> "ಸಂಸ್ಕೃತಂ ಪ್ರಾಕೃತಮಪಭ್ರಂಶಂ ಪೈಶಾಚಿಕಮೆಂಬ
> ಮೂರುವರೆ ಭಾಷೆಗಳೊಳ್ ಪುಟ್ಟುವ ದ್ರಾವಿಡಾಂಧ್ರ ಕರ್ನಾಟಕಾದಿ
> ಷಟ್‌ಪಂಚಾಶತ್ಸರ್ವ ವಿಷಯ ಭಾಷಾಜಾತಿಗಳಕ್ಕುಂ"

ಎಂದು ಹೇಳಿದ್ದಾನೆ. ಅನಂತರ ಕನ್ನಡಕ್ಕೆ ಅಸಾಧಾರಣವಾಗಿ ಇರುವ 'ಜಾತಿ'ಗಳನ್ನು—

> "ಮದನವತಿಯಕ್ಕರಂ ಚೌ | ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷ |
> ಟ್ಪದಿಯಕ್ಕರಿಕೆ, ಕರಂಚಿ | ಲ್ಪೊದವಿದ ಛಂದೋವತಂಸಮಬ್ಜದಳಾಕ್ಷಿ ||"

ಎಂಬ ಪದ್ಯದಲ್ಲಿ ಹೇಳಿದ್ದಾನೆ.

(೨) **ಸಮವೃತ್ತಾವಿವರಣ**ವೆಂಬುದರಲ್ಲಿ ಉಕ್ತೆಯಿಂದ ಉತ್ಕೃತಿಯ ವರೆಗೆ ೨೬ ಛಂದಸ್ಸುಗಳನ್ನು ಹೇಳುತ್ತಾನೆ. ೩ ನೆಯ ಆಶ್ವಾಸದಲ್ಲಿ ಇತರ ಸಮವೃತ್ತಗಳನ್ನೂ, ಅರ್ಧ ಸಮವೃತ್ತ ವಿಷಮ ವೃತ್ತಗಳನ್ನೂ, ಮಾತ್ರಾ ಛಂದಗಳನ್ನೂ, ಮಾತ್ರಾ ಗಣಛಂದಗಳನ್ನೂ ಹೇಳಿದ್ದಾರೆ. ೪ನೆಯ ಆಶ್ವಾಸದಲ್ಲಿ ಇತರ ಮಾತ್ರಾ ಗಣಛಂದಗಳನ್ನೂ ೫ನೆಯದರಲ್ಲಿ **ಕನ್ನಡ** ಮಾತ್ರಾಛಂದಗಳನ್ನೂ, ೬ನೆಯದರಲ್ಲಿ ಷಟ್‌ಪ್ರತ್ಯಯಗಳನ್ನೂ ವಿವರಿಸಿದ್ದಾನೆ. ಈ ಗ್ರಂಥದಲ್ಲಿ ಇರುವ ಈ ಅಲ್ಪ ಭಾಗವನ್ನು ಮಾತ್ರ **ಹಳಗನ್ನಡ** ಛಂದಸ್ಸಿಗೆ ಉಪಯೋಗಿಸಿರುವನು. ಮಿಕ್ಕದೆಲ್ಲವೂ ಕೇವಲ ಸಂಸ್ಕೃತವೇ. ಇದು ಕನ್ನಡ ಸಾಹಿತ್ಯದ ಮೇಲಿನ ಸಂಸ್ಕೃತ ವರ್ಚಸ್ಸನ್ನು ಸೂಚಿಸುತ್ತದೆ. ಕನ್ನಡದ ಯಾವುದೇ ಛಂದೋಗ್ರಂಥವನ್ನು

ನೋಡಿದರೂ ಸಂಸ್ಕೃತದ ಕೈಗಡದ ಛಂದಸ್ಸೂ ಕನ್ನಡ ಛಂದಸ್ಸೂ ಎರಡೂ ಕಾಣುತ್ತವೆ. ಇದಕ್ಕೆ ಕಾರಣವು ಇಲ್ಲದಿಲ್ಲ.

ಕನ್ನಡದ ಪ್ರಾಚೀನ ಕವಿಗಳೆಲ್ಲ ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವರಾಗಿ, ಸಂಸ್ಕೃತ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳ ಮತ್ತು ಮಹಾಕಾವ್ಯ, ನಾಟಕಗಳ ಪ್ರಭಾವಕ್ಕೆ ಒಳಗಾಗಿ, ಅವುಗಳನ್ನೇ ತಮ್ಮ ಗುರಿಯನ್ನಾಗಿ ಇಟ್ಟುಕೊಂಡು, ಸಂಸ್ಕೃತ ಶೈಲಿಯಲ್ಲಿಯೇ ಚಂಪೂ ಕಾವ್ಯಗಳನ್ನು ಬರೆದಂತೆ, ಸಂಸ್ಕೃತ ಛಂದಸ್ಸನ್ನೇ ತಮ್ಮ ಕಾವ್ಯಗಳಲ್ಲಿ ಪ್ರಧಾನವಾಗಿ ಉಪಯೋಗಿಸಿಕೊಂಡರು.

ಕನ್ನಡಕ್ಕೆ ಆದಿಕವಿಯಾದ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯ ಈ ಎರಡೂ ಗ್ರಂಥಗಳಲ್ಲಿಯೂ ಸಂಸ್ಕೃತ ಛಂದಸ್ಸಿಗೇ ಪ್ರಾಧಾನ್ಯವೇ ಹೊರ್ತು ಕನ್ನಡಕ್ಕಲ್ಲ. ಕನ್ನಡದ ಎಲ್ಲ ಚಂಪೂಕಾರರು ಇದೇ ರೀತಿಯನ್ನೇ ತೀಡಿರುವರು. ಅರ್ಥಾತ್ ಸಂಸ್ಕೃತ ಛಂದಸ್ಸನ್ನೇ ಹೆಚ್ಚಾಗಿ ಬಳಸಿರುವರು. ಮುಖ್ಯವಾಗಿ ಹೀಗೆ ತೆಗೆದುಕೊಂಡ ಸಂಸ್ಕೃತ ಛಂದಸ್ಸು ತನ್ನ ವರ್ಚಸ್ಸನ್ನು ಕೂಡಿಸುವದು ಸ್ವಾಭಾವಿಕವಿದೆ.

ಸಂಸ್ಕೃತ ಛಂದಸ್ಸು **ವೈದಿಕ, ಲೌಕಿಕ** ಎಂದು ಎರಡು ಬಗೆಯಾಗಿವೆ. ವೇದಗಳಲ್ಲಿ ಬಳಸಿರುವ ಛಂದಸ್ಸೇ **ವೈದಿಕ ಛಂದಸ್ಸು.** ಇದನ್ನು ಕನ್ನಡ ಕವಿಗಳು ಬಳಸಿದಂತೆ ಕಾಣುವದಿಲ್ಲ. ಆದರೆ ಲೌಕಿಕ ಛಂದಸ್ಸನ್ನು ಉಪಯೋಗಿಸಿಕೊಂಡಿರುವರು. "ಶಾರ್ದೂಲವಿಕ್ರೀಡಿತ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಚಂಪಕಮಾಲೆ, ಸ್ರಗ್ಧರೆ, ಮಹಾಸ್ರಗ್ಧರೆ, ಮತ್ತು ಕಂದ"ಗಳನ್ನೂ ಇವುಗಳ ಜೊತೆಯಲ್ಲಿಯೇ ಅಲ್ಲಲ್ಲಿ ಅಪೂರ್ವವಾಗಿ, "ಮಾಲಿನಿ, ಪೃಥ್ವಿ, ಶಿಖರಿಣಿ, ಮಂದಾಕ್ರಾಂತ, ಹರಿಣಿ, ಮಲ್ಲಿಕಾಮಾಲೆ, ತರಳ" ಮುಂತಾದ ವೃತ್ತಗಳನ್ನೂ ಅದರಂತೆಯೇ 'ಉಪೇಂದ್ರವಜ್ರ, ಇಂದ್ರವಜ್ರ, ವಂಶಸ್ಥ, ವಸಂತತಿಲಕ' ಮುಂತಾದವುಗಳನ್ನೂ ಅತ್ಯಂತ ವಿರಳವಾಗಿಯೂ ಉಪಯೋಗಿಸಿದ್ದಾರೆ. ಆದರೆ ಶಾರ್ದೂಲ ಮೊದಲಾದ ವೃತ್ತಗಳ ಪ್ರಚಾರವೇ ಬಹಳ. ಈ ವೃತ್ತಗಳನ್ನು ಕೂಡ ಕನ್ನಡಕ್ಕೆ ತೆಗೆದುಕೊಳ್ಳುವಾಗ ಕನ್ನಡ ಭಾಷೆಗೆ

ತಕ್ಕಂತೆ ಕುಲಗೆಡಿಸಿದುದು ಕಾಣುತ್ತದೆ. ಈ ವೃತ್ತಗಳು ಯತಿಯನ್ನು ಕಳೆದು ಕೊಂಡು, ಪ್ರಾಸವನ್ನು ಧಾರಣಮಾಡಿದವು. ಸಂಸ್ಕೃತದ ಆರ್ಯಾ ಅಥವಾ ಗಾಥವೇ ಕನ್ನಡದಲ್ಲಿ ಕಂದವಾಗಿದೆ.

ಕನ್ನಡ ಸಾಹಿತ್ಯವು ಹಳಗನ್ನಡ ರೂಪವನ್ನು ಬಿಟ್ಟು, ನಡುಗನ್ನಡ ರೂಪವನ್ನು ಧಾರಣ ಮಾಡಿದಂತೆ, ಅಂದರೆ ಸಂಸ್ಕೃತ ಧಾಟಿಯನ್ನು ಬಿಟ್ಟು ಕನ್ನಡ ಧಾಟಿಯಲ್ಲಿ ನಡೆದಂತೆ, ಹಳಗನ್ನಡದ ಮಿಶ್ರಣವಿಲ್ಲದೆ ವೃತ್ತ ಕಂದ ಗಳನ್ನು ರಚಿಸುವುದು ಕಷ್ಟವಾಗುತ್ತ ಬಂದಿತು. ಸಂಸ್ಕೃತ ಛಂದಸ್ಸು ಕನ್ನಡಕ್ಕೆ ಸಹಜವಾಗಿ ಒಗ್ಗುವದಿಲ್ಲೆಂದು ಅನಿಸಹತ್ತಿತು. ಆಗ ಅಂತರ್ಮುಖಿ ಗಳಾಗಿ ತಮ್ಮದೊಂದು ವಿಶಿಷ್ಟವಾದ ಛಂದಸ್ಸು ಇದೆಯೇ, ಇದ್ದರೆ ಯಾವುದು ಎಂಬ ಶೋಧಕ್ಕೆ ಮೊದಲಾಯಿತು. ೧೦ನೆಯ ಶತಮಾನದ ವರೆಗಿನ ಕವಿಗಳು **ಕನ್ನಡ ಛಂದಸ್ಸಿನ** ಪದ್ಯಗಳನ್ನು ಅಲ್ಲೊಂದು ಇಲ್ಲೊಂದು ಉಪಯೋಗಿಸುತ್ತಿದ್ದರು. ಅದನ್ನೇ ನಾಗವರ್ಮನು ತನ್ನ ಛಂದೋಂಬುಧಿ ಯಲ್ಲಿ ಸಂಗ್ರಹಿಸಿ ಹೇಳಿದ್ದಾನೆ.

(೧) **ತ್ರಿಪದಿ,** (೨) **ಅಕ್ಕರೆ,** (೩) **ರಗಳೆ,** (೪) **ಸಾಂಗತ್ಯ,** (೫) **ಷಟ್ಪದಿ,** ಇವೇ ಆ ಕನ್ನಡ ಪದ್ಯಗಳು. ಇವೇ ನಿಜವಾದ **ಕನ್ನಡ ಭಾಷೆಯ, ಕನ್ನಡ ಜನಾಂಗದ ಛಂದಸ್ಸೆಂದೂ** ಜನಪದ ಸಾಹಿತ್ಯ ವೆಲ್ಲವೂ ಇದೇ ಛಂದಸ್ಸುಗಳಲ್ಲಿದೆಯೆಂದೂ ಮನಗಂಡು ಕ್ರಾಂತಿಕಾರಕರಾದ ವೀರಶೈವ ಕವಿಗಳು ಸಂಸ್ಕೃತ ಛಂದಸ್ಸನ್ನು ಹಿಂದಕ್ಕಟ್ಟಿ ಕನ್ನಡ ಛಂದಸ್ಸನ್ನೇ ಮುಂದುಮಾಡಿದರು.

ನಾಗವರ್ಮನು ಶರಷಟ್ಪದಿಯೊಂದನ್ನೇ ಹೇಳುತ್ತಾನೆ. ೧೨ನೆಯ ಶತಮಾನದಲ್ಲಿ ಷಟ್ಪದಿಗೆ ಕವಲೊಡೆದು ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂದು ಆರು ಬಗೆಯಾಯಿತು. ಹಿಂದೆ ಈ ವಿಷಯ ವನ್ನು ವಿಸ್ತಾರವಾಗಿ ವಿವರಿಸಿದ್ದೇವೆ. ಅಂತೂ ಕನ್ನಡ ಸಾಹಿತ್ಯವು ೧೨ನೆಯ ಶತಮಾನದಿಂದ **ಕನ್ನಡ ಛಂದಸ್ಸಿನ ಕುಣಿತ**ದಿಂದ ಮುಂದುವರಿಯಿತು. **ಕನ್ನಡ** ಛಂದಸ್ಸು ತ್ರಿಪದಿ, ೫ ಅಕ್ಕರಗಳು, ೬ ಷಟ್ಪದಿಗಳು, ರಗಳೆಗಳು, ಸಾಂಗತ್ಯ, ದ್ವಿಪದಿ, ಚೌಪದಿ, ಸೀಸಪದ್ಯ ಹೀಗೆ ವಿವಿಧ ರೂಪಗಳನ್ನು ತಾಳಿತು. ಇಂತಿದೆ ಕನ್ನಡ ಛಂದಸ್ಸಿನ ಇತಿಹಾಸ.

ನಾಗವರ್ಮನ ತರುವಾಯ ಹೊರಟ ಛಂದೋಗ್ರಂಥವೆಂದರೆ ಈಶ್ವರ (೧೫೦೦) ಕವಿಯ **ಕವಿಜಿಹ್ವಾಬಂಧನ.** ಇದು ಕಂದವೃತ್ತಗಳಲ್ಲಿದೆ. ಇದರಲ್ಲಿ ನಾಲ್ಕು ಪರಿಚ್ಛೇದಗಳಿವೆ. ಮೊದಲನೆಯ ಪರಿಚ್ಛೇದದಲ್ಲಿ ಗಣಗಳೂ ಅವುಗಳ ವರ್ಣ, ವಾಹನ, ಮೈತ್ರಿ, ವೈರ, ಕುಲ, ದೇವತಾ, ಫಲಾದಿಗಳನ್ನು ಹೇಳಿದ್ದಾನೆ. ಎರಡನೆಯದರಲ್ಲಿ ಪ್ರಾಸ ವಿವರಗಳನ್ನು ಹೇಳಿದ್ದಾನೆ. ಮೂರನೆಯದರಲ್ಲಿ ಅಕ್ಷರಗಳೂ ಅವುಗಳ ಕುಲ, ಅಧಿದೇವತೆ ಮೊದಲಾದ ವಿಷಯಗಳೂ ಹೇಳಲ್ಪಟ್ಟಿವೆ. ಕೊನೆಯದರಲ್ಲಿ ಭಾವ, ಅಲಂಕಾರ, ಕಂದ, ಷಟ್ಪದಿಗಳ ಲಕ್ಷಣ ಮುಂತಾದವುಗಳು ಹೇಳಲ್ಪಟ್ಟಿವೆ.

ಮುಂದೆ ೧೬೫೦ ರಲ್ಲಿ ಗುಣಚಂದ್ರನು **ಛಂದಸ್ಸಾರವೆಂಬ** ಗ್ರಂಥವನ್ನು ಬರೆದನು. ಸಂಜ್ಞಾ, ಮಾತ್ರಾಛಂದೋಲಕ್ಷಣ, ಸಮವೃತ್ತ, ಸಂಕೀರ್ಣ, ತಾಳವೃತ್ತ ಪ್ರಕರಣಗಳೆಂದು ಐದು ಭಾಗವಾಗಿ ಗ್ರಂಥವು ವಿಸ್ತರಿಸಲ್ಪಟ್ಟಿದೆ.

ಮುಂದೆ ೧೮೦೦ ನೆಯ ಇಸ್ವಿಯಲ್ಲಿ ಪ್ರಾಸ, ವೃತ್ತಗಳ ಲಕ್ಷಣಗಳನ್ನು ಹೇಳುವ **ನಂದೀಛಂದಸ್ಸು**, ನಾಗವರ್ಮನ **ಛಂದೋಂಬುಧಿಯೂ**, ಗುಣಚಂದ್ರನ **ಛಂದಸ್ಸಾರವೂ** ಕನ್ನಡದಲ್ಲಿ ಪ್ರಸಿದ್ಧವಾದ ಛಂದಸ್ಸುಗಳು.

ಅಲಂಕಾರ

ಸವಿಶೇಷ ಶಬ್ದರಚನಂ ।
ವಿವಿಧಾರ್ಥ ವ್ಯಕ್ತಿ ವರ್ತಿತಾಲಂಕಾರಂ ॥
—ಕವಿರಾಜಮಾರ್ಗ ೧, ೨೨

ಭಾಷೆಯು ಬೆಳೆದು ವಿವಿಧ ರೂಪ ತಾಳಿದಂತೆ, ಅದರ ಸ್ವರೂಪ, ನಿಯಮಗಳನ್ನು ತಿಳಿಸುವ ವ್ಯಾಕರಣ ಛಂದಸ್ಸುಗಳು ಉದಯವಾಗುವಂತೆ, ಭಾಷೆಯು ಬೆಳೆದ ನಂತರವೇ ಅಲಂಕಾರ ಗ್ರಂಥಗಳೂ ಹುಟ್ಟುತ್ತವೆ. ಇದು ಸಹಜ ಧರ್ಮ. ಈ ಧರ್ಮಕ್ಕನುಸರಿಸಿಯೆ ನಮ್ಮಲ್ಲಿಯೂ ಅನೇಕ ಕಾವ್ಯಗಳು ಹುಟ್ಟಿ ಬೆಳೆದ ನಂತರವೇ ಅಲಂಕಾರ ಗ್ರಂಥಕ್ಕೆ

ಪ್ರಾರಂಭವಾಗಿರಬೇಕು. ಆದರೆ, ಈಗ ನಮಗೆ ದೊರೆತಿರುವ ಪ್ರಾಚೀನ ತಮವಾದ ಮೊದಲನೇ ಗ್ರಂಥವೇ **ಲಕ್ಷಣಗ್ರಂಥ**ವಾಗಿದೆ. ಅಂದರೆ, ಅದಕ್ಕಿಂತಲೂ ಮೊದಲು ಎಷ್ಟೋ ಕಾಲ ಕಾವ್ಯವು ಬೆಳೆದುಬಂದಿರಲೇ ಬೇಕು.

ಸಾಹಿತ್ಯದಲ್ಲಿ ಅಲಂಕಾರವೆಂದರೆ ನೃಪತುಂಗನು ಹೇಳುವಂತೆ, ಅನುಪ್ರಾಸ, ರೂಪಕ, ಉಪಮೆ ಮುಂತಾದ ಶಬ್ದವೈಚಿತ್ರ್ಯಗಳೆಂದರ್ಥ. ಕವಿಗಳು ತಮ್ಮ ಬುದ್ಧಿ ಕೌಶಲ್ಯದಿಂದ, ವಿವಿಧ ಭಾವಗಳಿಂದ ಕಾವ್ಯವನ್ನು ಸೊಬಗುಗೊಳಿಸಿ ಅಲಂಕರಿಸುವರು. ಅಂದರೆ ಕವಿಗಳ ಈ ಕುಸುರೇ ಅರ್ಥಾತ್ ಸೊಬಗೇ **ಅಲಂಕಾರ.** ಇದನ್ನು ವಿವರಿಸುವದೇ ಅಲಂಕಾರ ಶಾಸ್ತ್ರ. ಈ ಶಾಸ್ತ್ರದ ಮೇಲ್ಮೆಯು ಸಾಹಿತ್ಯದ ಪರಿಪೂರ್ಣತೆಯನ್ನು ಸೂಚಿಸುವುದು.

ಕನ್ನಡದಲ್ಲಿರುವ ಅಲಂಕಾರ ಗ್ರಂಥಗಳೆಲ್ಲವೂ ಸಂಸ್ಕೃತದ ಅನು-ಕರಣ, ಇಲ್ಲವೆ ಛಾಯೆಗಳಾಗಿವೆ ಎಂಬುದು ಒಮ್ಮೆಲೆ ಒಡೆದು ಕಾಣು ತ್ತದೆ. ೯ನೆಯ ಶತಮಾನದ ಸಮಯಕ್ಕೆ ಸಂಸ್ಕೃತ ಸಾಹಿತ್ಯದ ಪ್ರಭಾ ವವು ಕನ್ನಡವನ್ನು ಹೇಗೆ ಆವರಿಸಿತ್ತೆಂಬುದನ್ನು ಹಿಂದೆಯೆ ಚರ್ಚಿಸ ಲಾಗಿದೆ. ಈ ಸಂಸ್ಕೃತದ ಬೆಳಕಿನಲ್ಲಿಯೇ ನಮ್ಮ ಲಕ್ಷಣಕಾರರು ಗ್ರಂಥಗಳನ್ನು ರಚಿಸಿರುವರು. ಅದು ಮುಂದಣ ಚರಿತ್ರೆಯಿಂದ ಸ್ಪಷ್ಟ ವಾಗುವದು.

ಸಾಹಿತ್ಯದಲ್ಲಿ 'ಅಲಂಕಾರ' ವೆಂದರೆ ಅನುಪ್ರಾಸ, ಉಪಮೆ ಮುಂತಾದ ಶಬ್ದಾರ್ಥ ವೈಚಿತ್ರ್ಯಗಳೆಂದು ಒಂದು ಅರ್ಥ. ಕಾವ್ಯದಲ್ಲಿರುವ ಸೌಂದರ್ಯವೆಂದು ಇನ್ನೊಂದು ಅರ್ಥ. ಅಲಂಕಾರ ಶಾಸ್ತ್ರವು ಶಬ್ದ ವೈಚಿತ್ರ್ಯವನ್ನೂ ಅರ್ಥವೈಚಿತ್ರ್ಯವನ್ನೂ ಸೌಂದರ್ಯತತ್ವವನ್ನೂ ವಿಚಾರ ಮಾಡುವ ಶಾಸ್ತ್ರ. ಶಬ್ದವೈಚಿತ್ರ್ಯಗಳು ಕಾವ್ಯಕ್ಕೆ ಸೌಂದರ್ಯ ದಾಯಕವಾಗಿರುವದರಿಂದ ಕಾವ್ಯದ ಸ್ವರೂಪ, ಲಕ್ಷಣ ಮುಂತಾದವು ಗಳನ್ನೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ನಿರೂಪಿಸುವ ಶಾಸ್ತ್ರವೆಂದು ಹೇಳಬಹುದು. ಆದುದರಿಂದಲೆ ಮೊದಲಿನ ಅಲಂಕಾರ

ವಿದ್ದರೂ ಕಾವ್ಯದಲ್ಲಿ ಶಬ್ದಾಲಂಕಾರಗಳಿಗೆ ಪ್ರಾಧಾನ್ಯ ಕೊಟ್ಟಿದ್ದರಿಂದೂ ಅದರಿಂದ ಕಾವ್ಯ ಲಕ್ಷಣವನ್ನು ಬೋಧಿಸುವ ಶಾಸ್ತ್ರಕ್ಕೆ 'ಅಲಂಕಾರ ಶಾಸ್ತ್ರ'ವೆಂದು ಹೆಸರು ಬಂದಿತೆಂದೂ ಕೆಲವರ ಮತ. ಇವರ ಮತದಂತೆ ಕಾವ್ಯದಲ್ಲಿ ವಾಚ್ಯಾರ್ಥಕ್ಕೇ ಪ್ರಾಧಾನ್ಯ. ವ್ಯಂಗ್ಯಾರ್ಥವಿದ್ದರೆ, ವಾಚ್ಯಾರ್ಥವನ್ನು ಪುಷ್ಟಿಗೊಳಿಸುವದರ ಮೂಲಕ ಅದಕ್ಕೆ ಎರಡನೇ ಸ್ಥಾನ. 'ರೀತಿಃ ಆತ್ಮಾ ಕಾವ್ಯಸ್ಯ' ಎಂಬ ವಾಮನನ ಉಕ್ತಿಯಂತೆ ರೀತಿಯೇ ಕಾವ್ಯಕ್ಕೆ ಆತ್ಮ, ಗುಣಾಲಂಕಾರಗಳು ಮುಖ್ಯ, ಈ ಪಕ್ಷದವರಿಗೆ.

ಎರಡನೆಯ ಪಂಗಡದವರ ಮತಾನುಸಾರವಾಗಿ, ಧ್ವನಿ ಅಥವಾ ವ್ಯಂಗ್ಯಾರ್ಥಕ್ಕೆ ಪ್ರಾಧಾನ್ಯ. ರಸವೇ ಕಾವ್ಯಕ್ಕೆ ಜೀವ. ರಸಪುಷ್ಟಿಯನ್ನುಂಟು ಮಾಡುವದರ ಮೂಲಕವೆ ಗುಣಾಲಂಕಾರಗಳಿಗೆ ಪ್ರಾಶಸ್ತ್ಯ. ಈ ಎರಡೂ ಮತಗಳನ್ನು ಅಲಂಕಾರಪ್ರಧಾನ ಹಾಗು ರಸಪ್ರಧಾನವೆಂದು ವಿಭಾಗಿಸಬಹುದು ಈ ಕ್ರಮದಲ್ಲಿಯೇ ಈ ಶಾಸ್ತ್ರದ ಬೆಳವಣಿಗೆಯೂ ಆಗಿದೆ.

ಅಲಂಕಾರ ಪ್ರಧಾನರಿಗೆ ರಸ, ಧ್ವನಿಗಳ ಜ್ಞಾನವು ಇರಲಿಲ್ಲವೆಂದು ತಿಳಿಯಕೂಡದು. ಆದರೆ ಅವರು ಇವುಗಳಿಗೆ ಮಹತ್ವ ಕೊಡದೆ ಅಲಂಕಾರಗಳಲ್ಲಿಯೇ ಸೇರಿಸಿಬಿಟ್ಟಿರುವರು. ನೃಪತುಂಗನು† 'ಧ್ವನಿ ಎಂಬುದು ಅಲಂಕಾರಂ' ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅಂದರೆ ಇದಕ್ಕೆ ಪ್ರಾಮುಖ್ಯತೆ ಇರಲಿಲ್ಲವೆಂಬರ್ಥ. ಭರತನ ನಾಟ್ಯಶಾಸ್ತ್ರದಲ್ಲಿಯೆ ಮಾತ್ರ ರಸವಿಚಾರವು ಹೆಚ್ಚಾಗಿ ಹೇಳಲ್ಪಡುತ್ತದೆ. ಉಳಿದ‡ ಪ್ರಾಚೀನ ಲಕ್ಷಣ ಗ್ರಂಥಗಳಲ್ಲಿ ಇದು ಕಾಣುವದಿಲ್ಲ. ಇದನ್ನು ನೋಡಿದರೆ ನಾಟಕದಲ್ಲಿಯೇ ರಸಕ್ಕೆ ಪ್ರಾಧಾನ್ಯವಿತ್ತೆಂದೂ ಮುಂದೆ ೯ನೆಯ ಶತಮಾನದಲ್ಲಿ ಅದನ್ನು ಕಾವ್ಯಕ್ಕೆ ಅನ್ವಯಿಸಿದಂತೆಯೂ ಕಾಣುತ್ತದೆ.

ಸಂಸ್ಕೃತದಲ್ಲಿ ಅಲಂಕಾರಿಕರೂ, ರಸಕಾರರೂ ಇರುವಂತೆ, ಕನ್ನಡ

---

† ಕವಿರಾಜಮಾರ್ಗ ೩ನೆಯ ಆಶ್ವಾಸ; ೨೦೮ನೆಯ ಶ್ಲೋಕ.

‡ ಕೈಪಿಡಿ, ಪು. ೧೯೬.

ಲಕ್ಷಣಕಾರರಲ್ಲಿಯೂ ಎರಡು ಬಣಗಳು ಕಾಣುತ್ತವೆ. ಮೊದಲು **ಅಲಂಕಾರರ** ವಿಷಯವನ್ನೇ ನೋಡೋಣ:

ಕನ್ನಡ ಸಾಹಿತ್ಯಕ್ಕೆ ಕವಿರಾಜಮಾರ್ಗವು ನಿಜವಾಗಿಯೂ ರಾಜ **ಮಾರ್ಗವು.** ಕನ್ನಡ ಸಾಹಿತ್ಯದ ವಿಷಯಕ್ಕೆ **ಯಾವುದೆ ಮಾತನ್ನು** ಎತ್ತಿದರೂ ಅದರ ಬೇರುಗಳೆಲ್ಲವೂ ಕವಿರಾಜಮಾರ್ಗದಲ್ಲಿ **ದೊರೆಯು** ತ್ತವೆ. ವ್ಯಾಕರಣ, ಛಂದಸ್ಸು, ಕನ್ನಡ ಪ್ರಾಚೀನತೆ, ದೇಶ, ಜನತೆ ಇವೆಲ್ಲವುಗಳ ಸುಳಿವನ್ನೂ ಹೇಳುವ ಈ ಗ್ರಂಥವು ಕನ್ನಡ ಸಾಹಿತ್ಯದ **ತಾಯಿಬೇರು.**

ಈ ಗ್ರಂಥವು (೮೧೪–೮೭೭) **ದಂಡಿಯ** 'ಕಾವ್ಯಾದರ್ಶ'ದ ಅನುವಾದವೆಂದೇ ಹೇಳಬಹುದು. ಇದು ಮೂರು ಪರಿಚ್ಛೇದಗಳಾಗಿ ವಿಭಾಗಿಸಲ್ಪಟ್ಟಿದೆ. (೧) ದೋಷಾನುವರ್ಣನ ನಿರ್ಣಯ, (೨) ಶಬ್ದಾಲಂಕಾರ, (೩) ಅರ್ಥಾಲಂಕಾರ. ದೇವತಾ ಸ್ತೋತ್ರವನ್ನು ಮಾಡಿದ ನಂತರ ಕವಿಗಳನ್ನೂ ಕಾವ್ಯಗಳನ್ನೂ ಹೊಗಳುತ್ತಾನೆ. ಗದ್ಯಪದ್ಯ ಕಾವ್ಯಗಳ ಲಕ್ಷಣವನ್ನು ಹೇಳಿ, ಅವುಗಳಿಗೆ ಲಕ್ಷ್ಯರೂಪವಾಗಿ ಕಾವ್ಯಗಳನ್ನು ಬರೆದಿರುವ ಸಂಸ್ಕೃತದ ಬಾಣ, ನಾರಾಯಣ, ಗುಣಸೂರಿ, ಭಾರವಿ, ಕಾಳಿದಾಸ, ಮಾಘಾದಿಗಳನ್ನೂ, ವಿಮಳೋದಯ, ನಾಗಾರ್ಜುನಾದಿ ಕನ್ನಡ ಕವಿ-ಗಳನ್ನೂ ಹೊಗಳುತ್ತಾನೆ. ಆಮೇಲೆ ಕನ್ನಡ ಭಾಷೆಯ ನಾಡನ್ನು ಸೂಚಿಸಿ, ತನ್ನ ಕಾಲದಲ್ಲಿ ಹಳಗನ್ನಡವೆಂಬ ಭಾಷೆಯಿದ್ದಿತೆಂದೂ, ಕನ್ನಡದಲ್ಲಿ ದಕ್ಷಿ-ಣೋತ್ತರಗಳೆಂಬ ಎರಡು ಶೈಲಿಗಳಿದ್ದುವೆಂದೂ ಹೇಳಿ, 'ಬೆದಂಡೆ, ಚತ್ತಾಣ' ಗಳೆಂಬ ಕಾವ್ಯಭೇದಗಳನ್ನು ತೋರಿಸುತ್ತಾನೆ. ನಂತರ ಕಾವ್ಯದೋಷಗಳನ್ನು ವಿವರಿಸಿ, ಮೊದಲನೇ ಪರಿಚ್ಛೇದವನ್ನು ಮುಗಿಸುತ್ತಾನೆ. ಕನ್ನಡದ ಅನೇಕ ಸಂಗತಿಗಳನ್ನು ತೋರಿಸುವದೇ ಇದರ ವೈಶಿಷ್ಟ್ಯ. ಎರಡನೇ ಪರಿಚ್ಛೇದದಲ್ಲಿ ಕನ್ನಡದಲ್ಲಿ ಬರೆಯುವದಕ್ಕೆ ಕಷ್ಟವಾದ ಏಕಾಕ್ಷರ, ದ್ವ್ಯಕ್ಷರ ಶ್ಲೋಕಗಳಿಗೂ, ಚಿತ್ರ, ಯಮಕಾದಿಗಳಿಗೂ ಉದಾಹರಣೆಗಳನ್ನು **ಕೊಟ್ಟು** **ಶಬ್ದಾಲಂಕಾರವನ್ನು** ವರ್ಣಿಸುತ್ತಾನೆ. ಮೂರನೆಯದರಲ್ಲಿ ಸುಮಾರು ೩೬ ಅಲಂಕಾರಗಳಿಗೆ ಲಕ್ಷ್ಯಲಕ್ಷಣಗಳನ್ನು ಹೇಳಿ **ಅರ್ಥಾಲಂಕಾರವನ್ನು** ವರ್ಣಿಸುತ್ತಾನೆ.

ಕನ್ನಡ ಅಲಂಕಾರ ಗ್ರಂಥಗಳಲ್ಲೆಲ್ಲ, ಅತ್ಯಂತ ವಿಸ್ತಾರವಾದ ಗ್ರಂಥವೆಂದರೆ ನಾಗವರ್ಮನ **ಕಾವ್ಯಾವಲೋಕನ** (೧೧೪೫). ಇದೇ ಎರಡನೇ ಗ್ರಂಥವು. ಇದರ ಮೇಲ್ಮೆಯನ್ನು ಕವಿಯು ಹೀಗೆ ಹೇಳಿದ್ದಾನೆ:—

ಕವಿಗಳಿದು ಕೈಗನ್ನಡಿ । ಕವಿತೆಗೆ ಬಾಳ್ಮೊದಲುದಾತ್ತ ವಾಗ್ದೇವತೆಗು ॥
ದ್ಭವ ಹೇತು ಕೋಶಗೃಹಮೆನೆ । ಭುವನದೊಳಿದು ಪಿರಿದು
ನಿಲ್ವುದೊಂದಚ್ಚರಿಯೇ ॥

ಈ ಗ್ರಂಥಕ್ಕೆ ವಾಮನ, ರುದ್ರಟ, ಭಾಮಹ, ದಂಡಿ, ಭರತ, ರಾಜಶೇಖರ ಇವರ ಗ್ರಂಥಗಳೇ ಆಧಾರಗಳು. (೧) ಶಬ್ದಸ್ಮೃತಿ, (೨) ಕಾವ್ಯಮಲವ್ಯಾವೃತ್ತಿ, (೩) ಗುಣವಿಶೇಷ, (೪) ರೀತಿ ಕ್ರಮ, ರಸನಿರೂಪಣ, (೫) ಕವಿಸಮಯ, ಎಂದು ಇದರಲ್ಲಿ ಐದು ಅಧಿಕರಣಗಳಿವೆ.

ಮೊದಲನೆಯದರಲ್ಲಿ ವ್ಯಾಕರಣವು ನಿರೂಪಿಸಲ್ಪಟ್ಟಿದೆ. ಎರಡನೆಯದರಲ್ಲಿ ಪದಪದಾರ್ಥ, ಸಂಧಿದೋಷ ನಿಶ್ಚಯ, ವಾಕ್ಯವಾಕ್ಯಾರ್ಥ ದೋಷಾನುಕೀರ್ತನ ಎಂಬ ಎರಡು ವಿಭಾಗಗಳಿವೆ. ಮೂರನೆಯದರಲ್ಲಿ ಮಾರ್ಗವಿಭಾಗ ದರ್ಶನ, ಶಬ್ದ ಶಬ್ದಾಲಂಕಾರ ನಿರ್ಣಯ, ಅರ್ಥಾಲಂಕಾರ ನಿರ್ಣಯಗಳೆಂಬ ಮೂರು ಪ್ರಕರಣಗಳಿವೆ. ೪ನೆಯ ಅಧಿಕರಣದಲ್ಲಿ ಅಸದಖ್ಯಾತಿ, ಸದ ಕೀರ್ತನೆ, ನಿಯಮಾರ್ಥ, ಐಕ್ಯವೆಂಬ ನಾಲ್ಕು ಪ್ರಕರಣಗಳಿವೆ. ಈ ಗ್ರಂಥವು ಇಷ್ಟು ವಿಸ್ತಾರವಾಗಿ ವಿವರಿಸಲ್ಪಟ್ಟಿದ್ದರೂ ಕವಿಯು ಧ್ವನಿಯ ಪ್ರಸ್ತಾಪವನ್ನು ಎತ್ತಿಲ್ಲ.

ನಾಗವರ್ಮನ ನಂತರ ಲಕ್ಷಣಗ್ರಂಥಕಾರನೆಂದರೆ, ಉದಯಾದಿತ್ಯನು (೧೧೫೦). ಇವನ ಗ್ರಂಥವು **ಉದಯಾದಿತ್ಯಾಲಂಕಾರ.** ಇದು ಚಿಕ್ಕ ಗ್ರಂಥ. ಇದರಲ್ಲಿ ೭೨ ಪದ್ಯಗಳಿವೆ. (೧) ಕಾವ್ಯಭೇದ, (೨) ರೀತಿ, (೩) ರಸ, (೪) ಕಾವ್ಯಗುಣಗಳು, (೫) ಅಲಂಕಾರಗಳು ಎಂದು ಐದು ಭಾಗಗಳಿವೆ. ಇವುಗಳ ಲಕ್ಷಣಗಳನ್ನು ಕ್ರಮವಾಗಿ ಹೇಳಿದ್ದಾನೆ. 'ಚಂದ್ರಾಲೋಕ' ವೆಂಬ ಸಂಸ್ಕೃತ ಲಕ್ಷಣಗ್ರಂಥದಂತೆಯೇ ಲಕ್ಷ್ಯ ಲಕ್ಷಣ

ಗಳನ್ನು ಒಂದೇ ಪದ್ಯದಲ್ಲಿಯೇ ಹೇಳಿದ್ದಾನೆ. ಇದಕ್ಕೂ **ಕಾವ್ಯಾದರ್ಶ**ವೇ ಆಧಾರ. ಇವನು ೩೬ ಅಲಂಕಾರಗಳನ್ನು ಹೇಳುತ್ತಾನೆ.

೪ನೆಯ ಗ್ರಂಥವೆಂದರೆ ಮಾಧವನ (೧೫೦೦) 'ಮಾಧವಾಲಂಕಾರ'. ಇದು ದಂಡಿಯ **ಕಾವ್ಯಾದರ್ಶ**ದ ಭಾಷಾಂತರ. ಇದರಲ್ಲಿ ಮೂರು ಆಶ್ವಾಸಗಳಿವೆ.

೧೭ನೆಯ ಶತಮಾನದಲ್ಲಿಯ ತಿರುಮಲಾರ್ಯನು* ಪ್ರಸಿದ್ಧವಾದ ಲಕ್ಷಣಗ್ರಂಥಕಾರನು. ಇವನು ವಿಸ್ತೃತವಾಗಿ "**ಅಪ್ರತಿಮ ವೀರಚರಿತ**" ಎಂಬ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ನಾಲ್ಕು ಪ್ರಕರಣಗಳಿವೆ. ಕಾವ್ಯ ಲಕ್ಷಣ, ಶಬ್ದಗುಣ, ಅರ್ಥಗುಣ, ಇವುಗಳನ್ನು ಮೊದಲನೆಯ ಪ್ರಕರಣ ದಲ್ಲಿಯೂ, ರೀತಿ, ಶಯ್ಯೆ, ಪಾಕ, ವೃತ್ತಿ, ಅನುಪ್ರಾಸ ಮೊದಲಾದವು ಗಳನ್ನು ಎರಡನೆಯ ಪ್ರಕರಣದಲ್ಲಿಯೂ, ಉಪಮೆ ಮೊದಲಾದ ನೂರು ಅಲಂಕಾರಗಳನ್ನು ಮೂರನೆಯದರಲ್ಲಿಯೂ, ರಸಾಲಂಕಾರಗಳನ್ನು ನಾಲ್ಕನೆಯ ದರಲ್ಲಿಯೂ ನಿರೂಪಿಸುವನು. ಈ ಗ್ರಂಥಕ್ಕೆ ಪೋಷಕನು ಚಿಕದೇವರಾಜನೆಂದು ಕವಿಯು ಹೇಳುವನು. ಇದರಲ್ಲಿ ಚಂದ್ರಾಲೋಕ, ವಾಮನವೃತ್ತಿ, ಕಾವ್ಯ ಪ್ರಕಾಶಿಕೆ, ಮೊದಲಾದ ಸಂಸ್ಕೃತ ಗ್ರಂಥಗಳಿಂದ ಲಕ್ಷಣಗಳನ್ನು ತೆಗೆದು-ಕೊಂಡು ಅವಗಳಿಗೆ ಕನ್ನಡದಲ್ಲಿ ವೃತ್ತಿಯನ್ನು ಬರೆದು ಸ್ವನಿರ್ಮಿತವಾದ ಪದ್ಯಗಳನ್ನು ಉದಾಹರಿಸಿದ್ದಾನೆ. ಇವೆಲ್ಲವೂ ಚಿಕದೇವರಾಜನ ಸ್ತುತಿರೂಪ ವಾಗಿವೆ. ಅಪ್ರತಿಮವೀರನೆಂಬುದು ಚಿಕದೇವರಾಜನ ಬಿರುದುಗಳಲ್ಲೊಂದು.

ಲಿಂಗರಾಜನು ೧೮೬೯ ರಲ್ಲಿ **ನರಪತಿವಿಜಯ**ವೆಂಬ ಗ್ರಂಥವನ್ನು ಬರೆ ದಿರುವನು. ಇದಕ್ಕೆ ಚಂದ್ರಾಲೋಕವೇ ಆಧಾರ. ಇದರಲ್ಲಿ ಶಬ್ದಾರ್ಥಾಲಂಕಾರ ಗಳು ಮಾತ್ರ ವರ್ಣಿತವಾಗಿವೆ.

ಕಾವ್ಯಸೌಂದರ್ಯಕ್ಕೆ ಶಬ್ದಾರ್ಥವೈಚಿತ್ರ್ಯಗಳೇ ಕಾರಣಗಳು.

ಶಬ್ದಾಲಂಕಾರಗಳಲ್ಲಿ (೧) ಅನುಪ್ರಾಸ, (೨) ಯಮಕ, (೩) ಚಿತ್ರ ಕವಿತ್ವವೆಂಬ ಮೂರು ಭಾಗಗಳಿವೆ.

---

* ಇವನ ಪೂರ್ವದಲ್ಲಿ ಇನ್ನೂ ಅಲಂಕಾರಕರು ಇರುವರು. ಅವರೆಲ್ಲರೂ ರಸ ಪ್ರಧಾನರಾದುದರಿಂದ ಅವರ ಚರಿತ್ರೆ ಮುಂದೆ ಹೇಳಿದೆ.

ಅರ್ಥಾಲಂಕಾರ:— ಇದಕ್ಕೊಂದು ಇತಿಹಾಸವಿದೆ. ಕನ್ನಡ ಗ್ರಂಥಕಾರರನ್ನೇ ತೆಗೆದುಕೊಂಡರೆ, ನೃಪತುಂಗ, ಉದಯಾದಿತ್ಯ ಮಾಧವರು ೩೫ ಅಲಂಕಾರಗಳನ್ನು ಹೇಳುತ್ತಾರೆ. ನಾಗವರ್ಮನು ೬೦ ಅಲಂಕಾರಗಳನ್ನು ಹೇಳುತ್ತಾನೆ. ತಿರುಮಲಾರ್ಯನು ೧೨೦ ಹೇಳುತ್ತಾನೆ. ಇವುಗಳಲ್ಲಿ ಕೆಳಗಿನವು ಮಹತ್ವವಾದವುಗಳೆಂದು ಕನ್ನಡ ಕೈಪಿಡಿಕಾರರು ಹೇಳುತ್ತಾರೆ. (೧) ಉಪಮೆ, (೨) ಅನನ್ವಯ, (೩) ಉಪಮೆಯೋಪಮೆ, (೪) ಪ್ರತೀಪ, (೫) ಪ್ರತಿವಸ್ತೂಪಮೆ, (೬) ವ್ಯತಿರೇಕ, (೭) ಸಮಯೋಗ, (೮) ದೀಪಕ, (೯) ರೂಪಕ, (೧೦) ದೃಷ್ಟಾಂತ, (೧೧) ಸ್ಮರಣ, (೧೨) ಭ್ರಾಂತಿ, (೧೩) ಸಂದೇಹ, (೧೪) ಉತ್ಪ್ರೇಕ್ಷೆ, (೧೫) ಅಪಹ್ನುತಿ, (೧೬) ಉಲ್ಲೇಖ, (೧೭) ಅರ್ಥಾಂತರನ್ಯಾಸ, (೧೮) ಪರಿಕರ, (೧೯) ಪರಿಕರಾಂಕುರ, (೨೦) ಪರ್ಯಾಯೋಕ್ತಿ, (೨೧) ಸಮಾಸೋಕ್ತಿ, (೨೨) ಅಪ್ರಸ್ತುತಪ್ರಶಂಸೆ, (೨೩) ಶ್ಲೇಷ, (೨೪) ಸಹೋಕ್ತಿ, (೨೫) ವಿನೋಕ್ತಿ, (೨೬) ಅತಿಶಯೋಕ್ತಿ, (೨೭) ಅತ್ಯುಕ್ತಿ, (೨೮) ಆಕ್ಷೇಪ, (೨೯) ವಿಶೇಷೋಕ್ತಿ, (೩೦) ವಿಭಾವನಾ, (೩೧) ವಿಷಮ, (೩೨) ಸಮ, (೩೩) ವಿರೋಧಾಭಾಸ, (೩೪) ಸಾರ, (೩೫) ಏಕಾವಳಿ, (೩೬) ಕಾರಣ, (೩೭) ಅನುಮಾನ, (೩೮) ಕಾವ್ಯಲಿಂಗ, (೩೯) ಸಮುಚ್ಚಯ, (೪೦) ಪರಿಸಂಖ್ಯೆ, (೪೧) ಯಥಾಸಂಖ್ಯೆ, (೪೨) ಸ್ವಭಾವೋಕ್ತಿ, (೪೩) ಮೀಲಿತ, (೪೪) ಉನ್ಮೀಲಿತ, (೪೫) ತದ್ಗುಣ, (೪೬) ಅನುಗುಣ, (೪೭) ಪ್ರತ್ಯನೀಕ, (೪೮) ವ್ಯಾಜ್ಯಸ್ತುತಿ, (೪೯) ವ್ಯಾಜ್ಯನಿಂದೆ, (೫೦) ಮಿಶ್ರಾಲಂಕಾರಗಳು. ಇಂತಿದೆ ಅಲಂಕಾರಗಳ ವಿಚಾರ.

ರಸವಿಚಾರ

ಶಬ್ದಾರ್ಥವೈಚಿತ್ರ್ಯಗಳು ಕಾವ್ಯಕ್ಕೆ ಸೌಂದರ್ಯವನ್ನುಂಟು ಮಾಡುತ್ತಿದ್ದರೂ ಅವು ಬಾಹ್ಯಾಲಂಕಾರಗಳೇ. **ಧ್ವನಿ, ರಸಗಳೇ** ಕಾವ್ಯ ಲಲನೆಯ ಆತ್ಮವು. ರೀತಿ ಮಾರ್ಗಾದಿ ಅವಯವಗಳು. ಅಲಂಕಾರಗಳು ತೊಡುಪುಗಳು. ಅಲಂಕಾರಗಳು ಕಾವ್ಯದ ಅಸ್ತಿತ್ವಕ್ಕೆ ಅನಿವಾರ್ಯವಾದವುಗಳಲ್ಲ. ಆದರೆ ಆತ್ಮವಿಲ್ಲದ್ದು ಕೇವಲ ಜಡ, ಚೈತನ್ಯರಹಿತವಾದುದು. ಕಾವ್ಯವಿಲ್ಲದೆ ಅಲಂಕಾರಗಳಿಗೆ ಅಸ್ತಿತ್ವವಿಲ್ಲ. ಅವುಗಳನ್ನು ನಾವು ಮನ

ಬಂದಂತೆ ಬದಲು ಮಾಡಿಕೊಳ್ಳಬಹುದು. ಆದುದರಿಂದ **ರಸವೇ ಮುಖ್ಯ,** ಅಲಂಕಾರಗಳು ಗೌಣ. ಅಲಂಕಾರಗಳಿಗೂ, ರಸಾದಿಗಳಿಗೂ ಸ್ವಾಭಾ. ವಿಕವಾಗಿಯೇ ದೇಹಾತ್ಮಗಳ ಸಂಬಂಧವಿದೆ. ಕಾವ್ಯಕ್ಕೆ ನೈಸರ್ಗಿಕವಾದ ಸೌಂದರ್ಯವೇ ಶ್ರೇಷ್ಠವಾದ ಅಲಂಕಾರವು. ಆದಿದ್ದರೆ ಇತರ ಅಲಂಕಾರ ಗಳು ಅನಾವಶ್ಯಕ. ಸುಂದರ ಲಲನೆಗೆ ಅಲಂಕಾರಗಳು ಹೆಚ್ಚು ಸೌಂದರ್ಯ ವನ್ನು ಹೆಚ್ಚಿಸಬಲ್ಲುವೇ ಹೊರತು ಜೀವವಿಲ್ಲದ ಜಡಕ್ಕೆ ಸೌಂದರ್ಯ ವನ್ನು ಅಲಂಕಾರಗಳು ಹೇಗೆ ತರಬಲ್ಲವು? ಅದು ಒಂದು ವಿಧವಾದ ವೈಚಿತ್ರ್ಯ ಅಷ್ಟೆ!

ಈ ಬಗೆಯ ಕಲ್ಪನೆಯು ಬೆಳೆದು ಅಲಂಕಾರಶಾಸ್ತ್ರದಲ್ಲಿ ಕ್ರಾಂತಿ ಯಾಯಿತು. ಭರತನು ನಾಟ್ಯಶಾಸ್ತ್ರದಲ್ಲಿಯಷ್ಟೇ ರಸವನ್ನು ವಿಸ್ತರಿಸಿದ್ದರೆ, ಒಂಬತ್ತನೆಯ ಶತಮಾನದಲ್ಲಿ **ಆನಂದವರ್ಧನಾಚಾರ್ಯರು** ವ್ಯಂಗ್ಯಾರ್ಥಕ್ಕೆ (ಧ್ವನಿ) ಪ್ರಾಧಾನ್ಯವನ್ನು ಹೇಳಿ, ವಸ್ತು, ರಸ, ಅಲಂಕಾರಗಳು ವ್ಯಂಗ್ಯ-ಗಳಾಗುವವೆಂದೂ ಅವುಗಳಲ್ಲಿ “**ರಸವ್ಯಂಗ**” ವೇ ಶ್ರೇಷ್ಠವೆಂದೂ ‘ಧ್ವನ್ಯಾಲೋಕ’ ದಲ್ಲಿ ಸಿದ್ಧಪಡಿಸಿದನು. ಅಂದಿನಿಂದ ಕಾವ್ಯಗಳಲ್ಲಿಯೂ **ರಸಕ್ಕೇ** ಪ್ರಾಧಾನ್ಯವನ್ನು ಕೊಡುವ ಪದ್ಧತಿಯು ತಲೆದೋರಿತು. ಈ ಪಕ್ಷದವರು ರಸಕ್ಕೆ ಪ್ರಾಧಾನ್ಯವನ್ನು ಕೊಟ್ಟುದರಿಂದ ರಸಾಲಂಕಾರಗಳು ಕವಿಯ ಬುದ್ಧಿಯಂತೆ ಬೆಳೆಯುತ್ತ ನಡೆದವು. ಹೀಗೆ, ಅಲಂಕಾರಗಳ ಈ ಸಂಖ್ಯೆಯು ೩೫ ರಿಂದ ೧೦೦ ರ ವರೆಗೆ ಬೆಳೆಯಿತು. ಈ ಬೆಳಕಿನಲ್ಲಿ ಸಾಗಿದ ಕನ್ನಡ ರಸಕಾರರ ಚರಿತ್ರೆಯನ್ನು ನೋಡೋಣ.

ನೃಪತುಂಗಾದಿಗಳು ಧ್ವನಿಯನ್ನು ಅಲಂಕಾರದಲ್ಲಿಯೇ ಸೇರಿಸಿ-ಬಿಟ್ಟಿದ್ದರು. ಈ ನವೀನ ಮತವು ೯ ನೆಯ ಶತಮಾನದಲ್ಲಿ ಉದಯವಾ ದರೂ ಕನ್ನಡಿಗರಿಗೆ ಮಾನ್ಯವಾಗಬೇಕಾದರೆ, ೨೦೦ ವರುಷಗಳು ಹಿಡಿ ದವು. ಯಾಕೆಂದರೆ ನಾಗವರ್ಮನ ಕಾವ್ಯಾವಲೋಕನದಲ್ಲಿ ‘ಧ್ವನಿ’ಯ ಹೆಸರು ಕೂಡ ಇಲ್ಲ. ಕನ್ನಡದಲ್ಲಿ ಸುಪ್ರಸಿದ್ಧ ರಸಕಾರನೆಂದರೆ, **ಕವಿ ಕಾಮನು** (೧೨೦೦). ಕನ್ನಡದಲ್ಲಿ ರಸಪ್ರಕರಣವನ್ನು ವಿಸ್ತಾರವಾಗಿ ವರ್ಣಿಸುವ ಗ್ರಂಥಗಳಲ್ಲಿ ಇವನ **ಶೃಂಗಾರರತ್ನಾಕರವೇ** ಮೊದಲಿನದು. ಪಂಡಿತರು ಶೃಂಗಾರಸಾರವಾದ ‘ಭಾವರಸಪ್ರಪಂಚ’ ವನ್ನು ಹೇಳಬೇಕು

ಎಂದು ಕೇಳಿಕೊಳ್ಳಲು ತಾನು ಬರೆದೆನೆಂದು ಗ್ರಂಥವನ್ನು ಪ್ರಾರಂಭಿಸುವನು. ತನ್ನ ಕಾವ್ಯದ ವಿಷಯವಾಗಿ ಈ ರೀತಿಯಾಗಿ ಹೇಳುತ್ತಾನೆ.

ಭವಪಾದಾಂಬುಜ ಷಟ್ಪದಂ ನವರಸ ವ್ಯಾಪಾರಮಂ ಭಾವ ಸಂ- ।
ಭವಮಂ ನಾಯಕ ನಾಯಿಕಾ ಸಖಸಖೀ ಸಂಭೋಗತದ್ವಿಪ್ರಲಂ ॥
ಭವಿಟ ಪ್ರಸ್ತುತ ವೈಶಿಕಾದಿ ರಸ ಶಾಸ್ತ್ರೋದ್ಭೂತಸನ್ಮಾರ್ಗ ವೃ- ।
ತ್ತಿ ವಿಕಲ್ಪಂಗಳುಮಂ ಮನಂಗೊಳಿಸಿದಂ ಶೃಂಗಾರರತ್ನಾಕರಂ ॥

ಶೃಂಗಾರರತ್ನಾಕರಕ್ಕೆ 'ರಸವೀಲಕ'ವೆಂದೂ ಹೆಸರು ಉಂಟು. ಇದರಲ್ಲಿ ನಾಲ್ಕು ಪರಿಚ್ಛೇದಗಳಿವೆ. (೧) ನವರಸವ್ಯಾವರ್ಣನ, (೨) ಭಾವಭೇದ ನಿರ್ಣಯ, (೩) ನಾಯಕನಾಯಿಕಾ ವಿಕಲ್ಪವಿಸ್ತಾರ, (೪) ಸಖಸಖೀ ಸಂಭೋಗ ವಿಪ್ರಲಂಭಪ್ರಮಾವಸ್ಥಾದಿವಿಸ್ತರ ಎಂಬ ನಾಲ್ಕು ಭಾಗಗಳು. ಇವೆಲ್ಲವೂ ವಿಸ್ತಾರವಾಗಿ ವರ್ಣಿಸಲ್ಪಟ್ಟಿವೆ. ಈ ಗ್ರಂಥದಿಂದ **ಸಾಳ್ವನೂ ತಿಮ್ಮನೂ** (೧೬೦೦) ಅನೇಕ ಲಕ್ಷಣಪದ್ಯಗಳನ್ನು ಎತ್ತಿದ್ದಾರೆ.

ಕವಿಕಾಮನ ನಂತರ ಸುಪ್ರಸಿದ್ಧ ರಸಕಾರನೆಂದರೆ **ಸಾಳ್ವನು** (೧೫೫೦). ಇವನು **ರತ್ನಾಕರ**ವನ್ನೂ, ಶಾರದಾವಿಲಾಸವನ್ನೂ ಬರೆದಿದ್ದಾನೆ. ರಸರತ್ನಾಕರವು ಮುಖ್ಯವಾಗಿ ರಸಕ್ರಿಯೆಯನ್ನು ಪ್ರತಿಪಾದಿಸುತ್ತದೆ. ಶೃಂಗಾರಪ್ರಪಂಚ, ರಸವಿವರಣ, ನಾಯಕನಾಯಿಕಾ ವಿವರಣ, ಭಾವಾಧಿಕರಣ, ಎಂಬ ನಾಲ್ಕು ಆಶ್ವಾಸಗಳಾಗಿ ವಿಭಾಗಿಸಲ್ಪಟ್ಟಿದೆ. ಪಂಪ, ರನ್ನ, ನೇಮಿಚಂದ್ರ ಮೊದಲಾದ ಕವಿಗಳ ಗ್ರಂಥಗಳಿಂದ ಪದ್ಯಗಳು ಉದಾಹರಿಸಲ್ಪಟ್ಟಿವೆ. ತಾನು ಅವಲಂಬಿಸಿದ ಪೂರ್ವ ಶಾಸ್ತ್ರಕಾರರನ್ನು ಕವಿಯು ಈ ರೀತಿಯಾಗಿ ಹೇಳುತ್ತಾನೆ.

ಆನಾಶ್ಯರಿಂದ ತಿಳಿದವ್ಯ । ತಾನಂದಿಯು ರುದ್ರಭಟ್ಟನಾತೆರದಿಂ ವಿ ।
ದ್ಯಾನಾಥ ಹೇಮಚಂದ್ರರ । ಭೂನುತ ಮಾರ್ಗಾದಿಯುಂದವಮಂ ವಿರಚಿಸಿದೆಂ ॥

'ಇಂತು ನಾಗವರ್ಮ ಕವಿಕಾಮಾದಿಗಳ ಮಾರ್ಗದಿಂ ರಸಭಾವಾದಿಗಳನ್ನೆಲ್ಲ ವಿದ್ವತ್ಸಭೆಗಮುಭಯಭಾಷೆಗಮಿಷ್ಟಮಪ್ಪಂತು ಕನ್ನಡಿಸಿದೆಂ' ಎಂದಿರುವನು.

ಇವನ ಎರಡನೇ ಗ್ರಂಥವೇ **ಶಾರದಾ ವಿಲಾಸ.** ಸಂಸ್ಕೃತದ ಧ್ವನ್ಯಾಲೋಕದಂತೆ, 'ಧ್ವನಿ' ಮುಂತಾದವುಗಳ ವಿಚಾರಗಳನ್ನು ಪ್ರೌಢ

ರೀತಿಯಲ್ಲಿ ಬರೆಯಲು ಹೊರಟದ್ದು. ಆದರೆ ಈ ಗ್ರಂಥವು ಪೂರ್ಣವಾಗಿ ದೊರೆತಿಲ್ಲ. 'ಧ್ವನಿವ್ಯಂಗವಿವರಣ' ವೆಂಬ ಎರಡನೇ ಆಶ್ವಾಸ ಮಾತ್ರ ದೊರೆತಿದೆ. ಸುಮಾರು ೧೬೦೦ ರಲ್ಲಿ ತಿಮ್ಮನು **ನವರಸಾಲಂಕಾರವನ್ನು** ಬರೆದನು. ಇದರಲ್ಲಿ ಮುಖ್ಯವಾಗಿ ರಸಕ್ರಿಯೆಯು ಪ್ರತಿಪಾದಿತವಾಗಿದೆ. ನಾಯಕ ನಾಯಿಕಾ ಲಕ್ಷಣವೂ ವ್ಯಭಿಚಾರಾದಿ ಭಾವಗಳೂ ಹೇಳಿವೆ. ಕವಿಕಾಮನ ಮತ, ನಾಗವರ್ಮನ ಮತ ಎಂದು ಆ ಕವಿಗಳ ಗ್ರಂಥ-ಗಳಿಂದಲೂ ಸಾಳ್ವನ ರಸರತ್ನಾಕರದಿಂದಲೂ ಸೂತ್ರಗಳು ಅನುವಾದಿಸಲ್ಪಟ್ಟಿವೆ. ಉದಾಹರಣಕ್ಕೆ ಪದ್ಯಗಳನ್ನೆಲ್ಲ ಪಂಪ, ಪೊನ್ನ, ನಾಗಚಂದ್ರ, ನೇಮಿಚಂದ್ರ ಮೊದಲಾದ ಪೂರ್ವಕವಿಗಳ ಗ್ರಂಥಗಳಿಂದ ತೆಗೆದುಕೊಂಡಿ-ದ್ದಾನೆ. ಈ ವಿಷಯ ವಿಚಾರ ಮಾಡಿದ ಇನ್ನೊಂದು ಗ್ರಂಥವೆಂದರೆ **'ಅಪ್ರತಿಮವೀರಚರಿತ.'**

ಈ ರಸಪ್ರಕ್ರಿಯೆಯಲ್ಲಿ, ರತಿ (ಪ್ರೀತಿ), ಹಾಸ್ಯ (ವಿನೋದ), ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸೆ (ಅಸಹ್ಯತೆ), ವಿಸ್ಮಯ (ಆಶ್ಚರ್ಯ), ಶಮ (ಶಾಂತಿ) ಎಂಬ ಒಂಬತ್ತು **ಸ್ಥಾಯಿಭಾವ**ಗಳನ್ನೂ ೧. ನಿರ್ವೇದ, ೨. ಗ್ಲಾನಿ, ೩. ಶಂಕೆ, ೪. ಅಸೂಯೆ, ೫. ಮದ, ೬. ಶ್ರಮ, ೭. ಆಲಸ್ಯ, ೮. ದೈನ್ಯ, ೯. ಚಿಂತೆ, ೧೦. ಮೋಹ, ೧೧. ಸ್ಮೃತಿ, ೧೨. ಧೃತಿ, ೧೩. ಲಜ್ಜೆ, ೧೪. ಚಪಲತೆ, ೧೫. ಹರ್ಷ, ೧೬. ಆವೇಗ, ೧೭. ಜಡತ್ವ, ೧೮. ಗರ್ವ, ೧೯. ವಿಷಾದ, ೨೦. ಔತ್ಸುಕ್ಯ, ೨೧. ನಿದ್ರೆ, ೨೨. ಮೂರ್ಛೆ, ೨೩. ಸ್ವಪ್ನ, ೨೪. ಎಚ್ಚರಿಕೆ, ೨೫. ಅಮರ್ಷ (ಕೋಪ), ೨೬. ಅವಹಿತ್ಥ (ಭಾವವನ್ನು ಮರೆಮಾಚು ವುದು), ೨೭. ಉಗ್ರತೆ, ೨೮. ಮತಿ, ೨೯. ವ್ಯಾಧಿ, ೩೦. ಉನ್ಮಾದ, ೩೧. ಮರಣ, ೩೨. ತ್ರಾಸ, ೩೩. ವಿತರ್ಕಗಳೆಂಬ **ಸಂಚಾರೀಭಾವ**ಗಳನ್ನೂ ವರ್ಣಿಸುವರು.

ಈ ಸ್ಥಾಯಿಭಾವಗಳಿಂದ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಎಂಬ ಒಂಬತ್ತು ರಸಗಳು ಉಂಟಾಗುತ್ತವೆ.

ಕಾವ್ಯಸ್ವರೂಪ, ರಸ, ದೋಷ, ಗುಣ ಮೊದಲಾದವುಗಳನ್ನು ವಿವರಿಸುವದೇ ಈ ಲಕ್ಷಣ ಗ್ರಂಥಗಳ ಮುಖ್ಯ ಉದ್ದೇಶವು. *

ಶಬ್ದಕೋಶಗಳು

ಶಬ್ದಕೋಶಗಳು ಆ ಸಾಹಿತ್ಯದ ಹುಲುಸಾದ ಬೆಳೆಯನ್ನು ಸೂಚಿಸುತ್ತವೆ. ಸಾಹಿತ್ಯವು ಬೆಳೆದು ಪ್ರಬಲವಾದಂತೆಯೂ, ವಿವಿಧತೆಯನ್ನು ತಾಳಿದಂತೆಯೂ, ಕಾಲಕಾಲಕ್ಕೆ ಭಾಷೆಯ ಹೊಸಹೊಸ ರೂಪಗಳನ್ನು ಧಾರಣ ಮಾಡಿದಂತೆಯೂ ಶಬ್ದಕೋಶಗಳ ಆವಶ್ಯಕತೆಯು ಉಂಟಾಗುತ್ತದೆ. ಆಗ ಶಬ್ದಕೋಶಗಳು ಉದಯವಾಗುತ್ತವೆ. ಈ ದೃಷ್ಟಿಯಿಂದ ಕನ್ನಡ ಕೋಶದ ಕಡೆಗೆ ನೋಡಿದರೆ, ಅವುಗಳ ಇತಿಹಾಸವೂ ಬಹು ಮನೋರಂಜಕವಾಗಿದೆ. ಕಾಲಕಾಲಕ್ಕೆ ಆವಶ್ಯಕತೆಯುಂಟಾದಂತೆ, ವಿವಿಧ ಕೋಶಗಳೂ, ಟೀಕೆ ಟಿಪ್ಪಣಿಗಳೂ ಹುಟ್ಟಿದ್ದು ಕಾಣುತ್ತದೆ.

ಕನ್ನಡ ಸಾಹಿತ್ಯವು ಸಂಸ್ಕೃತ, ಹಳಗನ್ನಡ, ನಡುಗನ್ನಡ ರೂಪಗಳಿಂದ ಹೊಸಗನ್ನಡಕ್ಕೆ ಬಂದಿದೆ. ಸಂಸ್ಕೃತ, ಕನ್ನಡ ಶಬ್ದಸಂಪತ್ತಿಯಿಂದೊಡಗೂಡಿದೆ. ನಮ್ಮಲ್ಲಿ ಈ ಎರಡೂ ಬಗೆಯ ಕೋಶಗಳೂ ಕಣ್ಣಿಗೆ ಬೀಳುತ್ತವೆ. ಕನ್ನಡ ಕೋಶಗಳಲ್ಲಿ ಮೂರು ಬಗೆಯ ಕೋಶಗಳನ್ನು ನೋಡಬಹುದು. ಸಂಸ್ಕೃತ–ಕನ್ನಡ, ಕನ್ನಡ–ಸಂಸ್ಕೃತ, ಹಳಗನ್ನಡ–ಕನ್ನಡವೆಂದು.

ನಮ್ಮ ಸಾಹಿತ್ಯವು ಸಂಸ್ಕೃತದ ಛಾಯೆಯಿಂದ ಹೊರಟಾಗ, ಸಂಸ್ಕೃತ ಕನ್ನಡ ಕೋಶಗಳೂ, ಸಂಸ್ಕೃತದ ಪ್ರಭಾವವನ್ನು ಬಿಸುಟು ದೇಶಿಯ ಮಾರ್ಗದಿಂದ ಹೊರಟಾಗ, ಹಳಗನ್ನಡ ಹಾಗು ಕನ್ನಡ ತದ್ಭವಗಳ ನಿಘಂಟಗಳೂ ಹೊರಟಿರಬೇಕು. ಱ, ಕುಳ, ಕ್ಷಳಗಳು ಅಡಗುವಾಗ ಅವುಗಳ ವಿವರಣೆಯನ್ನು ಮಾಡುವ ನಿಘಂಟಿನ ಆವಶ್ಯಕತೆಯು ಸ್ವಾಭಾವಿಕವಿದೆ.

ರನ್ನ ಕಂದವೇ ಬಹು ಪ್ರಾಚೀನ (೯೯೩). ವಸ್ತುಕೋಶ (೧೧೫೫), ಮಂಗಾಭಿಧಾನ (೧೩೦೮), ನಾನಾರ್ಥ ರತ್ನಾಕರ (೧೬೦೦) ಮೊದಲಾದ

* ವಿಷಯ ನಿರೂಪಣೆಯಲ್ಲಿ ಈ ಪ್ರಕರಣವು 'ಕನ್ನಡ ಕೈಪಿಡಿ'ಯನ್ನನುಸರಿಸಿದೆ.

ನಾನಾರ್ಥ ರತ್ನಾಕರವು ಸಂಸ್ಕೃತ ಶಬ್ದಗಳ ನಾನಾರ್ಥಗಳನ್ನು ಹೇಳುತ್ತದೆ. ಈತನು ಗೋಪಾಲ, ಧನಂಜಯ, ಭಾಗುರಿ, ನಾಗವರ್ಮ ಮೊದಲಾದ ತನ್ನ ಪೂರ್ವದ ನಿಘಂಟುಕಾರರ ಹೆಸರುಗಳನ್ನು ಹೇಳುತ್ತಾನೆ. ಈ ಗ್ರಂಥದಲ್ಲಿ ೧೬೯ ವೃತ್ತಗಳಿವೆ

ಕವಿಯು **ವಿಧಿ** ಶಬ್ದದ ನಾನಾರ್ಥಗಳನ್ನು ಬಹು ಸುಂದರವಾಗಿ ಕೆಳಗಿನ ಪದ್ಯದಲ್ಲಿ ವರ್ಣಿಸಿದ್ದಾನೆ.

ಕಾಲದೊಳಂಬುಜಾಸನನೊಳುತ್ತಮನೊಳ್ ಕವಿಯೋಳ್ ವಿಧಾನದೋಳ್ |
ಮೇಳದೊಳಂ ವಿಚಕ್ಷಣನೊಳಂ ಶ್ರುತಿಯೋಳ್ ವಿಧಿಶಬ್ದಮುಕ್ಕು ಶುಂ ||
ಡಾಲ ಕರಾಗ್ರದೋಳ್ ಶ್ರವಣಕುಂಡಲದೋಳ್ ವನಜಾತಮಧ್ಯದೋಳ್ |
ಬಾಲೆಯೊಳಾಹವಂಗಳೊಳೆ ತೀರ್ಥದೊಳಂ ನಿಜಕರ್ಣಿಕಾನ್ವಯಂ ||

ಇದೇ ಸಮಯಕ್ಕೆ **ಕವಿವಿಠ್ಠಲ**ನೆಂಬ ಕವಿಯು (೧೬೦೦) ಅಮರ ಕೋಶಕ್ಕೆ ವ್ಯಾಖ್ಯಾನ ಬರೆದಂತೆ ತಿಳಿಯುತ್ತದೆ.

ಕನ್ನಡ ಹಾಗು ತದ್ಭವಗಳಿಗೆ ಸಂಸ್ಕೃತ

ಈ ವರ್ಗದಲ್ಲಿ **ಚತುರಾಸ್ಯ ನಿಘಂಟು** ಬರುತ್ತದೆ. ಇದನ್ನು **ಚತುರಾಸ್ಯ ಬೊಮ್ಮರಸನು** (೧೪೫೦) ಬರೆದಿದ್ದಾನೆ. ಇದು **ಕಂದ**ದಲ್ಲಿ ಇದೆ. ೧೩೦ ಪದ್ಯಗಳಿವೆ. ಪ್ರತಿ ಪದ್ಯವೂ 'ಚತುರಾಸ್ಯ' ವೆಂದು ಮುಗಿಯುತ್ತದೆ. ಇದರೊಳಗೆ 'ಉಸಿರ್ವೆಂ ದೇಶಿತದ್ಭವಂ ತತ್ಸಮಮಂ' ಎಂದು ಕವಿಯು ಹೇಳುತ್ತಾನೆ.

ದೇಸಿಗೆ

ಪೆರೆದಲೆಯುಂ ಮಾದೇವಂ |
ಕರಿಗೊರಲಂ ತಿಸುಳಿಯ್ಯೆಮೊಗಂ ಸಾಂತಂ ಬಾಂ ||
ದೊರೆದಲೆಯುಂ ಪಣೆಗಣ್ಣಂ |
ತರಿಸಂದುಮೆಯಾಣ್ಮನೆಂದು ತಿಳಿ ಚತುರಾಸ್ಯ ||
ಎಲರುಣಿ ಎನೆ ಭುಜಗಂ ನೆಲ |
ಕಲನೆಂದೆನೆ ಲೋಭಿ ಕಾವನೆನೆ ಕಾಮಂ ಕಾ |
ದಲನೆಂದೆನೆ ನಲ್ಲಂ ನಾ |
ಣಲಿಯೆನಲಭಿಮಾನಹೀನನೆಲೆ ಚತುರಾಸ್ಯ ||

ತದ್ಭವಕ್ಕೆ

ಜಗುನೆಯೆ ಯಮುನೆ ದುಕೂಲವೆ |
ದುಗುಲಂ ವೀಟಿಕೆಯೆ ವೀಳೆಯಂ ಪೇಟಿಕೆ ಪೇ॥
ಳಿಗೆ ತಾರಗೆ ತಾರಕೆಯಂ |
ದುಗೆಯಂದುಕೆ ತದ್ಭವಂಗಳಿವು ಚತುರಾಸ್ಯ ॥

ಹಳಗನ್ನಡ-ಕನ್ನಡ

ಈ ವಿಭಾಗದಲ್ಲಿ ರನ್ನನ **ರನ್ನಕಂದವು** ಮೊದಲನೆಯದಾಗಿ ಬರುತ್ತದೆ. ಇದೇ ಕೋಶಗಳಲ್ಲಿ ಪ್ರಾಚೀನ. ಇದು ಕಂದರೂಪವಾಗಿದೆ. ಪ್ರತಿಯೊಂದು ಪದ್ಯವೂ 'ಕವಿರತ್ನ' ವೆಂದು ಕೊನೆಗೊಳ್ಳುತ್ತದೆ. ಈ ಗ್ರಂಥವು ಪೂರ್ಣವಾಗಿ ದೊರೆತಿಲ್ಲ. ಇದು ಹಳಗನ್ನಡದಿಂದ ಕನ್ನಡಕ್ಕೆ ಅರ್ಥವನ್ನು ಹೇಳುತ್ತದೆ.

ಕವಿಯ ಅರ್ಥವಿವರಣೆಯು ಕೆಳಗಿನ ಪದ್ಯದಲ್ಲಿ ಚನ್ನಾಗಿ ಕಾಣುತ್ತದೆ.

ಕೋಪಿತೆನಲ್ ಪೋಣಿಸಿದುದು |
ಸೂಸಿದುದೆನೆ ತುಳ್ಕಿತೆಂಬುದುಂ ಪರಿಮಳಮುಂ ॥
ವಾಸಿತಮೆನೆ ಕಂಪುಂ ಮಿಗೆ |
ಸೌಸವಮೆನೆ ಸಮ್ಮದಾರ್ಥಮೆಲೆ ಕವಿರತ್ನಾ ॥

ರತ್ನ ಕಂದದ ನಂತರ ಈ ವರ್ಗದಲ್ಲಿ ಎರಡನೆಯದೆಂದರೆ, **ಕರ್ನಾಟಕ ಶಬ್ದಸಾರಂ.** ಇದು ವಚನರೂಪವಾಗಿದೆ. ಇದು ಛಂದೋಬದ್ಧವಾಗಿಯೂ ಇದೆ ಎಂದೂ ಬಹುಶಃ ೧೪ ನೇ ಶತಮಾನದಲ್ಲಿಯೇ ವಿರಚಿತವಾಗಿರಬೇಕೆಂದೂ, ಮೆ. ಕಿಟಲ್ ಸಾಹೇಬರು ಹೇಳುತ್ತಾರೆ. ಇದರ ಆಧಾರದಿಂದಲೇ ತೋಂಟದಾರ್ಯನ **ಕರ್ನಾಟಕ ಶಬ್ದಮಂಜರಿಯು** ಹುಟ್ಟಿರಬೇಕೆಂದು ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರು ಅಭಿಪ್ರಾಯ ಪಡುತ್ತಾರೆ.

ಈ ನಿಘಂಟಿನಲ್ಲಿ ೬೭೬ ಖಂಡಗಳಿವೆ. ೧,೪೧೬ ಪದಗಳಿಗೆ ಅರ್ಥ ಕೊಟ್ಟಿದೆ. ಗ್ರಂಥಕರ್ತೃವಾರೋ ತಿಳಿಯದು. ಈ ಗ್ರಂಥದ ಮೊದಲನೆಯ ವಚನ.

ದ್ದಿರಬಹುದೆಂದು ತರ್ಕಿಸುತ್ತಾರೆ ಗ್ರಂಥಕರ್ತನು ಯಾರು ಎಂಬುದೂ ಗೊತ್ತಾಗಿಲ್ಲ. ಗ್ರಂಥಾಂತ್ಯದಲ್ಲಿ 'ಕಬ್ಬಿಗರ ಕೈಪಿಡಿಯೆಂಬಭಿಧಾನ ಮನೋದುವರ್ಗೆ ಮಂಗಳಮಸ್ತು। ಭದ್ರಂ ಭೂಯಾತ್! ಭಟ್ಟಾಕಳಂಕ ಯತೀಂದ್ರಾಯನಮಃ' ಎಂದು ಬರೆದಿರುವನು. ಇದರಲ್ಲಿ ಕಂದಗಳೂ, ವೃತ್ತಗಳೂ, ೯೯ ಪದ್ಯಗಳೂ ಇವೆ ಇವನ ಅರ್ಥವಿವರಣೆಯನ್ನು ನೋಡಿ.

ಪಕ್ಕಿ ಪಕ್ಷಿಯೆ ರಕ್ಕೆ ರಕ್ಷೆಯೆ ಸಕ್ಕದಂ ಸುರಭಾಷಿತಂ।
ಕುಕ್ಕೆ ಕುಕ್ಷಿಯೆ ಕೆಕ್ಕೆ ಕೆನ್ನೆಯೆ ಪಾಗದಂ ನರಭಾಷಿತಂ॥
ಬಿಕ್ಕೆ ಭಿಕ್ಷೆಯೆ ಸಕ್ಕಿ ಸಾಕ್ಷಿಯೆ ಹಾರಮೂರಮೆನಲ್ಕೆ ತಾ।
ಜಕ್ಕವಕ್ಕಿಯೆ ಗಾಲಿವಕ್ಕಿಯೆನಲ್ಕಮುಳ್ಳಮುಳಾಹ್ವಯಂ॥

ಱ; ಕುಳ, ಕ್ಷಳ ನಿಘಂಟು

ಱ, ಕುಳ ಕ್ಷಳಗಳು ಅಡಗುವ ಸಮಯದಲ್ಲಿ ಅವುಗಳ ಅರ್ಥದ ಆವಶ್ಯಕತೆಯುಂಟಾಗಿರಬೇಕು. ಮತ್ತೆ ಕಾವ್ಯದಲ್ಲಿ ಅವು ಉಳಿಯಬೇಕೆಂಬ ಪ್ರಯತ್ನದ ಸಮಯದಲ್ಲಿ **ಕರ್ನಾಟಕ ಸಂಜೀವನವು** ಬರೆಯಲ್ಪಟ್ಟಂತೆ ತೋರುತ್ತದೆ. ಇದನ್ನು ಬರೆದವನು ಶೃಂಗಾರ ಕವಿಯು (೧೬೦೦). ಈ ಕವಿಯು ಱ, ಕುಳ, ಕ್ಷಳ, ವಿಷಯದಲ್ಲಿ ಪ್ರಾಸನಿಯಮವನ್ನು ಅನುಸರಿಸಬೇಕು, ಅವುಗಳನ್ನು ಬೆರಸಲಾಗುವದು, ಇದು ಪಂಪರಾಜಾದಿ ಕರ್ನಾಟಕ ಕವಿರಾಯರ ಮತವೆಂದು ಒಂದು ಪದ್ಯದಲ್ಲಿ ವರ್ಣಿಸಿದ್ದಾನೆ ಇದು ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ೩೫ ಪದ್ಯಗಳಿವೆ. ಇದರಲ್ಲಿ ಱ, ಕುಳ, ಕ್ಷಳಗಳುಳ್ಳ ಕನ್ನಡ ನುಡಿಗಳೂ ಅವುಗಳ ಅರ್ಥವೂ ಹೇಳಲ್ಪಟ್ಟಿದೆ. 'ಕನ್ನಡದೊಳೊರೆವೊಱಿದು ಲಕ್ಷಣಕೆ ಜೀವನಂ' ಆದುದರಿಂದ ಕವಿ, ಈ ಗ್ರಂಥಕ್ಕೆ ಈ ಹೆಸರನ್ನು ಇಟ್ಟಿದ್ದಾನೆ.

ಱಕ್ಕೆ

ಉಱುಗೆನಲ್ ಬೇಟಮುಱಗಿದನೆಂದೊಡೊಲ್ದವಂ।
ಪಱ ತೆಗೆಱ್ ನಿಂದೆ ಱ ವಸ್ತ್ರಭೇದಂ ಬಱಕೆ।
ಬಱಕಂಬಱಕ್ಕೆ ಬಱಯುಂ ಮತ್ತೆನಿಪ್ಪುದಾಪ್ರೊಂಪುಱಯೆನಲ್
ಸಂತಸಂ॥

ಘಱಿಯುಮೆನೆ ಸಮುಕಟ್ಟು ಬಾೞ್ತಿಯೆನೆ ಯೋಗ್ಯಮದು ।
ಪೞಿಯಿಗೆ ಪತಾಕೆ ಜಳಯಂತ್ರಮದು ಜೀರ್ಕೊಳವಿ ।
ಬಱಿವಱಿಯೆನಲ್ ಕೊಟ್ಟ ವಸ್ತುವಿನ ಬಱಿವಿಡಿದು ಬಱುದೆ
ಪೋಪೊಡವೆಯಕ್ಕುಂ ॥

ಕುಳದ ಳಕಾರಕ್ಕೆ

ಝುಳಪಿಸಿದನೆಂದು ಜಡಿದಂ ಮುನಿಸು ಮುಳಿಸು ಜಂ ।
ಗುಳಿ ನೆರವಿ ಜಾಂಗುಳಿಯೆ ಮೂರ್ಛೆ ದೊಂದುಳಿ ಮುದಂ ।
ಪೆಳಱುಳಱುಕಳಱಿಂದು ಭೀತಿಯೊಳಱಿನೆರವಂ ನೋೞ್ದನೆಳ
ಮುಂದೆ ಪೋದಂ ॥

ಮೊಳೆಯುದಂಕುರವೋೞ್ಕೆನಿಧುವನಂ ಜಡತೆ ಸೋ ।
ಕುಳಿ ನೀಳ್ತನೆನಲಿತ್ತವಂ ಮಾಳೆವೆನೆ ಬಯಲ್ ।
ತೊಳಗುಬೆಳಗೆನೆ ಕಾಂತಿ ಲಳಿಗೆಲವು ಬಳಸುತಿರಿಪಂಕುಪ್ಪಸಿಗ
ಬಳಸಿಗಂ ॥

ಕ್ಷಳಕ್ಕೆ

ಕ್ಷಳನೆಂಬುದೊಂದುಂಟು ಸಂಸ್ಕೃತದ ಲಾಕ್ಷರ ।
ಸ್ಥಳಮುಂ ಳಕಾರವಾಗುಚ್ಚರಿಪುದದು ಜಲಕೆ ।
ಜಳ, ಬಲಕೆ ಬಳ, ಕುಲಕೆ ಕುಳ, ಕಮಲ ಶಬ್ದಕ್ಕೆ ಕಮಳಮಂತು
ಸಂಸ್ಕೃತಂ ॥

ಕ್ಷಳನೊಳಂ ಱಿನುಂಟು ಕಹಳೆ ಶಬ್ದಕೆ ಕಾಱಿ ।
ಪುಳಿನಕ್ಕೆ ಪುೞಿಲುಜ್ಜ್ವಳಕ್ಕೆ ತಾನುಜ್ಜಱಿಂ ॥
ಕಳಮಕ್ಕೆ ಕೞಿವೆ ಕಂಬಳಕೆ ಕಂಬೞಿಯೆಂಬ ತೆಱದಿನಹುದದು
ಕನ್ನಡಂ ॥

ಇವಲ್ಲದೆ ಅಕಾರಾದಿ ವೈದ್ಯ ನಿಘಂಟುಗಳೂ ಟೀಕೆಗಳೂ ಇವೆ.

೯. ಕನ್ನಡ ಸಾಹಿತ್ಯದಲ್ಲಿಯ ಶಾಸ್ತ್ರಗಳು

ಸಾಹಿತ್ಯದ ಕಾವ್ಯ, ನಾಟಕ ಮೊದಲಾದ ವಿವಿಧಾಂಗಗಳನ್ನು ವಿವರಿಸಿದ್ದಾಯಿತು. ಮಾನವನ ಜೀವನಕ್ಕೆ ಕೇವಲ ಲಲಿತ ಸಾಹಿತ್ಯವೇ ಸಾಲದು. ಅವನ ಬುದ್ಧಿ ಬೆಳವಣಿಗೆಗೆ ಉಪಯುಕ್ತವಾದ ತತ್ವಜ್ಞಾನ, ಜೋತಿಷ, ವೈದ್ಯ ಮೊದಲಾದ ಶಾಸ್ತ್ರಗಳ ಬೆಳವಣಿಗೆಯೂ, ಅವುಗಳ ಸಾಹಿತ್ಯವೂ ಅವಶ್ಯವಿದೆ. ಈ ದೃಷ್ಟಿಯಿಂದ ಶಾಸ್ತ್ರಗಳ ಕಡೆಗೆ ನೋಡಿದರೆ, ವೇದಾಂತ, ಯೋಗ, ವೈದ್ಯ, ಜೋತಿಷ ಇವೇ ಮೊದಲಾದ ವಿವಿಧ ಶಾಸ್ತ್ರಗಳು ಕಣ್ಣಿಗೆ ಬೀಳುತ್ತವೆ. ಇವುಗಳು ಕನ್ನಡ ಜನಾಂಗದ ವಿಕಾಸವನ್ನು ಸೂಚಿಸುತ್ತವೆ.

ವೇದಾಂತ ಶಾಸ್ತ್ರ

ಒಂದು ಬಗೆಯಿಂದ ಮೋಕ್ಷವೇ ಧ್ಯೇಯವಾಗಿಟ್ಟುಕೊಂಡ ಕನ್ನಡ ಸಾಹಿತ್ಯಕಾರರ ಸಾಹಿತ್ಯದ ಬಹುಭಾಗವು ವೇದಾಂತವೇ ಇದೆ. ವೇದಭಾಷ್ಯ, ಯಜುರ್ವೇದದ ಟೀಕೆ, ಕೈವಲ್ಯ ಕಲ್ಪವಲ್ಲರಿ,-ಕೈವಲ್ಯ ಪದ್ಧತಿ, ತತ್ವಾರ್ಥ ಸೂತ್ರವೃತ್ತಿ, ತತ್ವರತ್ನ ಪ್ರದೀಪಿಕೆ, ಜಿನಾಗಮ, ಜಿನಸಂಹಿತೆ, ಅನುಭವಾಮೃತ, ಹರಿಕಥಾಮೃತಸಾರ ಮೊದಲಾದ ಅನೇಕ ತತ್ವಶಾಸ್ತ್ರಗಳು ಚಿರಪರಿಚಿತವು. ಜೈನ ವೈದಿಕ ತತ್ವಜ್ಞಾನ ಗ್ರಂಥಗಳೂ ಯೋಗರತ್ನಾಕರ, ರಾಜಯೋಗ ಮೊದಲಾದ ಯೋಗಿಕ ಗ್ರಂಥಗಳೂ ವಿಪುಲವಾಗಿವೆ. ಈ ವಿಷಯವು ಹಿಂದೆ ಆಯಾ ಸಂದರ್ಭದಲ್ಲಿ ವಿಸ್ತಾರವಾಗಿದೆ.

ವೈದ್ಯಶಾಸ್ತ್ರ

ಜೀವನಕ್ಕೆ ಅವಶ್ಯವಾದ ವೈದ್ಯಶಾಸ್ತ್ರವು ನಮ್ಮಲ್ಲಿ ಬಹುದಿನಗಳಿಂದ ನಡೆದುಬಂದಿದೆ. ವಿವಿಧ ಶಾಖೆಗಳಲ್ಲಿ ಬೆಳೆದಿದೆ. ಸ್ತ್ರೀವೈದ್ಯ, ವಿಷವೈದ್ಯ, ಬಾಲವೈದ್ಯ, ಮೊದಲಾದ ಪ್ರಕಾರಗಳೂ ಗೋವೈದ್ಯ, ಅಶ್ವವೈದ್ಯ, ಮೊದಲಾದ ಪಶುವೈದ್ಯದ ವಿಸ್ತಾರವೂ ನಮ್ಮ ವೈದ್ಯ ಶಾಸ್ತ್ರದ ಬೆಳವಣಿಗೆಯನ್ನು ಸೂಚಿಸುತ್ತವೆ ಇವೆಲ್ಲವುಗಳ ಬಗ್ಗೆ ಗ್ರಂಥಗಳಿರುವದು ಹೆಮ್ಮೆಯ ಮಾತು. ಅವುಗಳ ಚರಿತ್ರೆಗಳನ್ನು ಇಲ್ಲಿ ಕೊಡುತ್ತೇವೆ.

ಆಯುರ್ವೇದ (ವೈದ್ಯ)

ಜಗದ್ದಳ ಸೋಮನಾಥನ 'ಕರ್ನಾಟಕ ಕಲ್ಯಾಣಕಾರಕ' ವೇ ಮೊದಲನೆಯ ವಿಸ್ತೃತವಾದ ವೈದ್ಯ ಗ್ರಂಥವು. ಪೂಜ್ಯಪಾದ ಕೃತ ಸಂಸ್ಕೃತ ಕಲ್ಯಾಣಕಾರಕದ ಭಾಷಾಂತರವು. ಇದರ ಅಸಮಗ್ರ ಪ್ರತಿಯಲ್ಲಿ ಪೀಠಿಕಾ ಪ್ರಕರಣ, ಪರಿಭಾಷಾ ಪ್ರಕರಣ, ಷೋಡಶ ಜ್ವರ ನಿದಾನ ಚಿಕಿತ್ಸಾ ನಿರೂಪಣ, ಅತಿಸಾರ, ಗ್ರಹಣೀ ನಿದಾನ ಚಿಕಿತ್ಸಾ ನಿರೂಪಣ, ರಕ್ತಪಿತ್ತ ನಿದಾನ ಚಿಕಿತ್ಸಾ ನಿರೂಪಣ, ಕ್ಷಯ ನಿದಾನ ಚಿಕಿತ್ಸಾ ನಿರೂಪಣ, ಉದರ ರೋಗ ನಿದಾನ ಚಿಕಿತ್ಸಾ ನಿರೂಪಣ, ಗುಲ್ಮ ನಿದಾನ ಚಿಕಿತ್ಸಾ ನಿರೂಪಣ ಎಂಬ ಎಂಟು ಅಧ್ಯಾಯಗಳು ಮಾತ್ರ ಇರುತ್ತವೆ. ಬಾಹಟ, ಸಿದ್ಧಸಾರ, ಚರಕ ಎಂಬ ವೈದ್ಯಗ್ರಂಥಗಳಿಗಿಂತಲೂ ಪೂಜ್ಯಪಾದನ ಕಲ್ಯಾಣಕಾರಕವು ಉತ್ಕೃಷ್ಟವಾದುದೆಂದೂ, ಅದರಲ್ಲಿ ಹೇಳುವ ಚಿಕಿತ್ಸೆಯು ಮದ್ಯ, ಮಾಂಸ, ಮಧು ವರ್ಜಿತವೆಂದೂ ಒಂದು ಪದ್ಯದಲ್ಲಿ ಹೇಳುತ್ತಾನೆ.

ಸುಕರಂ ತಾನೆನೆ ಪೂಜ್ಯಪಾದ ಮುನಿಗಳ್ ಮುಂ ಪೇಳ್ದ ಕಲ್ಯಾಣ ಕಾ |
ರಕಮಂ ಬಾಹಟ ಸಿದ್ಧಸಾರ ಚರಕಾದ್ಯುತ್ಕೃಷ್ಟಮಂ ಸದ್ಗುಣಾ ||
ಧಿಕಮಂ ವರ್ಜಿತ ಮದ್ಯ, ಮಾಂಸ, ಮಧುವಂ ಕರ್ನಾಟದಿಂ ಲೋಕ ರ |
ಕ್ಷಕಮಂ ಚಿತ್ರಮದಾಗೆ ಚಿತ್ರಕವಿಸೋಮಂ ಪೇಳ್ದನಿಂತಳ್ತಿಯಿಂ ||

ಇವನ ಚಿಕಿತ್ಸೆಯ ರೀತಿಯು ನೋಡುವಂತಹದಿದೆ:—

ಜ್ವರೋತ್ಪತ್ತಿ

ಮಲಸಂಗ್ರಹದಿಂದುದರಾ | ನಲನಳಿವಿಂದಾಮುಚಲನೆಯಿಂ ಜ್ವರಮೊಗೆಗುಂ |
ಕೆಲರಾತ್ರಿಪುರಧ್ವಂಸಿಯ | ಲಲಾಟಲೋಚನದಿನೊಗೆದುದೆಂಬರ್ ಜ್ವರಮಂ ||

ಚಿಕಿತ್ಸೆ

ಜ್ವರಪಾದಿಯೊಳುಪವಾಸಂ | ಸ್ವರಮಧ್ಯದಲ್ಲಿ ಗಂಜಿ ಪೇಳ್ವ ಕಷಾಯಂ ||
ಜ್ವರಪಾಕದೊಳಸ್ತಮಿತ | ಜ್ವರದೋಳ್ ಮಲಹರಣಮಿನಿತಿವಾರೋಗ್ಯಕರಂ ||

೧೨೦೦ ನೇ ಇಸ್ವಿಯಲ್ಲಿ ದೇವೇಂದ್ರ ಮುನಿಯು **ಬಾಲಗ್ರಹ ಚಿಕಿತ್ಸೆ** ಎಂಬ ಗ್ರಂಥವನ್ನು ಬರೆದಿದ್ದಾನೆ. ಸುಮಾರು ೧೩೧೦ ರಲ್ಲಿ ವೈದ್ಯಶಾಸ್ತ್ರ

ವೆಂಬ ಗ್ರಂಥವು ದೊರೆಯುತ್ತದೆ. ಗ್ರಂಥಕರ್ತೃವಾರೋ ತಿಳಿಯುವದಿಲ್ಲ. ವೈದ್ಯವನ್ನು ಹೇಳುವ ರೀತಿ ನೋಡಿ:

"ನೇರಿಲ ಬೀಜಮುಂ ಮೊಲೆವಾಲಿನಲ್ಲಿ ತೇದು ಕಣ್ಗೆ ಎಚ್ಚೆ ಕಣ್ಣಬೇನೆ ಮಾಣ್ಗುಂ."
"ಅರಳಿ ಮೊಗರು ಆರಗು ಇವನರೆದು ಹುಳಿಮಜ್ಜಿಗೆಯಲ್ಲಿ ಕದಡಿ ಕುಡಿಯೆ ಸೂತಕಂ ನಿಲ್ವುದು."

ಈ ವೈದ್ಯಶಾಸ್ತ್ರದ ನಂತರ **ಖಗೇಂದ್ರ ಮಣಿಪದರ್ಪಣವೇ** ಪ್ರಸಿದ್ಧವಾದುದು. ಇದನ್ನು ಮಂಗರಾಜನೆಂಬ ಕವಿಯು ಸು. ೧೩೬೦ ರಲ್ಲಿ ಬರೆದಿರುವನು. ಇದು ವಿಷವೈದ್ಯವನ್ನು ಹೇಳುವ ಗ್ರಂಥ. ೧೬ ಅಧಿಕಾರಗಳಾಗಿ ವಿಭಾಗಿಸಲ್ಪಟ್ಟಿದೆ ವಿದ್ವದ್ಗೋಷ್ಠಿಯಲ್ಲಿದ್ದಾಗ ಒಂದು ದಿವಸ 'ಕನ್ನಡದಿಂ ಸಮಸ್ತಜನ ಗೋಚರಮಪ್ಪವೊಲಣ್ಣ ಪೇಳ್ವುದು ನೀನೆಮಗೆಂದು ಭವ್ಯರೊಸೆದಳ್ತಿಯೋಳ್ ಬೆಸಗೊಳೆ' ಈ ಕೃತಿಯಂ ಮಾಡಿದೆನೆಂದು ಹೇಳುತ್ತಾನೆ. ಗ್ರಂಥವನ್ನು ಬರೆಯುವದಕ್ಕೆ ಕಾರಣವನ್ನೂ, ಭೇಷಜವು ಮೋಕ್ಷಸಾಧನವೆಂಬುದನ್ನೂ ಕವಿಯು ಬಹು ಸೊಗಸಾಗಿ ವರ್ಣಿಸಿದ್ದಾನೆ.

ಮರನಂ ಗಾಳಿಯು ದೂಳಿಯುಂ ರಜನಿಯುಂ ನೀರಾಟವುಂ ಬೇಟಮುಂ |
ಸುರೆಯುಂ ಸೂಳೆಯುರಂ ವಿಟಾಟವಿಕರಂ ಕೊಂಡಾಡಿ ಬೆಂಡಾಗದೀ ||
ಧರೆಯೋಳ್ ಸರ್ವಜನೋಪಕಾರಮೆನಲೀ ಮಂತ್ರೌಷಧಿವ್ರಾತಮುಂ |
ನಿರುತಂ ಭಾವಿಸಿ ಪೇಳ್ದ ಮಾನವನೆ ತಾಂ ದೇವಂ ಧರಾಚಕ್ರದೋಳ್ ||

ಎಂದಶೇಷಬುಧಜನೋಪಕಾರಾರ್ಥಂ, ಸ್ಥಾವರ ಜಂಗಮಕೃತಿಮಪ್ರಭೃತಿ, ನಾನಾವಿಷಾಪಹರಣ ಕಾರಣಮಪ್ಪ ಗ್ರಂಥಮಂ ಪೇಳಲೊಡರ್ಚಿದೇಂ.

ನರರ್ಗರುಜತೆ ಭೇಷಜದಿಂ | ದರುಜತೆಯಿಂ ದೇಹ ದೇಹದಿಂದಂ ಜ್ಞಾನಂ |
ಪರಮಜ್ಞಾನದೆ ಮೋಕ್ಷ | ದೊರೆಕೊಳ್ಗುಮದೆಂದು ಪೇಳ್ದಪೆಂ ಭೇಷಜಮಂ ||

ಈ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವನ್ನು ಕೆಳಗಿನ ಪದ್ಯದಲ್ಲಿ ಹೇಳಿದ್ದಾನೆ.

ಉರಗ ಮೃಗಮೂಷಿ ವೃಶ್ಚಿಕ | ಸುರೆ ಕೀಟಕಮುಂ ಕುಧಾನ್ಯ ತಂಬುಲಕನಕಂ|
ನಿರುಪಮಿತ, ಕೃತಿಮಂಗಳ್ | ಪರಿಕಿಪೊಡಿವು ದಶವಿಧಂ ವಿಷಗಳೆನಿಕ್ಕುಂ ||

ವಿಷಯವು ವೈದ್ಯವಾದರೂ ಪದ್ಯಗಳು ಲಲಿತವಾಗಿಯೂ ಧಾರಾಳವಾಗಿಯೂ ಇವೆ, ಬಂಧವು ಪ್ರೌಢವಾಗಿದೆ.

ಈತನ ನಿದಾನ ಚಿಕಿತ್ಸೆಗಳನ್ನು ನೋಡಿ:—

ವಿಷದೋಷದ ಲಕ್ಷಣ

ಅತಿಸಾರಂ, ಮೂರ್ಛೆ, ದಾಹಂ, ಮಿತಿವಿಕಳತೆಯುಂ, ಭ್ರಾಂತಿ ಹೃತ್ಶೂಲೆ ತಾಪಂ।
ಗತಸತ್ವಂ, ನೇತ್ರಮಾಂದ್ಯಂ, ಪ್ರಕೃತಿವಿಕೃತಿಯುಂ, ಗದ್ಗದಧ್ವಾನ ಕಂಠಂ ॥
ಗತಿಭಂಗಂ ಶ್ವಾಸಕಾಸಂ ರುಧಿರವಮನಮುಂ ಸ್ವೇದಮತ್ಯಂತ ಖೇದಂ।
ಧೃತಕೋಪಂ, ತಾಮಿವೆಲ್ಲಂ ವಿಷಮತರವೆನಿಪ್ಪಂಗ ಚಿಹ್ನಂಗಳಕ್ಕುಂ ॥

ಚಿಕಿತ್ಸೆ

ವಮನೋಪವಾಸಮಂತ್ರ । ಕ್ರಮದಿಂ ಮಾಡಿಸಿ ಮಲಾಪಹರಣಮನಿಂಬಿಂ ।
ಸಮನಿಸಿ ಬಳಿಕ್ಕಮವರ್ಗಂ ಬೆರ । ದು ಮಹಾಭೇಷಜಮನೀಯೆವಿಷಮುರಹಕ್ಕುಂ॥

ವೈದ್ಯಾಮೃತದ ಕರ್ತೃವಾದ ಶ್ರೀಧರದೇವನು (೧೫೦೦) ಪ್ರಸಿದ್ಧ ವೈದ್ಯನು. ಇವನ ಗ್ರಂಥವು ಚಂಪೂ ರೂಪವಾಗಿದೆ. ಇದರಲ್ಲಿ ೨೪ ಅಧಿಕರಣಗಳಿವೆ. ಹಲವೆಡೆಗಳಲ್ಲಿ ಚಿಕಿತ್ಸೆಗೆ ಮಂತ್ರಗಳನ್ನೂ ಹೇಳಿದ್ದುಂಟು. "**ಜಗದೇಕ ಮಹಾಮಂತ್ರವಾದಿ** ಶ್ರೀಧರದೇವ ವಿರಚಿತಮಪ್ಪ ವೈದ್ಯಾಮೃತದೋಳ್" ಎಂದು ಪ್ರತಿಯೊಂದು ಅಧಿಕರಣದ ಕೊನೆಯಲ್ಲಿ ಹೇಳುತ್ತಾನೆ. ಇದರಲ್ಲಿ ಗದ್ಯವೇ ಹೆಚ್ಚಿದೆ.

ಪಂಚಗುಲ್ಮ ಅತಿಚಾರಕ್ಕೆ

ಸೂರಣ, ಮಂಗುರವಳ್ಳಿ, ಚಿತ್ರಮೂಲಿ, ಕುಸ್ತುಂಬರಿ ಇನಿತುಮಂ ಅಳಿಯಲಾಗಲಿ, ಅಂಬಿಲದಾಗಲಿ ಅಷ್ಟಾವಶೇಷಂ ಮಾಡಿ ಕೊಳಲೊಡಂ ಪಂಚಗುಲ್ಮ ಅತಿಚಾರ ಕೆಡುಗು.

ಸಾಳ್ವನ **ವೈದ್ಯಸಾಂಗತ್ಯವು** (೫೫೫) ಪ್ರಸಿದ್ಧವಿದೆ. ಈತನು **ಆನಂದಭೈರವೀ ರಸವನ್ನು** ಸಿದ್ಧಪಡಿಸುವ ಕ್ರಮವನ್ನು ಹೇಳುತ್ತಾನೆ.

ವರಜಾಯಿಕಾಯಿ ಸೈಂಧವ ಮಿಂಗಿಲಿಕ ಶುಂಠಿ । ಮರಿಚ ಲವಂಗವು ನಾಭಿ ।
ಉರುವ ಕನಕ ಬೀಜ ಹಿಪ್ಪಲಿ ಸಮಭಾಗ । ಕರಿಯ ದುತ್ತೂರದ ರಸದಿ ॥
ಅರೆವುದು ಮೂರು ದಿವಸ ಗುಂಜಿಗಾತ್ರಕ್ಕೆ । ನೆರೆ ಗುಳಿಗೆಯನು ಕಟ್ಟುವುದು ॥
ಪರಿವಿಡಿಯಿಂದೆಯಾನಂದಭೈರವಿಯೆಂಬ । ಉರುವ ಪೆಸರ ಪಡೆದಿಹುದು ॥

ಇದರ್ಕೆ ಅನುಪಾನಂ

ಇಂತು ಕಂಗೊಳಿಸುವಾನಂದಭೈರವಿಯನು । ಸಂತಸದಿಂ ತ್ರಿಕಟುಕದಿ ।
ಚಿಂತೆಯ ಬಿಟ್ಟು ಕೊಳ್ಳಲು ವಾತವೆಂಭತ್ತು । ಭ್ರಾಂತುವೆತ್ತಿರದೋಡುವುವು ॥
ಸಲೆ ಮೂಲ ಸಹಿತ ಹೂಲಿಯ ರಸದಿಂ ಕೊಳ್ಳೆ । ತೊಲಗುಗುಂ ಶ್ಲೇಷ್ಮದೋಷಗಳು ।

ನೆಲೆಗೊಂಡ ಶೂಲೆಗೆ ಗದುಗಿನ ತಿರುಳಿಂದ | ಸಲೆ ಕೊಳ್ಳೆ ಕೆಟ್ಟುಹೋಗುವುದು॥
ಎಲವದ ಹಗಿನದೊಳಜ ಮೋದದಿಂ ಕೊಳ್ಳೆ | ನೆಲೆಗೆಡುವುವು ಗ್ರಹಿಣಿಗಳು ॥
ಸಲೆ ಜಾಯಿಕಾಯಿ ಜೀರಗೆ ದಧಿಯಿಂ ಕೊಳ್ಳೆ | ಯಳವುಗೆಡುವುದತಿಸಾರ ॥

೧೫೭೦ ರಲ್ಲಿ **ವೈದ್ಯಸಾರ ಸಂಗ್ರಹ**ವೆಂಬ ಚೆನ್ನರಾಜನ ಗ್ರಂಥವು ಪ್ರಸಿದ್ಧವಿದೆ, ಚಿಕ್ಕುಪಾಧ್ಯಾಯನು (೧೬೭೨) ವೈದ್ಯಾಮೃತಕ್ಕೆ ಟೀಕೆಯನ್ನು ಬರೆದಿದ್ದಾನೆ ನಂಜಭೂಪಾಲನು (೧೭೦೦) **ವೈದ್ಯಸಾರ ಸಂಗ್ರಹ**ವೆಂಬ ಗಂಥವನ್ನು ಬರೆದಿದ್ದಾನೆ. ವೀರರಾಜನ (೧೭೨೦) **ವೈದ್ಯ ಸಂಹಿತಾಸಾರಾರ್ಣವ** ಎಂಬ ಗ್ರಂಥವು ಪ್ರಸಿದ್ಧವಿದೆ. ೧೭೫೦ ರಲ್ಲಿ ಬ್ರಹ್ಮನೆಂಬ ಕವಿಯು **ವೈದ್ಯಕಂದ**ವೆಂಬ ಗ್ರಂಥವನ್ನು ಬರೆದಿದ್ದಾನೆ ವೈದ್ಯಶಾಸ್ತ್ರವು ಋಗ್ವೇದಕ್ಕೆ ಉಪವೇದವಾದ ಆಯುರ್ವೇದವೆಂದೂ ಅದನ್ನು ಚೆನ್ನಾಗಿ ಕಲಿತು ಚಿಕಿತ್ಸೆ ಮಾಡಿದರೆ ದೋಷವಿಲ್ಲೆಂದೂ ಕವಿಯು ಹೇಳುತ್ತಾನೆ. ಅವನ ರೀತಿಯನ್ನು ನೋಡಿ:—

ತೊಲೆ ಹಿಪ್ಪಲಿಯನು ಹುರಿವುದು | ತಿಲತೈಲದಿ ಕಲ್ಲುಸಕ್ಕರೆಯ ಕೂಡಿಸುತಂ |
ಬಲುಹುರುಳಿಯ ಕಟ್ಟಿನೊಳು | ಕಲಸುತ ಕೊಡಲೊಡನೆ ಕೆಡುವುದಡಸಿದ ಖಾಸ॥

ತಿಮ್ಮರಾಜಗೌಡನ **ಸ್ತ್ರೀವೈದ್ಯವು** ಪ್ರಸಿದ್ಧವೇ ಇದೆ ಇದು ತೀರ ಚಿಕ್ಕ ಗ್ರಂಥವು. ೫ ಓಲಿಗಳಿವೆ. ಇದಲ್ಲದೆ ವ್ರಣವೈದ್ಯ ಮೊದಲಾದ ಗ್ರಂಥಗಳೂ ಇವೆ ಆಧುನಿಕ ಡಾಕ್ಟರರು ಈ ಗ್ರಂಥಗಳ ಶೋಧವನ್ನು ಮಾಡಿ, ಕನ್ನಡ ಆಯುರ್ವೇದವನ್ನು ಪ್ರಸಿದ್ಧಿಸುವದು ಅವಶ್ಯವಿದೆ. ಹಳೆಯ ಓಲೆಯ ಕಡತಗಳಿದ್ದಲ್ಲಿ ಸಂಶೋಧಿಸುತ್ತಿರುವಾಗ ಬೇರೆ ಬೇರೆ ವ್ಯಕ್ತಿಗಳು ಬರೆದಿಟ್ಟ ಅನುಭವ ವೈದ್ಯಸಂಗ್ರಹದ ಪುಸ್ತಕಗಳು ಹಲವು ಕಡೆಗೆ ದೊರೆಯುತ್ತವೆ.

ಹಸ್ತ್ಯಾಯುರ್ವೇದ ಅಥವಾ ಗಜಶಾಸ್ತ್ರ

ಶಿವಮಾರದೇವನು (೮೦೦) **ಶಿವಮಾರಮತ**ವೆಂಬ ಗಜಶಾಸ್ತ್ರವನ್ನು ರಚಿಸಿದಂತೆ ನಗರದ ೩೫ನೆಯ ಶಾಸನದಿಂದ ತಿಳಿಯುತ್ತದೆ. ಸು. ೧೬೦೦ ರಲ್ಲಿ ಪಾಲಕಾಪ್ಯಕೃತ ಹಸ್ತ್ಯಾಯುರ್ವೇದಕ್ಕೆ ವೀರಭದ್ರರಾಜನು ಕನ್ನಡ ಟೀಕೆಯನ್ನು ಬರೆದಿದ್ದಾನೆ. ಈ ಗ್ರಂಥವು ಪೂರ್ಣವಾಗಿ ದೊರೆತಿಲ್ಲ. ವೈದ್ಯನು ಹೇಗಿರಬೇಕೆಂಬುದನ್ನು ಕೆಳಗಿನಂತೆ ವರ್ಣಿಸುತ್ತಾನೆ.

"ಆರು ಕೆಲವರು ಚಿಕಿತ್ಸೆ ಮಾತ್ರವನೆ ಪಠಿಸಿ, ಅನುವಾಸನ ನಿರೂಹ ಉತ್ತರ ವಸ್ತಿ ವಿರೇಕ ವಿಧಿಶಿರೋವಿರೇಚನ ಉಪಚಾರಂಗಳನರಿಯದೆ ವೈದ್ಯಮಂ ಮಾಡುವವರು ಹೇಡಿ ಹುಯ್ಯಲ ಹೊಕ್ಕಂತೆ..........................ನಾಲ್ಕು ಸ್ಥಾನವನು ಬಲ್ಲಾತನಿಂದ ಚಿಕಿತ್ಸೆಯಂ ಮಾಡಿಸುವುದು. ಚಿಕಿತ್ಸೆಯನು ಪಠಿಸದೆ ಪರಿಚಾರವ ಪಠಿಸಿದವರು ಯೋಗ್ಯರಲ್ಲ. ಪರಿಚಾರವನು ಪಠಿಸದೆ ಇದ್ದವರು ಆನೆಗಳ ಸಾಧ್ಯಾಸಾಧ್ಯವನರಿಯರು........" ಇತ್ಯಾದಿ.

ಅಶ್ವ-ಶಾಸ್ತ್ರ-ವೈದ್ಯ

ಅಭಿನವಚಂದ್ರ (೧೪೦೦) ನೆಂಬ ಕವಿಯು **ಅಶ್ವಶಾಸ್ತ್ರ**ವನ್ನು ಬರೆದಿದ್ದಾನೆ. ಇದರಲ್ಲಿ ೧೬ ಅಧ್ಯಾಯಗಳಿವೆ. ೮೮೮ ಪದ್ಯಗಳಿವೆ. ಅಶ್ವಗಳ ಲಕ್ಷಣಗಳು ಹೇಳಲ್ಪಟ್ಟಿವೆ. ಅವುಗಳ ರೋಗ ಚಿಕಿತ್ಸೆಯೂ ವರ್ಣಿಸಲ್ಪಟ್ಟಿದೆ:—

ಒಳ್ಳೇ ಕುದುರೆಯ ಲಕ್ಷಣ

ತೆರೆಯಿಲ್ಲದೆ ಸೆರೆಯಿಲ್ಲದೆ | ನರೆಯಿಲ್ಲದೆ ಕಿರಿಯವಾಗಿ ತೆಳ್ಳನೆ ಮೊನೆಯಾ |
ಗಿರೆ ಕಿವಿಗಳೊಳಗೆ ನುಣ್ಪಾ | ಗಿರೆ ಕಟಮುಂ ವಿಕಟಮಾಗದಿರೆ ಹರಿ ಶುಭದಂ

ಸರ್ವಶೂಲೆಗಳಿಗೆ

ಶೃಂಗಿಯ ಬೇರುಂ ವಾಣಿಜ | ದಿಂಗುಂ ಬೆಳ್ಳುಳ್ಳಿ ತಿಗಡೆ ಸೈಂಧವನಿಾಪಂ |
ಚಾಂಗಮುಮಂ ಸಮನಾಗಿ ತು | ರಂಗಕ್ಕಿಕ್ಕುವುದು ಸರ್ವಶೂಲಾಪಹರಂ ||

ಅಭಿನವಚಂದ್ರನ ನಂತರ ಪ್ರಸಿದ್ಧ ಅಶ್ವಶಾಸ್ತ್ರಕಾರನೆಂದರೆ ರಾಮಚಂದ್ರನೇ (೧೬೨೫). ಇವನು ಶಾಲಿಹೋತ್ರನ ಅಶ್ವಶಾಸ್ತ್ರಕ್ಕೆ ಕನ್ನಡ **ಟೀ**ಕೆಯನ್ನು ಬರೆದಿದ್ದಾನೆ. 'ಶಾಲಿಹೋತ್ರನು ಹೇಳಿದ ಶಾಸ್ತ್ರಕ್ರಮದಿಂದ ಬಾಲಕರರಿವಂತೆ, ಸಾಂಗೋಪಾಂಗವಾಗಿ ಕನ್ನಡಿಸಿದೆಂ' ಎಂದು ಕವಿಯು ಹೇಳುವನು. ಇದು ಗದ್ಯರೂಪವಾಗಿದೆ. ಇದರಲ್ಲಿ ಕುದುರೆಗಳ ವಯಸ್ಸು, ಹಲ್ಲುಸುಳಿ, ವ್ಯಾಧಿಗಳಿಗೆ ಚಿಕಿತ್ಸೆ ಮುಂತಾದ ವಿಷಯಗಳು ಹೇಳಿವೆ. ಪದ್ಮಣ ಪಂಡಿತನ (೧೬೨೭) **ಹಯಸಾರ ಸಮುಚ್ಚಯ**ವು ಕಂದದಲ್ಲಿದೆ. ಅದರಲ್ಲಿ ೨೦ ಅಧ್ಯಾಯಗಳಿವೆ. ಗ್ರಂಥ ಸಂಖ್ಯೆ ೮೦೦೦. ಇದರಲ್ಲಿ ಕುದುರೆಗಳ ಆಕೃತಿ, ಲಿಂಗ, ಭೇಷಜ ಇವು ನಿರೂಪಿಸಲ್ಪಟ್ಟಿವೆ.

ಗೋವೈದ್ಯ

ಕೀರ್ತಿವರ್ಮನು (೧೫೭೫) **ಗೋವೈದ್ಯ**ವನ್ನು ಬರೆದಿರುವನು. ಇದು ಗದ್ಯಪದ್ಯ ರೂಪವಾಗಿದೆ. ಪೂರ್ಣ ಪ್ರತಿಯು ದೊರೆತಿಲ್ಲ. ಗೋವುಗಳ ವ್ಯಾಧಿಗಳಿಗೆ ಔಷಧಗಳೂ, ಯಂತ್ರಗಳೂ, ಬರೆಹಾಕುವ ಕ್ರಮಗಳೂ ವಿಸ್ತಾರವಾಗಿ ಹೇಳಲ್ಪಟ್ಟಿವೆ.

ಜ್ಯೋತಿಶಾಸ್ತ್ರ

ಜ್ಯೋತಿಷ ಶಾಸ್ತ್ರದ ಗ್ರಂಥಗಳು ಕನ್ನಡದಲ್ಲಿ ೧೧ನೇ ಶತಮಾನದಿಂದಲೇ ದೊರೆಯುತ್ತವೆ. ಫಲಜ್ಯೋತಿಷವೂ ಶಕುನಗಳೂ ಈಗ ದೊರೆತಿರುವ ಗ್ರಂಥಗಳಲ್ಲಿ ಹೆಚ್ಚಾಗಿವೆ. ಗ್ರಹಗಣಿತವೂ ವರ್ಣಿಸಲ್ಪಟ್ಟಿದೆ. ಇವುಗಳ ಇತಿಹಾಸವು ಇಂತಿದೆ.

ಶ್ರೀಧರಾಚಾರ್ಯನ (೧೦೪೯) **ಜಾತಕ ತಿಲಕ**ವೇ ಕನ್ನಡದಲ್ಲಿ ಮೊದಲಿನದೆಂದು ತೋರುತ್ತದೆ. ಇವನು ಬೆಳುವಲ ನಾಡಿನಲ್ಲಿರುವ **ನರಗುಂದ**ದವನು. 'ಇದುವರೆಗೂ ಕನ್ನಡದಲ್ಲಿ ಜ್ಯೋತಿಷವನ್ನು ಯಾರೂ ಬರೆದಿಲ್ಲ. ನೀವು ಜಾತಕ ತಿಲಕವನ್ನು ಬರೆ' ಎಂದು ವಿದ್ವಾಂಸರು ಹೇಳಲು ಈ ಗ್ರಂಥವನ್ನು ಬರೆದಂತೆ ಕವಿಯು ಹೇಳುತ್ತಾನೆ. ಇದನ್ನು ಬಾಹುಬಲಿಯು (೧೫೬೦)

ಜ್ಯೋತಿಷ ವಿದ್ಯೆಗೆ ಮೊದಲಿಗೆ ಸಲೆ ವಾದಿ | ವ್ರಾತ ಭಯಂಕರನೆನಿಪ |
ಖ್ಯಾತಿಗೆ ನೆಲೆಯಾದ ಶ್ರೀಧರಾಚಾರ್ಯರ | ಪ್ರೀತಿ ಮಿಗೆ ಬಲಗೊಂಬೆ ||

ಎಂದು **ನಾಗಕುಮಾರನ ಕಥೆ**ಯ ಆದಿಭಾಗದಲ್ಲಿ ಹೇಳುತ್ತಾನೆ.

ಜಾತಕ ತಿಲಕದಲ್ಲಿ ಕಂದ ಹಾಗು ವೃತ್ತಗಳಿವೆ. ಇದರಲ್ಲಿ ಕೆಳಗಿನ ೨೪ ವಿಭಾಗಗಳಿವೆ ಸಂಜ್ಞಾ, ಬಲಾಬಲ, ಗರ್ಭ, ಜನ್ಮ, ತಿರ್ಯಗ್ಜನ್ಮ, ಅರಿಷ್ಟ, ಅರಿಷ್ಟ ಭಂಗ, ಆಯುರ್ದಾಯ, ದಶಾಂತರ್ದಶಾ, ಅಷ್ಟಕವರ್ಗ, ಜೀವರಾಜಯೋಗ, ನಾಭಿ ಸಂಯೋಗ, ಚಂದ್ರಯೋಗ, ದ್ವಿತ್ರಿಯೋಗ, ದೀಕ್ಷಾಯೋಗ, ರಾಶಿ, ಲಗ್ನಭಾವ, ದ್ರೇಕ್ಕಾಣ, ದೃಷ್ಟ ಅನಿಷ್ಟ, ಸ್ತ್ರೀ ಜಾತಕ, ನಿರ್ಯಾಣ, ನಷ್ಟಜಾತಕ. ಜ್ಯೋತಿಷದ ಪ್ರಯೋಜನವನ್ನು ಕವಿಯು ಈ ರೀತಿ ಹೇಳುತ್ತಾನೆ:—

ಭವಭದ್ಧ ಶುಭಾಶುಭ ಕ | ರ್ಮವಿಪಾಕಜ ಫಲವನರಿಪುಗುಂ ಜೋಇಶ್ಜ್ಞ |
ನವದೆಂತನೆ ಕತ್ತಲೆವನೆ | ಯ ವಸ್ತುವಂ ತೋರ್ಪ ಸೊಡರ ಬೆಳಗಿನ ತೆರದಿಂ ||

ಗ್ರಹಬಲ

ಶನಿಯಿಂದಂ ಮಹಿಜಾತನಾ ಮಹಿಜನಿಂದಂ ಸೌಮ್ಯನಾ ಸೋಮನಂ |
ದನನಿಂದಂ ಗುರುವಾ ಸುರೇಂದ್ರ ಗುರುವಿಂದಂ ಶುಕ್ರನಾ ಶುಕ್ರನಿಂ ||
ವನಜಾತಾಹಿತನಾ ವನೇಜ ರಿಪುವಿಂ ಪಂಕೇಜಮಿತ್ರಂ ಬಳಾ |
ಢ್ಯನೆನಿಕ್ಕುಂ ಕ್ರಮದಿಂದಮೀಗ್ರಹಬಳಂ ನೈಸರ್ಗಿಕಂ ನಾಮದಿಂ ||

ಈ ಗ್ರಂಥವು ವಿಸ್ತಾರವಾಗಿದೆ ಕವಿತೆಗಳು ಪ್ರೌಢವಾಗಿವೆ. ಹೇಳುವ ರೀತಿ ಸೊಗಸಾಗಿದೆ.

ಶ್ರೀಧರಾಚಾರ್ಯರ ನಂತರ ಚಾವುಂಡರಾಯ (೧೧೫೦) ನ **ಲೋಕೋಪಕಾರವೆಂಬ** ಗ್ರಂಥವು ಕಾಣುತ್ತದೆ. ಇದು ಪೂರ್ಣವಾಗಿ ದೊರೆತಿಲ್ಲ. ೫—೬ ನೆಯ ಆಶ್ವಾಸಗಳು ಮಾತ್ರ ದೊರೆತಿವೆ. ಇವುಗಳಲ್ಲಿ ೫ನೇ ಆಶ್ವಾಸದಲ್ಲಿ ಉದಕಾರ್ಗಳ ವರ್ಣನವೂ ೬ನೆಯದರಲ್ಲಿ ಸ್ತ್ರೀ–ಪುರುಷರ **ಸಾಮುದ್ರಿಕ ಲಕ್ಷಣವೂ** ಇವೆ.

ನೀರಿರುವ ಸ್ಥಳದ ಲಕ್ಷಣ

ತುರುಗಿ ತಳಿರ್ತು ಪೂತು ಫಲಮಾದೆಲೆಯಿಕ್ಕಿದ ಕೊಂಬುಗಳ್ ನೆಲ |
ಕ್ಕೊರಗಿದ ಮುಣ್ಪುವೆತ್ತ ಮರನುಳ್ಳೆಡೆಯೋಳ್ ಜಲಮುಕ್ಕುಮಲ್ಲಿಯೆಂ ||
ದರಿವುದು ತಾರಿದಂಬಿದ ನರುಂಕಿದ ಕೊಂಬೊಣಗಿರ್ದ ಪೂಟಿಯೆ |
ಳ್ದೊರಗಿದ ವೃಕ್ಷದಿಂದರಿವುದಾಯೆಡೆಯೋಳ್ ಜಲಮಾಗದೆಂಬುದಂ ||
ಪುಲ್ಲಿಲ್ಲದ ನೆಲದೋಳ್ ಪಸು | ರ್ಪುಲ್ಲಾದೊಡಮಲ್ಲದಂದು ಪುಲ್ಲುಳ್ಳೆಡೆಯೋಳ್||
ಪುಲ್ಲಿನಿತುಮಿಲ್ಲದಿರ್ದೊಡೆ | ಮಲ್ಲಿಯೆ ನೀರಕ್ಕುಮಲ್ಲಿ ಮೇಣ್ ನಿಧಿಯಕ್ಕುಂ ||

ಸುಮಾರು ೧೩೦೦ ರಲ್ಲಿ ರಟ್ಟಕವಿ (ಅರ್ಹದ್ದಾಸ)ಯಿಂದ **ರಟ್ಟಮತ**ವೆಂಬ ಗ್ರಂಥವು ಬರೆಯಲ್ಪಟ್ಟಿದೆ. ಇದು ಪೂರ್ಣವಾಗಿ ದೊರೆತಿಲ್ಲ. ಅಸಮಗ್ರಪ್ರತಿಯಲ್ಲಿ ವೃತ್ತ, ಕಂದ, ರಗಳೆ, ಅಕ್ಕರ, ತ್ರಿಪದಿ ಎಲ್ಲಾ ಸೇರಿ ೯೦೦ ಪದ್ಯಗಳಿವೆ. ಇದರಲ್ಲಿ, ಕೆಳಗಿನ ವಿಷಯಗಳಿವೆ.

ಮಳೆಯ ಕುರುಹು, ಆಕಸ್ಮಿಕ ಲಕ್ಷಣ, ಶಕುನ, ವಾಯುಚಕ್ರ, ಗೋಪ್ರವೇಶ, ಭೂಕಂಪ, ಭೂಜಾತಫಲ, ಮಳೆಯ ನಯ, ಉತ್ಪಾತ

ಲಕ್ಷಣ, ಪರಿವೇಷ ಲಕ್ಷಣ, ಇಂದ್ರ ಧನುರ್ಲಕ್ಷಣ, ಪ್ರಥಮ ಗರ್ಭ ಲಕ್ಷಣ, ದ್ರೋಣ ಸಂಖ್ಯೆ, ಮಿಂಚಿನ ಲಕ್ಷಣ, ಪ್ರತಿಸೂರ್ಯ ಲಕ್ಷಣ, ಸಂವತ್ಸರ ಫಲ, ಗ್ರಹಂಗಳ ಪಗೆಕೆಳೆ, ಮೇಘಗಳ ನಾಮಕುಲ ವರ್ಣಧ್ವಾನ ವಿಚಾರ, ದೇಶ ವೃಷ್ಟಿ, ಮಾಸಫಲ, ರಾಹುಚಕ್ರ, ನಕ್ಷತ್ರ ಫಲ, ಬಿತ್ತುವ ಶಕುನ, ಉದಕಾರ್ಗಳ, ಸಂಕ್ರಾಂತಿ ಫಲ.

ಇವೆಲ್ಲವುಗಳನ್ನು ನೋಡಿದರೆ, ಜೋತಿಷ್ಕನ ಸ್ಥಾನವು ಸಮಾಜದಲ್ಲಿ ಯಾವುದಿತ್ತೆಂಬುದು ಒಡೆದು ಕಾಣುವದು.

ಮಳೆಯ ಲಕ್ಷಣ

ಜಲಜಸಖ ಬಿಂಬಮತ್ಯು| ಜ್ವಲ ಮಪ್ಪೊಡೆ ವಾಯುಪವನನೊಳ್ ಬೀಸುಪ್ಪೊಡಂ|
ಜಲದಂಗಳ ರುಚಿಗಳ್ ನಿ | ರ್ಮಳಮಪ್ಪೊಡಮಧಿಕವೃಷ್ಟಿಯಕ್ಕುಂ ರಟ್ಟಾ ||

ಲಕ್ಷ್ಮಣಾಂಕನು (೧೫೦೦) **ಶಕುನಸಾರವೆಂಬ** ಗ್ರಂಥವನ್ನು ಬರೆದಿದ್ದಾನೆ. ಇದು ವೃತ್ತದಲ್ಲಿದೆ. ೮ ಅಧಿಕಾರಗಳಿವೆ. ೩೬೨ ಪದ್ಯಗಳಿವೆ. ರಾಜ್ಯ, ಓಲಗ, ಯಾತ್ರೆ, ಲಾಭ, ಮಳೆ, ಫಲಾರ್ಘ, ವಿವಾಹ, ಗರ್ಭ, ಪುತ್ರೋತ್ಪತ್ತಿ, ಜಯ, ಆಕಸ್ಮಿಕ ಕಾಲ ಇತ್ಯಾದಿ ವಿಷಯಗಳು ಪ್ರತಿಪಾದಿಸಲ್ಪಟ್ಟವೆ. ಇದೇ ಸುಮಾರಿಗೆ ಚಾಕರಾಜನು **ಶಕುನ ಪ್ರಪಂಚ**ವೆಂಬ ಗ್ರಂಥವನ್ನು ಬರೆದಿದ್ದಾನೆ. ಇದು ಕಂದವೃತ್ತಗಳಿಲ್ಲಿದೆ. ಇದರಲ್ಲಿ ೨೫೦ ಅಧ್ಯಾಯಗಳಿದ್ದು ೬೨೦ ಪದ್ಯಗಳಿವೆ. ಇದಕ್ಕೆ ಪಿಂಗಲಿಯ ಶಾಸ್ತ್ರ, ಪಿಂಗಲಿಯ ಶಕುನ ಎಂಬ ಹೆಸರುಗಳೂ ಉಂಟು. 'ಪಿಂಗಲಿಯ ಶಾಸ್ತ್ರಾನೀಕ ಸಾರಂಗಳಂ ಪೇಳ್ವೆಂ' ಎಂದು ಗ್ರಂಥವನ್ನು ಕವಿಯು ಪ್ರಾರಂಭಿಸುವನು. ಇದರಲ್ಲಿ ಇರುವ ವಿಷಯಗಳನ್ನು ಕವಿಯು ಈ ರೀತಿಯಾಗಿ ಹೇಳುವನು.

ಸ್ವರವಾಕಸ್ಮೀಕ ಚೇಷ್ಟಾಗತಿಸುಮುದಯಮುಂ ರಾಜ್ಯಮುಂ ಸೇವೆಯುಂ ಬಂ |
ಧುರ ವೃಷ್ಟ್ಯರ್ಘಂ ವಿವಾಹಂ ಬೆಳೆ ರುಜೆ ಗಮನಂ ಗರ್ಭಮುಂ ದ್ಯೂತ ನಷ್ಟಂ |
ಪರಚೋರಂ ಬಂಧನಂ ಭೋಜನಮತಿಶಯನಿಕ್ಷೇಪಮೆಂದೆಂಬ ನಾನಾ ||
ಪರಿಯಿಂ ಸರ್ವಾಧಿಕಾರಂಗಳನೆ ಶಕುನದಿಂ ಪೇಳ್ವನೀ ಚಾಕರಾಜಂ ||

ಮದುವೆಯಾಗುವ ಲಕ್ಷಣ

ಮದುವೆಯ ಗೃಹದೊಳ್ ಪಕ್ಕಿಯು। ಮುದದಿಂ ಶಿಖಿರವದಿನಂತರಾಳದಿಕೂಗಲ್ ।
ಮದುವೆಯುಮಕ್ಕುಂ ಕಡೆಯೊಳ್ । ಮದವಳಿಗೆಯು ಬೇರದೋರ್ವಗಂ
ವಧುವಪ್ಪಳ್ ॥

ಗಂಗಾಧರನೆಂಬ ಕವಿಯು (೧೫೫೦) **ರಟ್ಟನ ಜಾತಕ**ವೆಂಬ ಜ್ಯೋತಿಷ ಗ್ರಂಥವನ್ನು ಬರೆದಿದ್ದಾನೆ. ಇವರಲ್ಲಿ ೧೨೦ ಪದ್ಯಗಳಿವೆ. ಪ್ರಶ್ನಭಾಗ, ಗ್ರಹಗಳಿಗೆ ಷಡ್ಬಲ, ಜಾರಪುತ್ರ ಲಕ್ಷಣ, ಆಯುರ್ದಾಯ ಮುಂತಾದ ವಿಷಯಗಳಿವೆ.

ಆವಾವ ಜಾತಿಗಳಿಗೆ ಬರಲಾರರು ?

ಗುರುಭೃಗುಜರ್ ಬ್ರಾಹ್ಮಣರಂ । ಬುರುಹಪ್ರಿಯಭೌಮರರಸುಮಕ್ಕಳ್ ಚಂದ್ರಂ ॥
ಪರದಂಬುದನೊಕ್ಕಲಿಗಂ । ಸರಸಿಜಹಿತಸೂನು ಮಿಶ್ರಜಾತಿಯನಾಳ್ಗುಂ ॥

ಸುಮಾರು ೧೬೦೦ ರಲ್ಲಿ **ಸಾಮುದ್ರಿಕ ಲಕ್ಷಣ**ವೆಂಬ ಗ್ರಂಥವು ಪ್ರಸಿದ್ಧವಾಗಿದೆ. ಬರೆದವರು ಯಾರೆಂಬುದು ತಿಳಿಯುವದಿಲ್ಲ. ಇದೇ ಸಮಯಕ್ಕೆ **ಶಕುನಗಳು** ಎಂಬ ಗ್ರಂಥವೂ ಹುಟ್ಟಿದೆ. ಇದರಲ್ಲಿ ಹಲ್ಲಿಯ ಶಕುನ, ಹಸುವಿನ ಶಕುನ, ಗಾರ್ದಭ ಶಕುನ, ಸರ್ಪ ಶಕುನ, ಸೀನಿನ ಫಲ, ಕಣ್ಣು ಹಾರಿದ ಫಲ, ಗೌಳಿ ಬಿದ್ದ ಫಲ, ಜೇನು ಇಕ್ಕಿದ ಫಲ, ಸ್ವರ ಮುಂತಾದ ವಿಷಯಗಳು ಹೇಳಲ್ಪಟ್ಟಿವೆ.

ಕಾಗೆ ಹೆಜ್ಜೆಯಿಕ್ಕಿದ ಫಲ

ಶಿರದೊಳು ಮೃತ್ಯು, ಲಲಾಟದೊಳು ಕನಕಪಟ್ಟ, ಉರದೊಳು ಭೋಜನ, ಕರ್ಣದೊಳು ಸುವರ್ಣಲಾಭ. ಇತ್ಯಾದಿ.

ಇದೇ ಸಮಯಕ್ಕೆ **ಜಿನೇಂದ್ರ ಮಾಲೆ**ಯೆಂಬ ಜ್ಯೋತಿಷ ಗ್ರಂಥವು ಪ್ರಸಿದ್ಧವಾಗಿದೆ. ೧೨೦ ಕಂದಗಳಿವೆ. ಬರೆದವರಾರೆಂಬುದು ತಿಳಿದಿಲ್ಲ, ಅದರಂತೆಯೇ **ಜ್ಯೋತಿಷ ಸಂವತ್ಸರ ಫಲ**ವೆಂಬ ಗ್ರಂಥವು ೧೬೫೦ ರಲ್ಲಿ ಪ್ರಸಿದ್ಧವಾಗಿದೆ. ಇದು ಅನಾಮಧೇಯ. ೧೭೨೫ ರಲ್ಲಿ ದೇವನೆಂಬ ಕವಿಯು **ಶಕುನ ಪ್ರಪಂಚ**ವೆಂಬ ಗ್ರಂಥವನ್ನು ಬರೆದಿದ್ದಾನೆ. ೧೭೫೦ ರಲ್ಲಿ ಚೇಟರಾಜನು **ಮಾರ್ಕಂಡೇಯ ಪುರಾಣ**ವನ್ನು ಬರೆದಿದ್ದಾನೆ. ಇದು ಜ್ಯೋತಿಷ ಗ್ರಂಥ. ಭಾಮಿನೀಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ.

೨೬ ಸಂಧಿಗಳಿವೆ. ೧೦೮೧ ಪದ್ಯಗಳಿವೆ. ಇದರಲ್ಲಿ ಮೃಕಂಡು ಮುನಿಯು ಮಾರ್ಕಂಡೇಯನಿಗೆ ಬೋಧಿಸಿದ ಜ್ಯೋತಿಶಾಸ್ತ್ರವು ನಿರೂಪಿಸಿದೆ. ಇದರಲ್ಲಿ ಗ್ರಹಭಾವ ಲಕ್ಷಣ, ಜಾತಕ ನಿರ್ಣಯ, ಆಯುರ್ಯೋಗ, ಲಗ್ನಭಾವ ಫಲವೇ ಮೊದಲಾದ ೧೨ ಭಾವಫಲಗಳೂ, ಗ್ರಹದಶಾಫಲ ಮೊದಲಾದ ವಿಷಯಗಳೂ ಹೇಳಿವೆ.

ಸರ್ವಜ್ಞನು ತನ್ನ ವಚನಗಳಲ್ಲಿ ಜ್ಯೋತಿಷವನ್ನು ಕುರಿತು ಒಂದು ಪದ್ಧತಿಯನ್ನೂ, ವೈದ್ಯವನ್ನು ಕುರಿತು ಒಂದು ಪದ್ಧತಿಯನ್ನೂ ಬರೆದಿದ್ದಾನೆ.

ಕರ್ನಾಟಕದಲ್ಲಿಯ ಜ್ಯೋತಿಷಿಗಳ ಲಕ್ಷ್ಯವನ್ನು ಈ ಕಡೆಗೆ ಎಳೆಯಬೇಕೆಂಬ ಉದ್ದೇಶದಿಂದ ಇಷ್ಟು ವಿಸ್ತೃತವಾಗಿ ವಿಷಯವನ್ನು ವಿವರಿಸಿದೆ.

ಗಣಿತ ಶಾಸ್ತ್ರ

ಗಣಿತಶಾಸ್ತ್ರವು ೧೨ ನೆಯ ಶತಮಾನದಲ್ಲಿಯೇ ಬೆಳೆದು ಬಂದಿತ್ತೆಂಬುದು **ರಾಜಾದಿತ್ಯನ** (೧೧೨೦) ವ್ಯವಹಾರ ಗಣಿತ, ಕ್ಷೇತ್ರ ಗಣಿತ, ವ್ಯವಹಾರ ರತ್ನ, ಲೀಲಾವತಿ, ಚಿತ್ರಹಸುಗೆ, ಜೈನ ಗಣಿತ, ಟೀಕೋದಾಹರಣ ಮೊದಲಾದ ಗ್ರಂಥಗಳಿಂದ ತಿಳಿದುಬರುತ್ತದೆ. ಕನ್ನಡದಲ್ಲಿ **ಗಣಿತ ಶಾಸ್ತ್ರ**ವನ್ನು ಬರೆದಿರುವ ಕವಿಗಳಲ್ಲಿ ಇವನೇ ಮೊದಲನೆಯವನು. ಗಣಿತ ಶಾಸ್ತ್ರಕ್ಕೆ ಸಂಬಂಧಪಟ್ಟ ಬಹುತರ ಎಲ್ಲ ವಿಷಯಗಳನ್ನು ಇವನು ತನ್ನ ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾನೆ. ಇವನಿಗೆ ರಾಜವರ್ಮ, ಭಾಸ್ಕರ, ಬಾಚ, ಬಾಚಯ, ಬಾಚಿರಾಜ ಎಂಬ ಹೆಸರುಗಳೂ ಇದ್ದಂತೆ ತೋರುತ್ತದೆ.

ವ್ಯವಹಾರ ಗಣಿತವು ಗದ್ಯಪದ್ಯಾತ್ಮಕವಾಗಿದೆ. ಸೂತ್ರಗಳನ್ನು ಪದ್ಯರೂಪವಾಗಿ ಬರೆದು ಟೀಕೆಯನ್ನೂ ಉದಾಹರಣೆಗಳನ್ನೂ ಕೊಟ್ಟಿದ್ದಾನೆ. ಇದರಲ್ಲಿ ೮ ಅಧಿಕಾರಗಳಿವೆ. ಈ ಗ್ರಂಥವನ್ನು ಐದು ದಿನಗಳಲ್ಲಿಯೇ ಬರೆದೆನೆಂದು ಕವಿಯು ಹೇಳಿದ್ದಾನೆ.

> ಲೆಕ್ಕದ ಕವಿತೆಯ ಬಲ್ಮೆ ಜ । ಗಕ್ಕೆಸೆದಿರೆ ಸಕಲ ಗಣಿತವಿಾಗ್ರಂಥದೊಳಂ ।
> ತೆಕ್ಕನೆ ತೀವಿಪಲಯ್ದು ದಿ । ನಕ್ಕಂ ನೆರೆ ಪೇಳ್ದನಲ್ತೆ ರಾಜಾದಿತ್ಯಂ ॥

ಈ ಗ್ರಂಥದಲ್ಲಿ ತ್ರಯರಾಶಿಕ, ಪಂಚರಾಶಿಕ, ಸಪ್ತರಾಶಿಕ, ನವರಾಶಿಕ, ಪದಪಿನ ಸೂತ್ರ, ಬಣ್ಣಾಂತರದ ಸೂತ್ರ, ಹೊದೆಯಂಬಿನ ಸೂತ್ರ, ವಿಘುರಿ, ತೂಬಿನ ಸೂತ್ರ, ಹರವರಿಯ ಸೂತ್ರ, ಚಕ್ರಬಡ್ಡಿ ಇತ್ಯಾದಿ ವಿಷಯಗಳಿವೆ.

ಸೂತ್ರ:—

ಶತಫಳ ಯುಗಳಾಂತರದಿಂ । ಗತಮಾಸಮನಿರಿದು ಪಡೆದ ಲಾಭದ ಪೊಸ್ನಂ ।
ಹೃತಿಗೆಯ್ದು ಲಬ್ದದಿಂದ । ಶತಮಂ ಮೋದಿದೊಡೆ ಬರ್ಕುಮಾಮೂಲ ಧನಂ ॥

ಪ್ರಶ್ನೆ:—

ಮೂರು ದಿವಸಕ್ಕೆ ಖಂಡುಗ । ದಾರುಂ ಕೊಳಗಂಗಳೆರಡು ಬಳ್ಳಂ ಮಾನಂ ।
ಮೂರಾಗಲ್ ಬರ್ೞದ ಮೇ । ಲಾರುಂ ದಿವಸಕ್ಕೆ ಭತ್ತ ತಾನೆನಿತಕ್ಕುಂ ॥

ದಾಳಿಂಬದ ಬೀಜನರಿಯುವದಕ್ಕೆ

ಎಸಳನಿರಿದೆತ್ತು ನಯದಿಂ । ರಸಕೃತಿಯಿಂ ಬೀಜಮುಕ್ಕುಮವು ದಾಳಿಂಬ ।
ಕ್ಕೆಸಗುಂ ಗುಣಿತ ಕ್ರಮದಿಂ । ವಸಮತಿಗರೆವಂತೆ, ಪೇಳ ಗಣಿತವಿಳಾಸಾ ॥

ದಾಳಿಂಬದ ಕಾಯ್ ಒಂದಕ್ಕೆ ಎಸಳ್ ೫ಕ್ಕೆ, ಲಬ್ಧ ಬೀಜ ೩೬೦.

ಟೀಕು:— ಎಸಳ್ ೫ನ್ನು ೨ರಿಂದ ಗುಣಿಸೆ, ೧೦, ರಸಕೃತಿಯಿಂದೆ ವರ್ಗಂಗೊಳಲು ೩೬; ಇದಂ ೧೦ ರಿಂದ ಗುಣಿಸಲು ೩೬೦.

ಕ್ಷೇತ್ರಗಣಿತ:—

ವೃತ್ತಾಕಾರದ ಭೂಮಿಯ । ಸುತ್ತಳೆದರ್ಧಮನೆ ಬಿಡುವುದುೞದರ್ಧದೊಳಂ ।
ಮತ್ತೆರಡು ಭಾಗಮಾಡಿಯೆ । ಮೊತ್ತೊಂದರೊಳೊಂದನೊತ್ತೆ ಶುಭಂ ಬರ್ಕುಂ॥

ವ್ಯವಹಾರ ರತ್ನದಲ್ಲಿ ೫ ಅಧಿಕಾರಗಳಿವೆ. ಜೈನಸೂತ್ರೋದಾಹರದಲ್ಲಿ ಪ್ರಶ್ನೆಗಳನ್ನು ಕೊಟ್ಟು ಉತ್ತರ ಪಡೆಯುವ ವಿಧಾನವನ್ನು ಹೇಳಿದೆ. ಚಿತ್ರ ಹಸುಗೆಯು ಸೂತ್ರರೂಪವಾಗಿದೆ. ಲೀಲಾವತಿಯಲ್ಲಿ ಲೆಕ್ಕಗಳನ್ನು ಮಾಡಿ ತೋರಿಸಿದೆ.

ರಾಜಾದಿತ್ಯನ ನಂತರ ಪ್ರಸಿದ್ಧನಾದವನು ಭಾಸ್ಕರ (೧೬೫೦) ನು. ಇವನು **ಬೇಹಾರ ಗಣಿತ**ವನ್ನು ಬರೆದಿದ್ದಾನೆ. ಇದರಲ್ಲಿ ೮ ಪ್ರಕರಣಗಳಿವೆ. ಚಕ್ರಬಡ್ಡಿಯ ಸೂತ್ರ, ಪದಪಿನ ಸೂತ್ರ, ಪದಕದ ಸೂತ್ರ, ಮುಟ್ಟದ ಸೂತ್ರ, ದೇವಗತಿ ಸಂಯೋಗದ ಸೂತ್ರ, ಬಿರುದಿನ ಲೆಕ್ಕ, ಅಡುಗೂಲ

ಸೂತ್ರ, ಬೆಂಕಸಾಲೆಯಲ್ಲಿ ಕಟ್ಟುವ ಇಚ್ಛಾವರ್ಣಕ್ಕೆ ಸೂತ್ರ, ಇವೇ ಮೊದಲಾದ ವಿಷಯುಗಳಿವೆ. ಇವನ ರೀತಿ:—

ತುರುಗ ಹಡಗೇಳರಿಂದೈ । ತರೆ ವಾರಿಧಿಯೊಳುಪಚಾರಮೆನಲೆಲ್ಲರ್ಗಂ ।
ಸರಿಸರಿಯಂ ಕುಡೆ ತುರಗಂ । ಸರಿಯಾದವು ಕಡೆಗೆ ಹಡಗಿನಶ್ವವ್ರಜವೇಂ ॥

ಇದು ೭ ಹಡಗಗಳಿಗೆ ಕುದುರೆ ನಿಂತ ಮಾರ್ಗ ,೮, ,೧೫, ,೨೯, ,೫೭, ,೧೧೩, ,೨೨೫, ,೪೪೯, ಕಡೆಗೆ ಎಲ್ಲಕ್ಕೂ ಸರಿಯಾದ ಕುದುರೆ ೧೨೮, ೧೨೮, ೧೨೮, ೧೨೮, ೧೨೮, ೧೨೮, ೧೨೮. ಇದು ಸರಿ.

ಇದೇ ಸುಮಾರಿಗೆ, ಚಂದ್ರನು (೧೬೫೦) ನೆಂಬವನು **ಗಣಿತಸಾರ**ವೆಂಬ ಗ್ರಂಥವನ್ನು ಬರೆದಿದ್ದಾನೆ.

ಇದರ ನಂತರ ಪ್ರಸಿದ್ಧವಾದ ಗಣಿತವೆಂದರೆ ಬಾಲವೈದ್ಯದ ಚೆಲುವನ **ಕನ್ನಡ ಲೀಲಾವತಿಯು.** ಇದು ವಾರ್ಧಿಕ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ನಿಷ್ಕ ಪ್ರಮಾಣ, ವರಹ ಪ್ರಮಾಣ, ಮಣಿಗಟ್ಟಲೆ, ಖಂಡುಗ ಸಂಜ್ಞೆ, ಯೋಜನ ಪ್ರಮಾಣ, ವರ್ಷ ಪ್ರಮಾಣ, ಗಳಿಗೆ ಪ್ರಮಾಣ, ಭಾರ ಸಂಖ್ಯೆ, ಅಳತೆ ಪ್ರಮಾಣ, ಟೆಂಕೆ ಸೂತ್ರ, ಮಗ್ಗಿ ಸೂತ್ರ, ಮುತ್ತಿನ ಚವ್ವ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿದ್ದಾನೆ.

ನಿಷ್ಕ ಪ್ರಮಾಣಕ್ಕೆ:—

ಕವಡೆಗಳಿಪ್ಪತ್ತಾಗಲು । ಪವಣಿಸಿ ಕಾಕಿಣಿಯುು ನಾಲ್ಕು ಪಣ ಪದಿನಾರುಂ ।
ಭುವನದಿ ದ್ರಮ್ಮಗಳಿನಿತುಂ । ಸವನಿಸೆ ಪದಿನಾರಕಮುವೆ ನಿಷ್ಕಮೆನಿಕ್ಕುಂ ॥

ಇದಲ್ಲದೆ ಎಷ್ಟೋ **ಸಂಸ್ಕೃತ ಗ್ರಂಥ**ಗಳಿಗೆ ಟೀಕೆಗಳಿವೆ.

ಸ್ಮರಶಾಸ್ತ್ರ

ಕನ್ನಡಿಗರು ರಸಿಕರು. ಯಾವ ಮಹಾಕಾವ್ಯವನ್ನು ತೆಗೆದುಕೊಂಡರೂ ಶೃಂಗಾರವಿಲ್ಲದೆ ಇಲ್ಲ. ಅದನ್ನು ಶಾಸ್ತ್ರವಾಗಿ ಎಲ್ಲಕ್ಕೂ ಮೊದಲು ಬರೆದವನೆಂದರೆ, ಚಂದ್ರರಾಜ (೧೦೭೯) ನು. ಇವನು **ಮದನ ತಿಲಕ**ವೆಂಬ ಗ್ರಂಥವನ್ನು ಬರೆದಿದ್ದಾನೆ. ತನ್ನ ಪೋಷಕನಾದ **ಮಾಚಿರಾಜನು** ತನ್ನ ಹೆಂಡತಿಗೆ ಹೇಳಿದ ಕಾಮತತ್ವವನ್ನೇ ಗ್ರಂಥರೂಪವಾಗಿ ಬರೆದಂತೆ ಕವಿಯು ಹೇಳುತ್ತಾನೆ. ಗ್ರಂಥಕ್ಕೆ ಮೊದಲು ಮನ್ಮಥನನ್ನು ಸ್ತುತಿಸುತ್ತಾನೆ. ಜನ್ನನ (೧೨೦೯) **ಸ್ಮರತಂತ್ರ**ವು ಪ್ರಸಿದ್ಧವಾಗಿಯೇ ಇದೆ. ಕವಿಮಲ್ಲನ **ಮನ್ಮಥ**

ವಿಜಯವು ಚಂಪೂರೂಪವಾಗಿದೆ. ಇವನೂ ಮೊದಲಿಗೆ ಕಾಮನನ್ನೇ ಸ್ತುತಿಸುತ್ತಾನೆ. ಕಲ್ಲರಸ (೧೪೫೦) ನ **ಜನವಶ್ಯವು** ಪ್ರಸಿದ್ಧವಿದೆ. ಇದು ಷಟ್ಪದಿಗಳಲ್ಲಿದೆ. ೧೨ ಸಂಧಿಗಳಿವೆ. 'ಚಿನ್ನಣದ ನೆಲೆವೀಡು। ಕನ್ನಡದ ಪುಟ್ಟುಗಣಿ। ಚೆನ್ನ ಚೆನ್ನೆಯರಿಚ್ಛೆ ಪೆರ್ಚುವಿಕ್ಕೆ॥' ಎಂದು ಕವಿಯು ಹೇಳುತ್ತಾನೆ. ಇದರಲ್ಲಿಯ ವಿಷಯಗಳನ್ನು ಹೀಗೆ ಹೇಳುತ್ತಾನೆ.

ಪುರುಷರಿಂಗಿತವಂನಂ। ಬುರುಷಮುಖಿಯರ ತೆರನ। ಸಿರದವರ
ಸಂಭೋಗ ಸರ್ವಸ್ವ॥ ಪರಿಪರಿಯ ಜಾತಿಸಂ। ಕರ ಭೇದಮೆಂಬಿವಂ॥

ಇತ್ಯಾದಿ. ಇವನ ಬಂಧನವು ಬಹು ಲಲಿತವಾಗಿದೆ. ಇವನ ರೀತಿ:—

ಜಾತಿಯನರಿಯದೆ। ಸೋತುದನರಿಯದೆ। ರೀತಿಯನರಿಯದೆ ಸೊಬಗೆಯರ।
ಪ್ರೀತಿಯನರಿಯದೆ। ಭೀತಿಯನರಿಯದೆ। ಕೂರ್ತವನೇ ಕರಿಯಜ್ಞ ಮುಖ॥
ತರುಣಿ ಮನೋಜನ। ಕರಣಿಕಲೆಯು ಪು। ಷ್ಕರಣಿ ವಿಲಾಸದ ಸರಣಿ ಮಿಗೆ।
ಪುರುಳರಿಯದ ಬಾ। ಹಿರನೊಳಗಿರಲದು। ಮರುಳನ ಕೈ ಮಾಣಿಕದಂತೆ॥

ಇದಲ್ಲದೆ ಕಕ್ಕೋಕಶಾಸ್ತ್ರ, ವಾತ್ಸ್ಯಾಯನ ಮೊದಲಾದ ಕಾಮಶಾಸ್ತ್ರದ ಸಂಸ್ಕೃತ ಗ್ರಂಥಗಳಿಗೆ, ಕನ್ನಡ ಟೀಕೆಗಳಾಗಿವೆ. ನವಮತ ವಾದಿಗಳು ಈ ಕಡೆಗೆ ಲಕ್ಷ್ಯಕೊಡಬೇಕು.

ಸೂಪಶಾಸ್ತ್ರ

ಜಯಬಂಧುನಂದನನ ಸೂಪಶಾಸ್ತ್ರವು (೮೦೦) ಎಲ್ಲಕ್ಕೂ ಮೊದಲಿನದು. ಇದು ಪೂರ್ಣ ದೊರೆತಿಲ್ಲ. ಇದೂ ಚಂಪೂರೂಪವಾಗಿದೆ. ಅವನು ಹೇಳುವ ರೀತಿ ನೋಡಿ:—

ಆರೆದುರ್ದಿನ ಬೇಳೆಯನೊಂ। ದಿರೆ ಮೊಸರೆದಿ(?)ನೀರೊಳಿಂಗು ಜೀರಿಗೆ ಕೊತ್ತುಂ।
ಬರಿ ಮೆಣಸಲ್ಲಂ ಬೆರಸಿ। ದ್ದರಿಗೆಯನಡೆ ಕಂಪನಿಂಪುಮಂ ತಳೆದಿರ್ಕುಂ॥

ಜಯಬಂಧುವಿನ ನಂತರ ಪ್ರಸಿದ್ಧ ಪಾಕಶಾಸ್ತ್ರಜ್ಞನೆಂದರೆ, **ಮಂಗರಸ** (೧೫೦೮) ನು. ಇವನ ಸೂಪಶಾಸ್ತ್ರವು ವಿಸ್ತಾರವಾದ ಗ್ರಂಥವಿದೆ. ಇದರಲ್ಲಿ ೭ ಅಧ್ಯಾಯಗಳಿವೆ. ಪಿಷ್ಟಪಾಕ, ಪಾನಕ, ಕಳಮಾನ್ನ ಪಾಕ, ಶಾಕಪಾಕ ಇತ್ಯಾದಿಗಳ ವರ್ಣನೆಯಿದೆ. 'ಷಡ್ರಸವಿಪಾಕ ಭೇದಮನ್ನೆನ್ನ ಬಲ್ಲಂದು ಕನ್ನಡದಿ ಬರೆವೆನು ನಳಭೀಮ ಗೌರಿವತುದೊಳು ಪೇಳ್ವೆನು' ಎಂದು ಕವಿಯು ಹೇಳುತ್ತಾನೆ.

ಹಾಲಗಾರಿಗೆ

ಉತ್ತಮದ ಸೊಜ್ಜಿಗೆಯ ನೆನಹಿ ನೀರಂ ಹಿಂಡಿ।
ಮುತ್ತದಕೆ ಬಟ್ಟವಾಲ್ತಳಿದುಪ್ಪವಮಂ ತಳೆದು।
ಮೆತ್ತನಪ್ಪಂತು ಮಿದಿದಿರಿಸಿಯದರರ್ಧ ಹಾಲೊಳಗುಕ್ಕರಿಸಿದಕ್ಕಿಯ॥
ಒತ್ತಿಹಾಲಂದೆರೆದು ಸವೆದ ಕಣಿಕದೊಳು ಬೆರ।
ಸುತ್ತ ಸಕ್ಕರೆಯ ಪಾಕದೊಳಿಕ್ಕಿ ಪರಿಮಳವ।
ನೊತ್ತರಿಸಿ ತುಪ್ಪದೊಳು ಬೇಯಿಸಿದ ಹಾಲಗಾರಿಗೆ ಪಿರಿದು ಸವಿದೋರದೇ? ॥

ಸಂಗೀತ ಶಾಸ್ತ್ರ

ಕರ್ನಾಟಕ ಸಂಗೀತಶಾಸ್ತ್ರವಂತೂ ಸರ್ವರೂ ತಿಳಿದ ವಿಷಯವೇ ಆಗಿದೆ. ಇದಲ್ಲದೆ ಬಾಲವೈದ್ಯಚೆಲುವನ ರತ್ನಶಾಸ್ತ್ರವು ಪ್ರಸಿದ್ಧವಿದೆ. ಬಾಣಗಾರಿಕೆ ಮೊದಲಾದವುಗಳ ವಿಷಯವಾಗಿಯೂ ಅನೇಕ ಗ್ರಂಥಗಳಿವೆ.

ಹೀಗೆ ಕನ್ನಡ ಸಾಹಿತ್ಯವಾಹಿನಿಯು ಶಾಖೋಪಶಾಖೆಗಳಿಂದೊಡಗೂಡಿ ವಿಸ್ತಾರವಾಗಿ, ಗಂಭೀರವಾಗಿ, ಆಳವಾಗಿ ಹರಿಯುತ್ತಲಿದೆ. ಹೊಸಬರ ಹೊಸ ಧಾಟಿಯನ್ನು ಎದುರು ನೋಡುತ್ತಲಿದೆ.

ನಮ್ಮ ಸಾಹಿತ್ಯಕಾರರು

ಕನ್ನಡ ಸಾಹಿತ್ಯಕಾರರ ಸಂಖ್ಯೆಯು ವಿಪುಲವಾಗಿದೆ. ಈಗ ಶೋಧವಾಗಿರುವವರ ಸಂಖ್ಯೆಯನ್ನೇ ನೋಡಿದರೂ ಆಶ್ಚರ್ಯವಾಗುವಂತಿದೆ. ನಾವು ಈ ಪುಸ್ತಕದಲ್ಲಿ ಪ್ರಾಚೀನರನ್ನಷ್ಟೇ ಉಲ್ಲೇಖಿಸಿರುವದರಿಂದ ೧೯ ನೇ ಶತಮಾನದ ವರೆಗಿನ ಸಂಖ್ಯೆಯನ್ನಷ್ಟೇ ಕೊಡುತ್ತೇವೆ.

ಗ್ರಂಥಕರ್ತರು	ಜೈನರು	ವೀರಶೈವರು	ಬ್ರಾಹ್ಮಣರು	ಇತರರು
೯೩೩	೧೭೪	೪೨೬	೨೨೯	೧೦೪

ಇದರಲ್ಲಿ ೧೮೪ ಜನ ವಚನಕಾರರೂ ೫೧ ಜನ ಶಾಸನಕಾರರೂ ೪೨ ಜನ ಸ್ತ್ರೀಯರೂ ಐದು ಜನ ಸಾಮ್ರಾಟರೂ ೨೫ ಜನ ಅರಸರೂ ಇರುವರು. ಎಷ್ಟು ಗ್ರಂಥಗಳು ಹುಳಹುಪ್ಪಡಿಗಳ ಪಾಲಾಗಿ ನಮ್ಮ ಕವಿಗಳ ಹೆಸರನ್ನು ಅಳಿಸಿರುವವೋ ಏನೋ. ಇನ್ನಾದರೂ ಅತ್ತಕಡೆಗೆ ಲಕ್ಷ್ಯಕೊಡುವದು ಅವಶ್ಯವಿದೆ.

ಈ ಸಾವಿರಾರು ಜನ ಕವಿಗಳನ್ನೂ ಕವಯಿತ್ರಿಯರನ್ನೂ ಅಪಾರವಾದ ಸಾಹಿತ್ಯರಾಶಿಯನ್ನೂ ನೋಡಿ ಯಾವ ಕನ್ನಡಿಗನಿಗೆ ಹೆಮ್ಮೆಯೆನಿಸಲಿಕ್ಕಿಲ್ಲ?

೧೦. ಕನ್ನಡ ಸಾಹಿತ್ಯದ ಪೋಷಕರು

ಕರ್ನಾಟಕವು ವೀರರ ನಾಡಿದ್ದಂತೆ, ವಿದ್ಯೆಯ ಬೀಡೂ, ಸಾಹಿತ್ಯ ಸಂಸ್ಕೃತಿ ಕಲೆಗಳ ಗೂಡೂ ಆಗಿದೆ. ಉತ್ತರ ಭಾರತದಲ್ಲಿ ಕಾಶ್ಮೀರವು ಸರಸತಿಗೆ ತಾಯ್ಮನೆಯಾದರೆ, ದಕ್ಷಿಣ ಭಾರತದಲ್ಲಿ ಕರ್ನಾಟಕವು ಆಕೆಯ ವಿಹಾರ ಭೂಮಿಯಾಗಿದೆ. ಆದುದರಿಂದರೆ ಶಾರದಾಂಬೆಯು, ಶಂಕರಾಚಾರ್ಯ ರೊಡನೆ ನಡೆದು ಬಂದು ಕರ್ನಾಟಕದಲ್ಲಿ ನೆಲೆಯಾಗಿ ನಿಂತಿದ್ದಾಳೆ. ಉತ್ತರ ಭಾರತವು ಕಷ್ಟಕ್ಕೀಡಾಗಿ ಸರಸತಿಯು ಅನಾಥಳಾದ ಸಮಯದಲ್ಲೆಲ್ಲ ಆಕೆಗೆ ಆಶ್ರಯವನ್ನಿತ್ತು ಸಂರಕ್ಷಿಸಿದ ಕೀರ್ತಿಯು ಭಾರತದಲ್ಲಿ ಕನ್ನಡಿಗರಿಗಿದೆ. ಕಾಶ್ಮೀರದಿಂದ ಬಂದು ಚಾಲುಕ್ಯರ ಆಶ್ರಯದಲ್ಲಿ ನೆಲೆಯಾಗಿ ನಿಂತ ಬಿಲ್ಹಣನು ಇದಕ್ಕೆ ಸಾಕ್ಷಿಯನ್ನು ನುಡಿದಿದ್ದಾನೆ. ವಿಜಯನಗರದ ರಾಯರಿಂದಲೇ ಹಿಂದೂ ಸಂಸ್ಕೃತಿ, ತತ್ತ್ವಜ್ಞಾನಗಳು ಹಿಂದುಸ್ತಾನದಲ್ಲಿ ಜೀವಂತ ಉಳಿದು ವೆಂಬ ಮಾತು ಜಗತ್ಪ್ರಸಿದ್ಧವಿದೆ. ಪಂಪಾಕ್ಷೇತ್ರವು ವಿದ್ಯಾನಗರಿಯಾದುದೇ ಇದಕ್ಕೆ ಸಾಕ್ಷಿ.

ಹೀಗೆ, ವಿದ್ಯಾಪಕ್ಷಪಾತಿಗಳೂ, ಸಾಹಿತ್ಯ – ಸಂಸ್ಕೃತಿ – ಕಲೆಗಳ ಸಂರಕ್ಷಕರೂ ಆದ ಕನ್ನಡ ಸಾಮ್ರಾಟರ ಆಶ್ರಯದಲ್ಲಿ ಕನ್ನಡ ನುಡಿಯು ಬೆಳೆದು ಬಾಳಿದುದರಲ್ಲಿ ಆಶ್ಚರ್ಯವೇನು ? ಎಷ್ಟೋ ಜನ ಕನ್ನಡ ರಾಜ ಮಹಾರಾಜರೂ, ರಾಜ್ಞಿಯರೂ ಸ್ವಥ್ವವ ಕವಿಗಳಾಗಿ ಸಾಹಿತ್ಯಸೇವೆಗೆ ಬದ್ಧಕಂಕಣರಾದುದು ಕಾಣುತ್ತದೆ. ರಾಜರಿಂದಲೂ ಮಹಾರಾಜರಿಂದಲೂ ಮಾಂಡಲಿಕರಿಂದಲೂ ದಂಡನಾಯಕರಿಂದಲೂ ಸೇನಾಪತಿಗಳಿಂದಲೂ ಸೈನಿಕ ರಿಂದಲೂ ಚಿಕ್ಕ ಪಾಳಯಗಾರರಿಂದಲೂ ಕೂಡ ಕನ್ನಡ ಸಾಹಿತ್ಯ ದೇವಿಯು ಪೂಜಿಸಲ್ಪಟ್ಟು, ವರವಿತ್ತ ಸುಂದರವಾದ ದೃಶ್ಯಗಳು ನಮ್ಮ ಇತಿಹಾಸದ ಪುಟಪುಟಕ್ಕೂ ಕಾಣುತ್ತವೆ.

ಕ್ರಿ. ಶ. ೩–೪ ನೆಯ ಶತಮಾನಗಳಿಂದಲೇ ಕನ್ನಡ ರಾಜರ ಐತಿ ಹಾಸಿಕ ಪರಂಪರೆಗೆ ಪ್ರಾರಂಭವಾಗುತ್ತದೆ. ೪–೫ ಶತಮಾನಗಳಿಂದಂತೂ ಸಾಮ್ರಾಜ್ಯಗಳೂ ಉದಯವಾದುದು ಕಂಡುಬರುತ್ತದೆ. ೪–೫ ನೆಯ ಶತಮಾನಗಳಿಂದ ಪ್ರಾರಂಭವಾದ ಈ ಕನ್ನಡ ಸಾಮ್ರಾಜ್ಯಗಳ ಆಳಿಕೆಯು

೧೧ ನೇ ಶತಮಾನದ ವರೆಗೆ ಅವ್ಯಾಹತವಾಗಿ ಕಾಣುತ್ತದೆ. ಇದು ಕರ್ನಾಟಕಕ್ಕೆ ಒಳ್ಳೇ ಆದರ್ಶವಾದ ಕಾಲವು. ಸಾಹಿತ್ಯ, ಸಂಸ್ಕೃತಿ, ಕಲೆಗಳು ಫಲದ್ರೂಪವಾಗಿ ಬೆಳೆದುದು ಇದೇ ಕಾಲದಲ್ಲಿಯೇ. ಸಾಹಿತ್ಯದಲ್ಲಿ ದೊರಕಿದ ಮೊದಲನೆಯ ಗ್ರಂಥಕಾರನಾದ ನೃಪತುಂಗನೇ **ರಾಷ್ಟ್ರಕೂಟ** ಸಮ್ರಾಟನು. ಈ ಕಾಲದಲ್ಲಿ ಒಂದರ ಹಿಂದೊಂದು ಸಾಮ್ರಾಜ್ಯವನ್ನೇರಿದ ಗಂಗರು, ಚಾಲುಕ್ಯರು, ರಾಷ್ಟ್ರಕೂಟರು ಕನ್ನಡ ನುಡಿಯ ಭಕ್ತರು, ಸೇವಕರು, ಪೋಷಕರು. ಸುಪ್ರಸಿದ್ಧ ಕನ್ನಡ ಸಾಹಿತ್ಯಕಾರರಾದ ರತ್ನತ್ರಯರು ಬಾಳಿದುದೂ ಇವರ ಕಾಲದಲ್ಲಿಯೇ. ಮಹಾಕಾವ್ಯಗಳಾದ ಚಂಪೂ ಗ್ರಂಥಗಳು ಉದಯವಾದುದೂ ಇದೇ ಕಾಲದಲ್ಲಿಯೇ.

ನೃಪತುಂಗನು ಉಸುರುವ **ದುರ್ವಿನೀತನು** (ಕ್ರಿ. ಶ. ೫೦೦) ಗಂಗ ಮಹಾರಾಜನು. ಇವನು ಕವಿ; ಗದ್ಯ ಗ್ರಂಥಕಾರನು. **ಗಂಗರು** ವಿದ್ಯಾಪಕ್ಷಪಾತಿಗಳು. ಗಜಾಕಷ್ಟವನ್ನು ಬರೆದ (೭೮೦-೮೧೪) ಶಿವಮಾರನಿಗೆ ಗಂಗರೇ ಆಶ್ರಯದಾತರು. ಶೂದ್ರಕ, ಹರಿವಂಶಗಳನ್ನು ಬರೆದ ೧ನೇ ಗುಣವರ್ಮ (೮೮೯) ನಿಗೆ ಇವರೇ ಪೋಷಕರು. ಚಾವುಂಡರಾಯನ ಪುರಾಣವನ್ನು ಬರೆದ ಚಾವುಂಡರಾಯನು, ಗಂಗರಾಜನಾದ ರಾಚಮಲ್ಲನ ಮಂತ್ರಿಯು. ಈ ರಾಜನ ತಮ್ಮನಾದ ರಕ್ಕಸ ಗಂಗನ ಆಶ್ರಯದಲ್ಲಿಯೇ ನಾಗವರ್ಮನು 'ಛಂದೋಂಬುಧಿ', ಮೊದಲಾದ ಉದ್ಗ್ರಂಥಗಳನ್ನು ಬರೆದಿರುವನು.

ರಾಷ್ಟ್ರಕೂಟರು ಕವಿಗಳ ಪೋಷಕರೂ ಆಶ್ರಯದಾತರೂ ಆಗಿದ್ದರು. ನೃಪತುಂಗನ ಮಾತಂತೂ ಸರಿಯೇ. ಮೂರನೆಯ ಇಂದ್ರರಾಜನ ದಂಡನಾಯಕನಾದ ವಿಜಯದಂಡನಾಯಕನಿಗೆ 'ಅನುಪಮ ಕವಿ' ಎಂಬ ಬಿರುದು ಇದೆ. ಮೂರನೇ ಕೃಷ್ಣನು ಕವಿಚಕ್ರವರ್ತಿಯಾದ ಪೊನ್ನನ ಪೋಷಕನು.

ಚಾಲುಕ್ಯರಂತೂ ವಿದ್ಯೆಯ ದಾಸರು. ಉತ್ತರದ ಬಿಲ್ಹಣ ಮೊದಲಾದ ವಿದ್ವಾಂಸರು ಬಂದು ಚಾಲುಕ್ಯ ರಾಜ್ಯದಲ್ಲಿ ನೆಲೆಸಿದ್ದರು. ಗುಣಗಾಂಕ ವಿಜಯಾದಿತ್ಯನ ಆಶ್ರಯದಲ್ಲಿ, 'ಗುಣಗಾಂಕಿಯಂ' ಎಂಬ ಛಂದೋಗ್ರಂಥವು ಪ್ರಸಿದ್ಧವಾದದ್ದು ಹಿಂದೆಯೇ ವಿವರಿಸಿದೆ. ಈ

ವಂಶದ **ಅರಿಕೇಸರಿಯೇ** ಆದಿಕವಿಯಾದ ಪಂಪನಿಗೆ ಆಶ್ರಯದಾತನು (೯೪೧). ಕವಿಚಕ್ರವರ್ತಿಯೆಂದು ತೈಲಪನಿಂದ ಹೊಗಳಿಸಿಕೊಂಡ ರನ್ನನು ಇವರ ಆಶ್ರಿತನೇ. ಸುಪ್ರಸಿದ್ಧ ಜ್ಯೋತಿಷಿಯಾದ, ಜಾತಕ ತಿಲಕವನ್ನು ಬರೆದ, ಶ್ರೀಧರಾಚಾರ್ಯನು (೧೦೪೯) ಆಹವಮಲ್ಲನ ಆಶ್ರಿತನು. ರಾಜರಾಜನ ಆಸ್ಥಾನ ಕವಿಯಾದ ನನ್ನಯ ಭಟ್ಟನ ಸಹಾಯಕನಾದ ನಾರಾಯಣಭಟ್ಟನೂ ಇವರಿಂದ ಪೋಷಿತನೇ. ಭುವನೈಕಮಲ್ಲನ ಮಾಂಡಲಿಕನಾದ ಲಕ್ಷ್ಮನೃಪನ ಮಂತ್ರಿಯಾದ ಶಾಂತಿ-ನಾಥನು 'ಸುಕುಮಾರಚರಿತ'ವನ್ನು ಬರೆದನು. ಚಂದ್ರಚೂಡಾಮಣಿ ಶತಕ ವನ್ನು ಬರೆದ ನಾಗವರ್ಮಾಚಾರ್ಯರು, ಭುವನೈಕಮಲ್ಲನ ಮಹಾಪ್ರಧಾನ ನಾದ ಉದಯಾದಿತ್ಯನ ಸಂಧಿವಿಗ್ರಹಿಗಳಾಗಿದ್ದರು. ಚಾಲುಕ್ಯರ ಆಶ್ರಿತನಾದ ಮಾಚಿರಾಜನ ಪ್ರೇರಣೆಯಿಂದ ಚಂದ್ರರಾಜನು 'ಮದನ ತಿಲಕ'ವೇ ಮೊದಲಾದ ಗ್ರಂಥಗಳನ್ನು ರಚಿಸಿದನು. ಆಹವಮಲ್ಲನ ಮಗನಾದ ಕೀರ್ತಿವರ್ಮನೇ ಗೋ-ವೈದ್ಯವನ್ನು ಬರೆದವನು. 'ಸಮಯ ಪರೀಕ್ಷೆ', 'ತ್ರೈಲೋಕ್ಯ ರಕ್ಷಣಾಮಣಿ ಸ್ತೋತ್ರ' ಮೊದಲಾದ ಗ್ರಂಥಗಳನ್ನು ಬರೆದ ಬ್ರಹ್ಮಶಿವನು ಕೀರ್ತಿವರ್ಮನ ಗೆಳೆಯನು. ಎರಡನೆಯ ನಾಗವರ್ಮನು ೨ನೆಯ ಜಗದೇಕಮಲ್ಲನ ಕಟಕೋ-ಪಾಧ್ಯಾಯನಾಗಿದ್ದನು. ಪಂಚತಂತ್ರ ಕರ್ತೃವಾದ ದುರ್ಗಸಿಂಹನು ಇದೇ ಜಗದೇಕಮಲ್ಲನ ಸಂಧಿವಿಗ್ರಹಿಯು. ಚಾಲುಕ್ಯರು ವಿದ್ಯಾಪಕ್ಷಪಾತಿಗಳಿದ್ದಂತೆ ಉದ್ದಾಮ ಕವಿಗಳೂ ಆಹುದು. ಪುರುಷರಷ್ಟೇ ಅಲ್ಲ, ವೀರಪುಲಕೇಶಿಯ ಸೊಸೆಯಾದ 'ವಿಜಯಾಂಕಾ'ಳಂಥ ಉದ್ದಾಮ ಕವಯಿತ್ರಿಯೂ ಈ ರಾಜ್ಯದಲ್ಲಿ ಹೊಳೆಯುವಳು. ಹೀಗೆ ಸುಮಾರು ೫೦೦ ವರ್ಷಗಳ ವರೆಗೆ ಗಂಗರು, ರಾಷ್ಟ್ರ-ಕೂಟರು, ಚಾಲುಕ್ಯರುಗಳಿಂದ ಕನ್ನಡ ಸಾಹಿತ್ಯವು ಪೋಷಿಸಲ್ಪಟ್ಟು ಧೀರ ಗಂಭೀರವಾಗಿ ಬೆಳೆಯಿತು. ಸಾವಿರಾರು ಕವಿಗಳು ಉದಯವಾದರು. ವಿವಿಧ ರೀತಿಯಿಂದ ಕನ್ನಡ ನುಡಿಯನ್ನು ಬೆಳೆಸಿದರು.

೧೧ನೇ ಶತಮಾನದ ಕೊನೆಗೆ, ಸಾಮ್ರಾಜ್ಯಗಳುರುಳಿದವು. ಅಖಿಲ ಕನ್ನಡ ನಾಡಿಗೆ ಒಬ್ಬನೂ ಏಕಛತ್ರಾಧಿಪತಿಯು ಉಳಿಯಲಿಲ್ಲ. ಅಲ್ಲಲ್ಲಿ ಚಿಕ್ಕ ದೊಡ್ಡ ರಾಜ್ಯಗಳು ಉದಯವಾಗಿದ್ದವು. ಕನ್ನಡ ಸಾಹಿತ್ಯದೇವಿಯು ಹೊಯ್ಸಳ ರನ್ನು ಆಶ್ರಯಿಸಿದಳು. ಸವದತ್ತಿಯ ರಟ್ಟರೂ, ಕರಹಾಟದ ಶಿಲಾಹಾರರೂ, ಕಾಕತೀಯರೂ, ಕೊಂಗಾಳ್ವರೂ ಕನ್ನಡ ನುಡಿಯನ್ನು ಸಂರಕ್ಷಿಸಿದರು.

೧೧ನೇ ಶತಮಾನವು ಕರ್ನಾಟಕದಲ್ಲಿ ಧರ್ಮಕ್ರಾಂತಿ ಹಾಗೂ ರಾಜ್ಯ ಕ್ರಾಂತಿಗಳ ಕಾಲ. ಎಲ್ಲೆಲ್ಲಿ ನೋಡಿದರೂ ಕ್ರಾಂತಿಯೇ ಕ್ರಾಂತಿ. ಜೈನಮತವು ಹಿಮ್ಮೆಟ್ಟಿ ವೈದಿಕ ಮತವು ಪ್ರಬಲವಾಯಿತು. ಧರ್ಮಪ್ರಚಾರಕರು ರಾಜಾಶ್ರಯ ದಿಂದ ಮತಪ್ರಚಾರವನ್ನು ಕೈಕೊಂಡರು. ಕನ್ನಡ ಸಾಹಿತ್ಯದಲ್ಲಿಯೂ ಕ್ರಾಂತಿ ಯಾದುದನ್ನು ಹಿಂದೆಯೇ ತಿಳಿಸಿದ್ದೇವೆ. ಆದರೂ ಕನ್ನಡ ರಾಜರು ಎಲ್ಲ ಧರ್ಮದವರಿಗೂ ಆಶ್ರಯವನ್ನು ಕೊಟ್ಟುದು ಕಾಣುತ್ತದೆ.

ಚಾಲುಕ್ಯರ ನಂತರ ಸಾಹಿತ್ಯದೇವಿಗೆ ಆಶ್ರಯದಾತರು ಸ್ವಾಭಾವಿಕವಾಗಿ **ಹೊಯಿಸಳರೆ.** ಪಂಪರಾಮಾಯಣ, ಮಲ್ಲಿನಾಥಪುರಾಣ, ಜಿನಮುನಿ-ತನಯ, ಜಿನಾಕ್ಷರಮಾಲೆಗಳನ್ನು ಬರೆದ ಅಭಿನವ ಪಂಪನೂ, ಕವೀಶ್ವರಿಯಾದ ಕಂತಿಯೂ ೧ನೆಯ ಬಲ್ಲಾಳನ (೧೦೦-೧೧೦೬) ಆಸ್ಥಾನ ಕವಿಗಳಾಗಿದ್ದರು. ವಿಷ್ಣುವರ್ಧನನು ಸುಪ್ರಸಿದ್ಧ ಗಣಿತಜ್ಞನಾದ ರಾಜಾದಿತ್ಯನಿಗೆ ಆಶ್ರಯದಾತನು. ಜನ್ನನ ತಂದೆಯಾದ ಸುಮನೋಬಾಣನು ೧ನೆಯ ನರಸಿಂಹನ ಕಟಕೋಪಾ-ಧ್ಯಾಯನು. ಇವನ ಮಂತ್ರಿಯು, ದೀಕ್ಷಾಬೋಧೆಯನ್ನು ಬರೆದ ಕೆರೆಯ ಪದ್ಮರಸನು. ಗಿರಿಜಾಕಲ್ಯಾಣ, ಪಂಪಾಶತಕಗಳನ್ನು ಬರೆದ ಹರೀಶ್ವರನು ಇವನ ಕರಣಿಕನು. ೨ನೆಯ ಬಲ್ಲಾಳನ ಮಂತ್ರಿಯಾದ ಬೂಚಿರಾಜನು ಪೊನ್ನನಿಗೆ ಸಮಾನನಾದ ಕವಿಯೆಂದು ಪ್ರತೀತಿಯಿದೆ. ಅರ್ಧನೇಮಿಯನ್ನು ಬರೆದ ನೇಮಿಚಂದ್ರನೂ ಇವರ ಸೇವಕರಿಂದ ಪೋಷಿತನೇ. ಜಗನ್ನಾಥ ವಿಜಯವನ್ನು ಬರೆದ ರುದ್ರಭಟ್ಟನು ಎರಡನೇ ಬಲ್ಲಾಳನ ಮಂತ್ರಿಯ ಆಶ್ರಿತನು. ವರ್ಧಮಾನ ಪುರಾಣವನ್ನು ಬರೆದ ಅಚ್ಚಣ್ಣನೂ ಇವನ ಇನ್ನೊಬ್ಬ ಮಂತ್ರಿ ಯಿಂದ ಪೋಷಿತನೇ. ಜನ್ನನು ಕವಿಚಕ್ರವರ್ತಿಯೆಂದು ಬಿರುದು ಪಡೆದುದು ಈ ಬಲ್ಲಾಳನಿಂದಲೇ. ಎರಡನೇ ನರಸಿಂಹನ ಮಂತ್ರಿಯಾದ ಪೋಲಾಳ್ವ ದಂಡನಾಥನು ಕವಿಯಿದ್ದು ಹರಿಚಾರಿತ್ರ್ಯವನ್ನು ರಚಿಸಿದ್ದಾನೆ. ಸೂಕ್ತಿ ಸುಧಾರ್ಣವವನ್ನು ಬರೆದ ಕೇಶಿರಾಜನ ತಂದೆಯಾದ ಮಲ್ಲಿಕಾರ್ಜುನನು ಸೋಮೇಶ್ವರನ ಆಶ್ರಿತನು.

ಬಿಜ್ಜಳನ ಮಂತ್ರಿತ್ವವನ್ನು ಆಶ್ರಯಿಸಿ ಬಸವೇಶ್ವರನು ಉತ್ತರದಲ್ಲಿ ವೀರಶೈವ ಮತಪ್ರಚಾರವನ್ನು ಕೈಕೊಂಡಿದ್ದರೆ, ಮಾವ, ಅಳಿಯಂದಿರಾದ ಹರಿಹರ ರಾಘವಾಂಕರು ದಕ್ಷಿಣದಲ್ಲಿ ಪಂಪಾಕ್ಷೇತ್ರದಲ್ಲಿ ವೀರಶೈವ ಧ್ವಜವನ್ನು

ಎತ್ತಿ ಹಿಡಿದಿದ್ದರು. ಇವರಿಗೆ ಹೊಯ್ಸಳರೂ, ಕಾಕತೀಯರೂ ಆಶ್ರಿತರು. ವೀರಶೈವ ಧರ್ಮವು ಕಾಕತೀಯರನ್ನೂ ಚಾಲುಕ್ಯರನ್ನೂ ಆಶ್ರಯಿಸಿದರೆ, ಜೈನಧರ್ಮವು ಸವದತ್ತಿಯ ರಟ್ಟರನ್ನೂ ಕರಹಾಟದ ಶಿಲಾಹಾರರನ್ನೂ ಆಶ್ರಯಿಸಿದಂತೆ ಕಾಣುವದು. ಪಾರ್ಶ್ವನಾಥ ಪುರಾಣವನ್ನು ಬರೆದ ಪಾರ್ಶ್ವ ಪಂಡಿತು ರಟ್ಟರ ೪ನೆಯ ಕಾರ್ತವೀರ್ಯ (೧೨೦೨) ನ ಆಸ್ಥಾನ ಕವಿಯಾಗಿದ್ದನು. ಆದೇ ರಾಜನ ಕಾಲದಲ್ಲಿ ಬಾಳಚಂದ್ರಕವಿಯಾದ ಕಂದರ್ಪನು ಇದ್ದಂತೆ ತೋರುತ್ತದೆ. ಇವನ ಕೈಯಲ್ಲಿ ಆಳುತ್ತಿದ್ದ ಶಾಂತಿವರ್ಮನ ಪ್ರೇರಣೆಯಿಂದ ೨ನೆಯ ಗುಣವರ್ಮನು ಪುಷ್ಪದಂತ ಪುರಾಣವನ್ನು ಬರೆದಿರುವನು.

೧೨ನೆಯ ಶತಮಾನದ ಉತ್ತರಾರ್ಧದಲ್ಲಿ ಶಿಲಾಹಾರರ ರಾಜನಾದ ಲಕ್ಷ್ಮಣರಾಜನ ಆಜ್ಞಾನುಸಾರವಾಗಿ, ಕರ್ಣಪಾರ್ಯನು 'ನೇಮಿನಾಥ ಪುರಾಣ' ವನ್ನು ಬರೆದಂತೆ ತಿಳಿಯುತ್ತದೆ. ಇವನ ಆಳಿಕೆಯಲ್ಲಿಯೇ ನೇಮಿಚಂದ್ರನು 'ಲೀಲಾವತಿ' ಯನ್ನು ರಚಿಸಿರುವನು. 'ಚಂದ್ರನಾಥಾಷ್ಟಕ' ವನ್ನು ಬರೆದ ಮೌಕ್ತಿಕ ಕವಿಯು, ವೀರ ಕೊಂಗಾಳ್ವನ ಕಾಲದಲ್ಲಿದ್ದಂತೆ ತೋರುತ್ತದೆ.

ಚಿಕ್ಕಪುಟ್ಟ ರಾಜರಿಂದಲೂ ಪಾಳಯಗಾರರಿಂದಲೂ ಕನ್ನಡ ಸಾಹಿತ್ಯ ದೇವಿಯು ಸಂರಕ್ಷಿಸಲ್ಪಟ್ಟು, ವಿಜಯನಗರ ಸಾಮ್ರಾಟರ ಕೈಗೆ ಒಪ್ಪಿಸಲ್ಪಟ್ಟಳು.

ಕರ್ನಾಟಕದಲ್ಲಿಯ ಕ್ರಾಂತಿಯ ಕಾಲವು ೧೩ನೆಯ ಶತಮಾನದ ಅಂತ್ಯಕ್ಕೆ ಕೊನೆಗಂಡಿತು. ಪಕ್ಷ ಪಂಗಡಗಳ ಕಾಲವು ಮುಗಿದು ಏಕಛತ್ರಾಧಿಪತ್ಯದ ಕಾಲವು ಬಂದೊದಗಿತು. ವಿಜಯನಗರ ಸಾಮ್ರಾಜ್ಯವು ಉದಯವಾಯಿತು. ವಿದ್ಯೆಯ ತವರೂರಾಯಿತು. ಕನ್ನಡ ಸಾಹಿತ್ಯದೇವಿಯು ಹಳೇಬೀಡಿನಿಂದ ವಿದ್ಯಾನಗರಿಗೆ ಬಂದು ಆಶ್ರಯ ಪಡೆದಳು.

'ಖಗೇಂದ್ರಮಣಿದರ್ಪಣ' ವನ್ನು ಬರೆದ ಮಂಗರಸನು ಮೊದಲನೇ ಹರಿಹರ (೧೩೩೬) ನ ಆಳಿಕೆಯಲ್ಲಿದ್ದನು. ೨ನೇ ಹರಿಹರನ ಆಸ್ಥಾನ ಕವಿಯು 'ಧರ್ಮನಾಥ ಪುರಾಣ' ವನ್ನು ಬರೆದ ಮಧುರನು. 'ಸೊಬಗಿನ ಸೋನೆ', 'ಅಮರುಕ'ವನ್ನು ಬರೆದವನು ಬುಕ್ಕಭೂಪಾಲನ ಮೊಮ್ಮಗನಾದ ದೇವರಾಜನು. ಎರಡನೇ ದೇವರಾಯನ ಕಾಲವೆಂದರೆ, ಕಾವ್ಯಗಳ ಸುಗ್ಗಿಯ ಕಾಲವೆಂದು ಹೇಳ ಬಹುದು. ಇವನ ಮಂತ್ರಿಯಾದ ಲಕ್ಕಣ್ಣ ದಂಡೇಶನು 'ಶಿವತತ್ವಚಿಂತಾಮಣಿ'

ಯನ್ನು ಬರೆದನು. ಜಕ್ಕಣಾರ್ಯನು 'ನೂರೊಂದು ಸ್ಥಳ' ವನ್ನು ವಿರಚಿಸಿದನು. ಇವನ ಮಹಾಪ್ರಧಾನನಾದ ಗುರುರಾಜರ ಪ್ರೇರಣೆಯಿಂದ ಚಂದ್ರಕವಿಯು 'ವಿರೂಪಾಕ್ಷಸ್ಥಾನ' ಮೊದಲಾದ ಗ್ರಂಥಗಳನ್ನು ಬರೆದನು. ಈ ಅರಸನ ಪ್ರೋತ್ಸಾಹದಿಂದಲೇ ಚಾಮರಸನು 'ಪ್ರಭುಲಿಂಗಲೀಲೆ' ಯನ್ನೂ, ಮಗ್ಗೆಯ ಮಾಯಿದೇವನು 'ಶತಕತ್ರಯ' ವನ್ನೂ, ಗುರುಬಸವನು 'ಶಿವಯೋಗಾಂಗ ಭೂಷಣ' ವೇ ಮೊದಲಾದ ೭ ಕಾವ್ಯಗಳನ್ನೂ, ಬತ್ತಲೇಶ್ವರನು 'ರಾಮಾಯಣ' ವನ್ನೂ* ಕುಮಾರವ್ಯಾಸನು ''ಭಾರತ'ವನ್ನೂ ಬರೆದರು. 'ಜನವಶ್ಯ' ವನ್ನು ಬರೆದ ಕಲ್ಲರಸನು ಮಲ್ಲಿಕಾರ್ಜುನನ ಆಶ್ರಿತನು. ವಿರೂಪಾಕ್ಷನ ಆಳಿಕೆಯಲ್ಲಿ ತೋಂಟದ ಸಿದ್ಧಲಿಂಗನು ಪ್ರಸಿದ್ಧಿಯನ್ನು ಪಡೆದನು. 'ಕವಿಲಿಂಗನ ಪದ'ವೆಂಬ ಗ್ರಂಥವನ್ನು ರಚಿಸಿದ ಕವಿಲಿಂಗನು ಸಾಳುವ ನರಸಿಂಹನ ಆಸ್ಥಾನಕವಿಯಾಗಿದ್ದನು. ಕೃಷ್ಣದೇವರಾಯನ ಕಾಲದಲ್ಲಿ ಸುಪ್ರಸಿದ್ಧರಾದ ಶ್ರೀಪಾದರಾಯರೂ ವ್ಯಾಸರಾಯರೂ ಪುರಂದರದಾಸರೂ ಕನಕದಾಸರೇ ಮೊದಲಾದ ದಾಸಶ್ರೇಷ್ಠರಾಗಿ ಹೋದರು. ಕೃಷ್ಣರಾಯನ ಆಜ್ಞಾನುಸಾರವಾಗಿಯೇ ತಿಮ್ಮಣ್ಣ ಕವಿಯು 'ಉತ್ತರ ಭಾರತ' ವನ್ನು ಬರೆದನು. ಸದಾನಂದ ಶಿವಯೋಗಿಯು ಅಚ್ಯುತ ರಾಯನ ಆಳಿಕೆಯಲ್ಲಿ 'ಭಾಗವತ' ವನ್ನು ಬರೆದನು. 'ಶಬ್ದಾನುಶಾಸನ' ವನ್ನು ಬರೆದ ಭಟ್ಟಾಕಳಂಕನ ಗುರುವಾದ ಭಟ್ಟಾಕಳಂಕನು ೧ನೆಯ ಶ್ರೀರಂಗ ರಾಯನ ಆಸ್ಥಾನದಲ್ಲಿದ್ದನು. ಭಟ್ಟಾಕಳಂಕನು ೧ನೆಯ ವೆಂಕಟಪತಿರಾಯನ ಆಳಿಕೆಯಲ್ಲಿದ್ದನು.

ವಿಜಯನಗರ ಸಾಮ್ರಾಜ್ಯದಲ್ಲೆಲ್ಲಿಯೂ ಕನ್ನಡ ನುಡಿದೇವಿಯ ಪೂಜೆಯು ನಡೆಯುತ್ತಿತ್ತು. ತುಳುದೇಶದ ದೊರೆಯಾದ ಭೈರವಸುತ ಪಾಂಡ್ಯನ ಪ್ರೇರಣೆಯಿಂದ (೧೪೩೯) ಕಲ್ಯಾಣಕೀರ್ತಿಯು 'ಜ್ಞಾನಚಂದ್ರಾಭ್ಯುದಯ' ವನ್ನು ಬರೆದನು. ಸಂಗೀತಪುರದ ದೊರೆಯಾದ ಸಂಗಮನ ಆಜ್ಞೆಯಂತೆ, ಕೋಟೇಶ್ವರನು 'ಜೀವಂಧರ ಷಟ್ಪದಿ' ಯನ್ನು ಬರೆದನು. 'ಭರತೇಶ ವೈಭವ' ವನ್ನು

---

* ಈ ರಾಮಾಯಣವನ್ನು ಬರೆದ ಕವಿ ಬತ್ತಲೇಶನೇ ಎಂಬ ಬಗ್ಗೆ ಅನುಮಾನ ಇದೆ. ಕನ್ನಡ ಸಂಶೋಧನ ಕಚೇರಿಯಲ್ಲಿ ದೊರೆಯುವ ಈ ಕೈಬರೆಹದ ಪ್ರತಿಯಲ್ಲಿ 'ಬತ್ತಲೇಶ'ನೆಂಬ ಹೆಸರು ಪ್ರಾರಂಭದಲ್ಲಿ ಎಲ್ಲಿಯೂ ಇಲ್ಲ.

ಬರೆದ (೧೫೫೭) ರತ್ನಾಕರವರ್ಣಿಯು ಭೈರಸ ಒಡೆಯರ ಆಸ್ಥಾನ ಕವಿಯು. ತುಳುದೇಶಾಧಿಪನಾದ ಸಾಳ್ವಮಲ್ಲನ ಆಸ್ಥಾನ ಕವಿಯೇ 'ರಸರತ್ನಾಕರ' 'ಭಾರತ' ಮುಂತಾದ ಕಾವ್ಯಗಳನ್ನು ರಚಿಸಿದ ಸುಪ್ರಸಿದ್ಧ ಸಾಳ್ವನು.

ವಿಜಯನಗರ ಸಾಮ್ರಾಜ್ಯವು ನಷ್ಟವಾದ ಕೂಡಲೆ ಕನ್ನಡ ರಾಜ್ಯ ಲಕ್ಷ್ಮಿಯೂ ಕನ್ನಡ ಸರಸತಿಯೂ **ಮೈಸೂರೊಡೆಯರ** ಆಶ್ರಯಕ್ಕೆ ಬಂದರು. ವಿದ್ಯಾಪ್ರಿಯರಾದ ಮೈಸೂರೊಡೆಯರು ಕನ್ನಡ ನುಡಿಯನ್ನು ಭಕ್ತಿ ವಿಶ್ವಾಸ ಗಳಿಂದ ಸಂರಕ್ಷಿಸುತ್ತ ಬಂದಿರುವರು. ರಾಜನೃಪನ (೧೫೭೮-೧೬೧೭) ಮಂತ್ರಿ ಯಾದ ತಿರುಮಲಾರ್ಯನು 'ಕರ್ಣವೃತ್ತಾಂತ ಕಥೆ' ಯನ್ನು ಬರೆದಿರುವನು. ಅರಸನಾದ ಚಾಮರಾಜನೇ (೧೬೧೭) 'ರಾಮಾಯಣ', 'ಬ್ರಹ್ಮೋತ್ತರಖಂಡ' ಗಳೆಂಬ ಗ್ರಂಥಗಳನ್ನು ರಚಿಸಿರುವನು. ಈ ರಾಜನ ಪ್ರೋತ್ಸಾಹದಿಂದಲೇ ರಾಮಚಂದ್ರನು 'ಅಶ್ವಶಾಸ್ತ್ರ' ವನ್ನೂ ಪದ್ಮಣ ಪಂಡಿತನು 'ಹಯಸಾರ-ಸಮುಚ್ಚಯ' ವನ್ನೂ ಬರೆದನು. ಕಂಠೀರವ ನರಸರಾಜ ವಿಜಯವನ್ನು ಬರೆದ ಗೋವಿಂದ ವೈದ್ಯರು ಇವರ ಆಸ್ಥಾನ ಕವಿಗಳು. ಇವರಿಂದಲೇ ಪೋಷಿಸಲ್ಪಟ್ಟ ಭಾಸ್ಕರನು ಬೇಹಾರ ಗಣಿತವನ್ನು ಬರೆದನು. ಚಿಕ್ಕದೇವ-ರಾಜನು (೧೬೭೨) 'ಚಿಕದೇವರಾಜ ಬಿನ್ನಪ' ವೇ ಮೊದಲಾದ ಕಾವ್ಯಗಳನ್ನು ರಚಿಸಿರುವನು. ಇವನ ಕಾಲವು ವಿಜಯನಗರದ ಕೃಷ್ಣದೇವರಾಯನ ಕಾಲ ವಿದ್ದಂತೆ. ಇವನ ಪ್ರೇರಣೆಯಿಂದ ಅನೇಕ ಕವಿಗಳು ಉತ್ತೇಜಿತರಾಗಿ ಕಾವ್ಯ ಗಳನ್ನು ಬರೆದಿದ್ದಾರೆ. ತಿರುಮಲಾರ್ಯನು 'ಅಪ್ರತಿಮ ವೀರಚರಿತೆ' ಮೊದ ಲಾದ ಗ್ರಂಥಗಳನ್ನು ಬರೆದಿದ್ದಾನೆ. ಚಿಕ್ಕುಪಾಧ್ಯಾಯನಂತೂ ಅನೇಕ ಗ್ರಂಥ ಗಳನ್ನು ರಚಿಸಿದ್ದಾನೆ. ತಿಮ್ಮಕವಿಯು 'ಯಾದಗಿರಿ ಮಹಾತ್ಮೆ' ಮೊದಲಾದವು ಗಳನ್ನು ರಚಿಸಿದನು. 'ಮಿತ್ರವಿಂದಾ ಗೋವಿಂದ ನಾಟಕ' ವನ್ನು ಬರೆದ ಸಿಂಗರಾರ್ಯನೂ 'ಮುನಿವಂಶಾಭ್ಯುದಯ' ವನ್ನು ಬರೆದ ಚಿದಾನಂದ ಕವಿಯೂ ಇವರಿಂದಲೇ ಪ್ರೋತ್ಸಾಹಿತರು. ಹೊನ್ನಮ್ಮನು 'ಹದಿಬದೆಯ ಧರ್ಮ'ವನ್ನೂ ಶೃಂಗಾರಮ್ಮನು 'ಪದ್ಮಿನೀ ಕಲ್ಯಾಣ' ವನ್ನು ರಚಿಸಿದುದು ಇವರ ಉತ್ತೇಜನದಿಂದಲೇ. 'ಕನ್ನಡ ಲೀಲಾವತಿ', 'ರತ್ನಶಾಸ್ತ್ರ' ಗಳನ್ನು ಬರೆದ ಬಾಲವೈದ್ಯದ ಚೆಲುವನು ಒಂದನೆಯ ಕೃಷ್ಣರಾಯನ ಆಶ್ರಿತನು. ಈ ರಾಜನ ಮಹಿಷಿಯಾದ ಚಲುವಾಂಬೆಯು 'ವರನಂದೀ ಕಲ್ಯಾಣ' ಮೊದ

ಲಾದ ಗ್ರಂಥಗಳನ್ನು ಬರೆದಿದ್ದಾಳೆ. ೨ನೇ ಕೃಷ್ಣರಾಯನ ಪ್ರೇರಣೆಯಿ
ವೆಂಕಾಮಾತ್ಯನು 'ರಾಮಾಯಣ', 'ಇಂದಿರಾ' ಮೊದಲಾದ ಗ್ರಂ
ಗಳನ್ನು ಬರೆದನು. ಇವರ ಮಾವಂದಿರಾದ ಕತ್ತಿ ಗೋಪಾಲರಾಜ
'ಕಮಲಾಚಲ ಮಹಾತ್ಮ್ಯ'ವನ್ನು ರಚಿಸಿದ್ದಾರೆ. 'ಶ್ರೀರಂಗಮಹಾತ್ಮ
ವನ್ನು ಬರೆದ ಸಿಂಗರಾಚಾರ್ಯನು ಚಾಮರಾಜನ (೧೭೭೦) ಆಶ್ರಿತನ
ಚಾಮರಾಜರ ರಾಜ್ಞಿಯರಾದ ದೇವಿ ವೀರಮ್ಮಣ್ಣಿಯ ಪ್ರೇರಣೆಯಿ
ದೇವಚಂದ್ರನು 'ರಾಜಾವಳಿಯ ಕಥೆ'ಯನ್ನು ರಚಿಸಿದನು.

ಇದಲ್ಲದೆ ಕರ್ನಾಟಕದಲ್ಲಿ ಅಲ್ಲಲ್ಲಿಗೆ ದೊರೆಗಳಾಗಿದ್ದ ಉಮ್ಮತ್ತೂರ
ಕೆಳದಿ, ಇಕ್ಕೇರಿ, ಸುಗಟೂರು, ಬೇಲೂರು, ನುಗ್ಗೆಹಳ್ಳಿ, ಪಿರಿಯಪಟ್ಟ
ಹದಿನಾಡು, ಚಿಕ್ಕನಾಯಕನಹಳ್ಳಿ, ಮುದಿಗೆರೆ, ಬಿಜ್ಜವರ, ಕಳಲೆ ಮುಂತಾ
ಸ್ಥಳಗಳ ಪಾಳೆಯಗಾರರೂ ಕವಿಗಳಿಗೆ ಪೋಷಕರಾಗಿದ್ದರು.

ಹೀಗೆ ಕನ್ನಡ ಸಾಹಿತ್ಯವಾಹಿನಿಯು, ಗಂಗರ ಸಾಮ್ರಾಜ್ಯದಲ್ಲಿ ಉದ
ವಾಗಿ, ರಾಷ್ಟ್ರಕೂಟರ ಕಾಲದಲ್ಲಿ ಗೋದಾವರಿ ತೀರದಲ್ಲಿ ಮೈದೋ
ಕಿಸುವೊಳಲೇ ಮೊದಲಾದ ಸ್ಥಳಗಳಲ್ಲಿ ಗಂಭೀರವಾಗಿ ಹರಿದು, ಚಾಲುಕ್ಯ
ಸಾಮ್ರಾಜ್ಯದಲ್ಲಿ ವಿವಿಧ ರೂಪಗಳನ್ನು ತಾಳಿ, ಹೊಯ್ಸಳರ ರಾಜ್ಯದ
ಬೇರೊಂದು ಕಾಂತಿಯಿಂದ ಹೊಗರೇರಿ ಹೊಸ ದಾರಿಯನ್ನು ಹಿಡಿದ
ಶಾಖೋಪಶಾಖೆಗಳಿಂದೊಡಗೂಡಿ, ಪಂಪಾವಿರೂಪಾಕ್ಷನ ಸೇವೆಗೆಯ್ದು
ಮೈಸೂರರಸರ ಕೃಪೆಗೆ ಪಾತ್ರವಾಗಿ ನವಯುಗದ ಕಾಮನಬಿಲ್ಲಿನ ಬಣ್ಣ ತಾ
ಪ್ರಜಾಪ್ರಭುತ್ವದ ಪ್ರಭುವಿನ ಸನ್ನಿಧಿಯನ್ನು ಸೇರಲು ಹವಣಿಸುತ್ತಿದೆ.

ಕನ್ನಡ ನುಡಿಗೆ ಗೆಲುವು!

ಪ್ರಕಾಶಕರು :
ಪ್ಯಾಟಿ ಶಾಮರಾಯರು
ಪತ್ರಿಕೋದ್ಯಮಿ, ಬೆಳಗಾಂ

ವಸಂತ ಮುದ್ರಣಾಲಯ, ...